ಮಂಗಳವಾರ, ಮಾರ್ಚ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 67 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಬದುಕಿನಲ್ಲಿ ನಗೆಯೆಂಬುದು
ಅಪರಿಮಿತ ಮೌಲ್ಯಯುಳ್ಳ
ಸರಕು. ಅದು ನೀಡುವವರಿಗೂ
ಪಡೆಯುವವರಿಗೂ
ಸಂತೋಷವನ್ನು
ನೀಡುವಂಥದ್ದು.

ಅಂತರರಾಷ್ಟ್ರೀಯ ಮಹಿಳಾ ದಿನದ ಶುಭಾಶಯ — ವಿಶೇಷ ಪುಟ 9

'ಡಬಲ್ ಎಂಜಿನ್ ಅಲ್ಲ, ಡಬ್ಬಾ ಸರ್ಕಾರ' 5

ತ್ಯಾಜ್ಯ ವಿಲೇವಾರಿ: ಗ್ರಾಮೀಣ ಮಹಿಳೆಯರ ಕೈಚಳಕ 4

ಸೆನ್ಸೆಕ್ಸ್	ನಿಫ್ಟಿ	₹/$
52,843	15,863	76.93

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ 7.25% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಕೈಸುಡುತ್ತಿರುವ ಅಡುಗೆ ಎಣ್ಣೆ

ಯುದ್ಧದ ಪರಿಣಾಮ: ಸೂರ್ಯಕಾಂತಿ ಎಣ್ಣೆ ಬೆಲೆ ₹175ರವರೆಗೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾದ ನಂತರ ಸೂರ್ಯಕಾಂತಿ ಎಣ್ಣೆಯ ಆಮದಿನ ಮೇಲೆ ಏಟು ಬಿದ್ದಿದೆ. ಇದರ ಪರಿಣಾಮ ಸೂರ್ಯಕಾಂತಿ ಎಣ್ಣೆಯ ಬೆಲೆಯು ಕೆಲವೇ ದಿನಗಳ ಅವಧಿಯಲ್ಲಿ ಲೀಟರ್‌ಗೆ ₹40ರಷ್ಟು ಏರಿಕೆಯಾಗಿದೆ. ರಾಜ್ಯದ ಹಲವೆಡೆ ಸೂಪರ್ ಮಾರ್ಕೆಟ್‌ಗಳಲ್ಲಿ ಗ್ರಾಹಕರಿಗೆ ಅಡುಗೆ ಎಣ್ಣೆ ಖರೀದಿ ಮೇಲೆಯೂ ಮಿತಿ ಹೇರಲಾಗಿದೆ.

'ಯುದ್ಧ ನಿಲ್ಲದ ಹೊರತು ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಎಣ್ಣೆಯ ಪೂರೈಕೆ ಸಹಜ ಸ್ಥಿತಿಗೆ ಬರುವುದು ಕಷ್ಟ' ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.

'ಭಾರತವು ವರ್ಷಕ್ಕೆ ಸರಿಸುಮಾರು 25 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಲ್ಲಿ ಶೇಕಡ 80ರಷ್ಟು ಪಾಲು ಉಕ್ರೇನ್‌ನಿಂದ ಬರುತ್ತಿದೆ. ಇನ್ನುಳಿದ ಪಾಲು ರಷ್ಯಾ ಮತ್ತು ಅರ್ಜೆಂಟೀನಾ ದೇಶಗಳಿಂದ ಆಮದು ಆಗುತ್ತಿದೆ.

ಬೆಂಗಳೂರಿನ ಕತ್ರಿಗುಪ್ಪೆಯ ಮಳಿಗೆಯೊಂದರಲ್ಲಿ ಅಡುಗೆ ಎಣ್ಣೆ ಖರೀದಿ ಮಿತಿಯ ಬಗ್ಗೆ ಮಾಹಿತಿ ಹಾಕಿರುವುದು –ಪ್ರಜಾವಾಣಿ ಚಿತ್ರ

ಫೆಬ್ರುವರಿ ಕೊನೆಯ ವಾರದಲ್ಲಿ ಯುದ್ಧ ಶುರುವಾದ ನಂತರ ಅಲ್ಲಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆ ಆಗುವುದು ನಿಂತಿದೆ. ಅದು ಈಗಿನ ಪರಿಸ್ಥಿತಿಗೆ ಕಾರಣ' ಎಂದು ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಅಡುಗೆ ಎಣ್ಣೆ ಆಮದಿಗೆ ಮೊದಲೇ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ, ಯುದ್ಧ ಶುರುವಾದ ನಂತರ ಆ ಒಪ್ಪಂದಕ್ಕೆ ಅನುಗುಣವಾಗಿ ಅಡುಗೆ ಎಣ್ಣೆ ಬರುತ್ತಿಲ್ಲ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು ತಕ್ಷಣಕ್ಕೆ ಕೊನೆಗೊಂಡರೂ, ಉಕ್ರೇನ್‌ನಿಂದ ಇಲ್ಲಿಗೆ ಸೂರ್ಯಕಾಂತಿ ಎಣ್ಣೆ ಬರಲು 40 ರಿಂದ 45 ದಿನಗಳು ಬೇಕಾಗುತ್ತದೆ' ಎಂದು ಮೂಲಗಳು ಅಂದಾಜಿಸಿವೆ.

ಕರ್ನಾಟಕದಲ್ಲಿ ವಾರ್ಷಿಕ ಸರಿಸುಮಾರು ಮೂರು ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಬಳಕೆ ಇದೆ. ಯುದ್ಧ ಶುರುವಾದ ನಂತರ ಉಕ್ರೇನ್‌ನ ಎಣ್ಣೆ ಗಿರಣಿಗಳು ಕೆಲಸ ನಿಲ್ಲಿಸಿವೆ ಎಂಬ ಮಾಹಿತಿ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

10ನೇ ಪುಟ ನೋಡಿ

ಸಂಘರ್ಷ ಮುಂದುವರಿದರೆ ಮತ್ತಷ್ಟು ದುಬಾರಿ

ಬೆಂಗಳೂರು: ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ಇದೇ ರೀತಿ ಮುಂದುವರಿದಲ್ಲಿ ಸೂರ್ಯಕಾಂತಿ ಎಣ್ಣೆ ದರವು ಲೀಟರಿಗೆ ₹ 195ರಿಂದ ₹ 200ರವರೆಗೂ ಏರಿಕೆ ಆಗುವ ಎಲ್ಲ ಸಾಧ್ಯತೆಗಳು ಇವೆ ಎಂದು ವರ್ತಕರು ಹೇಳಿದ್ದಾರೆ.

ಸೂರ್ಯಕಾಂತಿ ಎಣ್ಣೆ ದರವು ಸಗಟು ಮಾರುಕಟ್ಟೆಯಲ್ಲಿ ಲೀಟರಿಗೆ ಈಗಾಗಲೇ ₹ 40ರಷ್ಟು ಏರಿಕೆ ಆಗಿದೆ. ಈ ಏರಿಕೆಯು ಚಿಲ್ಲರೆ ಮಾರಾಟ ದರಕ್ಕೆ ವರ್ಗಾವಣೆ ಆಗಿಲ್ಲ. ಮಾರುಕಟ್ಟೆಯಲ್ಲಿ ಸದ್ಯ ಹಳೆಯ 'ಎಂಆರ್‌ಪಿ' ಇರುವ ದಾಸ್ತಾನು ಮಾರಾಟ ಆಗುತ್ತಿದೆ. ಶೀಘ್ರವೇ ಹೊಸ ಎಂಆರ್‌ಪಿ ಬರಲಿದ್ದು, ಆಗ ಬೆಲೆಯಲ್ಲಿ ಇನ್ನಷ್ಟು ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಬೆಂಗಳೂರಿನ ಯಲಹಂಕದ ಅಡುಗೆ ಎಣ್ಣೆ ವ್ಯಾಪಾರಿ ಕೃಷ್ಣಂ ಶಶಿಧರ್ ತಿಳಿಸಿದರು.

10ನೇ ಪುಟ ನೋಡಿ

ಇನ್ನೊಂದು ಸುದ್ದಿ 10

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
916 Hallmark Gold Rate
₹4915/-gm
ಬೆಳ್ಳಿ ₹66,000/-
ಚಿಕ್ಕಪೇಟೆ: 41300355
Gangothri *CA

ದ್ವಿತೀಯ ಪಿಯುಸಿ: ಏ. 22ರಿಂದ ಪರೀಕ್ಷೆ 3

ಚಿನಕುರಳಿ

ಪ್ರಕಾಶ್ ಶೆಟ್ಟಿ

10 ಗ್ರಾಂ ಚಿನ್ನದ ದರ ₹ 1,298ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರದಲ್ಲಿ ಏರಿಕೆ ಆಗಿದೆ. 10 ಗ್ರಾಂ ಚಿನ್ನದ ದರ ₹ 1,298ರಷ್ಟು ಹೆಚ್ಚಾಗಿ ₹ 53,784ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 1,910ರಷ್ಟು ಏರಿಕೆ ಕಂಡು ₹ 70,977ಕ್ಕೆ ಏರಿಕೆ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತವು ದೇಶದಲ್ಲಿ ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ತೀವ್ರಗೊಂಡಿರುವುದರಿಂದ ಹೂಡಿಕೆದಾರರು ಚಿನ್ನವನ್ನು ಹೆಚ್ಚು ಖರೀದಿ ಮಾಡಿದರು. ಇದರಿಂದಾಗಿ ದರವು ಏರಿಕೆ ಕಾಣುವಂತಾಯಿತು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ಹಿರಿಯ ಉಪಾಧ್ಯಕ್ಷ ನವನೀತ್ ದಮನಿ ಹೇಳಿದ್ದಾರೆ.

ಸಾರ್ವಕಾಲಿಕ ಕನಿಷ್ಠ ಮಟ್ಟ ತಲುಪಿದ್ದ ರೂಪಾಯಿ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 76 ಪೈಸೆ ಕುಸಿತ ಕಂಡಿದೆ. ಇದರಿಂದಾಗಿ ಒಂದು ಡಾಲರ್‌ಗೆ ₹ 76.93ರಂತೆ ವಿನಿಮಯಗೊಂಡಿದೆ. ವಹಿವಾಟಿನ ಒಂದು ಹಂತದಲ್ಲಿ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 77ಕ್ಕೆ ತಲುಪಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲ ದರವು ಒಂದು ಬ್ಯಾರಲ್‌ಗೆ ಶೇಕಡ 6.08ರಷ್ಟು ಹೆಚ್ಚಾಗಿ 125 ಡಾಲರ್ ದಾಟಿದೆ.

ಮತದಾನೋತ್ತರ ಸಮೀಕ್ಷೆ: ಎಎಪಿಗೆ ಪಂಜಾಬ್

ಬಿಜೆಪಿ ತೆಕ್ಕೆಗೆ ಉತ್ತರ ಪ್ರದೇಶ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಸರ್ಕಾರ ಉಳಿಸಿಕೊಳ್ಳಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ಸೋಮವಾರ ಹೇಳಿವೆ. ಉತ್ತರ ಪ್ರದೇಶದಲ್ಲಿ ಬಿಜೆಪಿಯೇ ಅಧಿಕಾರಕ್ಕೆ ಬರಲಿದೆ. ಆದರೆ ಈ ಬಾರಿ 2017ಕ್ಕಿಂತ ಕಡಿಮೆ ಸ್ಥಾನಗಳಲ್ಲಿ ಬಿಜೆಪಿ ಆರಿಸಿ ಬರಲಿದೆ ಎಂದು ಬಹುತೇಕ ಎಲ್ಲಾ ಸಮೀಕ್ಷೆಗಳು ಹೇಳಿವೆ.

ಪಂಜಾಬ್‌ನಲ್ಲಿ ಎಎಪಿ ಹೆಚ್ಚಿನ ಸ್ಥಾನಗಳಲ್ಲಿ ಗೆದ್ದು, ಸರ್ಕಾರ ರಚಿಸಲಿದೆ. ಕಾಂಗ್ರೆಸ್ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ ಎಂದು ಸಮೀಕ್ಷೆಗಳು ಹೇಳಿವೆ.

ಮಣಿಪುರದಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಸಮೀಕ್ಷೆಯ ಅಂಕಿ-ಅಂಶಗಳು ಹೇಳುತ್ತವೆ. ಉತ್ತರ ಪ್ರದೇಶ ಮತ್ತು ಮಣಿಪುರದಲ್ಲಿ ಬಿಜೆಪಿಯು ಅಧಿಕಾರವನ್ನು ಉಳಿಸಿಕೊಂಡರೂ, ಈ ಹಿಂದಿಗಿಂತ ಕಡಿಮೆ ಸ್ಥಾನಗಳಲ್ಲಿ ಆರಿಸಿ ಬರಲಿದೆ. ಇದು ಎರಡೂ ರಾಜ್ಯಗಳಲ್ಲಿ ಬಿಜೆಪಿಯ ಜನಪ್ರಿಯತೆ ಕುಸಿದಿರುವುದನ್ನು ಸೂಚಿಸುತ್ತದೆ ಎಂದು ಸಮೀಕ್ಷೆಗಳನ್ನು ವಿಶ್ಲೇಷಿಸಲಾಗಿದೆ.

ಸಿ-ವೋಟರ್ ಸಮೀಕ್ಷೆ ಹೊರತುಪಡಿಸಿದರೆ, ಉಳಿದ ಎಲ್ಲ ಸಮೀಕ್ಷೆಗಳು ಉತ್ತರಾಖಂಡದಲ್ಲಿ ಬಿಜೆಪಿಗೆ ಗೆಲುವು ಸಿಗಲಿದೆ ಎಂದು ಹೇಳಿವೆ. ಬಿಜೆಪಿಗೆ ಕಾಂಗ್ರೆಸ್ ಭಾರಿ ಪೈಪೋಟಿ ನೀಡಲಿದೆ ಎಂದು ದತ್ತಾಂಶಗಳು ತಿಳಿಸಿವೆ.

ಗೋವಾದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿ ಇದೆ. ಇಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವ ಎಎಪಿ ಮತ್ತು ಟಿಎಂಸಿಗಳು ಕೆಲವು ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ. ಅತಂತ್ರ ವಿಧಾನಸಭೆಯ ಸಾಧ್ಯತೆ ಹೆಚ್ಚು ಎಂದು ಸಮೀಕ್ಷೆಗಳು ವಿವರಿಸಿವೆ.

ಮತದಾನೋತ್ತರ ಸಮೀಕ್ಷೆಗಳು ಸುಳ್ಳಾಗಲಿವೆ. ಸಮಾಜವಾದಿ ಪಕ್ಷವು 300ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆದ್ದು, ಸರ್ಕಾರ ರಚಿಸಲಿದೆ

ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ಮುಖ್ಯಸ್ಥ

ಉತ್ತರ ಪ್ರದೇಶ ಮತದಾನೋತ್ತರ ಸಮೀಕ್ಷೆ — ಒಟ್ಟು ಸ್ಥಾನ 403 (ಸರಳ ಬಹುಮತ 202)

ಪಕ್ಷಗಳು	ಇಂಡಿಯಾ ಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	ಜನ್‌ಕಿಬಾತ್	ಟುಡೇಸ್ ಚಾಣಕ್ಯ	ಟೈಮ್ಸ್ ನೌ–ವೆಟೊ
ಬಿಜೆಪಿ	288-326	222-260	294	225
ಎಸ್‌ಪಿ	71-101	135-165	105	151
ಬಿಎಸ್‌ಪಿ	3-9	4-9	2	14
ಕಾಂಗ್ರೆಸ್	1-3	1-3	1	9
ಇತರೆ	2-3	3-4	1	4

ಪಂಜಾಬ್ ಮತದಾನೋತ್ತರ ಸಮೀಕ್ಷೆ — ಒಟ್ಟು ಸ್ಥಾನ 117 (ಸರಳ ಬಹುಮತ 59)

ಪಕ್ಷಗಳು	ಇಂಡಿಯಾ ಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	ಸಿ–ವೋಟರ್	ಟುಡೇಸ್ ಚಾಣಕ್ಯ	ಟೈಮ್ಸ್ ನೌ–ವೆಟೊ
ಕಾಂಗ್ರೆಸ್	19-31	22-28	10	22
ಬಿಜೆಪಿ+	1-4	7-13	1	5
ಎಎಪಿ	76-90	51-61	100	70
ಎಸ್‌ಎಡಿ+	7-11	20-26	6	19
ಇತರೆ	0-2	-	0	1

ಗೋವಾ ಮತದಾನೋತ್ತರ ಸಮೀಕ್ಷೆ — ಒಟ್ಟು ಸ್ಥಾನ 40 (ಸರಳ ಬಹುಮತ 21)

ಪಕ್ಷಗಳು	ಇಂಡಿಯಾ ಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	ಸಿ–ವೋಟರ್	ಜನ್‌ಕಿ ಬಾತ್	ಟೈಮ್ಸ್ ನೌ–ವೆಟೊ
ಬಿಜೆಪಿ	14-18	13-17	13-19	14
ಕಾಂಗ್ರೆಸ್+	15-20	12-16	14-19	16
ಎಂಜಿಪಿ+ಟಿಎಂಸಿ	2-5	5-9	1-2	-
ಎಎಪಿ	-	-	3-5	4
ಇತರೆ	0-4	0-2	1-3	6

ಉತ್ತರಾಖಂಡ ಮತದಾನೋತ್ತರ ಸಮೀಕ್ಷೆ — ಒಟ್ಟು ಸ್ಥಾನ 70 (ಸರಳ ಬಹುಮತ 36)

ಪಕ್ಷಗಳು	ಇಂಡಿಯಾ ಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	ಸಿ–ವೋಟರ್	ಟುಡೇಸ್ ಚಾಣಕ್ಯ	ಟೈಮ್ಸ್ ನೌ–ವೆಟೊ
ಬಿಜೆಪಿ	36-46	26-32	43	37
ಕಾಂಗ್ರೆಸ್	20-30	32-38	24	31
ಎಎಪಿ	-	0-2	-	1
ಇತರೆ	2-5	3-7	3	1

ಮಣಿಪುರ ಮತದಾನೋತ್ತರ ಸಮೀಕ್ಷೆ — ಒಟ್ಟು ಸ್ಥಾನ 60 (ಸರಳ ಬಹುಮತ 31)

ಪಕ್ಷಗಳು	ಇಂಡಿಯಾ ಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	ಸಿ–ವೋಟರ್	ನ್ಯೂಸ್ 18–ಪಿ ಮಾರ್ಕ್	ಇಂಡಿಯಾ ನ್ಯೂಸ್
ಬಿಜೆಪಿ	33-43	23-27	27-31	23-28
ಕಾಂಗ್ರೆಸ್	4-8	12-16	11-17	10-14
ಇತರೆ	10-23	15-27	11-23	19-26

ನಗರದಲ್ಲಿ ಸೋಮವಾರ ವಿದ್ಯಾರ್ಥಿ ತೇಜಸ್ ಅವರನ್ನು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಎಂ.ಆರ್. ದೊರೆಸ್ವಾಮಿ ಅಭಿನಂದಿಸಿದರು.

'ಆಕ್ಸಿಪ್ಲಾಂಟ್' ಅಭಿವೃದ್ಧಿಪಡಿಸಿದ ಪಿಇಎಸ್ ವಿಶ್ವವಿದ್ಯಾಲಯದ ತೇಜಸ್

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ತೇಜಸ್ ಪಿ. ಕಾರಂಜಿ ಎಂಟು ತಿಂಗಳ ಅವಧಿಯಲ್ಲಿ ಮಿನಿ-ಆಮ್ಲಜನಕದ ಘಟಕವನ್ನು ಅಭಿವೃದ್ಧಿಪಡಿಸಿದ್ದಾರೆ.

'ಆಕ್ಸಿಪ್ಲಾಂಟ್ ಪ್ರೆಶರ್ ಸ್ವಿಂಗ್ ಅಡ್ಸಾರ್ಪ್ಶನ್' (ಪಿಎಸ್ಎ) ತತ್ವದ ಮೇಲೆ ಈ ಘಟಕವು ಕಾರ್ಯನಿರ್ವಹಿಸುತ್ತದೆ. ಈ ಸಾಧನವು ವಿಶೇಷವಾಗಿ ತಯಾರಿಸಿದ ಎರಡು ಸ್ಟೇನ್‌ಲೆಸ್ ಸಿಲಿಂಡರ್‌ಗಳನ್ನು ಒಳಗೊಂಡಿದೆ.

ಪಿಇಎಸ್ ವಿಶ್ವವಿದ್ಯಾನಿಲಯದ ರಿಂಗ್ ರೋಡ್ ಕ್ಯಾಂಪಸ್‌ನಲ್ಲಿ ತೇಜಸ್ ಅವರನ್ನು ಸನ್ಮಾನಿಸಿದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಎಂ.ಆರ್. ದೊರೆಸ್ವಾಮಿ ಅವರು 'ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಮಹತ್ತರವಾದ ತಾಂತ್ರಿಕ ಆವಿಷ್ಕಾರವನ್ನು ತೇಜಸ್ ಮಾಡಿದ್ದಾರೆ. ಈ ಕಾರ್ಯವು ಆರೋಗ್ಯ ಕ್ಷೇತ್ರಕ್ಕೆ ಪ್ರಯೋಜನವನ್ನು ನೀಡುತ್ತದೆ' ಎಂದರು.

ವಿವರಗಳಿಗೆ: ತೇಜಸ್ ಪಿ. ಕಾರಂಜಿ (ಮೊಬೈಲ್ ಸಂಖ್ಯೆ: 9353281737)

ಬ್ಯಾಂಕ್ ಆಫ್ ಇಂಡಿಯಾ Bank of India BOI

ಬೆಂಗಳೂರು ವಲಯ ಕಚೇರಿ, ಆಡಳಿತ ಮತ್ತು ಸೇವೆ ವಿಭಾಗ, ನಂ.11, ಬ್ಯಾಂಕ್ ಆಫ್ ಇಂಡಿಯ ಬಿಲ್ಡಿಂಗ್, ಕೆ.ಜಿ.ರಸ್ತೆ, ಬೆಂಗಳೂರು-560 009. ಫೋನ್ : 080-2295 9419/417, ಇ-ಮೇಲ್ : Bengaluru.AandS@bankofindia.co.in

ಬ್ಯಾಂಕಿನ ವಾಹನಗಳು ಮಾರಾಟಕ್ಕೆ

ಕ್ರಸಂ	ವಾಹನ ನೋಂದಣಿ ಸಂಖ್ಯೆ	ತಯಾರಿಕೆ ಮತ್ತು ಮಾಡಲ್	ಮೀಸಲು ಬೆಲೆ
1.	KA 04 ME 3374	Maruti Wagon R- VXI-2007	ರೂ.1,00,000/-
2.	KA 02 ME 2030	Maruti Suzuki SX4 VXI-2010	ರೂ.1,50,000/-

ಹೆಚ್ಚಿನ ವಿವರಗಳಿಗೆ ನಮ್ಮ ಬ್ಯಾಂಕಿನ ವೆಬ್ ಸೈಟ್ www.bankofindia.co.in ನ ಟೆಂಡರ್ ವಿಭಾಗದಲ್ಲಿ ಲಾಗ್ ಆನ್ ಮಾಡಿ ನೋಡಬಹುದು ಅಥವಾ ಯಾವುದೇ ಕೆಲಸದ ದಿನ ಕಛೇರಿ ಸಮಯದಲ್ಲಿ ನಮ್ಮ ವಲಯ ಕಚೇರಿಯನ್ನು ಸಂಪರ್ಕಿಸಿ.

07.03.2022 ವಲಯ ವ್ಯವಸ್ಥಾಪಕರು

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು - 560 064

ವೆಬ್‌ಸೈಟ್: www.rwf.indianrailways.gov.in. e-mail: smm.rwfblr@gmail.com

Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/007/2021-22 ದಿನಾಂಕ: 07/03/2022

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರವರು ಭಾರತೀಯ ರೈಲ್ವೆ ಪೋರ್ಟಲ್ http//www.ireps.gov.in ಮೂಲಕ ಕೆಳಗೆ ತಿಳಿಸಿರುವ ಐಟಂಗಳನ್ನು ಸರಬರಾಜು ಮಾಡಲು ಅನುಭವಿ ತಯಾರಕರು/ಒಇಎಂ / ಅಧಿಕೃತ ಏಜೆಂಟ್‌ಗಳಿಂದ ತೆರೆದ ಎಲೆಕ್ಟ್ರಾನಿಕ್ ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ದಾಖಲೆಗಳು ಮತ್ತು ಯಾವುದೇ ತಿದ್ದುಪಡಿ ಇದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುವುದು.

ಕ್ರಮ ಸಂಖ್ಯೆ	ಟೆಂಡರ್ ಸಂಖ್ಯೆ	ಐಟಂ ವಿವರ	ಪ್ರಮಾಣ
1	ಪಿ2225208	ಆರ್‌ಡಬ್ಲ್ಯೂಎಫ್/ಎಂ/ಸ್ಪೆಸಿಫಿಕೇಷನ್-1/129/2021/ಆಲ್ಟ್ 'ನಿಲ್' ವೈಶಿಷ್ಟ್ಯತೆ ಪ್ರಕಾರವಾಗಿ 300ಮಿಮೀ ಚದರದ ಸ್ಟೀಲ್ ಬ್ಲಾಸಮ್ಸ್. ಟೆಂಡರ್‌ನ ಕೊನೆಯ ದಿನಾಂಕ ಹಾಗೂ ಸಮಯ : 12/03/2022 ರ 14.00 ಗಂಟೆಗೆ	100 ಎಂ.ಟಿ
2	ಪಿ2225188	ಆರ್‌ಡಬ್ಲ್ಯೂಎಫ್/ಎಂ/ಎಂ&ಪಿ/21-22/ಯುಎಸ್ಎಫ್‌ಡಿ - ಪೋರ್ಟಬಲ್ ಆಕ್ಸಲ್ ವೈಶಿಷ್ಟ್ಯತೆ ಪ್ರಕಾರವಾಗಿ ಪೋರ್ಟಬಲ್ ಡಿಜಿಟಲ್ ಅಲ್ಟ್ರಾಸೋನಿಕ್ ಫ್ಲಾ ಡಿಟೆಕ್ಟರ್. ಟೆಂಡರ್‌ನ ಕೊನೆಯ ದಿನಾಂಕ ಹಾಗೂ ಸಮಯ : 30/03/2022 ರ 14.00 ಗಂಟೆಗೆ	3 ಸಂಖ್ಯೆಗಳು

ಈ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್: www.ireps.gov.in ಅಥವಾ rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಕೆನರಾ ಬ್ಯಾಂಕ್ Canara Bank ಭಾರತ ಸರ್ಕಾರದ ಒಂದು ಉದ್ಯಮ A Government of India Undertaking ಸಿಂಡಿಕೇಟ್ Syndicate

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ.ಜಿ.ರಸ್ತೆ, ಬೆಂಗಳೂರು-560001. ದೂ.: 25310039/25310038

ಟೆಂಡರ್ ಆಹ್ವಾನ ಪ್ರಕಟಣೆ

ಕೆನರಾ ಬ್ಯಾಂಕ್, ಹೌಸ್‌ಕೀಪಿಂಗ್ ಮತ್ತು ಸಾಮಾನ್ಯ ಸ್ವಚ್ಛತಾ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ವಿವರಗಳನ್ನು ಬ್ಯಾಂಕ್ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಿದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.

ಟೆಂಡರ್‌ಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 01-04-2022ರಂದು ಸಂಜೆ 3.00 ಗಂಟೆಗಳವರೆಗೆ.

ಮಾರ್ಪಾಡುಗಳನ್ನು ಒಳಗೊಂಡು ಸೇರ್ಪಡೆಗಳು / ತಿದ್ದುಪಡಿಗಳು ಇದ್ದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸ್ಥಳ : ಬೆಂಗಳೂರು ಸಹಿ/-

ದಿನಾಂಕ : 08-03-2022 ಸಹಾಯಕ ಮಹಾ ಪ್ರಬಂಧಕರು

ಯಲಹಂಕ ತಾಲ್ಲೂಕು ಪಂಚಾಯಿತಿ

ಮಿನಿ ವಿಧಾನಸೌಧ, 2ನೇ ಮಹಡಿ, ಯಲಹಂಕ ಬೆಂಗಳೂರು-560 064. ಫೋನ್: 080-28460315

ಸಂಖ್ಯೆ: ಯತಾಪಂ/ಸಾಮಗ್ರಿಖರೀದಿ/ಲೆಶಾ-01/2021-22 ದಿನಾಂಕ: 03.03.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯನಿರ್ವಾಹಕ ಅಧಿಕಾರಿ, ಯಲಹಂಕ ತಾಲ್ಲೂಕು ಪಂಚಾಯಿತಿಗೆ ಬಿಡುಗಡೆಯಾಗಿರುವ ಅನಿರ್ಬಂಧಿತ ಅನುದಾನದಡಿ ನಿಗದಿಯಾಗಿರುವ ಅನುದಾನಕ್ಕೆ ವಿವಿಧ ಸಾಮಾಗ್ರಿಗಳನ್ನು (ಅಕ್ವಾಗಾರ್ಡ್. ಇನ್ಸಿನಿರೇಟರ್, ಸ್ಪರ್ಧಾತ್ಮಕ ಪುಸ್ತಕಗಳು, ಶಾಲೆಗೆ ಡೆಸ್ಕ್, ಛೇರ್ ಅಂಡ್ ಸ್ಟಡಿ ಟೇಬಲ್) ಖರೀದಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ವೆಬ್‌ಸೈಟ್: www.eproc.karnataka.gov.in ನಲ್ಲಿ ದಿನಾಂಕ: 03.03.2022ರಂದು ಅರ್ಜಿ ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಸರಬರಾಜುದಾರರು ಇಎಂಡಿ ಮೊತ್ತದೊಂದಿಗೆ ದಿನಾಂಕ: 11.03.2022ರ ಸಂಜೆ 05.00: ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿನಾಂಕ:12.03.2022ರ ಸಂಜೆ 05.15 ಗಂಟೆಗೆ ತಾಂತ್ರಿಕ ಬಿಡ್ಡನ್ನು ತೆರೆಯಲಾಗಿವುದು ಹಾಗು ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಯಲಹಂಕ ತಾಲ್ಲೂಕು ಪಂಚಾಯಿತಿ, ಮಿನಿವಿಧಾನಸೌಧ 02ನೇ ಮಹಡಿ. ಯಲಹಂಕ, ಬೆಂಗಳೂರು-64, ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 080-28460315.

ವಾಸಾಸಂಇ/ಬೆಂ.ನ./ಜೆಎ/3638/2021-22 ಸಹಿ/- ಕಾರ್ಯನಿರ್ವಾಹಕ ಅಧಿಕಾರಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಿಟ್ಟಗಾನಹಳ್ಳಿ ಕ್ವಾರಿಯಲ್ಲಿ ಬಿಬಿಎಂಪಿ ವ್ಯಾಪ್ತಿಯ ಕಸ ವಿಲೇವಾರಿ: ಕೆಎಸ್‌ಪಿಸಿಬಿ ಅಸ್ತು

ಅರ್ಜಿ ಸಲ್ಲಿಸಿ 2 ವರ್ಷದ ಬಳಿಕ ಅನುಮತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 30ಗಳಲ್ಲಿ 18 ಸಾವಿರ ಟನ್ ಕಸವನ್ನು ಇಲ್ಲಿ ವಿಲೇವಾರಿ ಮಾಡಬಹುದು
- ಕಸ ವಿಲೇವಾರಿ ಮಾಡದಿದ್ದಲ್ಲಿ ಬಿಬಿಎಂಪಿಗೆ ದಂಡ
- ಯಾವುದೇ ಒತ್ತಡಕ್ಕೆ ಮಣಿದು ಈ ಅನುಮತಿ ನೀಡಿಲ್ಲ: ಕೆಎಸ್‌ಪಿಇಸಿಬಿ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಮಿಟ್ಟಗಾನಹಳ್ಳಿಯ ಕ್ವಾರಿ ಹೊಂಡದಲ್ಲಿ ಕಸ ಸಂಸ್ಕರಣೆ, ಮರುಬಳಕೆ, ಶುದ್ಧೀಕರಣ ಅಥವಾ ವಿಲೇವಾರಿ ಘಟಕ ಸ್ಥಾಪಿಸಿ ನಿರ್ವಹಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಶುಕ್ರವಾರ (ಮಾರ್ಚ್ 4) ಅನುಮತಿ ನೀಡಿದೆ.

ಮಿಟ್ಟಗಾನಹಳ್ಳಿಯ ಸರ್ವೆ ನಂಬರ್ 2ರಲ್ಲಿರುವ ಕ್ವಾರಿಯಲ್ಲಿ ಕಸ ವಿಲೇವಾರಿ ಘಟಕ ಸ್ಥಾಪಿಸಲು ಅನುಮತಿ ನೀಡುವಂತೆ ಕೋರಿ ಬಿಬಿಎಂಪಿಯು ಕೆಎಸ್‌ಪಿಸಿಬಿಗೆ 2020ರ ಮಾರ್ಚ್ 5ರಂದು ಅರ್ಜಿ ಸಲ್ಲಿಸಿತ್ತು. ಈ ಕ್ವಾರಿಯಲ್ಲಿ ಕಸ ವಿಲೇವಾರಿ ಮಾಡಲು ಮಂಡಳಿಯು ಅನುಮತಿ ನೀಡಿದೆ.

ಮಿಟ್ಟಗಾನಹಳ್ಳಿ ಕ್ವಾರಿಯಲ್ಲಿ ಬಿಬಿಎಂಪಿಯು 2023 ರ ಜೂನ್ 30ರವರೆಗೆ ತಿಂಗಳಲ್ಲಿ 18 ಸಾವಿರ ಟನ್ ಕಸವನ್ನು ಇಲ್ಲಿ ವಿಲೇವಾರಿ ಮಾಡಬಹುದು. 2016ರ ಕಸ ವಿಲೇವಾರಿ ನಿಯಮಗಳನ್ನು ಉಲ್ಲಂಘಿಸಿ ಕಸ ವಿಲೇವಾರಿ ಮಾಡದಿದ್ದಲ್ಲಿ, 1986 ಪರಿಸರ ಸಂರಕ್ಷಣೆ ಕಾಯ್ದೆ ಅನ್ವಯ ದಂಡ ವಿಧಿಸಲಾಗುತ್ತದೆ ಎಂದು ಅನುಮತಿ ಪತ್ರದಲ್ಲಿ ತಿಳಿಸಲಾಗಿದೆ.

ಬಿಬಿಎಂಪಿಯಿಂದ ಅರ್ಜಿ ಸಲ್ಲಿಕೆಯಾದ ಎರಡು ವರ್ಷಗಳ ಬಳಿಕ ಅನುಮತಿ ನೀಡಿರುವುದು ಅಚ್ಚರಿಗೆ ಕಾರಣವಾಗಿದೆ. ವಿಳಂಬವನ್ನು ಸಮರ್ಥಿಸಿಕೊಂಡ ಕೆಎಸ್‌ಪಿಸಿಬಿ ಅಧಿಕಾರಿಯೊಬ್ಬರು, 'ಯಾವುದೇ ಒತ್ತಡಕ್ಕೆ ಬಿದ್ದು ನಾವು ಈ ಕ್ರಮ ಕೈಗೊಂಡಿಲ್ಲ. ಸ್ಥಳ ಪರಿಶೀಲನೆ, ಪರಿಸರ ಇಲಾಖೆ ಅನುಮತಿ, ಕೆಎಸ್‌ಪಿಸಿಬಿ ಆಡಳಿತ ಮಂಡಳಿಯ ಅನುಮೋದನೆ ಬಳಿಕವೇ ನಾವು ಬಿಬಿಎಂಪಿಗೆ ಅನುಮತಿ ನೀಡಬೇಕಾಗುತ್ತದೆ' ಎಂದರು.

ಬಿಬಿಎಂಪಿಯು ಮಿಟ್ಟಗಾನಹಳ್ಳಿ ಕ್ವಾರಿಯಲ್ಲಿ ನಿತ್ಯ 1 ಸಾವಿರ ಟನ್‌ಗಳಷ್ಟು ಮಿಶ್ರ ಕಸವನ್ನು ವಿಲೇ ಮಾಡುತ್ತಿದೆ. ಕೆಲವು ಕಸ ಸಂಸ್ಕರಣೆ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಣೆ ಮಾಡದ ಕಾರಣ ಬಿಬಿಎಂಪಿಯು ಈ ಕ್ವಾರಿಯನ್ನು ಹೆಚ್ಚು ಅವಲಂಬಿಸುವ ಸ್ಥಿತಿ ನಿರ್ಮಾಣವಾಗಿತ್ತು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವಲ್ಲಿ ಬಿಬಿಎಂಪಿ ವಿಫಲವಾಗಿದೆ' ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠವು ಶನಿವಾರ (ಮಾರ್ಚ್ 5) ಬಿಬಿಎಂಪಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿತ್ತು.

ಚಿತ್ರೋತ್ಸವದಲ್ಲಿ ಇಂದು

*ಒರಾಯನ್ ಮಾಲ್, ಪಿವಿಆರ್ ಸಿನಿಮಾಸ್: ತೆರೆ ಸಂಖ್ಯೆ 4ರಲ್ಲಿ ಕನ್ನಡ ಚಿತ್ರಗಳು: ಬೆಳಗ್ಗೆ 10ಕ್ಕೆ 'ಮನೆ', ಮಧ್ಯಾಹ್ನ 1ಕ್ಕೆ 'ದಂಡಿ', ಸಂಜೆ 4ಕ್ಕೆ ಅಮರ್ ನಿರ್ದೇಶನದ 'ಮಸಣದ ಹೂವು', ರಾತ್ರಿ 7ಕ್ಕೆ ಮಂಜು ಪಾಂಡವಪುರ ನಿರ್ದೇಶನದ 'ಮಾತಂಗಿ ದೀವಟಿಗೆ'.

ತೆರೆ ಸಂಖ್ಯೆ 5ರಿಂದ 10: ವಿಶ್ವದ ವಿವಿಧ ಸಿನಿಮಾಗಳ ಪ್ರದರ್ಶನ

ತೆರೆ ಸಂಖ್ಯೆ 11: ಬೆಳಗ್ಗೆ 10.30ಕ್ಕೆ: 'ಸಿನಿಮಾದಲ್ಲಿ ಮಹಿಳೆಯರು' ವಿಚಾರ ಗೋಷ್ಠಿ

ಸುಚಿತ್ರ ಅಕಾಡೆಮಿ, ಬನಶಂಕರಿ: ಬೆಳಗ್ಗೆ 10ಕ್ಕೆ: ಕನ್ನಡ ಸಿನಿಮಾ 'ವಸಂತಸೇನಾ', ಮಧ್ಯಾಹ್ನ 1.30ಕ್ಕೆ: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕಾರ್ಯಕ್ರಮ ಮತ್ತು ಚಿತ್ರಪ್ರದರ್ಶನ **ಸಂಜೆ 4ಕ್ಕೆ:** ಕನ್ನಡ ಸಿನಿಮಾ 'ಶ್ರೀ ಜಗನ್ನಾಥ ದಾಸರು', ಸಂಜೆ 6.45ಕ್ಕೆ 'ಫೈರ್' ಹಾಗೂ ರಾತ್ರಿ 8.30ಕ್ಕೆ 'ಐ ನೆವರ್ ಕ್ರೈ' ಸಿನಿಮಾಗಳ ಪ್ರದರ್ಶನ

ಡಾ.ರಾಜ್‌ಕುಮಾರ್ ಭವನ, ಚಾಮರಾಜಪೇಟೆ: ಮಧ್ಯಾಹ್ನ 1ರಿಂದ ಕನ್ನಡ ಚಿತ್ರಗಳ ಪ್ರದರ್ಶನ

ಬೆಂಗಳೂರಿನ ಸುಚಿತ್ರ ಸಿನಿ ಅಕಾಡೆಮಿಯಲ್ಲಿ ಸೋಮವಾರ 'ಆಜಾದಿ ಕಿ ಅಮೃತ ಮಹೋತ್ಸವ್' ಸಾಕ್ಷ್ಯಚಿತ್ರ ವೀಕ್ಷಿಸಲು ಪ್ರೇಕ್ಷಕರೇ ಇರಲಿಲ್ಲ. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಇದೇ 8ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಆರ್‌ಬಿಐ ಬಡಾವಣೆ, ಕೊತ್ತನೂರು, ಜೆ.ಪಿ. ನಗರ 5ನೇ ಹಂತ, ಶ್ರೇಯಸ್ ಕಾಲೋನಿ, ಗೌರವ ನಗರ, ನಟರಾಜ್ ಬಡಾವಣೆ, ನೃಪತುಂಗ ನಗರ, ಜಂಬುಸವಾರಿ ದಿಣ್ಣೆ ಸುತ್ತಮುತ್ತ ಪ್ರದೇಶಗಳು.

ಶುಲ್ಕ ಪಾವತಿಸುವ ದಿನಾಂಕ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂಬಿಎ ಸೇರಿದಂತೆ ಸ್ನಾತಕೋತ್ತರ ವಿಭಾಗದ ಎಲ್ಲ ವಿಷಯಗಳ ಮೂರನೇ ಸೆಮಿಸ್ಟರ್ ಮತ್ತು ಎಂಸಿಎ ಪರೀಕ್ಷೆಯ ಮೂರು ಮತ್ತು ಐದನೇ ಸೆಮಿಸ್ಟರ್‌ಗೆ ಶುಲ್ಕ ಪಾವತಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ.

ದಂಡ ಶುಲ್ಕ ಇಲ್ಲದೆಯೇ ಮಾರ್ಚ್ 10ರವರೆಗೆ ಪಾವತಿಸಬಹುದು. ₹200 ಶುಲ್ಕದೊಂದಿಗೆ ಮಾರ್ಚ್ 14ರವರೆಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕುಲಸಚಿವರು (ಮೌಲ್ಯಮಾಪನ) ತಿಳಿಸಿದ್ದಾರೆ.

ಮಾಹಿತಿಗೆ www.bangaloreuniversity.ac.in ವೆಬ್‌ಸೈಟ್‌ಗೆ ವೀಕ್ಷಿಸಬಹುದು.

ಏ.8ಕ್ಕೆ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ವಿವಿ 56ನೇ ಘಟಿಕೋತ್ಸವವು ಏ.8ರಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ. ಘಟಿಕೋತ್ಸವ ಸಮಾರಂಭದ ಸ್ಥಳ ಎಲ್ಲಿ ಎಂಬುದು ಇನ್ನೂ ನಿಗದಿಯಾಗಿಲ್ಲ. .

ಸುದ್ದಿ 2 ನಿಮಿಷ

ಕಾನೂನು ಶಾಲೆಯಲ್ಲಿ ಕನ್ನಡಿಗರಿಗೂ ಸೀಟುಗಳು

ಬೆಂಗಳೂರು: ರಾಷ್ಟ್ರೀಯ ಕಾನೂನು ಶಾಲೆಯ ಮೂರು ವರ್ಷಗಳ ಎಲ್‌ಎಲ್‌ಬಿ ಕೋರ್ಸ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹೊರತುಪಡಿಸಿದ ಮೀಸಲುಪಟ್ಟಿಯಲ್ಲಿರುವ ಜಾತಿಗಳ ರಾಜ್ಯ ಅಭ್ಯರ್ಥಿಗಳಿಗೆ ಶೇ 25ರಷ್ಟು ಸೀಟುಗಳನ್ನು ಮೀಸಲಿರಿಸಲಾಗಿದೆ.

2022-23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, 60 ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ. ರಾಷ್ಟ್ರ ಮಟ್ಟದ ಲಿಖಿತ ಪರೀಕ್ಷೆ (ಎನ್‌ಎಲ್‌ಎಸ್‌ಎಟಿ) ಮತ್ತು ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.

ಲಿಖಿತ ಪರೀಕ್ಷೆಗೆ 140 ಅಂಕ, 150 ನಿಮಿಷದ ಅವಧಿಯದ್ದಾಗಿದೆ. ಸಂದರ್ಶನಕ್ಕೆ 10 ಅಂಕಗಳನ್ನು ನಿಗದಿಪಡಿಸಲಾಗಿದೆ.

ಅರ್ಜಿ ಸಲ್ಲಿಸಲು ಮಾರ್ಚ್ 26 ಕೊನೆಯ ದಿನವಾಗಿದ್ದು, ಲಿಖಿತ ಪರೀಕ್ಷೆಯು ಏಪ್ರಿಲ್ 22ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಸಂದರ್ಶನವು ಮೇ ತಿಂಗಳಲ್ಲಿ ನಡೆಯಲಿದೆ.

ಲಿಖಿತ ಪರೀಕ್ಷೆ ಮತ್ತು ಮೀಸಲಾತಿಯ ವಿವರಗಳಿಗೆ https://www.nls.ac.in/programme/3-year-llb-hons/ ವೀಕ್ಷಿಸಬಹುದು.

ಬಿಬಿಎಂಪಿಗೆ ಕಸ ಗುಡಿಸುವ ಯಂತ್ರ ಹಸ್ತಾಂತರ

ಬೆಂಗಳೂರು: ಎಲ್ ಆ್ಯಂಡ್ ಟಿ ರಿಯಾಲ್ಟಿ ಡೆವಲಪರ್ಸ್ ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಬಿಬಿಎಂಪಿಗೆ ಕಸ ಗುಡಿಸುವ ಯಂತ್ರವನ್ನು ಕೊಡುಗೆ ನೀಡಿದೆ.

ಬಿಬಿಎಂಪಿಯ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರಿಗೆ ಎಲ್ ಆ್ಯಂಡ್ ಟಿ ಸಂಸ್ಥೆಯ ವಹಿವಾಟು ವಿಭಾಗದ ಮುಖ್ಯಸ್ಥ ಬಿಜು ರಾಜ್ ಅವರು ಕಸ ಗುಡಿಸುವ ಯಂತ್ರದ ಕೀಲಿಯನ್ನು ಸೋಮವಾರ ಹಸ್ತಾಂತರಿಸಿದರು.

'ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಲು ಈ ಯಂತ್ರವನ್ನು ಬಳಸಿಕೊಳ್ಳಲಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಪಾಲಿಕೆಯಲ್ಲಿ ಈಗಾಗಲೇ 27 ಕಸ ಗುಡಿಸುವ ಯಂತ್ರಗಳಿವೆ. ಅವುಗಳನ್ನು ದುರಸ್ತಿಗೊಳಿಸಿದ್ದು, ರಸ್ತೆ ಸ್ವಚ್ಛಗೊಳಿಸಲು ಬಳಸುತ್ತಿದ್ದೇವೆ' ಎಂದರು.

PUBLIC NOTICE

NOTICE is hereby given to the public at large that we are investigating the clear & marketable title of **Sri.B.K. Thyagaraj,S/o Late Sri. Kempanna, residing at Byrathi Village, Bidrahalli Hobli, Bangalore East taluk**, in respect of the All that piece and parcel of commercially converted land bearing Sy.No. 162/2 (Old Sy.No. 29) measuring 2 Acre 15 Guntas situated at Byrathi Village, Bidarahalli Hobli, Bengaluru East taluk and the land is bounded as under:

On or towards the East : Land bearing Sy.No. 114.
On or towards the West : Road
On or towards the North : Land bearing Sy.No. 162/1 (Old Sy.No. 29)
On or towards the South : Land belong to Siddappa.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of **Land** or any part or portion thereof, by way of sale, exchange, mortgage, pledge, charge, gift, trust, inheritance,succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, lis pendens, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this the 08 day of March 2022.

B.N.Prakash
Partner, Lawyers Inc.
No.15/2, V.S.Raju Road,12th Block, Kumarapark west.Bengaluru-560020

ನಗರದಲ್ಲಿ ಇಂದು

ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ-ನಟ ಉಪೇಂದ್ರ, ಅಧ್ಯಕ್ಷತೆ-ಕೆ.ಪಿ. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ-ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಉಪೇಂದ್ರ

ಆತ್ಮನಿರ್ಭರ ಅರ್ಥವ್ಯವಸ್ಥೆ ಭಾರತ ಕುರಿತು ಸಂವಾದ: ಅತಿಥಿಗಳು-ನಳಿನ್‌ಕುಮಾರ್ ಕಟೀಲ್, ನಿರ್ಮಲಾ ಸೀತಾರಾಮನ್, ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ-ಜೆ.ಡಬ್ಲ್ಯು ಮ್ಯಾರಿಯಟ್ ಹೋಟೆಲ್, ಬೆಳಿಗ್ಗೆ 11

ಎಸ್.ಪ್ರಸಾದಸ್ವಾಮಿ ಅವರ ಪುಸ್ತಕಗಳ ಬಿಡುಗಡೆ: 'ಪ್ರಜಾವಾಣಿ' ವರದಿಗಾರಿಕೆ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್, ಪುಸ್ತಕಗಳು-ಕನ್ನಡ ಸಾಹಿತ್ಯ ಅಧ್ಯಯನ, ಮುನ್ನುಡಿ, ಕನ್ನಡ ನವಿಲು, ಬೆಡಗು-ಬಿನ್ನಾಣ, ಮಾತನಾಡುವವರು-ಎಸ್.ಪ್ರವೀಣ್ ಕುಮಾರ್, ಟಿ.ಯಲ್ಲಪ್ಪ, ರಮೇಶ್ಚಂದ್ರ ದತ್ತ, ರಾಗಂ, ಸ್ಥಳ-ನಯನ ಸಭಾಂಗಣ, ಸಂಜೆ 6

ಮಹಿಳಾ ದಿನದ ಕಾರ್ಯಕ್ರಮಗಳು

ಮಹಿಳಾ ದಿನ ಅಂಗವಾಗಿ ವಿದ್ಯಾರ್ಥಿನಿಯರಿಂದ ಸ್ವಯಂ ರಕ್ಷಣಾ ಕೌಶಲ ಪ್ರದರ್ಶನ ಮತ್ತು ಪೊಲೀಸ್ ಸಮುದಾಯ ಭವನ ಉದ್ಘಾಟನೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಅಧ್ಯಕ್ಷತೆ-ಪ್ರವೀಣ್ ಸೂದ್, ರಜನೀಶ್ ಗೋಯಲ್, ಆಯೋಜನೆ-ಪೊಲೀಸ್ ಇಲಾಖೆ, ಸ್ಥಳ-ಪೊಲೀಸ್ ಪಬ್ಲಿಕ್ ಶಾಲೆ ಆವರಣ, ಕೋರಮಂಗಲ, ಬೆಳಿಗ್ಗೆ 8.30

ಮಹಿಳೆ ಮತ್ತು ಮಕ್ಕಳ ದಿನ:ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಳ ಪ್ರದಾನ-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು-ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಅಧ್ಯಕ್ಷತೆ-ಉದಯ್ ಬಿ.ಗರುಡಾಚಾರ್, ಪೋಸ್ಟರ್ ಬಿಡುಗಡೆ-ಹಾಲಪ್ಪ ಆಚಾರ್, ಒಕ್ಕೂಟಗಳಿಗೆ ಪ್ರಶಸ್ತಿ ಪ್ರದಾನ-ಸಿ.ಎನ್.ಅಶ್ವತ್ಥನಾರಾಯಣ, ಆಯೋಜನೆ-ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30

ಮಹಿಳೆಯರಿಗೆ ಸಾಧಕ ಸೇವಾರತ್ನ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ-ಎಚ್. ರವೀಂದ್ರ, ಅತಿಥಿಗಳು-ಅರುಣ್ ಸೋಮಣ್ಣ, ಮಹೇಂದ್ರ ಮುಣೋತ್, ಆಯೋಜನೆ-ಕರ್ನಾಟಕ ಹೈಟೆಕ್ ವುಮೆನ್ಸ್ ಟ್ರಸ್ಟ್, ಸ್ಥಳ-ನ್ಯೂಶಾಂತಿ ಸಾಗರ ಹೋಟೆಲ್, ವಿಜಯನಗರ, ಬೆಳಿಗ್ಗೆ 9.30

ಮಹಿಳಾ ದಿನ:ಉದ್ಘಾಟನೆ-ಎಸ್.ರಾಜೇಂದ್ರ ಪ್ರಸಾದ್, ಅತಿಥಿಗಳು-ನೇಮಿಚಂದ್ರ, ಅಕ್ಷತಾ ಪಾಂಡವಪುರ, ಆಯೋಜನೆ-ಕೃಷಿ ವಿಶ್ವವಿದ್ಯಾಲಯದ ಮಹಿಳಾ ರಕ್ಷಣೆ ವಿಭಾಗ, ಸ್ಥಳ-ಕುವೆಂಪು ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ದಿನ:ಉದ್ಘಾಟನೆ ಮತ್ತು ಗೌರವ ಅರ್ಪಣೆ-ಸಚಿವೆ ಶಶಿಕಲಾ ಜೊಲ್ಲೆ, ಅಧ್ಯಕ್ಷತೆ-ವಿ.ಸೋಮಣ್ಣ, ಅತಿಥಿಗಳು-ಎಂ.ಎಸ್.ಆಶಾದೇವಿ, ಶೈಲಜಾ ಸೋಮಣ್ಣ, ನಟಿ ತಾರಾ ಅನುರಾಧ, ಆಯೋಜನೆ-ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ-ಜ್ಞಾನಸೌಧ, ಮೂಡಲಪಾಳ್ಯ, ಬೆಳಿಗ್ಗೆ 10

ಎಂ.ಎಸ್. ಆಶಾದೇವಿ

ಮಹಿಳಾ ದಿನ:ಅತಿಥಿ-ತೇಜಸ್ವಿನಿ ಗೌಡ, ಅಧ್ಯಕ್ಷತೆ-ಸಿ.ಎನ್.ಮಂಚೇಗೌಡ, ಅತಿಥಿಗಳು-ಎಸ್. ಟಿ.ನಾರಾಯಣಗೌಡ, ಎಚ್.ಜಿ.ಬಾಲಗೋಪಾಲ್, ಆಯೋಜನೆ-ವಿವೇಕಾನಂದ ಕಾನೂನು ಕಾಲೇಜು, ಸ್ಥಳ-ನಾರಾಯಣ ಗೌಡ ಸಭಾಂಗಣ, ಗಾಯತ್ರಿ ನಗರ, ಬೆಳಿಗ್ಗೆ 10.30

ಮಹಿಳಾ ದಿನ:ಅತಿಥಿ-ಕೆ.ಸಿ.ರಘು, ಭಾಷಣ-ಸುಧಾ ಕಾಮತ್, ಅಧ್ಯಕ್ಷತೆ-ಎ.ಶಾಂತ, ಆಯೋಜನೆ-ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ-ಅಲುಮ್ನಿ ಅಸೋಸಿಯೇಷನ್ ಸಭಾಂಗಣ, ಕೆ.ಆರ್.ವೃತ್ತ, ಬೆಳಿಗ್ಗೆ 10.30

ಮಹಿಳಾ ದಿನ ಮತ್ತು ಸನ್ಮಾನ:ಉದ್ಘಾಟನೆ-ಎಂ.ವೆಂಕಟಸ್ವಾಮಿ, ಅತಿಥಿಗಳು-ಶೋಭ ಜಗದೀಶ್, ಹರ್ಷಿತಾ ಗಾಂಧಿ, ಸುಧಾರಾಣಿ, ಗಾಯತ್ರಿ ಮಂಜುನಾಥ್, ಆಯೋಜನೆ-ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ, ಸ್ಥಳ-ನಾಗಸೇನ ವಿದ್ಯಾಲಯ ಸಭಾಂಗಣ, ಸದಾಶಿವನಗರ, ಬೆಳಿಗ್ಗೆ 11

ಲತಾ ಮಂಗೇಶ್ವರ್ ಅವರ ನೆನಪಾರ್ಥ ವಿಶೇಷ ಲಕೋಟೆ ಬಿಡುಗಡೆ:ಅತಿಥಿಗಳು-ಬಿ.ಕೆ.ಸುಮಿತ್ರ, ಸ್ವಪ್ನಾ ರಾಜೇಶ್, ಎಸ್.ರಾಜೇಂದ್ರ ಕುಮಾರ್, ಎಲ್.ಕೆ.ಡ್ಯಾಶ್, ಆಯೋಜನೆ-ಅಂಚೆ ಇಲಾಖೆ ಮತ್ತು ಲೇಡೀಸ್ ಸರ್ಕಲ್ ಇಂಡಿಯಾ, ಸ್ಥಳ-ಮೇಘದೂತ ಸಭಾಂಗಣ, ಜಿಪಿಒ, ರಾಜಭವನ ರಸ್ತೆ, ಬೆಳಿಗ್ಗೆ 11.30

ಮಹಿಳಾ ದಿನ: ಆಯೋಜನೆ-ಮಣಿಪಾಲ್ ಆಸ್ಪತ್ರೆ, ಸ್ಥಳ-ಸ್ಟರ್ಲಿಂಗ್ ಮ್ಯಾಕ್ ಹೋಟೆಲ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 11.30

'ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ' ಉಪನ್ಯಾಸ:ಎಂ.ರಮಣಿ ಬಾಲು, ಅತಿಥಿ-ಕೆ.ಆರ್.ವೇಣುಗೋಪಾಲ್, ಅಧ್ಯಕ್ಷತೆ-ಶ್ರೀನಿವಾಸ್, ಆಯೋಜನೆ-ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ-ಎಂ.ಎಸ್.ತಿಮ್ಮಪ್ಪ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 12

ವಿಶ್ವ ಮಹಿಳಾ ದಿನಾಚರಣೆ: ಸಾಲುಮರದ ತಿಮ್ಮಕ್ಕ ಅವರಿಗೆ ಸನ್ಮಾನ-ರಮೇಶ್ ಗೌಡ, ಸ್ಥಳ-ಸ್ವಾತಂತ್ರ್ಯ ಉದ್ಯಾನ, ಸಂಜೆ 3

ಮಹಿಳಾ ದಿನ:ಆಯೋಜನೆ-ನ್ಯಾಷನಲ್ ವುಮೆನ್ಸ್ ಫ್ರಂಟ್, ಸ್ಥಳ-ಪುರಭವನ, ಮಧ್ಯಾಹ್ನ 3

ಮಹಿಳಾ ದಿನ:ಅತಿಥಿಗಳು-ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಗುಂಜನ್ ಕೃಷ್ಣ, ಕೆ.ರತ್ನಪ್ರಭಾ, ಸಿ.ಶಿಖಾ, ಎಸ್.ಆರ್.ಅನುರಾಧಾ ಪ್ರದೀಪ್, ಅಧ್ಯಕ್ಷತೆ-ಐ.ಎಸ್.ಪ್ರಸಾದ್, ಆಯೋಜನೆ ಮತ್ತು ಸ್ಥಳ-ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಸಂಜೆ 4

ಕೊರೊನಾ ಸಂಕಷ್ಟ ಎದುರಿಸಿ ಬದುಕು ಕಟ್ಟಿದ ಮಹಿಳೆಯರ ಯಶೋಗಾಥೆ 'ಧೃತಿಗೆಡದ ಹೆಜ್ಜೆಗಳು' ಪುಸ್ತಕ ಬಿಡುಗಡೆ:ಎಸ್.ಷಡಕ್ಷರಿ, ಅತಿಥಿಗಳು-ಕಿರಣ್ ಪ್ರಸಾದ್ ರಾಜನಹಳ್ಳಿ, ಮನೋಹರ ಮಸ್ಕಿ, ಮಹದೇವ್ ಪ್ರಸಾದ್, ಎಚ್.ಎನ್.ಆರತಿ, ಆಯೋಜನೆ-ಧೃತಿ ಮಹಿಳಾ ಮಾರುಕಟ್ಟೆ, ಸ್ಥಳ-ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಲಿಂಗ ಸಮಾನತೆ ಕುರಿತು ಉಪನ್ಯಾಸ:ಅತಿಥಿಗಳು-ಎಂ.ಜಾನಕಿ, ಎಂ.ಲಕ್ಷ್ಮಣ, ಆಯೋಜನೆ ಮತ್ತು ಸ್ಥಳ-ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಎಂ.ವಿ.ಸಭಾಂಗಣ, ಅಂಬೇಡ್ಕರ್ ವೀದಿ, ಸಂಜೆ 5

'ಯುದ್ಧ ಮತ್ತು ಮಹಿಳೆ' ಸಂವಾದ ಮತ್ತು ಕವನ ವಾಚನ:ಅತಿಥಿಗಳು-ಸಿ.ಎಸ್.ಸರ್ವಮಂಗಳಾ, ಆರ್.ಪೂರ್ಣಿಮಾ, ಎನ್.ಗಾಯತ್ರಿ, ಎಚ್. ಜಿ.ಜಯಲಕ್ಷ್ಮಿ, ಜಾಹಿದಾ ಶಿರೀನ್, ಸ್ಥಳ-ಹಿತೈಷಿಣಿ ಮತ್ತು ಸಮಕಾಲೀನ ಕಚೇರಿ, ಗಾಂಧಿ ಬಜಾರ್, ಸಂಜೆ 5

ಅಮ್ಮಚ್ಚಿಯೆಂಬ ನೆನಪು:ಗೀತಗಾಯನ, ಸಿನಿಮಾ ಪ್ರದರ್ಶನ ಮತ್ತು ಸಂವಾದ, ಆಯೋಜನೆ-ಅನೇಕಾ, ಸಖಿ, ಸ್ಥಳ-ಅನೇಕಾ ಸ್ಟುಡಿಯೊ ಥಿಯೇಟರ್, ಐಬಿಐ ಬಡಾವಣೆ, ಸಂಜೆ 5.30

'ಅಮ್ಮಚ್ಚಿಯೆಂಬ ನೆನಪು' ಸಿನಿಮಾದ ದೃಶ್ಯ

ಅಂತರರಾಷ್ಟ್ರೀಯ ಮಹಿಳಾ ದಿನ:ಉದ್ಘಾಟನೆ-ಮಾಲತಿ ಸುಧೀರ್, ಅಧ್ಯಕ್ಷತೆ-ಮಹೇಶ್ ಜೋಶಿ, ಅತಿಥಿಗಳು-ಸವಿತಾ ಶ್ರೀನಿವಾಸ್, ಎಲ್.ಜಿ.ಮೀರಾ, ಪುಣ್ಯವತಿ, ಶಾಂತಾ ರಾಮಸ್ವಾಮಿ, ರವೀಂದ್ರ ರೇಷ್ಮೆ, ಆಯೋಜನೆ-ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬನಶಂಕರಿ ಮಹಿಳಾ ಸಂಘ, ಸ್ಥಳ-ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001. ದೂರವಾಣಿ: 080-22215601, 22211246, ಫ್ಯಾಕ್ಸ್: 22215602.

ಸಂ. ಡಿವೈಇಎಸ್/ತಾಂಶಾಖೆ/ಕ್ರೀನಿ/116/2021-22 ದಿನಾಂಕ: 05.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ-ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದ ಮೇಲ್ಛಾವಣಿಗೆ ವಾಟರ್ ಪ್ರೂಫಿಂಗ್ ಅಳವಡಿಸುವ ಕಾಮಗಾರಿಯ ಮತ್ತು ರಾಜ್ಯದಲ್ಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ವಿವಿಧ ಕ್ರೀಡಾ ವಸತಿ ನಿಲಯಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.

ಕ್ರ.ಸಂ	ಕಡತ ಸಂಖ್ಯೆ	ಕಾಮಗಾರಿ ವಿವರ	ಅಂದಾಜು ಮೊತ್ತ	ಇಎಂಡಿ ಮೊತ್ತ	ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಡಿವೈಇಎಸ್/ತಾಂಶಾ/ಖೇಇಂ/37/2021-22/ಭಾಗ-3	ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದ ಮೇಲ್ಛಾವಣಿಗೆ ವಾಟರ್ ಪ್ರೂಫಿಂಗ್ ಅಳವಡಿಸುವ ಕಾಮಗಾರಿ ಕುರಿತು.	ರೂ 414.49 ಲಕ್ಷಗಳು	ರೂ 6.29 ಲಕ್ಷಗಳು	11.03.2022, 11.50 ಗಂಟೆ	12.03.2022, 11.55 ಗಂಟೆ
2	ಡಿವೈಇಎಸ್/ತಾಂಶಾ/156/2021-22	ರಾಜ್ಯದಲ್ಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ವಿವಿಧ ಕ್ರೀಡಾ ವಸತಿ ನಿಲಯಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ	ರೂ 90.34 ಲಕ್ಷಗಳು	ರೂ 1,80,683/-	14.03.2022, 16.00 ಗಂಟೆ	15.03.2022, 16.30 ಗಂಟೆ

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http;//eproc.Karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಉಪ-ನಿರ್ದೇಶಕರು (ಆಡಳಿತ)

DIPR/DDU/Zen/R.O:3651/2021-22 ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18

ಕಛೇರಿ : 26678572 : 26600512 : 26609066.

ಈ-ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ-ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ದಿನಾಂಕ : **12.04.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **11.04.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಮಿಸ್. ಶಿಲ್ಪ. ಎಸ್. ನಂ. 332, 15ನೇ ಮುಖ್ಯ ರಸ್ತೆ, 2ನೇ ಇ ಕ್ರಾಸ್, 1ನೇ ಬ್ಲಾಕ್ ಹಂತ, ಬಸವೇಶ್ವರನಗರ, ಬೆಂಗಳೂರು-560 079. ಶಾಖೆ : ವಿಜಯನಗರ.	ಹೊಸ ನಂ. 13, ಹಳೇ ನಂ. 114, ಎಂ.ಐ.ಜಿ, 80 ಅಡಿ ರಸ್ತೆ, ಕೆ.ಹೆಚ್.ಬಿ. 2ನೇ ಹಂತ, ಬಿ.ಬಿ.ಎಂ.ಪಿ. ವಾರ್ಡ್ ನಂ. 21 ಇಂಡಸ್ಟ್ರಿಯಲ್ ಟೌನ್, ಪಿ.ಐ.ಡಿ. ನಂ. 21-97-13, ಬೆಂಗಳೂರು. 1) ನೆಲ ಮಾಳಿಗೆ : 86.96 ಚದರ ಮೀಟರ್‌ಗಳು, 2) ನೆಲ ಮಹಡಿ : 119-71 ಚದರ ಮೀಟರ್‌ಗಳು, 3) ಮೊದಲನೆಯ ಮಹಡಿ : 119.71 ಚದರ ಮೀಟರ್‌ಗಳು. 4) ಎರಡನೆಯ ಮಹಡಿ : 12.75 ಚದರ ಮೀಟರ್‌ಗಳು, 5) ಮೂರನೆಯ ಮಹಡಿ : ವಾಣಿಜ್ಯ ಕಾಂಪ್ಲೆಕ್ಸ್. ಪೂರ್ವ- ಪಶ್ಚಿಮ : 64 ಅಡಿಗಳು & ಉತ್ತರ-ದಕ್ಷಿಣ : 44.9 ಅಡಿಗಳು. ಪೂರ್ವಕ್ಕೆ : ಸ್ವತ್ತಿನ ನಂ. 109, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವತ್ತಿನ ನಂ. 113, ದಕ್ಷಿಣಕ್ಕೆ : ಸ್ವತ್ತಿನ ನಂ. 115	ರೂ. 4,66,80,000/- (ನಾಲ್ಕು ಕೋಟಿ ಅರವತ್ತಾರು ಲಕ್ಷ ಎಂಭತ್ತು ಸಾವಿರ ಮಾತ್ರ)	ರೂ. 46,68,000/- (ನಲವತ್ತಾರರು ಲಕ್ಷ ಅರವತ್ತೆಂಟು ಸಾವಿರ ಮಾತ್ರ)	04.03.2022 ಕ್ಕೆ ರೂ. 5,58,52,083/-	12.04.2022 ಬೆಳಿಗ್ಗೆ : 10:00 ರಿಂದ 11:00 ರ ವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 11.04.2022 ಸಂಜೆ : 5 : 00 ರ ವರೆಗೆ

ತಪಾಸಣೆಯ ದಿನಾಂಕ ಮತ್ತು ಸಮಯ: 04.03.2022 ಸಮಯ ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ

ಬಿಡ್ ಗುಣಾಂಕ: ರೂ. 50,000/-

ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್. ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061. IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ-ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, " ಅಡಮಾನ ಸ್ವತ್ತುಗಳ ಮಾರಾಟ " ಶೀರ್ಷಿಕೆಯ ಅಡಿಯಲ್ಲಿ www.bccbl.co.in, ಅನ್ನು ನೋಡಿ. ಈ- ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 12.04.2022 ರಂದು ಬೆಳಿಗ್ಗೆ : 10.00 ರಿಂದ 11.00 ರವರೆಗೆ https://bankauctions.in ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು https://bankauctions.in ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಉಚಿತವಾಗಿ ಪಡೆಯಬಹುದು ಮತ್ತು E-auction (tentatively on 11.04.2022) from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/ 9515160062, E-mail: prakash@bankauctions.in & bhaskar@bankauctions.in. ಹೆಚ್ಚಿನ ಮಾಹಿತಿಗಾಗಿ: bccbrec2021@gmail.com Mobile Number : 080-26600512, 26609066 & 9342781425.

ದಿನಾಂಕ : 07.03.2022 ಸಹಿ/- ಅಧಿಕೃತ ಅಧಿಕಾರಿ

ಸ್ಥಳ : ಬೆಂಗಳೂರು ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ರಕ್ಷಣೆ ಕೋರಿದ ತಮಿಳುನಾಡು ಸಚಿವರ ಪುತ್ರಿ

ಬೆಂಗಳೂರು: ತಮಿಳುನಾಡಿನ ಮುಜರಾಯಿ ಸಚಿವ ಶೇಖರ್ ಬಾಬು ಅವರ ಮಗಳು ಜಯಕಲ್ಯಾಣಿ ಅವರು ಸತೀಶ್ ಕುಮಾರ್ ಎಂಬುವರನ್ನು ಪ್ರೀತಿಸಿ ಮದುವೆಯಾಗಿದ್ದು, ತಮಗೆ ರಕ್ಷಣೆ ನೀಡುವಂತೆ ನಗರದ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಜಯಕಲ್ಯಾಣಿ ಅವರು ಇತ್ತೀಚೆಗೆ ಮನೆಯಿಂದ ನಾಪತ್ತೆಯಾಗಿದ್ದರು. ಆತಂಕಗೊಂಡಿದ್ದ ತಂದೆ, ತಮಿಳುನಾಡು ಪೊಲೀಸರಿಗೆ ದೂರು ನೀಡಿದ್ದರು. ಮಗಳನ್ನು ಯಾರೋ ಅಪಹರಿಸಿದ್ದಾರೆಂದು ಆರೋಪಿಸಿದ್ದರು

ಇದರ ಬೆನ್ನಲ್ಲೆ ಮನೆಯವರ ವಿರೋಧದ ನಡುವೆ ರಾಯಚೂರಿನ ಹಾಲಸ್ವಾಮಿ ಮಠದಲ್ಲಿ ಜಯಕಲ್ಯಾಣಿ ಅವರು ಪ್ರಿಯಕರ ಸತೀಶ್ ಕುಮಾರ್ ಅವರನ್ನು ಮದುವೆಯಾಗಿದ್ದಾರೆ.

ಮಠದಲ್ಲಿ ವಿವಾಹವಾದ ದಂಪತಿ, ಸೋಮವಾರ ಬೆಂಗಳೂರಿಗೆ ಬಂದು ಕಮಿಷನರ್ ಕಚೇರಿ ಅಧಿಕಾರಿಗಳನ್ನು ಭೇಟಿಯಾಯಿತು. 'ನನಗೂ ಮತ್ತು ಪತಿಗೂ ಜೀವ ಬೆದರಿಕೆ ಇದೆ. ರಕ್ಷಣೆ ಕೊಡಿ' ಎಂದು ಜಯಕಲ್ಯಾಣಿ ಕಮಿಷನರ್ ಅವರಿಗೆ ನೀಡಿರುವ ಮನವಿಯಲ್ಲಿ ಕೋರಿದ್ದಾರೆ.

ಉಕ್ರೇನ್: ಶೆಲ್ ದಾಳಿ ತೀವ್ರ • ಇರುವಲ್ಲಿಯೇ ಉಳಿಯಲು ಸೂಚನೆ

ಸುಮಿ ವಿದ್ಯಾರ್ಥಿಗಳ ತೆರವು ಅನಿಶ್ಚಿತ

ನವದೆಹಲಿ (ಪಿಟಿಐ): ಉಕ್ರೇನ್‌ನ ಸುಮಿ ನಗರದಲ್ಲಿ ಸಿಲುಕಿರುವ ಭಾರತದ 700ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತೆರವು ಮಾಡುವ ಕಾರ್ಯಾಚರಣೆ ಇನ್ನೂ ಆರಂಭವಾಗಿಲ್ಲ. ಉಕ್ರೇನ್‌ನಲ್ಲಿ ಇರುವ ಭಾರತದ ಎಲ್ಲಾ ವಿದ್ಯಾರ್ಥಿಗಳನ್ನು ತೆರವು ಮಾಡುವ ಕೊನೆಯ ಹಂತದ ಕಾರ್ಯಾಚರಣೆಗೆ ಭಾನುವಾರ ಚಾಲನೆ ನೀಡಲಾಗಿತ್ತು. ಆದರೆ, ತಾನು ಹೇಳುವವರೆಗೆ ಇರುವಲ್ಲಿಯೇ ಉಳಿಯುವಂತೆ ವಿದ್ಯಾರ್ಥಿಗಳಿಗೆ ಸರ್ಕಾರ ಸೂಚಿಸಿದೆ. ಹೀಗಾಗಿ ಸುಮಿಯಿಂದ ವಿದ್ಯಾರ್ಥಿಗಳನ್ನು ಯಾವಾಗ ತೆರವು ಮಾಡಲಾಗುತ್ತದೆ ಎಂಬುದು ಅನಿಶ್ಚಿತವಾಗಿದೆ.

ಸುಮಿಯಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ತೆರವು ಮಾಡಲು ಉಕ್ರೇನ್‌ನಲ್ಲಿನ ಭಾರತದ ರಾಯಭಾರ ಕಚೇರಿಯು ಸೋಮವಾರ ಕಾರ್ಯಯೋಜನೆ ಪ್ರಕಟಿಸಿದೆ. 'ಸುಮಿಯಲ್ಲಿರುವ ವಿದ್ಯಾರ್ಥಿಗಳು ಹತ್ತಿರದ ಪೊಲ್ಟಾವಾ ನಗರಕ್ಕೆ ಬರಬೇಕು. ಅಲ್ಲಿ ನಮ್ಮ ಸಿಬ್ಬಂದಿ ಇದ್ದಾರೆ. ಅಲ್ಲಿಂದ ಯುದ್ಧದ ಸಂಘರ್ಷ ಕಡಿಮೆ ಇರುವ ಉಕ್ರೇನ್‌ನ ಪಶ್ಚಿಮದ ಗಡಿ ದೇಶಗಳಿಗೆ ಕರೆದೊಯ್ಯಲಾಗುತ್ತದೆ. ಅಲ್ಲಿಂದ ಭಾರತಕ್ಕೆ ಸ್ಥಳಾಂತರ ಮಾಡಲಾಗುತ್ತದೆ. ತೆರವು ಕಾರ್ಯಾಚರಣೆಯ ದಿನಾಂಕ ಮತ್ತು ಸಮಯವನ್ನು ಶೀಘ್ರವೇ ಘೋಷಿಸುತ್ತೇವೆ. ವಿದ್ಯಾರ್ಥಿಗಳು ಸಿದ್ಧರಾಗಿರಬೇಕು' ಎಂದು ರಾಯಭಾರ ಕಚೇರಿಯು ಟ್ವೀಟ್ ಮಾಡಿದೆ.

'ಸುಮಿ ನಗರದ ಬಳಿ ಶೆಲ್ ಮತ್ತು ಗುಂಡಿನ ದಾಳಿ ತೀವ್ರವಾಗಿರುವ ಕಾರಣ, ಅಲ್ಲಿಂದ ವಿದ್ಯಾರ್ಥಿಗಳನ್ನು ತೆರವು ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಆದರೆ, ಸುಮಿಯಿಂದ ನಾವು ವಾಪಸ್ಸಾಗುವ ಭರವಸೆಯೇ ಇಲ್ಲ ಎಂದು ಅಲ್ಲಿ ಸಿಲುಕಿರುವ ವಿದ್ಯಾರ್ಥಿಗಳು ವಿಡಿಯೊ ಟ್ವೀಟ್ ಮಾಡಿದ್ದಾರೆ. 'ನಮ್ಮಲ್ಲಿ ಹಣ ಇಲ್ಲ. ಎಟಿಎಂಗಳು ಕೆಲಸ ಮಾಡುತ್ತಿಲ್ಲ. ಆಹಾರ ಸಾಮಗ್ರಿಯೂ ಇಲ್ಲ. ನಾವು ಇಲ್ಲಿಂದ ನಡೆದುಕೊಂಡೇ ರಷ್ಯಾ ಗಡಿ ತಲುಪಲು ಸಿದ್ಧರಾಗಿದ್ದೆವು. ಆದರೆ ಇಲ್ಲಿಯೇ ಉಳಿಯುವಂತೆ ಸರ್ಕಾರ ಹೇಳಿದೆ. ಆದರೆ ಎಷ್ಟು ದಿನವೆಂದು ಉಳಿಯುವುದು?' ಎಂದು ಅಜಿತ್ ಗಂಗಾಧರನ್ ಎಂಬ ವಿದ್ಯಾರ್ಥಿ ಪ್ರತಿಕ್ರಿಯೆ ನೀಡಿದ್ದಾರೆ.

ಉಕ್ರೇನ್‌ನ ನೆರೆಯ ದೇಶಗಳಿಂದ ಸೋಮವಾರ ಭಾರತದ 8 ವಿಮಾನಗಳು, 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಮರಳಿ ಕರೆತರಲಿವೆ ಎಂದು ವಿದೇಶಾಂಗ ಸಚಿವಾಲಯವು ಭಾನುವಾರ ರಾತ್ರಿ ಹೇಳಿತ್ತು. ಸೋಮವಾರ ಸಂಜೆವರೆಗೆ 7 ವಿಮಾನಗಳಲ್ಲಿ 1,314 ಜನರನ್ನು ಭಾರತಕ್ಕೆ ಕರೆತರಲಾಗಿದೆ.

ಯುದ್ಧಪೀಡಿತ ಉಕ್ರೇನ್‌ನಲ್ಲಿ ಗುಂಡೇಟಿನಿಂದ ಗಾಯಗೊಂಡಿದ್ದ ಹರ್ಜೋತ್ ಸಿಂಗ್ ಅವರನ್ನು ಸೋಮವಾರ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ಯೋಧರು ವಿಮಾನದಿಂದ ಕೆಳಗಿಳಿಸಿದರು —ಪಿಟಿಐ ಚಿತ್ರ

ಝೆಲೆನ್‌ಸ್ಕಿ, ಪುಟಿನ್ ಜತೆ ಮೋದಿ ಮಾತುಕತೆ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜತೆ ಸೋಮವಾರ ಪ್ರತ್ಯೇಕವಾಗಿ ಮಾತುಕತೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಉಕ್ರೇನ್‌ನ ಉತ್ತರ ಭಾಗದ ಸುಮಿ ನಗರದಲ್ಲಿ ಸಿಲುಕಿಕೊಂಡಿರುವ ಭಾರತೀಯ ವಿದ್ಯಾರ್ಥಿಗಳ ತೆರವಿಗೆ ನೆರವು ನೀಡುವಂತೆ ಮನವಿ ಮಾಡಿದರು.

ಉಕ್ರೇನ್–ರಷ್ಯಾ ಮಾತುಕತೆ ಅಪೂರ್ಣ

ಕೀವ್ (ರಾಯಿಟರ್ಸ್/ಎಎಫ್‌ಪಿ): ಉಕ್ರೇನ್ ಮತ್ತು ರಷ್ಯಾದ ನಡುವೆ ಬೆಲರೂಸ್‌ನಲ್ಲಿ ಸೋಮವಾರ ರಾತ್ರಿ ನಡೆದ ಮೂರನೇ ಸುತ್ತಿನ ಮಾತುಕತೆ ಅಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ನಾಲ್ಕನೇ ಸುತ್ತಿನ ಮಾತುಕತೆ ನಡೆಯಲಿದೆ ಎಂದು ರಷ್ಯಾದ ಸಂಧಾನಕಾರ ಲಿಯೋನಿಡ್ ಸ್ಲುಟ್‌ಸ್ಕಿ ತಿಳಿಸಿದ್ದಾರೆ.

'ಮಾತುಕತೆ ಸಂದರ್ಭದಲ್ಲಿ ಮಾನವೀಯ ಕಾರಿಡಾರ್‌ನ ನಿರ್ಮಿಸಿ ಜನರನ್ನು ಕಳುಹಿಸುವ ನಿಟ್ಟಿನಲ್ಲಿ ಒಂದಿಷ್ಟು ರಚನಾತ್ಮಕ ಫಲಿತಾಂಶವನ್ನು ಸಾಧಿಸಿದ್ದೇವೆ' ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮಿಖೈಲೊ ಪೊಡೊಲ್ಯಾಕ್ ಟ್ವೀಟ್ ಮಾಡಿದ್ದಾರೆ. ಆದರೆ ಅದರ ವಿವರವನ್ನು ಬಹಿರಂಗಪಡಿಸಿಲ್ಲ. ಈ ಮೂಲಕ ಇನ್ನೂ ಉಕ್ರೇನ್‌ನಲ್ಲಿ ಸಿಲುಕಿಕೊಂಡಿರುವ ಭಾರತೀಯರು ಸುರಕ್ಷಿತವಾಗಿ ತಾಯ್ನಾಡಿಗೆ ಮರಳುವ ವಿಶ್ವಾಸ ಹೆಚ್ಚಾಗಿದೆ.

ಅಸ್ಮಿತೆ ಮಾರಾಟ ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿರುವ ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳ ಮೂರು ದಿನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಉದ್ಘಾಟಿಸಿದರು.

'ಅಸ್ಮಿತೆ ವ್ಯಾಪಾರ ಮೇಳ'ದ ಹೆಸರಿನಲ್ಲಿ ಈ ಮೇಳ ಬುಧವಾರದವರೆಗೆ ನಡೆಯಲಿದೆ. ಬ್ಯಾಂಕ್ವೆಟ್ ಹಾಲ್ ಮತ್ತು ಅದರ ಮುಂಭಾಗದ ಆವರಣದಲ್ಲಿ 75 ಮಳಿಗೆಗಳನ್ನು ತೆರೆಯಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಈ ಮಳಿಗೆಗಳನ್ನು ಉಚಿತವಾಗಿ ಒದಗಿಸಲಾಗಿದೆ.

ರಾಜ್ಯದ ಎಲ್ಲ ಜಿಲ್ಲೆಗಳ ಆಯ್ದ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ತಯಾರಿಸಿರುವ 70ಕ್ಕೂ ಹೆಚ್ಚು ಬಗೆಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಕೈಮಗ್ಗ ಮತ್ತು ಜವಳಿ ಉತ್ಪನ್ನಗಳು, ಸೆಣಬು ಮತ್ತು ಬಟ್ಟೆಯ ಚೀಲಗಳು, ಬಾಳೆ ನಾರಿನ ಉತ್ಪನ್ನಗಳು, ಬಗೆಬಗೆಯ ಬೊಂಬೆಗಳು, ಜೇನುತುಪ್ಪ, ಸಂಬಾರ ಪದಾರ್ಥಗಳು, ಲಾವಂಚದ ಉತ್ಪನ್ನಗಳು, ಕೊಲ್ಲಾಪುರಿ ಚಪ್ಪಲಿ, ಲಂಬಾಣಿ ಕಸೂತಿ ಉತ್ಪನ್ನಗಳು, ಯೋಗ ಮ್ಯಾಟ್, ಕಂಬಳಿ ಮತ್ತಿತರ ಉತ್ಪನ್ನಗಳು ಲಭ್ಯವಿವೆ.

ಜೀವನೋಪಾಯ ಸಂವರ್ಧನೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಜೀವನೋಪಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಮಂಜುಶ್ರೀ ಉಪಸ್ಥಿತರಿದ್ದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ಆರಂಭವಾದ 'ಅಸ್ಮಿತೆ ವ್ಯಾಪಾರ ಮೇಳ' ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕರಕುಶಲ ಉತ್ಪನ್ನಗಳನ್ನು ವೀಕ್ಷಿಸಿದರು. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಶ್ರೀ ಇದ್ದರು — ಪ್ರಜಾವಾಣಿ ಚಿತ್ರ

ಏರಲಿದೆ ಗೋಧಿ, ಗ್ಯಾಸ್ ಬೆಲೆ

ಲಂಡನ್ (ಎಎಫ್‌ಪಿ): ರಷ್ಯಾ ಮತ್ತು ಉಕ್ರೇನ್ ಸಂಘರ್ಷದಲ್ಲಿ ತೊಡಗಿರುವ ಕಾರಣ ಜಾಗತಿಕವಾಗಿ ಸೂರ್ಯಕಾಂತಿ ಎಣ್ಣೆ, ಕಚ್ಚಾ ಎಣ್ಣೆಯಷ್ಟೇ ಅಲ್ಲದೆ, ಗೋಧಿ, ನೈಸರ್ಗಿಕ ಅನಿಲ, ಅಲ್ಯೂಮಿನಿಯಂ, ನಿಕಲ್, ಟಿಟಾನಿಯಂಗಳ ಬೆಲೆಯೂ ಏರಿಕೆಯಾಗುತ್ತಿದೆ.

ಪಾಶ್ಚಿಮಾತ್ಯ ದೇಶಗಳು ಮಾಸ್ಕೊ ಮೇಲೆ ಹೇರಿರುವ ನಿರ್ಬಂಧಗಳ ಪರಿಣಾಮ ಇವುಗಳ ಬೆಲೆಯಲ್ಲಿ ಏರಿಕೆ ದಾಖಲಾಗುತ್ತಿದೆ ಎಂದು ಎ.ಜೆ ಬೆಲ್ ಹೂಡಿಕೆಯ ನಿರ್ದೇಶಕ ರಸ್ ಮೋಲ್ಡ್ ತಿಳಿಸಿದ್ದಾರೆ.

ಪಲಾಡಿಯಂ, ವಜ್ರ, ನೈಸರ್ಗಿಕ ಅನಿಲ, ತೈಲ, ಪ್ಲಾಟಿನಂ, ಪೊಟ್ಯಾಶ್, ಅಲ್ಯೂಮಿನಿಯಂ, ಚಿನ್ನ, ನಿಕಲ್ ಮತ್ತು ಸ್ಟೀಲ್ ಅನ್ನು ಉತ್ಪಾದಿಸುವ ಜಗತ್ತಿನ ಐದನೇ ದೊಡ್ಡ ದೇಶ ರಷ್ಯಾ ಆಗಿದೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ವಿವಿಧ ಕಂಪನಿಗಳು ಅಥವಾ ಗ್ರಾಹಕರು ರಷ್ಯಾ ಮೇಲೆ ಅವಲಂಬಿತರಾಗಿದ್ದಾರೆ.

13 ಜನ ಸಾವು: ಉಕ್ರೇನ್‌ನ ರಾಜಧಾನಿ ಕೀವ್‌ನಿಂದ ಪಶ್ಚಿಮಕ್ಕೆ 50 ಕಿ.ಮೀ ದೂರದಲ್ಲಿರುವ ಮಕರಿವ್‌ನ ಕೈಗಾರಿಕಾ ಬೇಕರಿಯೊಂದರ ಮೇಲೆ ಸೋಮವಾರ ನಡೆದ ಶೆಲ್ ದಾಳಿಯಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದಾರೆ.

ಅಧಿಕಾರಿಗಳನ್ನು ಉಕ್ರೇನ್‌ಗೇ ಕಳುಹಿಸಬೇಕಾ: ಹೈಕೋರ್ಟ್

ಬೆಂಗಳೂರು: ಪ್ರಕರಣವೊಂದರ ವಿಚಾರಣೆ ವೇಳೆ, 'ಈ ಸರ್ಕಾರ ಕೆಲಸ ಮಾಡುವಂತೆ ಮಾಡಲು ಏನು ಮಾಡಬೇಕು' ಎಂಬ ಮುಖ್ಯ ನ್ಯಾಯಮೂರ್ತಿಗಳ ಪ್ರಶ್ನೆಗೆ ಮತ್ತೊಬ್ಬ ನ್ಯಾಯಮೂರ್ತಿ, 'ಕೆಲಸ ಮಾಡದ ಅಧಿಕಾರಿಗಳನ್ನು ಯುದ್ಧಪೀಡಿತ ಉಕ್ರೇನ್‌ಗೆ ಕಳುಹಿಸಿಬಿಡಿ' ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ (ಎಎಜಿ) ಅವರಿಗೆ ಲಘು ಧಾಟಿಯಲ್ಲಿ ಸೂಚಿಸಿದೆ.

'ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗೆ (ಡಿಮ್ಹಾನ್ಸ್) ಅಗತ್ಯ ಸೌಲಭ್ಯ ಒದಗಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿದೆ' ಎಂದು ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾ.ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಅವಸ್ಥಿ, 'ಡಿಮಾನ್ಸ್ ಉನ್ನತೀಕರಿಸಲು ಈಗಾಗಲೇ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಆದರೂ, ಏನೂ ಕೆಲಸವಾಗಿಲ್ಲ. ಈ ಸರ್ಕಾರ ಕೆಲಸ ಮಾಡುವಂತೆ ಮಾಡಲು ಏನು ಮಾಡಬೇಕು' ಎಂದು ಖಾರವಾಗಿ ಪ್ರಶ್ನಿಸಿದರು. ಆಗ ಕೃಷ್ಣಕುಮಾರ್, 'ಇವರನ್ನೆಲ್ಲಾ ಉಕ್ರೇನ್‌ಗೆ ಕಳುಹಿಸಿಬಿಡಿ' ಎಂದು ಎಎಜಿಗೆ ಸೂಚಿಸಿದರು!

ಇದಕ್ಕೆ ಉತ್ತರಿಸಿದ ಎಎಜಿ ಧ್ಯಾನ್ ಕೆ.ಚಿನ್ನಪ್ಪ, 'ಆಸ್ಪತ್ರೆ ಮೇಲ್ದರ್ಜೆಗೇರಿಸುವ ಕಾರ್ಯಕ್ಕೆ ಹಣ ಬೇಕಿದೆ. ಎಂಆರ್‌ಐ ಯಂತ್ರಗಳು ಅಮೆರಿಕದಿಂದ ಪೂರೈಕೆಯಾಗಬೇಕಿದೆ' ಎಂದು ವಿವರಿಸಿದರು.

ಇದಕ್ಕೆ ತೃಪ್ತವಾಗದ ನ್ಯಾಯಪೀಠ, 'ಕೆಲಸ ಪೂರ್ಣಗೊಂಡಿದೆ ಎಂಬುದಕ್ಕೆ ಪ್ರಮಾಣ ಪತ್ರ ಸಲ್ಲಿಸಿ, ಆಸ್ಪತ್ರೆ ಕೆಲಸ ಆರಂಭಿಸಬೇಕು. ಇಲ್ಲವಾದಲ್ಲಿ ಮುಂದಿನ ವಿಚಾರಣೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಾಗಬೇಕು' ಎಂದು ತಾಕೀತು ಮಾಡಿ, ಏಪ್ರಿಲ್ 5ಕ್ಕೆ ವಿಚಾರಣೆ ಮುಂದೂಡಿದೆ.

ಕ್ಲೋರಿನ್ ಸೋರಿಕೆ: 69 ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಮೈಸೂರು: ರೈಲ್ವೆ ಇಲಾಖೆಯ ವಸತಿ ನಿಲಯದ ಆವರಣದಲ್ಲಿ ನೀರು ಶುದ್ಧೀಕರಣಕ್ಕೆ ಬಳಸಲು ಇರಿಸಿದ್ದ ಕ್ಲೋರಿನ್ ಅನಿಲ ಸಿಲಿಂಡರ್ ಸೋಮವಾರ ಸೋರಿಕೆಯಾಗಿದ್ದು, 11 ಮಕ್ಕಳು ಸೇರಿದಂತೆ 69 ಮಂದಿ ಅಸ್ವಸ್ಥರಾಗಿ ವಿವಿಧ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ಸಿಬ್ಬಂದಿ ಸೋರಿಕೆ ತಡೆದರು. ಅಷ್ಟರಲ್ಲಿ ವಾತಾವರಣ ಸೇರಿದ್ದ ಅನಿಲದಿಂದಾಗಿ ಅಗ್ನಿಶಾಮಕ ಸಿಬ್ಬಂದಿ ಸೇರಿದಂತೆ ಸುತ್ತಮುತ್ತಲಿನ ಜನರಲ್ಲಿ ಉಸಿರಾಟ ಸಮಸ್ಯೆ ಕಾಣಿಸಿಕೊಂಡಿತು.

ಕೆ.ಆರ್.ಆಸ್ಪತ್ರೆಗೆ 28, ರೈಲ್ವೆ ಆಸ್ಪತ್ರೆಗೆ 30 ಹಾಗೂ ಚೆಲುವಾಂಬ ಆಸ್ಪತ್ರೆಗೆ 11 ಮಂದಿ ದಾಖಲಾಗಿದ್ದಾರೆ. ಕೆ.ಆರ್. ಆಸ್ಪತ್ರೆಯಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸೋರಿಕೆ ಹಿಂದೆಯೇ ಕೆಆರ್‌ಎಸ್ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಲಾಯಿತು. ವಾಹನ ಸವಾರರು ಸಂಚಾರ ದಟ್ಟಣೆಯಲ್ಲಿ ಸಿಲುಕಿ ಅಸ್ವಸ್ಥರಾದರು. ಅವರಲ್ಲಿ ಹಲವು ಮಂದಿ ಸುತ್ತಮುತ್ತಲಿನ ಖಾಸಗಿ ಆಸ್ಪತ್ರೆಗಳಿಗೂ ದಾಖಲಾಗಿದ್ದಾರೆ.

'ಸಿಲಿಂಡರ್ ಅನ್ನು ಇಲಾಖೆಗೆ ಸೇರಿದ ಜಾಗದಲ್ಲಿ ಇರಿಸಲಾಗಿತ್ತು. ಆದರೆ, ಸೋರಿಕೆ ಹೇಗಾಯಿತು ಎಂಬುದು ಗೊತ್ತಾಗಿಲ್ಲ. ಬಹುಶಃ ಕಿಡಿಗೇಡಿಗಳು ಅದರ ನಳಿಕೆಯನ್ನು ತೆರೆದಿರಬಹುದು. ಸೋರಿಕೆ ನಿಂತಿದೆ' ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

ಮುಖ್ಯ ಅಗ್ನಿಶಾಮಕ ಅಧಿಕಾರಿ ಜಯರಾಮು ಪ್ರತಿಕ್ರಿಯಿಸಿ, 'ಸೋರಿಕೆಯನ್ನು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದೇವೆ. ಆದರೆ, ಹೊರ ಬಂದಿರುವ ಅನಿಲ ಇನ್ನೂ ವಾತಾವರಣದಲ್ಲಿರುವುದರಿಂದ ಕೆಲ ಗಂಟೆ ಇಲ್ಲಿ ಸಂಚಾರ ನಿರ್ಬಂಧಿಸಲಾಗುವುದು' ಎಂದರು. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್‌ವಾಲ್ ಸ್ಥಳ ಪರಿಶೀಲನೆ ನಡೆಸಿದರು.

ದ್ವಿತೀಯ ಪಿಯುಸಿ: ಏ. 22ರಿಂದ ಪರೀಕ್ಷೆ

ಬೆಂಗಳೂರು: 2021–22ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಅಂತಿಮ ವೇಳಾಪಟ್ಟಿಯನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಸೋಮವಾರ ಪ್ರಕಟಿಸಿದೆ.

ಏಪ್ರಿಲ್ 22ರಿಂದ ಮೇ 18ರವರೆಗೆ ಬೆಳಿಗ್ಗೆ 10.15ರಿಂದ ಮಧ್ಯಾಹ್ನ 1.30ರವರೆಗೆ ಪರೀಕ್ಷೆಗಳು ನಡೆಯಲಿವೆ. ವೇಳಾಪಟ್ಟಿಯ ಪ್ರಕಾರ, ಏಪ್ರಿಲ್ 22ರಂದು ವ್ಯವಹಾರ ಅಧ್ಯಯನ, 23ರಂದು ಗಣಿತ, 25ರಂದು ಅರ್ಥಶಾಸ್ತ್ರ, 26ರಂದು ರಸಾಯನವಿಜ್ಞಾನ, 27ರಂದು ಸಂಸ್ಕೃತ, 28ರಂದು ಕನ್ನಡ, ಮೇ 2ರಂದು ಭೂಗೋಳಶಾಸ್ತ್ರ, ಜೀವವಿಜ್ಞಾನ, ಮೇ 5ರಂದು ಇಂಗ್ಲಿಷ್, 10ರಂದು ಇತಿಹಾಸ, ಭೌತವಿಜ್ಞಾನ, 12ರಂದು ರಾಜ್ಯಶಾಸ್ತ್ರ, 14ರಂದು ಸಮಾಜಶಾಸ್ತ್ರ, 17ರಂದು ಭೂವಿಜ್ಞಾನ ಮತ್ತು ಐಚ್ಛಿಕ ಕನ್ನಡ ಹಾಗೂ ಲೆಕ್ಕಶಾಸ್ತ್ರ, 18ರಂದು ಹಿಂದಿ ಪರೀಕ್ಷೆ ನಡೆಯಲಿದೆ.

ಉತ್ತರ ಪ್ರದೇಶ: ಶೇ 56ರಷ್ಟು ಮತದಾನ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಸೋಮವಾರ ನಡೆದ ಕೊನೆಯ (ಏಳನೇ) ಹಂತದ ಚುನಾವಣೆಯಲ್ಲಿ ಶೇ 56ಕ್ಕಿಂತ ಹೆಚ್ಚು ಮತದಾನ ದಾಖಲಾಗಿದೆ. ವಾರಾಣಸಿ ಸೇರಿದಂತೆ 54 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಿತು.

ಮಹಿಳೆಯರಿಗೆ ಉಚಿತ ಕಣ್ಣಿನ ತಪಾಸಣೆ

ಬೆಂಗಳೂರು: ಅಗರ್ವಾಲ್ ಆಸ್ಪತ್ರೆಯು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಇದೇ 31ರವರೆಗೆ ರಾಜ್ಯದಲ್ಲಿರುವ ತನ್ನ ಎಲ್ಲಾ ಶಾಖೆಗಳಲ್ಲೂ ಮಹಿಳೆಯರಿಗೆ ಉಚಿತ ನೇತ್ರ ತಪಾಸಣೆ ನಡೆಸಲಿದೆ.

'ಇತ್ತೀಚಿನ ದಿನಗಳಲ್ಲಿ 50 ವರ್ಷ ಮೇಲ್ಪಟ್ಟ ಪುರುಷರಿಗಿಂತಲೂ ಮಹಿಳೆಯರಿಗೆ ಕಣ್ಣಿನ ಸಮಸ್ಯೆಗಳು ಹೆಚ್ಚು ಬಾಧಿಸುತ್ತಿವೆ. ಮ್ಯಾಕ್ಯುಲರ್ ಡೀಜನರೇಷನ್, ಆಟೋಇಮ್ಯೂನ್, ಗರ್ಭಾವಸ್ಥೆಯಲ್ಲಿ ಹಾರ್ಮೋನ್‌ಗಳ ವ್ಯತ್ಯಾಸವು ಕಣ್ಣಿನ ತೊಂದರೆಗೆ ಕಾರಣವಾಗುತ್ತಿವೆ' ಎಂದು ಪ್ರಕಟಣೆ ತಿಳಿಸಿದೆ.

ಸಿಎಂ ಜೊತೆ ಚರ್ಚಿಸಿ ದಿಗ್ಬಂಧನ ಕೇಂದ್ರಗಳ ಸಂಖ್ಯೆ ಹೆಚ್ಚಳ– ಗೃಹ ಸಚಿವ

‘ಅಕ್ರಮವಾಸಿಗಳ ಸಮೀಕ್ಷೆಗೆ ಗಡುವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರ ಕುರಿತು ಪ್ರತಿ ಠಾಣೆಯಲ್ಲೂ ಸಮೀಕ್ಷೆ ನಡೆಸಿ ಒಂದು ತಿಂಗಳ ಒಳಗೆ ವರದಿ ನೀಡುವಂತೆ ಸೂಚಿಸಲಾಗಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಮುಖ್ಯಮಂತ್ರಿ ಜೊತೆ ಚರ್ಚಿಸಿ, ದಿಗ್ಬಂಧನ (ಡಿಟೆನ್ಷನ್) ಕೇಂದ್ರಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಶೀಘ್ರದಲ್ಲಿ ನಿರ್ಧರಿಸಲಾಗುವುದು’ ಎಂದರು.

‘ರಾಜ್ಯದಲ್ಲಿ 441 ಮಂದಿ ವಿದೇಶಿ ಪ್ರಜೆಗಳ ವಿರುದ್ಧ 296 ಪ್ರಕರಣಗಳನ್ನು ದಾಖಲಿಸಲಾಗಿದೆ. ಅವು ಇತ್ಯರ್ಥ ಆಗುವವರೆಗೂ ಸ್ವದೇಶಕ್ಕೆ ವಾಪಸು ಹೋಗಲು ಅವಕಾಶ ಕೊಡದೆ, ದಿಗ್ಬಂಧನ ಕೇಂದ್ರಗಳಲ್ಲಿ ಇರಿಸಲಾಗುವುದು. ಪ್ರಕರಣ ಮುಗಿದ ಬಳಿಕ ಬಳಿಕ ಗಡಿಪಾರು ಮಾಡಲಾಗುವುದು. ಈ ವರ್ಷದ ಡಿಸೆಂಬರ್ ಅಂತ್ಯಕ್ಕೆ 675 ಮಂದಿ ವಿದೇಶಿಗರು ಅಕ್ರಮವಾಗಿ ನೆಲೆಸಿರುವುದು ಪತ್ತೆಯಾಗಿದೆ. ಅವರು ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗದಂತೆ ಎಚ್ಚರಿಕೆ ವಹಿಸಲು ಮತ್ತು ಅಕ್ರಮವಾಗಿ ನೆಲೆಸಿರುವವರನ್ನು ಪತ್ತೆ ಮಾಡಲು ಎಲ್ಲ ಠಾಣೆಗಳಲ್ಲಿ ನುರಿತ ಸಿಬ್ಬಂದಿ ಮತ್ತು ಅಧಿಕಾರಿಗಳ ತಂಡ ರಚಿಸಲಾಗಿದೆ’ ಎಂದರು.

ನಮ್ಮ ನೆಲವನ್ನು ಧರ್ಮ ಛತ್ರದ ರೀತಿ ಬಳಸಲು ವಿದೇಶಿಗರಿಗೆ ಅವಕಾಶ ನೀಡುವುದಿಲ್ಲ. ವಿಸಾ ಅವಧಿ ಮುಗಿದ ಬಳಿಕ ನೆಲೆಸಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು

ಆರಗ ಜ್ಞಾನೇಂದ್ರ, ಗೃಹ ಸಚಿವ

‘ಹತ್ತು ವರ್ಷಗಳಿಂದ ನಗರದಲ್ಲಿ ಅಕ್ರಮವಾಗಿ ಹಾಗೂ ಸಕ್ರಮವಾಗಿ ನೆಲೆಸಿರುವ ವಿದೇಶಿಯರು ಮಾದಕ ವಸ್ತು ಸಾಗಣೆ, ಕಳ್ಳತನ, ವೇಶ್ಯಾವಟಿಕೆ, ನಕಲಿ ನೋಟುಗಳ ದಂಧೆ ಸೇರಿ ಹಲವು ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ. ಗಂಭೀರ ಸ್ವರೂಪದ ಕೃತ್ಯಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇಲ್ಲಿಯೇ ಉಳಿದುಕೊಳ್ಳಲು ಸಣ್ಣಪುಟ್ಟ ಕ್ರಿಮಿನಲ್ ಪ್ರಕರಣಗಳನ್ನು ಹಾಕಿಸಿಕೊಂಡು ವಿಚಾರಣೆ ಹೆಸರಿನಲ್ಲಿ ಕಾಲಹರಣ ಮಾಡಿ ಅಕ್ರಮ ಕೆಲಸಗಳನ್ನು ಮಾಡುತ್ತಿದ್ದಾರೆ. ಪೊಲೀಸ್ ಠಾಣೆ ಮೇಲೆ ದಾಳಿ ಮಾಡುವಷ್ಟು ಉದ್ಧಟತನ ತೋರಿಸಿದ್ದಾರೆ. ಬೆಂಗಳೂರಿನಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಬಾಂಗ್ಲಾ, ಆಫ್ರಿಕನ್, ಕಾಂಬೋಡಿಯಾ ಸೇರಿ ಹಲವು ದೇಶಗಳ ನಿವಾಸಿಗಳು ಅಕ್ರಮವಾಗಿ ನೆಲೆಸಿದ್ದಾರೆ’ ಎಂದು ನಾರಾಯಣ ಸ್ವಾಮಿ ಆರೋಪಿಸಿದರು.

ಕಾಂಗ್ರೆಸ್ಸಿನ ಸಲಿಂ ಅಹ್ಮದ್, ‘ವಿದೇಶಿಗರು ಮಾದಕ ವಸ್ತು ದಂಧೆಯಲ್ಲಿ ತೊಡಗಿದ್ದಾರೆ. ಸರ್ಕಾರ ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು. ಬಿಜೆಪಿಯ ಭಾರತಿ ಶೆಟ್ಟಿ, ‘ಬೆಂಗಳೂರಷ್ಟೇ ಅಲ್ಲ, ಹುಬ್ಬಳ್ಳಿ, ಶಿವಮೊಗ್ಗ, ಮಂಗಳೂರಿನಲ್ಲೂ ವಿದೇಶಿಗರು ಅಕ್ರಮವಾಗಿ ನೆಲೆಸಿದ್ದಾರೆ. ಕಾರ್ಯಾಚರಣೆಯನ್ನು ಬೇರೆ ಜಿಲ್ಲೆಗಳಿಗೂ ವಿಸ್ತರಿಸಬೇಕು’ ಎಂದು ಒತ್ತಾಯಿಸಿದರು.

ಕಾಂಗ್ರೆಸ್ಸಿನ ಕೆ.ಗೋವಿಂದ ರಾಜು, ‘ಠಾಣೆಯ ರೈಟರ್‌ಗೆ ಎಲ್ಲಾ ಮಾಹಿತಿ ಇರುತ್ತದೆ. ಅವರನ್ನು ಹೆಚ್ಚು ದಿನ ಒಂದೇ ಠಾಣೆಯಲ್ಲಿ ಇರಲು ಬಿಡಬೇಡಿ. ಮೇಲ್ಮಟ್ಟದ ಅಧಿಕಾರಿಗಳನ್ನು ನೆಲೆಯೂರಲು ಬಿಡಬಾರದು’ ಎಂದರು.

ಅದಕ್ಕೆ ಉತ್ತರಿಸಿದ ಗೃಹ ಸಚಿವರು, ‘ಅಕ್ರಮವಾಗಿ ನೆಲೆಸಿರುವ ವಿದೇಶಿಗರ ಕುರಿತು ನನಗೂ ಆತಂಕವಿದೆ. ಗಡಿಯಲ್ಲಿ ಯುದ್ಧ ನಡೆದರೆ ಸೈನಿಕರು ಶತ್ರುಗಳನ್ನು ಹೊಡೆದು ಓಡಿಸುತ್ತಾರೆ. ದೇಶದ ಒಳಗೆ ಮಾದಕ ವಸ್ತುಗಳ ಪರೋಕ್ಷ ಯುದ್ಧ ನಡೆಯುತ್ತಿದೆ. ನಮ್ಮ ಯುವ ಸಮುದಾಯವನ್ನು ನಿಶ್ಯಕ್ತಿಗೊಳಿಸುವ ಹುನ್ನಾರ ನಡೆಯುತ್ತಿದೆ. ಅಕ್ರಮವಾಗಿ ನೆಲೆಸಿರುವವರು ಅಕ್ರಮ ಚಟುವಟಿಕೆ ನಡೆಸುತ್ತಿರುವುದರಿಂದ ನಗರದ ನಾಗರಿಕರ ನೆಮ್ಮದಿ ಇಲ್ಲದಂತಾಗಿದೆ. ಅಕ್ರಮವಾಗಿ ನೆಲೆಸಿರುವ ವಿದೇಶಿಗರ ಉಪಟಳಕ್ಕೆ ಕಡಿವಾಣ ಹಾಕಲಾಗುವುದು’ ಎಂದರು.

‘ಕ್ರಮ ಕೈಗೊಳ್ಳದಿದ್ದರೆ ಪೊಲೀಸರ ವಿರುದ್ಧ ಕ್ರಮ’

‘ನೈಜೀರಿಯಾದ ಹೆಣ್ಣು ಮಕ್ಕಳು ಬಹಳ ಬಲಶಾಲಿಗಳು. ಅವರನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ 10 ನೈಜೀರಿಯನ್ ಪ್ರಜೆಗಳಿಗೆ 10 ಪೊಲೀಸರನ್ನು ಭದ್ರತೆಗೆ ಒದಗಿಸಲಾಗಿದೆ. ಅಕ್ರಮವಾಗಿ ನೆಲೆಸಿರುವವರನ್ನು ಬಂಧಿಸಿ ದಿಗ್ಬಂದನ ಕೇಂದ್ರಗಳಿಗೆ ಕಳುಹಿಸಲಾಗುವುದು. ಒಂದು ವೇಳೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಆಯಾ ಪೊಲೀಸ್ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದೂ ಆರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದರು.

‘ನಮ್ಮ ದೇಶದಲ್ಲಿ ‘ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್) ಕಾಯ್ದೆ ಇದೆ. ಇದನ್ನು ಯಾವ ರಾಜ್ಯಗಳು ಗಮನಿಸಿಲ್ಲ. ರಾಜ್ಯದಲ್ಲಿ ಈ ಕಾಯ್ದೆ ಬಳಸಿ 5 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ’ ಎಂದೂ ಹೇಳಿದರು.

ಮೆಟ್ರೊ ಎಂ.ಡಿ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಜುಂ ಪರ್ವೇಜ್ ಹೆಸರಿನಲ್ಲಿ ಅಮೆಜಾನ್ ವೋಚರ್ ಖರೀದಿಸುವ ಸೋಗಿನಲ್ಲಿ ₹ 3 ಲಕ್ಷ ವಂಚಿಸಲಾಗಿದ್ದು, ಈ ಬಗ್ಗೆ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಿಎಂಆರ್‌ಸಿಎಲ್ ಪ್ರಧಾನ ವ್ಯವಸ್ಥಾಪಕ ಎನ್‌.ಆರ್. ವ್ಯಾಸರಾಜ್ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅದರನ್ವಯ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಜುಂ ಪರ್ವೇಜ್ ಹೆಸರಿನಲ್ಲಿ ವ್ಯಾಸರಾಜ್ ಅವರಿಗೆ ಮಾ. 3ರಂದು ಇ–ಮೇಲ್ ಬಂದಿತ್ತು. ‘ಹೆಸರು ಹಾಗೂ ವಾಟ್ಸ್‌ಆ್ಯಪ್ ನಂಬರ್ ಕಳುಹಿಸಿ’ ಎಂದು ಬರೆಯಲಾಗಿತ್ತು. ಅದನ್ನು ನಂಬಿದ್ದ ವ್ಯಾಸರಾಜ್, ವಾಟ್ಸ್‌ಆ್ಯಪ್ ನಂಬರ್ ಕೊಟ್ಟಿದ್ದರು.'

'ವಾಟ್ಸ್‌ಆ್ಯಪ್ ನಂಬರ್‌ಗೂ ಅಜುಂ ಪರ್ವೇಜ್ ಹೆಸರಿನಲ್ಲಿ ಸಂದೇಶ ಬಂದಿತ್ತು. ‘ಅಮೆಜಾನ್ ಉಡುಗೊರೆ ಕೂಪನ್ (ವೋಚರ್) ಖರೀದಿಸಿ’ ಎಂಬುದಾಗಿ ಸಂದೇಶದಲ್ಲಿ ಬರೆದು, ಲಿಂಕ್ ಉಲ್ಲೇಖಿಸಲಾಗಿತ್ತು. ಅದು ನಿಜವೆಂದು ತಿಳಿದಿದ್ದ ವ್ಯಾಸರಾಜ್, ಲಿಂಕ್ ತೆರೆದು ಆನ್‌ಲೈನ್ ಬ್ಯಾಂಕಿಂಗ್ ಮೂಲಕ ಹಂತ ಹಂತವಾಗಿ ₹ 3 ಲಕ್ಷ ಪಾವತಿ ಮಾಡಿದ್ದರು. ಹಣ ಪಡೆದ ಆರೋಪಿಗಳು, ನಕಲಿ ವೋಚರ್ ಕಳುಹಿಸಿ ವಂಚಿಸಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಅಮೆಜಾನ್ ವೋಚರ್ ಬಗ್ಗೆ ಅಜುಂ ಪರ್ವೇಜ್ ಅವರನ್ನು ವ್ಯಾಸರಾಜ್ ಕೇಳಿದ್ದರು. ಆದರೆ, ತಾವು ಯಾವುದೇ ಸಂದೇಶ ಕಳುಹಿಸಿಲ್ಲವೆಂದು ಪರ್ವೇಜ್ ಹೇಳಿದ್ದರು. ನಂತರ ವ್ಯಾಸರಾಜ್ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಮೂಲಗಳು ವಿವರಿಸಿವೆ.

ಜಂಟಿ ಕಮಿಷನರ್ ಕಚೇರಿಯಲ್ಲೇ ಕಳ್ಳತನ

ಬೆಂಗಳೂರು: ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಕಚೇರಿ ಇರುವ ‘ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ)’ ಕಟ್ಟಡದಲ್ಲೇ ಕಳ್ಳತನ ನಡೆದಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ಇನ್ಫೆಂಟ್ರ ರಸ್ತೆಯಲ್ಲಿರುವ ಕೇಂದ್ರದ ನೆಲಮಹಡಿಯಲ್ಲಿ ಜನರೇಟರ್ ಇದ್ದು, ಅದಕ್ಕೆ ₹ 20 ಸಾವಿರ ಮೌಲ್ಯದ ಎರಡು ಬ್ಯಾಟರಿ ಅಳವಡಿಸಲಾಗಿತ್ತು. ಅದೇ ಬ್ಯಾಟರಿಗಳನ್ನು ದುಷ್ಕರ್ಮಿಗಳು ಇತ್ತೀಚೆಗೆ ಕದ್ದುಕೊಂಡು ಹೋಗಿರುವುದಾಗಿ ಕೇಂದ್ರದ ಅಧಿಕಾರಿಗಳು ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಕೇಂದ್ರಕ್ಕೆ ದಿನದ 24 ಗಂಟೆಯೂ ಭದ್ರತೆ ಇರುತ್ತದೆ. ಇಂಥ ಸ್ಥಳದಲ್ಲೇ ಕಳ್ಳತನ ನಡೆದಿರುವುದರಿಂದ, ಎಲ್ಲ ಆಯಾಮಗಳಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

ಹೆಡ್‌ಕಾನ್‌ಸ್ಟೆಬಲ್ ಬೈಕ್ ಕಳವು

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಫೋಟೊ ಕ್ಲಿಕ್ಕಿಸುತ್ತಿದ್ದ ಹೆಡ್ ಕಾನ್‌ಸ್ಟೆಬಲೊಬ್ಬರ ಬೈಕ್ ಕಳ್ಳತನ ಮಾಡಲಾಗಿದ್ದು, ಈ ಬಗ್ಗೆ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಬನಶಂಕರಿ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಎಂ.ಜಿ.ರಾಮಕೃಷ್ಣ ಅವರು ತಮ್ಮ ಬೈಕ್ ಕಳ್ಳತನವಾದ ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾ. 3ರಂದು ಸಂಜೆ 4 ಗಂಟೆಗೆ ಚನ್ನಮ್ಮ ವೃತ್ತಕ್ಕೆ ಬಂದಿದ್ದ ರಾಮಕೃಷ್ಣ, ಮೇಲ್ಸೇತುವೆ ಕೆಳಗಿನ ರಸ್ತೆಯಲ್ಲಿ ಫ್ಯಾಷನ್ ಪ್ರೊ ಬೈಕ್ ನಿಲ್ಲಿಸಿದ್ದರು. ನಂತರ, ಸಮೀಪದ ರಸ್ತೆಯಲ್ಲಿ ನಿಂತುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದರು. ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಫೋಟೊಗಳನ್ನು ಉಪಕರಣದಲ್ಲಿ ಸೆರೆ ಹಿಡಿಯುತ್ತಿದ್ದರು. ಸಂಜೆ 5 ಗಂಟೆಗೆ ನೋಡಲಾಗಿ, ಬೈಕ್ ಸ್ಥಳದಲ್ಲಿ ಇರಲಿಲ್ಲ. ಅಕ್ಕ–ಪಕ್ಕದಲ್ಲಿ ಹುಡುಕಾಡಿದರೂ ಸುಳಿವು ಇರಲಿಲ್ಲ. ಕಳ್ಳರು ₹ 16 ಸಾವಿರ ಮೌಲ್ಯದ ಬೈಕ್ ಕದ್ದಿರುವುದಾಗಿ ದೂರು ಕೊಟ್ಟಿದ್ದಾರೆ’ ಎಂದೂ ತಿಳಿಸಿವೆ.

ಕೆಂಪೇಗೌಡ ಸೊಸೈಟಿಯಲ್ಲಿ ಕೋಟಿ ಅಕ್ರಮ

ಅಪರಾಧ ಸುದ್ದಿ

ಬೆಂಗಳೂರು: ನಗರದ ಕೆಂಪೇಗೌಡ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ₹ 1.52 ಕೋಟಿ ಅಕ್ರಮ ನಡೆದಿರುವ ಬಗ್ಗೆ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸೊಸೈಟಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಚ್‌.ಕೆ. ಜಯಕುಮಾರ್ ದೂರು ನೀಡಿದ್ದಾರೆ. ಸಂಘದ ಕಾರ್ಯದರ್ಶಿ ಆಗಿದ್ದ ಕೆ.ಎನ್. ರಾಜೇಶ್‌ಗೌಡ, ನಿರ್ದೇಶಕ ಆರ್. ಸಿ. ಜಯರಾಮ್ ಹಾಗೂ ಸ್ವರ್ಣ ಭಾರತಿ ಸೊಸೈಟಿ ವ್ಯವಸ್ಥಾಪಕ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸೊಸೈಟಿ ಬಾಂಡ್‌ಗಳನ್ನು ಠೇವಣಿ ಇರಿಸುವ,ವರ್ಗಾಯಿಸುವ ಅಧಿಕಾರವನ್ನು ಆಡಳಿತ ಮಂಡಳಿ ತಮಗೆ ನೀಡಿರುವಂತೆ ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿ, ವಂಚಿಸಿದ್ದಾರೆ’ ಎಂದು ಜಯಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಮನೆಗಳಲ್ಲಿ ಕಳ್ಳತನ: ದಂಪತಿ ಸೇರಿ ನಾಲ್ವರ ಬಂಧನ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ದಂಪತಿ ಸೇರಿ ನಾಲ್ವರನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

‘ಹಾಸನ ಜಿಲ್ಲೆಯ ಕೆ. ಮೋಹನ್ (28), ಆತನ ಪತ್ನಿ ಸಾವಿತ್ರಿ, ಕೋಲಾರ ಜಿಲ್ಲೆಯ ನರಸಾಪುರದ ಸಂತೋಷ್ (37) ಹಾಗೂ ಪಿ. ರೇಣುಕಾ (30) ಬಂಧಿತರು. ಅವರಿಂದ ₹25 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಬೆಳ್ಳಂದೂರು ಬಳಿಯ ದೊಡ್ಡಕನ್ನಲ್ಲಿಯ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನ ಆಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ, ಆರೋಪಿಗಳು ಸಿಕ್ಕಿಬಿದ್ದರು.’

ಆರೋಪಿಗಳು ಇದುವರೆಗೂ ಏಳು ಮನೆಗಳಲ್ಲಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದರು.

₹ 1.55 ಕೋಟಿ ಮೌಲ್ಯದ 8 ಕಾರು ಜಪ್ತಿ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ಕಾರುಗಳನ್ನು ಕದಿಯುತ್ತಿದ್ದ ಮೂವರು ಆರೋಪಿಗಳನ್ನು ಬೇಗೂರು ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಅನಿಲ್, ಅಶೋಕ ಹಾಗೂ ಗೋವಿಂದನ್ ಬಂಧಿತರು. ಅವರಿಂದ ₹ 1.55 ಕೋಟಿ ಮೌಲ್ಯದ 8 ಕಾರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅನಿಲ್, ಅಶೋಕ ಹಾಗೂ ಗೋವಿಂದನ್, ಆಗಾಗ ಬೆಂಗಳೂರಿಗೆ ಬಂದು ಕಾರುಗಳನ್ನು ಕದ್ದೊಯ್ಯುತ್ತಿದ್ದರು. ಕಾರಿನ ನೋಂದಣಿ ಸಂಖ್ಯೆ ಫಲಕ ಹಾಗೂ ಎಂಜಿನ್ ಚಾಸಿಸ್ ಅಳಿಸುತ್ತಿದ್ದರು. ಅಪಘಾತಕ್ಕೀಡಾದ ಕಾರುಗಳ ಫಲಕ ಹಾಗೂ ಚಾಸಿಸ್ ಅಳವಡಿಸುತ್ತಿದ್ದರು. ನಕಲಿ ದಾಖಲೆಗಳನ್ನು ಸೃಷ್ಟಿಸಿ, ತಮಿಳುನಾಡು ಹಾಗೂ ಕೇರಳದಲ್ಲಿ ಕಾರು ಮಾರುತ್ತಿದ್ದರು’ ಎಂದರು.

ಸಪ್ತಕ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ‘ಸ್ವರ ಧಾರಾ’ ಸಂಗೀತ ಕಾರ್ಯಕ್ರಮದಲ್ಲಿ ಇಂದ್ರಾಣಿ ಮುಖರ್ಜಿ ಮತ್ತು ತಂಡದವರು ಸಂಗೀತ ಕಛೇರಿ ನಡೆಸಿಕೊಟ್ಟರು.

₹ 7.76 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಜಾಲವನ್ನು ಹುಳಿಮಾವು ಪೊಲೀಸರು ಭೇದಿಸಿದ್ದು, ಯುವತಿ ಸೇರಿ ಮೂವರನ್ನು ಬಂಧಿಸಿದ್ದಾರೆ.

‘ಕೊತ್ತನೂರು ಬಳಿಯ ಕುವೆಂಪು ಬಡಾವಣೆಯ ಸಿಗಿಲ್ ವರ್ಗೀಸ್ (23), ಈತನ ಸ್ನೇಹಿತೆ ವಿಷ್ಣುಪ್ರಿಯಾ (22) ಹಾಗೂ ಮಡಿವಾಳ ಮಾರುತಿನಗರದ ಎಂ. ವಿಕ್ರಮ್ (23) ಬಂಧಿತರು. ಇವರಿಂದ ₹ 7.76 ಕೋಟಿ ಮೌಲ್ಯದ 12 ಕೆ.ಜಿ 940 ಗ್ರಾಂ ಹಶೀಶ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ವಿಕ್ರಮ್, ಅರಕೆರೆ ಗ್ರಾಮದ ಉದ್ಯಾನ ಬಳಿ ಮಾ. 5ರಂದು ಡ್ರಗ್ಸ್ ಮಾರುತ್ತಿದ್ದ. ದಾಳಿ ಮಾಡಿ ಆತನನ್ನು ವಶಕ್ಕೆ ಪಡೆಯಲಾಗಿತ್ತು. ಆತನ ಬಳಿ 80 ಗ್ರಾಂ ಹಶೀಶ್ ಸಿಕ್ಕಿತ್ತು. ಆತನ ವಿಚಾರಣೆ ನಡೆಸಿದಾಗ ಸಿಗಿಲ್ ಹಾಗೂ ವಿಷ್ಣುಪ್ರಿಯಾಳ ಮಾಹಿತಿ ಬಾಯ್ಬಿಟ್ಟಿದ್ದ’ ಎಂದೂ ತಿಳಿಸಿದರು.

‘ಕೇರಳದ ಸಿಗಿಲ್ ಹಾಗೂ ತಮಿಳುನಾಡಿನ ವಿಷ್ಣುಪ್ರಿಯಾ, ಆಂಧ್ರಪ್ರದೇಶದಿಂದ ಹಶೀಶ್ ತರಿಸಿ ಕುವೆಂಪು ಬಡಾವಣೆಯಲ್ಲಿದ್ದ ಬಾಡಿಗೆ ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಇವರ ಮನೆ ಮೇಲೆ ದಾಳಿ ಮಾಡಿದಾಗ ಹಶೀಶ್ ಸಿಕ್ಕಿತು. ಮೂವರು ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

ಮೊಬೈಲ್ ಕಳ್ಳನ ಬಂಧನ: ಮನೆ, ಪೇಯಿಂಗ್ ಗೆಸ್ಟ್ ಕಟ್ಟಡಗಳ ಕಿಟಕಿಯಲ್ಲಿರುತ್ತಿದ್ದ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕದಿಯುತ್ತಿದ್ದ ಆರೋಪಿ ತಂಗ್ ಸಿಯಾನ್ (41) ಎಂಬಾತನನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಡ್ರಗ್ಸ್: ಐವರಿಕೋಸ್ಟ್ ಪ್ರಜೆ ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಐವರಿಕೋಸ್ಟ್ ಪ್ರಜೆ ಡೇನಿಯಲ್ ಜಾ ಎಂಬಾತನನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

‘ಭೈರಸಂದ್ರದಲ್ಲಿ ನೆಲೆಸಿದ್ದ ಆರೋಪಿ, ಹಲವು ತಿಂಗಳಿನಿಂದ ಡ್ರಗ್ಸ್ ಮಾರುತ್ತಿದ್ದ. ಆತನಿಂದ ₹ 80 ಸಾವಿರ ಮೌಲ್ಯದ ಡ್ರಗ್ಸ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಡೇನಿಯಲ್, ಕಳೆದ ವರ್ಷ ಡ್ರಗ್ಸ್ ಪ್ರಕರಣದಲ್ಲಿ ರಾಮಮೂರ್ತಿನಗರ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ. ಜಾಮೀನು ಮೇಲೆ ಹೊರಬಂದಿದ್ದ ಆತ, ಸ್ಥಳೀಯ ಯುವತಿಯೊಬ್ಬರನ್ನು ಪ್ರೀತಿಸಿ ಮದುವೆಯಾಗಿದ್ದ. ಯುವತಿಗೆ ತಿಳಿಯದಂತೆ ಡ್ರಗ್ಸ್ ಮಾರುತ್ತಿದ್ದ’ ಎಂದೂ ತಿಳಿಸಿದರು.

ಹ್ಯಾಂಡ್‌ಲಾಕ್ ಮುರಿದು 40 ವಾಹನ ಕಳವು

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಹುಳಿಮಾವು ಪೊಲೀಸರು ಬಂಧಿಸಿದ್ದಾರೆ.

‘ಕೋಲಾರ ರೆಹಮತ್ ನಗರದ ಅಸ್ಲಂ ಸೊಲೇಜಾ (37) ಹಾಗೂ ಬೆಂಗಳೂರಿನ ಅರಕೆರೆಯ ಉದಯ್‌ಕುಮಾರ್ (19) ಬಂಧಿತರು. ಅವರಿಂದ ₹ 30.45 ಲಕ್ಷ ಮೌಲ್ಯದ 40 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಕಳೆದ ಡಿಸೆಂಬರ್ 17ರಂದು ರಾತ್ರಿ, ಮದ್ಯದ ಅಮಲು ಹೆಚ್ಚಾಗಿದ್ದರಿಂದ ಮಾರ್ಗಮಧ್ಯೆ ಪ್ರಜ್ಞೆ ತಪ್ಪಿ ರಸ್ತೆಯಲ್ಲಿ ಬಿದ್ದಿದ್ದರು. ಬೆಳಿಗ್ಗೆ ಎಚ್ಚರವಾದಾಗ ವಾಹನ ಸ್ಥಳದಲ್ಲಿ ಇರಲಿಲ್ಲ. ಈ ಬಗ್ಗೆ ಠಾಣೆಗೆ ದೂರು ನೀಡಿದ್ದರು’ ಎಂದರು.

‘ವಾಹನ ಕಳ್ಳರ ಪತ್ತೆಗೆ ವಿಶೇಷ ತಂಡ ರಚಿಸಿ, ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದೂ ಹೇಳಿದರು.

ಜಾತಿ ನಿಂದನೆ: ವಕೀಲ ಜಗದೀಶ್‌ಗೆ ಜಾಮೀನು

ಬೆಂಗಳೂರು: ಕೊಡಿಗೇಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಜಾತಿ ನಿಂದನೆ ಪ್ರಕರಣದಲ್ಲಿ ವಕೀಲ ಜಗದೀಶ್ ಕೆ.ಎನ್. ಮಹಾದೇವ್ ಅವರಿಗೆ ನಗರದ 68ನೇ ಸಿಸಿಎಚ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ನ್ಯಾಯಾಲಯ ಆವರಣದಲ್ಲಿ ನಡೆದಿದ್ದ ಗಲಾಟೆ ವೇಳೆ ವಕೀಲರೊಬ್ಬರ ಕೊಲೆಗೆ ಯತ್ನಿಸಿದ್ದ ಆರೋಪದಡಿ ಜಗದೀಶ್ ಅವರನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ಜಗದೀಶ್ ಅವರಿಗೆ ಇತ್ತೀಚೆಗಷ್ಟೇ ನ್ಯಾಯಾಲಯ ಜಾಮೀನು ನೀಡಿತ್ತು.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿರುವ ಜಗದೀಶ್‌ಗೆ ಕೊಲೆ ಯತ್ನ ಪ್ರಕರಣದಲ್ಲಿ ಮಾತ್ರ ಜಾಮೀನು ಸಿಕ್ಕಿತ್ತು. ಜಾತಿ ನಿಂದನೆ ಪ್ರಕರಣದಲ್ಲಿ ಜಾಮೀನು ಸಿಕ್ಕಿರಲಿಲ್ಲ. ಇದೀಗ, ಜಾತಿ ನಿಂದನೆ ಪ್ರಕರಣದಲ್ಲೂ ಜಾಮೀನು ದೊರೆತಿದೆ. ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ.





155 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ಇಳಿಕೆಯಾಗಿದ್ದು, ಸೋಮವಾರ 155 ಮಂದಿಗೆ ಸೋಂಕು ತಗುಲಿದೆ. ಈವರೆಗೆ ಸೋಂಕಿಗೊಳಪಟ್ಟವರ ಒಟ್ಟು ಸಂಖ್ಯೆ 39.42 ಲಕ್ಷ ದಾಟಿದ್ದು, ಸೋಂಕು ದೃಢ ಪ್ರಮಾಣವು ಶೇ 0.47ರಷ್ಟು ವರದಿಯಾಗಿದೆ. ದಿನದಲ್ಲಿ 5 ಮಂದಿ ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 40 ಸಾವಿರದ ಗಡಿ (39,996) ಸಮೀಪಿಸಿದೆ. ಮರಣ ಪ್ರಮಾಣ ದರವು ಶೇ 3.22ರಷ್ಟಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

THOSE WHO Are Lost Job, MNC Provide Work From Home 30 to 35K: 7019215243/ 9886641282

Wanted

WANTED DELIVERY Executive! Earn Upto 35000/- Month. Joining Bonus 5000/- Please Call 08046805960. Earn 5000* Joining Bonus and 3000* Referral Bonus. Call Now: 08046805962

BUSINESS

Business to Business

Business

INVEST OR Get Investments Minimum 2 Lakhs P.A. in #1 Banking Company. Build your Business with IIM ALUMNUS. Contact: 9702702999/ 83742-43687

Business Offers

Finance

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

REAL ESTATE SELLING

Sites

Doddabalapur

BUY 30X40/ 40x60 Plots. Just Pay 1 Lakh Remaining from Bank Loan/ Instalment Facility. Doddaballapura Town Best Investment Opportunity: 9591146666

RENTAL PROPERTIES

Accommodation Available

Commercial

COMMERCIAL BUILDING- Ground, Mezanine+ 2 floors, Total 3000sft, Good Frontage, parking on eastend main road 9th block jayanagar suitable for corporate, Retails showroomcontact 9880660308

PERSONAL

Lost

ಕಳೆದಿದೆ

ನಾನು ಶ್ರೀಮತಿ ಸರಿತಾ ಎಂ. ಪಿ. ಕೋಂ ರಾಜಶೇಖರ್ ಹೆಚ್.ಎಸ್. ನಂ. 856, 11ನೇ ಬ್ಲಾಕ್, 2ನೇ ಹಂತ, ಪಾಪರೆಡ್ಡಿ ಪಾಳ್ಯ, ನಾಗರಬಾವಿ, ಬೆಂಗಳೂರು–72 ಇಲ್ಲಿ ವಾಸವಾಗಿದ್ದು ದಿನಾಂಕ 02–03–2022 ರಂದು ಸದರಿ ಕ್ರಯ ಪತ್ರ ಸರ್ವೇ ನಂ 185/156, 31–12–2003 ರ ಕ್ರಯ ಪತ್ರದ 6 ಮತ್ತು 7ನೇ ಪುಟ ಮತ್ತು ಇತರೆ ಪತ್ರಗಳನ್ನು ನಕಲು ಮಾಡಿಸಲು ಹೋದಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ: 7338486999 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

LOST

I, Mohamed Rafiulla R/a No.6, 2nd ‘F’ Cross, 60 feet Road, Bhoopasandra Extn, Bangalore-94 have lost the original procession certificate of BDA Site No. 2066 Vishweshwaraiah Layout, II Block, Bangalore, while transit. **Finder please Contact: 9481779932**

Change of Name

I, PURNIMAA ARYA, D/o. N.R. Narasimha, aged about 36 years, R/at ‘Kumara Nivasa’, #1711/10, 3rd Main Road, Devaiah Park, Bengaluru- 560021. I have changed my minor daughters name from CHAITANYA SHANKAR to CHAITANYAA ARYA. Vide Affidavit dated 05.03.2022 sworn before Advocate and Notary H.H. Nagaraj, Bangalore.

I, RAHVI KUMAR, residing at No. 121, Hospital Road, Bangalore- 560053, have changed my name to RAHUL JAIN, vide affidavit dated 07.03.2022 before Notary K. Ramegowda, Bangalore.

I, MANISH KUMAR SRIKANT resident of D1/034, SNN Raj Etternia Silver County Road, Harlur Road, Bangalore-560068 have changed my name to MANISH KUMAR vide affidavit dated 05/03/2022 sworn before notary N.Kanchivaradaraju, Bangalore.

I, MANIGANDAN. S. S/o. Sadappa. Y. R/a #19, 1st Main, 3rd Cross, Near Yallamma Temple, Vibhuthipura, Marathahalli Post, Bengaluru- 560037 Have Changed My Name to S. MANIKANTA vide Affidavit Dated: 04.03.2022 Before Notary A. Manjula, Bengaluru.

I, GURUPRASANNA R/@ Laxmi Venkateshwara Nilaya, Hospet Road, opp workshop, Kudligi- 583135 have changed my name to GURUPRASANNA RAMESH SETTI vide affidavit dated 07/03/2022 before notary B.M. Chandrashekar

I, G.C. JAIN, residing at No. 121, Hospital Road, Bangalore- 560053, have changed my name to S GOUTHAM CHAND, vide affidavit dated 07.03.2022 before Notary K. Ramegowda, Bangalore.

I, RAHUL KUMAR, residing at No. 121, Hospital Road, Bangalore- 560053, have changed my name to RAHUL JAIN, vide affidavit dated 07.03.2022 before Notary K. Ramegowda, Bangalore.

I, SWATI MANISH SINHA resident of D1/034, SNN Raj Etternia Silver County Road, Harlur Road, Bangalore-560068 have changed my name to SWATI SINHA vide affidavit dated 05/03/2022 sworn before notary N.Kanchivaradaraju, Bangalore.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH Classifieds

BOOK YOUR AD FOR SATURDAY & GET 50% OFF ON SUNDAY AD

For more information contact:
9880856233
9731810277 | 9901641752
9845114560 | 9886213331

*condition apply

ರೈಲ್ವೆ ಮಂಡಳಿಯಿಂದ ಅನುಮೋದನೆ ದೊರೆತು ಕಳೆಯಿತು 501 ದಿನ

ಉಪನಗರ ರೈಲು: ಆಗಲೇ ಇಲ್ಲ ಚಾಲು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮುಂಬೈ ರೀತಿಯಲ್ಲಿ ಬೆಂಗಳೂರಿನಲ್ಲೂ ಉಪನಗರ ರೈಲು ಸಂಚಾರ ಆರಂಭಗೊಳ್ಳಲಿದೆ ಎಂಬ ಬೆಂಗಳೂರು ನಾಗರಿಕರ ಕನಸು ಸದ್ಯಕ್ಕೆ ಸಾಕಾರಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಯೋಜನೆಗೆ ಅನುಮೋದನೆ ದೊರೆತು 501 ದಿನಗಳು ಕಳೆದರೂ, ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಲ್ಲ.

ಉಳಿದ 1,689 ದಿನಗಳಲ್ಲಿ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸಲು ಸಾಧ್ಯವೇ ಎಂಬ ಪ್ರಶ್ನೆ ಎದುರಾಗಿದೆ. ಮೊದಲ ಆದ್ಯತೆಯಾಗಿದ್ದ ವಿಮಾನ ನಿಲ್ದಾಣ ಮಾರ್ಗ ಸರ್ಕಾರಕ್ಕೆ ಆದ್ಯತೆಯೇ ಆಗದಿರುವುದು ಕೂಡ ನಾಗರಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ನಗರಕ್ಕೆ ಪ್ರತ್ಯೇಕವಾಗಿ ರೈಲು ಸೇವೆ ಆರಂಭಿಸುವ ಬಗ್ಗೆ ರೈಲ್ವೆ ಇಲಾಖೆ 1983ರಲ್ಲೇ ಪ್ರಸ್ತಾಪ ಸಿದ್ಧಪಡಿಸಿತ್ತು. 2010ರಲ್ಲಿ ಸಿಟಿಜನ್‌ ಪ್ರಜಾ ಸಂಘಟನೆಗಳ ಒತ್ತಾಸೆಯಿಂದ ಈ ಕೂಗು ತೀವ್ರಗೊಂಡಿತು. 2019ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಉಲ್ಲೇಖಿಸಲಾಯಿತು. 2020ರ ಅ. 21ರಂದು ರೈಲ್ವೆ ಮಂಡಳಿಯಿಂದ ಇದಕ್ಕೆ ಅನುಮೋದನೆಯೂ ದೊರೆಯಿತು. ಅನುಮೋದನೆ ದೊರೆತು ಒಂದೂವರೆ ವರ್ಷವಾದರೂ ಕಾಮಗಾರಿ ಆರಂಭವಾಗುವ ಯಾವ ಲಕ್ಷಣಗಳು ಕಾಣಿಸುತ್ತಿಲ್ಲ.

ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ–ರೈಡ್) ಈ ಯೋಜನೆಯನ್ನು ನಾಲ್ಕು ಕಾರಿಡಾರ್‌ಗಳನ್ನಾಗಿ ವಿಂಗಡಿಸಿದೆ. 2,190 ದಿನಗಳ (6 ವರ್ಷ) ಕಾಲಮಿತಿ ನಿಗದಿ ಮಾಡಿರುವುದನ್ನು ವೆಬ್‌ಸೈಟ್‌ನಲ್ಲೇ ದೊಡ್ಡದಾಗಿ ಪ್ರಕಟಿಸಿದೆ. ಗಡುವಿನ ಒಳಗೆ ಯೋಜನೆ ಪೂರ್ಣಗೊಳಿಸಲು 1,689 ದಿನಗಳು ಮಾತ್ರ ಬಾಕಿ ಉಳಿದಿವೆ.

‘ಬೈಯಪ್ಪನಹಳ್ಳಿ– ಚನ್ನಸಂದ್ರ ನಡುವೆ ಜೋಡಿ ಮಾರ್ಗಕ್ಕೆ ಇತ್ತೀಚೆಗೆ ಟೆಂಡರ್ ಕರೆಯಲಾಗಿದೆ. ಉಳಿದಂತೆ ಯಾವುದೇ ಪ್ರಗತಿ ಕಂಡಿಲ್ಲ. ಉರುಳುತ್ತಿರುವ ದಿನಗಳನ್ನು ಎಣಿಸುವ ಕೆಲಸ ಬಿಟ್ಟರೆ ಕೆ–ರೈಡ್ ಬೇರೆ ಏನನ್ನೂ ಮಾಡುತ್ತಿಲ್ಲ. ಕೆ–ರೈಡ್‌ಗೆ ಚುರುಕು ಮುಟ್ಟಿಸಬೇಕಾದ ರಾಜ್ಯ ಸರ್ಕಾರವೇ ಹಿಂದಕ್ಕೆ ಎಳೆಯುವ ಕೆಲಸ ಮಾಡುತ್ತಿದೆ’ ಎಂಬುದು ರೈಲ್ವೆ ಹೋರಾಟಗಾರರ ಆರೋಪ.

‘ಸರ್ಕಾರ ಬೇಕೆಂದೇ ಈ ಯೋಜನೆ ಅನುಷ್ಠಾನ ವಿಳಂಬ ಮಾಡುತ್ತಿದೆ. ಮೆಟ್ರೊ ರೈಲು ಯೋಜನೆಗೆ ನೀಡುತ್ತಿರುವ ಆದ್ಯತೆಯನ್ನು ಉಪನಗರ ರೈಲು ಯೋಜನೆಗೆ ನೀಡುತ್ತಿಲ್ಲ. ಮೆಟ್ರೊ ರೈಲಿಗಿಂತ ಉಪನಗರ ರೈಲು ಮಾರ್ಗ ನಾಗರಿಕರಿಗೆ ಹೆಚ್ಚು ಅನುಕೂಲವಾಗಲಿದೆ. ಆದರೂ, ಈ ಯೋಜನೆ ಅನುಷ್ಠಾನಕ್ಕೆ ಆದ್ಯತೆ ನೀಡುತ್ತಿಲ್ಲ’ ಎನ್ನುತ್ತಾರೆ ಹೋರಾಟಗಾರರು.

‘ಕೂಸುಗಳ ನಡುವೆ ತಾರತಮ್ಯ ಏಕೆ’

ರಾಜಕುಮಾರ್ ದುಗರ್

‘ಉಪನಗರ ರೈಲು ಯೋಜನೆ ಮತ್ತು ಮೆಟ್ರೊ ರೈಲು ಯೋಜನೆ ಎರಡೂ ಸರ್ಕಾರದ ಕೂಸುಗಳೇ. ಒಂದು ಕೂಸನ್ನು ಅದರ ವಯಸ್ಸಿಗೆ ತಕ್ಕಂತೆ ಬೆಳೆಯಲು ಬಿಡದೆ, ಇನ್ನೊಂದು ಕೂಸನ್ನು ವೇಗವಾಗಿ ಬೆಳೆಯಲು ಅವಕಾಶ ನೀಡಿರುವುದು ಎಷ್ಟು ಸರಿ’ ಎಂದು ರಾಜಕುಮಾರ್ ದುಗಾರ್ ಪ್ರಶ್ನಿಸಿದ್ದಾರೆ.

ಉಪನಗರ ರೈಲು ಎಂಬ ಮಗುವೇ ತನ್ನ ನೋವು ಹೇಳಿಕೊಳ್ಳುತ್ತಿರುವ ಮಾದರಿಯಲ್ಲಿ ಪತ್ರವೊಂದನ್ನು ಮುಖ್ಯಮಂತ್ರಿ ಮತ್ತು ಬೆಂಗಳೂರಿನ ಸಂಸದರಿಗೆ ಬರೆದಿದ್ದಾರೆ.

‘ವಿಮಾನ ನಿಲ್ದಾಣ ಮಾರ್ಗ ಎಂದರೆ ಇಡೀ ಉಪನಗರ ರೈಲು ಯೋಜನೆಯಲ್ಲಿ ಮಗುವಿನ ತಲೆಯಷ್ಟು ಮಹತ್ವದ್ದು. ಅದನ್ನು ಮೊದಲು ಅನುಷ್ಠಾನಗೊಳಿಸದೆ ಬೇರೆ ಮಾರ್ಗಕ್ಕೆ ಆದ್ಯತೆ ನೀಡುವುದರಿಂದ ಪ್ರಯೋಜನ ಏನು? ಈ ರೀತಿ ಅನಗತ್ಯ ವಿಳಂಬ ಮಾಡುವುದರಿಂದ ಯೋಜನೆಯ ಉದ್ದೇಶ ಸಾಕಾರ ಆಗುವುದಿಲ್ಲ’ ಎಂದು ಮನಕಲಕುವ ರೀತಿಯಲ್ಲಿ ಪತ್ರ ಬರೆದಿದ್ದಾರೆ.

‘ವಿಮಾನ ನಿಲ್ದಾಣದ ಬಳಿ ರೈಲು ತಂಗುದಾಣ ನಿರ್ಮಿಸಲಾಗಿದ್ದು, ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ಇಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಹಾಗಿದ್ದರೆ, ಮೆಟ್ರೊ ರೈಲು ಮಾರ್ಗದ ಕಾಮಗಾರಿಯನ್ನು ಚುರುಕಿನಿಂದ ನಿರ್ವಹಿಸುತ್ತಿರುವುದು ಏಕೆ’ ಎಂದು ಅವರು ಪ್ರಶ್ನಿಸುತ್ತಾರೆ.

‘ರೈಲು ತಂಗುದಾಣವು ವಿಮಾನ ನಿಲ್ದಾಣದಿಂದ ಹೊರ ಭಾಗದಲ್ಲಿದ್ದು, ಅಲ್ಲಿಂದ ಬೇರೆ ಬಸ್ ಹತ್ತಿ ಪ್ರಯಾಣ ಮಾಡಬೇಕಿದೆ. ಯಾವುದೇ ರೈಲು ನಿಲ್ದಾಣಕ್ಕೆ ಹೋದರೂ ಸಮಯಕ್ಕೆ ಸರಿಯಾಗಿ ವಿಮಾನ ನಿಲ್ದಾಣಕ್ಕೆ ತಲುಪಬಹುದು ಎಂಬ ಭರವಸೆ ಇದ್ದರೆ ರೈಲು ಪ್ರಯಾಣವನ್ನು ಜನ ಇಷ್ಟಪಡುತ್ತಾರೆ. ಈ ರೀತಿಯ ಅವಕಾಶವನ್ನು ಈಗಿನ ರೈಲು ತಂಗುದಾಣಕ್ಕೆ ಕಲ್ಪಿಸಲು ಆಗುವುದಿಲ್ಲ. ಉಪನಗರ ರೈಲು ಯೋಜನೆಯಲ್ಲಿ ಇದಕ್ಕೆ ಅವಕಾಶ ಇದೆ. ಅದನ್ನು ಸರ್ಕಾರ ಮಾಡಬೇಕು’ ಎಂದು ದುಗಾರ್ ಹೇಳಿದರು.

ಮುಂದಿನ ತಿಂಗಳಲ್ಲಿ ಕಾಮಗಾರಿ ಆರಂಭ

ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್‌ನ ಸಿವಿಲ್ ಕಾಮಗಾರಿಗೆ ಟೆಂಡರ್‌ಗಳನ್ನು ಕಳೆದ ವಾರವಷ್ಟೇ ತೆರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದ್ದು, ಮುಂದಿನ ತಿಂಗಳು ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ. ಅದರ ಜೊತೆಗೆ ಇನ್ನುಳಿದ ಟೆಂಡರ್ ಪ್ರಕ್ರಿಯೆಗಳನ್ನು ಮುಂದುವರಿಸಲಿದ್ದೇವೆ’ ಎಂದು ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಗರ್ಗ್ ಸ್ಪಷ್ಟಪಡಿಸಿದರು.

‘ಯೋಜನೆ ರೂಪಿಸುವ ಪ್ರಕ್ರಿಯೆ ತುಂಬಾ ಸಂಕೀರ್ಣವಾದುದು. ಉಪನಗರ ರೈಲು ಯೋಜನೆಯು ಭಾರತೀಯ ರೈಲ್ವೆ ವ್ಯವಸ್ಥೆಗೆ ಸಮಾನಾಂತರವಾಗಿ ರೂಪಿಸಬೇಕಾದ ವ್ಯವಸ್ಥೆ. ಹಾಗಾಗಿ ಸುರಕ್ಷತೆ ಬಗ್ಗೆ ಬಹಳ ಗಮನ ಹರಿಸಬೇಕಾಗುತ್ತದೆ. ಹಾಗಾಗಿ ರೈಲ್ವೆ ಇಲಾಖೆಯು ಅರ್ಥದಷ್ಟು ಯೋಜನೆಗಳಿಗೆ ಅನುಮೋದನೆ ನೀಡಿದೆ. ಕೋವಿಡ್‌ನಿಂದಾಗಿ ಸುಮಾರು 6 ತಿಂಗಳು ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ. ಅದರ ಹೊರತಾಗಿಯೂ ಯೋಜನೆಗೆ ಸಂಬಂಧಿಸಿದ ಶೇ 90ರಷ್ಟು ಕೆಲಸಕಾರ್ಯಗಳು ಪೂರ್ಣಗೊಂಡಿವೆ’ ಎಂದರು.

‘ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ದೇವನಹಳ್ಳಿಯ ಕಾರಿಡಾರ್ ಮಾರ್ಗ ಯೋಜನೆಯನ್ನೂ ಕೂಡಲೇ ಕೈಗೆತ್ತಿಕೊಳ್ಳುತ್ತೇವೆ. ಕಾರಿಡಾರ್ 2 ಮತ್ತು 4 ಅನ್ನು ಮೊದಲು ಅನುಷ್ಠಾನಗೊಳ್ಳಲಿದೆ. ದೇವನಹಳ್ಳಿ ಕಾರಿಡಾರ್‌ಗೆ ಸಂಪರ್ಕ ಕಲ್ಪಿಸುವುದು ಕೂಡಾ ನಮ್ಮ ಆದ್ಯತೆ. ಯೋಜನೆ ಪೂರ್ಣಗೊಳಿಸಲು ನಮಗೆ 6 ವರ್ಷಗಳ ಗಡುವು ನೀಡಲಾಗಿದೆ. ನಿಗದಿತ ಅವಧಿ ಒಳಗೆ ಎಲ್ಲ ನಾಲ್ಕು ಕಾರಿಡಾರ್‌ಗಳ ಕಾಮಗಾರಿ ಪೂರ್ಣಗೊಳಿಸುತ್ತೇವೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಯೋಜನೆಯಲ್ಲಿ ಏನೇನು ಇರಲಿದೆ

148.17 ಕಿ.ಮೀ — ಉಪನಗರ ರೈಲು ಮಾರ್ಗದ ಒಟ್ಟು ಉದ್ದ

55.40 ಕಿ.ಮೀ — ಎತ್ತರಿಸಿದ (ಎಲಿವೇಟೆಡ್) ಮಾರ್ಗದ ಉದ್ದ

57 — ಈ ಯೋಜನೆಯಡಿ ನಿರ್ಮಾಣವಾಗುವ ನಿಲ್ದಾಣಗಳು

ವಿಮಾನ ನಿಲ್ದಾಣ ಮಾರ್ಗವೇ ಏಕೆ ಆದ್ಯತೆಯಾಗಬೇಕು

ಬೆಂಗಳೂರು ಮತ್ತು ಸುತ್ತಮುತ್ತಲಿನ ನಗರಗಳ 2 ಕೋಟಿ ಜನರ ಹಿತಕ್ಕಾಗಿ ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿಯನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕು ಎಂಬುದು ರೈಲ್ವೆ ಹೋರಾಟಗಾರರ ಆಗ್ರಹ. ಇದೇ ಮಾರ್ಗ ಮೊದಲ ಆದ್ಯತೆ ಆಗಬೇಕು ಏಕೆ ಎಂಬುದಕ್ಕೆ ಹೋರಾಟಗಾರ ರಾಜಕುಮಾರ್ ದುಗಾರ್ 20ಕ್ಕೂ ಹೆಚ್ಚು ಕಾರಣಗಳನ್ನು ಗುರುತಿಸಿದ್ದಾರೆ.

- ಸಂಪೂರ್ಣ ಯೋಜನೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರವು 6 ವರ್ಷಗಳನ್ನು ನಿಗದಿಪಡಿಸಿದ್ದರೆ, ವಿಮಾನ ನಿಲ್ದಾಣ ಮಾರ್ಗಕ್ಕೆ 3 ವರ್ಷಗಳ ಗಡುವು ನೀಡಿದೆ.
- ಇದೇ ಮಾರ್ಗ ಮೊದಲ ಆದ್ಯತೆಯಾಗಬೇಕು ಎಂಬುದನ್ನು ಭೂಸಾರಿಗೆ ಇಲಾಖೆ, ನಗರ ಭೂಸಾರಿಗೆ ನಿರ್ದೇಶನಾಲಯ(ಡಲ್ಟ್) ಶಿಫಾರಸು ಮಾಡಿದೆ.
- ಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಮಾನ ನಿಲ್ದಾಣಗಳಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ಒಂದು.
- ಬೆಂಗಳೂರು ವಿಮಾನ ನಿಲ್ದಾಣದ ಟರ್ಮಿನಲ್– 2 ಬಹುತೇಕ ಸಿದ್ಧವಾಗಿದೆ. ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗಲಿದೆ.
- ಬೆಂಗಳೂರಿನ ಬೇರೆ ಭಾಗಗಳಿಗೆ ಹೋಲಿಸಿದರೆ ಉತ್ತರದ ಕಡೆಗೆ(ವಿಮಾನ ನಿಲ್ದಾಣ ಕಡೆಗೆ) ಹೆಚ್ಚು ನಗರ ವಿಸ್ತರಿಸುತ್ತಿದೆ. ಅನೇಕ ಹೊಸ ಯೋಜನೆಗಳು ತಲೆ ಎತ್ತುತ್ತಿವೆ.
- ಸುತ್ತಮುತ್ತಲ ನಗರಗಳಿಂದ ಮೆಜೆಸ್ಟಿಕ್‌ಗೆ ಬರುವ ನಾಗರಿಕರು ವಿಮಾನ ನಿಲ್ದಾಣ ತಲುಪಲು ಮೆಟ್ರೊ ರೈಲಿಗಿಂತ ಉಪನಗರ ರೈಲು ಮಾರ್ಗ ಅನುಕೂಲ.
- ವಿಮಾನ ನಿಲ್ದಾಣಕ್ಕೆ ಸದ್ಯ ಇರುವುದು ರಸ್ತೆ ಮಾರ್ಗ ಮಾತ್ರ. ಈ ರಸ್ತೆಯಲ್ಲಿ ದಿಢೀರ್ ಬಿಕ್ಕಟ್ಟಿನ ಸ್ಥಿತಿ ನಿರ್ಮಾಣವಾದರೆ ಬೇರೆ ಆಯ್ಕೆ ಅತ್ಯಗತ್ಯ.
- ಮಾನ ನಿಲ್ದಾಣಕ್ಕೆ ಬಂದು ಹೋಗುವ ಜನರ ಸಂಖ್ಯೆ ಪ್ರತಿದಿನ ಸರಾಸರಿ 1.3 ಲಕ್ಷ, 2023-24ರ ವೇಳೆಗೆ 3 ಲಕ್ಷ ತಲುಪುವ ಸಾಧ್ಯತೆಯಿದೆ.
- ನಗರದ ಮಧ್ಯಭಾಗ, ಪಶ್ಚಿಮ ಮತ್ತು ಉತ್ತರ ಭಾಗದ(ಕೆಎಸ್ಆರ್ ರೈಲು ನಿಲ್ದಾಣ, ಮಲ್ಲೇಶ್ವರಂ, ಯಶವಂತಪುರ, ಕೊಡಿಗೇಹಳ್ಳಿ, ಇತ್ಯಾದಿ) ಜನರ ಪ್ರಯಾಣಕ್ಕೆ ಅನುಕೂಲ.
- ಮೆಜೆಸ್ಟಿಕ್ ಮತ್ತು ಯಶವಂತಪುರದಲ್ಲಿ ಬಿಎಂಟಿಸಿ ಮತ್ತು ಮೆಟ್ರೊ ರೈಲು ನಿಲ್ದಾಣಗಳಿವೆ. ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಹೋಗುವವರಿಗೆ ಉಪನಗರ ರೈಲು ಹೆಚ್ಚು ಅನುಕೂಲ.
- ಪ್ರತಿ 5 ರಿಂದ 12 ನಿಮಿಷಗಳಿಗೊಮ್ಮೆ ವಿಮಾನ ನಿಲ್ದಾಣಕ್ಕೆ ರೈಲುಗಳಿದ್ದರೆ ಆರಾಮದಾಯಕ ಮತ್ತು ಸುರಕ್ಷಿತ.
- ವಿಮಾನ ನಿಲ್ದಾಣ ಮಾರ್ಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಬೇರೆ ಮಾರ್ಗಗಳಿಗಿಂತ ಕಡಿಮೆ.
- ಹೆಬ್ಬಾಳ ಮೇಲ್ಸೇತುವೆ ಮೇಲಿನ ದಟ್ಟಣೆಯನ್ನು ಕಡಿಮೆ ಮಾಡುತ್ತದೆ.
- ಮೆಟ್ರೊ ರೈಲು ಮಾರ್ಗಕ್ಕೆ ಹೋಲಿಸಿದರೆ ನಿರ್ಮಾಣದ ವೆಚ್ಚ ಮತ್ತು ಕಾಮಗಾರಿ ನಿರ್ವಹಿಸಲು ಬೇಕಾದ ಸಮಯ ಕಡಿಮೆ.
- ಮೆಟ್ರೊ ರೈಲು ಮಾರ್ಗ ಸಿಲ್ಕ್ ಬೋರ್ಡ್‌ನಿಂದ ನಗರದ ಪೂರ್ವ ಮತ್ತು ಉತ್ತರ ಭಾಗದ ಅಂಚಿನಲ್ಲಿ ಸಾಗುತ್ತಿದೆ. ಶೇ 20ರಷ್ಟು ಭಾಗಕ್ಕೆ ಮಾತ್ರ ಅನುಕೂಲ ಮತ್ತು ಪ್ರಯಾಣದ ಅವಧಿ 100 ನಿಮಿಷ ದಾಟಲಿದೆ.

₹15,767 ಕೋಟಿ — ಯೋಜನೆಯ ಒಟ್ಟು ಮೊತ್ತ

20:20:60 — ಕೇಂದ್ರ, ರಾಜ್ಯ ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳು ಭರಿಸುವ ಪಾಲು

2020ರ ಅ.21 — ಯೋಜನೆಗೆ ಅನುಮೋದನೆ ದೊರೆತ ದಿನಾಂಕ

2,190 — ಯೋಜನೆ ಪೂರ್ಣಗೊಳಿಸಲು ನಿಗದಿ ಮಾಡಿರುವ ದಿನಗಳು

1,689 — ಬಾಕಿ ಇರುವ ದಿನಗಳು

₹ 118.26 ಕೋಟಿ ಅಕ್ರಮ: ಪರಿಷತ್‌ನಲ್ಲಿ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್.ಆರ್. ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿ ನವ ನಗರೋತ್ಥಾನ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸದೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ನಕಲಿ ಬಿಲ್ ಪಾವತಿಸಿ ರಾಜ್ಯದ ಬೊಕ್ಕಸಕ್ಕೆ ₹ 118.26 ಕೋಟಿ ಪಾವತಿಸಿ ನಷ್ಟ ಉಂಟು ಮಾಡಿರುವ ಬಗ್ಗೆ ಲೋಕಾಯುಕ್ತ ತನಿಖೆಯಿಂದ ಬಹಿರಂಗವಾದ ವಿಷಯ ವಿಧಾನಪರಿಷತ್‌ನಲ್ಲಿ ಸೋಮವಾರ ಪ್ರತಿಧ್ವನಿಸಿತು.

ಲೋಕಾಯುಕ್ತ ವರದಿಯ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ಸಿನ ಯು.ಬಿ. ವೆಂಕಟೇಶ್, ‘ಟೆಂಡರ್ ನಿಯಮ ಉಲ್ಲಂಘಿಸಿ ಬಹುಕೋಟಿ ಹಣ ದುರುಪಯೋಗ ನಡೆದಿರುವುದರಿಂದ ತಪ್ಪಿತಸ್ಥರ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಈ ವಿಷಯಕ್ಕೆ ಸಂಬಂಧಿಸಿದಂತೆ ಸದನಕ್ಕೆ ಮುಖ್ಯಮಂತ್ರಿ ಉತ್ತರ ನೀಡಲಿದ್ದಾರೆ’ ಎಂದರು.

ಲೋಕಾಯುಕ್ತರು ಸರ್ಕಾರಕ್ಕೆ ನೀಡಿರುವ 60 ಪುಟಗಳ ವರದಿಯನ್ನು ಉಲ್ಲೇಖಿಸಿದ ವೆಂಕಟೇಶ್, ‘ಒಟ್ಟು ಕಾಮಗಾರಿಗಳ ಪೈಕಿ 114 ಕಾಮಗಾರಿಗಳ ಅನುಷ್ಠಾನದಲ್ಲಿ ಭಾರಿ ಪ್ರಮಾಣದ ಲೋಪ ಪತ್ತೆ ಹಚ್ಚಲಾಗಿದೆ. ಕಾಮಗಾರಿ ಅನುಷ್ಠಾನಗೊಳ್ಳದೇ ಇದ್ದರೂ ಕೆಆರ್‌ಐಡಿಎಲ್‌ಗೆ ಹೆಚ್ಚುವರಿ ಹಣ ಪಾವತಿಸಿರುವ ಬಗ್ಗೆ ವರದಿಯಲ್ಲಿ ಹೇಳಿರುವ ಅಂಶವನ್ನು ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ’ ಎಂದರು.

ನಗರದಲ್ಲಿ ಸೋಮವಾರ ಪ್ರಮುಖ ಉದ್ಯಮಿಗಳೊಂದಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಂವಾದ ನಡೆಸಿದರು. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು.

ನವೋದ್ಯಮ ವಲಯದ ಸಾಧನೆಗೆ ಮೆಚ್ಚುಗೆ

ಬೆಂಗಳೂರು: ರಾಜ್ಯದ ಐಟಿ, ಬಿಟಿ, ನವೋದ್ಯಮ ಮತ್ತು ಸೆಮಿಕಂಡಕ್ಟರ್ ವಲಯಗಳ ಪ್ರಮುಖ ಉದ್ಯಮಿಗಳೊಂದಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ನಗರದಲ್ಲಿ ಸಂವಾದ ನಡೆಸಿದರು.

ವಿಪ್ರೋ, ಇನ್ಫೋಸಿಸ್, ಮೈಂಡ್ ಟ್ರೀ ಸೇರಿದಂತೆ ಹತ್ತಾರು ಪ್ರಮುಖ ಕಂಪನಿಗಳ ಸಂಸ್ಥಾಪಕರು, ಮುಖ್ಯಸ್ಥರು ಮತ್ತು ಪ್ರತಿನಿಧಿಗಳು ಸಂವಾದದಲ್ಲಿ ಭಾಗವಹಿಸಿದ್ದರು.

ಈ ನಾಲ್ಕು ಉದ್ಯಮ ವಲಯಗಳ ಮುಂದಿನ ಹಂತದ ಬೆಳವಣಿಗೆ ಮತ್ತು ರಫ್ತು ವಹಿವಾಟು ಹೆಚ್ಚಳಕ್ಕೆ ಕೇಂದ್ರ ಸರಕಾರ ತೆಗೆದುಕೊಳ್ಳಬೇಕಾದ ಉಪಕ್ರಮಗಳು ಹೇಗಿರಬೇಕು ಎನ್ನುವುದನ್ನು ನಿರ್ಮಲಾ ಅವರು ಉದ್ಯಮಿಗಳಿಂದ ವಿವರ ಪಡೆದರು.

'ಕರ್ನಾಟಕದಲ್ಲಿ ನೆಲೆಯೂರಿರುವ ನವೋದ್ಯಮದ ಬೆಳವಣಿಗೆ ಆಶಾದಾಯಕವಾಗಿದೆ. ಉಳಿದ ರಾಜ್ಯಗಳಿಗೆ ಸ್ಫೂರ್ತಿದಾಯಕವಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಉದ್ಯಮಿಗಳು, ರಾಜ್ಯದಲ್ಲಿನ ಮಾಹಿತಿ ತಂತ್ರಜ್ಞಾನ ವಲಯದಿಂದ ರಫ್ತು ಪ್ರಮಾಣವು ಮತ್ತಷ್ಟು ಹೆಚ್ಚಳಗೊಳ್ಳಲು ಕೈಗೊಳ್ಳಬೇಕಾದ ಕ್ರಮಗಳೇನೇನು ಎನ್ನುವುದರ ಬಗ್ಗೆ ನಿರ್ಮಲಾ ಅವರ ಗಮನಕ್ಕೆ ಕೆಲವು ಸಂಗತಿಗಳನ್ನು ತಂದರು. ಜತೆಗೆ, ತೆರಿಗೆ ವಿಧಾನದ ಬಗ್ಗೆಯೂ ಮುಕ್ತವಾಗಿ ಅಭಿಪ್ರಾಯಗಳನ್ನು ಹಂಚಿಕೊಂಡರು.

ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಮಣರೆಡ್ಡಿ, ಐಟಿಬಿಟಿ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ, ಐಟಿ ವಿಷನ್ ಗ್ರೂಪ್ ಮುಖ್ಯಸ್ಥ ಕ್ರಿಸ್ ಗೋಪಾಲಕೃಷ್ಣ, ಸ್ಟಾರ್ಟಪ್ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮುಖ್ಯಸ್ಥ ಬಿ.ವಿ.ನಾಯ್ಡು ಉಪಸ್ಥಿತರಿದ್ದರು.

ನೀರಾವರಿ ಇಲಾಖೆಯ ನಾಲ್ಕೂ ನಿಗಮಗಳ ಕಾಮಗಾರಿ

‘ಬಿಲ್ ಬಾಕಿ ₹ 9,980.95 ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೀರಾವರಿ ಇಲಾಖೆಯ ಅಡಿಯಲ್ಲಿರುವ ನಾಲ್ಕೂ ನಿಗಮಗಳಡಿಯಲ್ಲಿ ಮುಂದುವರಿದ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಬಾಕಿ ಪಾವತಿಗೆ ₹ 9,980.95 ಕೋಟಿ ಅಗತ್ಯವಿದೆ. ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಲು ₹ 1 ಲಕ್ಷ ಕೋಟಿ ಹಣ ಬೇಕು’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಬಿ.ಎಂ. ಫಾರೂಕ್ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ‘2021–22ನೇ ಸಾಲಿನಲ್ಲಿ ಪರಿಷ್ಕೃತ ಅಂದಾಜು ವೆಚ್ಚವಾಗಿ ನಾಲ್ಕೂ ನಿಗಮಗಳಿಗೆ ಒಟ್ಟು ₹17,410.28 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಆ ಪೈಕಿ, ಜನವರಿ ಅಂತ್ಯಕ್ಕೆ ₹ 10,967.47 ಕೋಟಿ ಬಿಡುಗಡೆಯಾಗಿದ್ದು, ₹ 10,824.74 ಕೋಟಿ ವೆಚ್ಚವಾಗಿದೆ’ ಎಂದರು.

‘₹ 50 ಲಕ್ಷದೊಳಗಿನ ಕಾಮಗಾರಿ ನಿರ್ವಹಿಸಿದ ಸಣ್ಣ ಗುತ್ತಿಗೆದಾರರಿಗೆ ಆದ್ಯತೆ ನೀಡಿ ಬಾಕಿ ಬಿಲ್‌ಗಳನ್ನು ಪಾವತಿಸಲಾಗುತ್ತದೆ’ ಎಂದರು.

‘ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲಿ ಪ್ರಸ್ತಾಪಿಸಿದ ಒಟ್ಟು ವೆಚ್ಚವನ್ನು ಬಜೆಟ್‌ನಲ್ಲಿ ಒಂದಾವರ್ತಿ ನೀಡಿದರೆ ಸಮಸ್ಯೆ ಆಗುವುದಿಲ್ಲ. ಆದರೆ, ಯೋಜನೆ ಪ್ರಸ್ತಾವ ಆಗುತ್ತಿದ್ದಂತೆ ಸ್ವಲ್ಪ ಭಾಗವನ್ನು ಟೋಕನ್ ಮೊತ್ತವಾಗಿ ನೀಡಲಾಗುತ್ತದೆ. ನಂತರ ಹಂತ ಹಂತವಾಗಿ ಮೂರು ವರ್ಷಕ್ಕೆ ಯೋಜನಾ ವೆಚ್ಚ ಪಾವತಿಸುವ ಸಂಪ್ರದಾಯವನ್ನು ಇಲಾಖೆ ರೂಢಿಸಿಕೊಂಡು ಬಂದಿದೆ. ಇದರಿಂದ ಯೋಜನೆಗಳು ನನೆಗುದಿಗೆ ಬೀಳುತ್ತಿವೆ’ ಎಂದು ವಿವರಿಸಿದರು.

‘ಇಲಾಖೆಯಲ್ಲಿ 2013ರಿಂದಲೂ ಹಲವು ಬಿಲ್‌ಗಳು ಬಾಕಿ ಉಳಿದಿವೆ. ಕಳೆದ ಎರಡು ವರ್ಷದಲ್ಲಿ ಕೋವಿಡ್ ಕಾರಣದಿಂದ ಬಾಕಿ ಬಿಲ್‌ಗಳು ಹೆಚ್ಚು ಉಳಿದಿವೆ. ಮುಂದಿನ ದಿನಗಳಲ್ಲಿ ಸಂಪನ್ಮೂಲ ಕ್ರೋಡೀಕರಿಸಿ ಬಾಕಿ ಬಿಲ್ ಪಾವತಿಸಲು ಮತ್ತು ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು’ ಎಂದರು.

ಬಾಕಿ ಇರುವ ಬಿಲ್ ಪಾವತಿ ಮೊತ್ತ

ನಿಗಮ	ಕಾಮಗಾರಿ ಮೊತ್ತ (₹ ಕೋಟಿಗಳಲ್ಲಿ)
ಕೆಬಿಜೆಎನ್‌ಎಲ್	1,312.40
ಕೆಎನ್‌ಎನ್‌ಎಲ್	4,058.32
ಸಿಎನ್‌ಎನ್‌ಎಲ್	1,355.16
ವಿಜೆಎನ್‌ಎಲ್	3,237.07
ಒಟ್ಟು	9998.95

‘ಕ್ರೈಸ್’ ಶಿಕ್ಷಕರಿಗೆ ಸೌಲಭ್ಯದ ಭರವಸೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವ್ಯಾಪ್ತಿಯಲ್ಲಿರುವ 826 ವಸತಿ ಶಾಲೆಗಳ ಶಿಕ್ಷಕರಿಗೆ ಸರ್ಕಾರಿ ನೌಕರರಿಗೆ ನೀಡುವ ಸೌಲಭ್ಯಗಳನ್ನು ದೊರಕಿಸುವ ಪ್ರಯತ್ನ ಪ್ರಗತಿಯಲ್ಲಿದೆ. ಶೀಘ್ರದಲ್ಲಿ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ, ಎಸ್.ಎಲ್. ಭೋಜೇಗೌಡ, ಬಿಜೆಪಿಯ ಅರುಣ್ ಶಹಾಪುರ, ವೈ.ಎ. ನಾರಾಯಣಸ್ವಾಮಿ, ಶಶಿಲ್ ಜಿ. ನಮೋಶಿ ವಿಧಾನ ಪರಿಷತ್‌ನಲ್ಲಿ ನಿಯಮ 330ರ ಅಡಿ ಸೋಮವಾರ ನಡೆಸಿದ ಚರ್ಚೆಗೆ ಉತ್ತರಿಸಿದ ಸಚಿವರು, ‘ಕೆಲವು ಬೇಡಿಕೆಗಳಿಗೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿಲ್ಲ. ಮತ್ತೊಮ್ಮೆ ಚರ್ಚಿಸಿ, ತೀರ್ಮಾನಿಸಲಾಗುವುದು’ ಎಂದರು.

‘ಭೋವಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ: ಎಸಿಬಿ ತನಿಖೆ’

ಬೆಂಗಳೂರು: ‘ರಾಜ್ಯ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅಕ್ರಮಗಳಲ್ಲಿ ಭಾಗಿಯಾಗಿರುವ ಆರೋಪದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಪ್ರಧಾನ ವ್ಯವಸ್ಥಾಪಕ ಮತ್ತು ಕಚೇರಿ ವ್ಯವಸ್ಥಾಪಕರನ್ನು ಅಮಾನತು ಮಾಡಲಾಗಿದೆ. ಪ್ರಕರಣದ ತನಿಖೆಯನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ವಹಿಸಲಾಗಿದೆ’ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸಪೂಜಾರಿ ತಿಳಿಸಿದರು.

ಬಿಜೆಪಿಯ ಸುನೀಲ್ ವಲ್ಯಾಪುರೆ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಅಮಾನತುಗೊಂಡ ಅಧಿಕಾರಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯಿಂದ (ಕೆಎಟಿ) ತಡೆಯಾಜ್ಞೆ ಪಡೆದಿದ್ದಾರೆ. ತಡೆಯಾಜ್ಞೆ ತೆರವುಗೊಳಿಸಲು ಕಾನೂನು ಸಲಹೆ ಪಡೆಯಲಾಗುತ್ತಿದೆ ಎಂದರು.

‘ಅನುದಾನ ವ್ಯಾಪ್ತಿಗೆ ಖಾಸಗಿ ಶಾಲೆ: ಚರ್ಚಿಸಿ ತೀರ್ಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘1995ರ ನಂತರ ಶಾಲೆಗಳಿಗೆ ಅನುಮತಿ ನೀಡುವಾಗ ಅನುದಾನ ಕೇಳಬಾರದು ಎಂಬ ಷರತ್ತು ವಿಧಿಸಲಾಗಿದೆ. ಆದರೂ, ಕೆಲವು ಶಾಲೆಗಳು ಅನುದಾನ ಕೇಳುತ್ತಿವೆ. ಆರ್ಥಿಕ ಇಲಾಖೆ ಜೊತೆ ಚರ್ಚಿಸಿ, ಅನುದಾನಕ್ಕೆ ಒಳಪಡಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಚಂದ್ರಶೇಖರ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಉಪಸ್ಥಿತಿಯಲ್ಲಿ ಸಭೆ ನಡೆಸಲಾಗಿದೆ’ ಎಂದರು.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ 1994-95 ನಡುವೆ 450ಕ್ಕೂ ಹೆಚ್ಚು ಕನ್ನಡ ಶಾಲೆಗಳು ಸ್ಥಾಪನೆಯಾಗಿವೆ. ಅವುಗಳಲ್ಲಿ 15 ಶಾಲೆಗಳನ್ನು ಮಾತ್ರ ಅನುದಾನಕ್ಕೆ ಒಳಪಡಿಸಲಾಗಿದೆ. ಹಿಂದುಳಿದ ಪ್ರದೇಶದ ಶಾಲೆಗಳ ಅಭಿವೃದ್ಧಿ ಆಗಬೇಕಿದ್ದರೆ ಎಲ್ಲ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು’ ಎಂದು ಪಾಟೀಲ ಒತ್ತಾಯಿಸಿದರು.

ಸದಸ್ಯರ ಪ್ರಶ್ನೆಗೆ ದನಿಗೂಡಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ‘ಅನುದಾನಕ್ಕೆ ಒಳಪಡಿಸದೇ ಇದ್ದರೆ ಕನ್ನಡ ಶಾಲೆಗಳನ್ನು ಉಳಿಸುವುದು ಹೇಗೆ? ಹಣಕಾಸಿನ ಕೊರತೆ ಎಂದು ನೆಪ ಬೇಡ. ಹಣಕಾಸು ಇಲಾಖೆಯಿಂದ ಅನುದಾನವನ್ನು ಪಡೆದು, ಕನ್ನಡ ಶಾಲೆಗಳನ್ನು ಉಳಿಸುವ ಕೆಲಸ ಮಾಡಿ’ ಎಂದು ಸಲಹೆ ನೀಡಿದರು.

ಆಗ ಸಚಿವ ನಾಗೇಶ್, ‘ಯೋಚನೆ ಮಾಡುತ್ತೇನೆ’ ಎಂದರು. ಇದು ಹೊಸ ರೀತಿಯ ಉತ್ತರ ಎಂದು ಇಡೀ ಸದನ ನಗೆಗಡಲಲ್ಲಿ ತೇಲಿತ್ತು. ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಯೋಚಿಸುತ್ತೇನೆ ಎನ್ನುವ ಮೂಲಕ ಶಿಕ್ಷಣ ಸಚಿವರು ಹೊಸ ಧಾಟಿಯ ಸಮರ್ಪಕ ಉತ್ತರ ನೀಡಿದ್ದಾರೆ’ ಎಂದರು.

‘ಕನ್ನಡ ಮಾಧ್ಯಮದ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ವಿಚಾರದಲ್ಲಿ ಈ ರೀತಿ ಮೀನಾಮೇಷ ಸರಿಯಲ್ಲ’ ಎಂದು ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಕ್ಷೇಪ ವ್ಯಕ್ತಪಡಿಸಿದರು.

ಶೀಘ್ರ ನಿರ್ಧಾರ: ಕಾಂಗ್ರೆಸ್‌ನ ಹರೀಶ್ ಕುಮಾರ್, ‘ಖಾಸಗಿ ಶಾಲೆಗಳು ಪ್ರತಿವರ್ಷ ಕಟ್ಟಡ ಸುರಕ್ಷತೆ ಮತ್ತು ಅಗ್ನಿಶಾಮಕ ಸುರಕ್ಷಿತ ಪತ್ರವನ್ನು ನೀಡಬೇಕೆಂಬ ನಿಯಮ ಸಡಿಲಿಸಬೇಕು. ನವೀಕರಣದ ಅವಧಿಯನ್ನು 10 ವರ್ಷಕ್ಕೆ ನಿಗದಿಪಡಿಸಬೇಕು. ಇಲ್ಲದೇ ಹೋದರೆ ಖಾಸಗಿ ಶಾಲೆಗಳು ಮುಚ್ಚುವ ಪರಿಸ್ಥಿತಿ ಬರಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಅದಕ್ಕೆ ಪ್ರತಿಕ್ರಿಯಿಸಿ ಸಚಿವ ನಾಗೇಶ್, ‘ಕಟ್ಟಡ ಸುರಕ್ಷತೆ, ಅಗ್ನಿ ಪ್ರತಿಬಂಧಕ ಕ್ರಮಗಳ ಕುರಿತು ಸುಪ್ರೀಂ ಕೋರ್ಟ್ ಆದೇಶದಂತೆ ಕ್ರಮ ಕೈಗೊಳ್ಳಲಾಗಿದೆ. ಈ ನಿಯಮ ಖಾಸಗಿ ಶಾಲೆಗಳಿಗಷ್ಟೆ ಅಲ್ಲ, ಸರ್ಕಾರಿ ಶಾಲೆಗಳಿಗೂ ಅನ್ವಯ. ಆದರೆ, ನೆಲ ಮಹಡಿಯಲ್ಲಿರುವ ಸರ್ಕಾರಿ ಶಾಲೆಗಳಿಗೆ ಕಟ್ಟಡಗಳ ಸದೃಢತೆ ಪ್ರಮಾಣಪತ್ರ ಅನ್ವಯವಾಗುವುದಿಲ್ಲ. ನೆಲ ಮಹಡಿಯಲ್ಲಿರುವ ಖಾಸಗಿ ಶಾಲೆಗಳಿಗೂ ಈ ರಿಯಾಯಿತಿ ನೀಡುವ ನಿಟ್ಟಿನಲ್ಲಿ ಈಗಾಗಲೇ 3–4 ಸಭೆಗಳನ್ನು ನಡೆಸಿದ್ದು, ಈ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

‘ಶಾಸನ ರಚನೆಗೆ ಸಾಮಾಜಿಕ ಹಿತಾಸಕ್ತಿ ಇರಬೇಕು’

ಪ್ರಜಾವಾಣಿ ವಾರ್ತೆ

ಜಿ. ಶ್ರೀಧರ್

ಬೆಂಗಳೂರು: ‘ಸಂವಿಧಾನ ಬದ್ಧ ಕರ್ತವ್ಯದ ಶಾಸನ ರಚನೆ ಸಾಮಾಜಿಕ ಹಿತಾಸಕ್ತಿಯಿಂದ ಕೂಡಿರಬೇಕು. ಆಗ ಮಾತ್ರ ಸಮಾಜ ಸದೃಢವಾಗಲು ಸಾಧ್ಯ’ ಎಂದು ರಾಜ್ಯ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ಅಭಿಪ್ರಾಯಪಟ್ಟರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ‘ರಾಜಕೀಯ ವಿಜ್ಞಾನ ಒಕ್ಕೂಟದ ವೇದಿಕೆ’ ಉದ್ಘಾಟಿಸಿ ಮಾತನಾಡಿದ ಅವರು, ‘ಕಾನೂನು ರಚನಾ ಪ್ರಕ್ರಿಯೆ’ ಕುರಿತು ವಿಶೇಷ ಉಪನ್ಯಾಸ ನೀಡಿದರು.

‘ಕಾನೂನುಗಳ ಭವಿಷ್ಯ, ವುಗಳನ್ನು ಪೂರ್ವಾನ್ವಯವಾಗುವಂತೆ ಜಾರಿಗೊಳಿಸುವುದು, ಕೇಂದ್ರ ಮತ್ತು ರಾಜ್ಯಗಳ ಸಮವರ್ತಿ ಪಟ್ಟಿಗಳ ಶಾಸನ ಸಾಮರ್ಥ್ಯ, ಅಧಿಕಾರ ಮತ್ತು ಅವುಗಳ ದಂಡನೆ ಸ್ವರೂಪ ಮೊದಲಾದುವುಗಳ ಬಗ್ಗೆ ವಿವರಿಸಿದರು. ಸಾಮಾಜಿಕ, ಕಂದಾಯ, ನಗರಾಭಿವೃದ್ಧಿ, ಪೊಲೀಸ್ ಕಾನೂನುಗಳ ಕುರಿತು ಉದಾಹರಣೆ ಸಮೇತ ವಿವರಿಸಿದರು.

ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಪಾತ್ರ, ಹಕ್ಕು ಮತ್ತು ಕರ್ತವ್ಯಗಳ ಕುರಿತು ಕುಲಪತಿ ಗೋಮತಿ ದೇವಿ ಮಾತನಾಡಿದರು. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಎ.ವಿ. ಶಿವಶಂಕರ ರೆಡ್ಡಿ ಮತ್ತು ಎಚ್. ಪ್ರಕಾಶ್ ಇದ್ದರು.

ಕಬ್ಬಿನಾಲೆ ವಸಂತ ಭಾರದ್ವಾಜ್‌ಗೆ ‘ಪಾರ್ತಿಸುಬ್ಬ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಕಬ್ಬಿನಾಲೆ ವಸಂತ ಭಾರದ್ವಾಜ್

ಬೆಂಗಳೂರು: ತೆಂಕುತಿಟ್ಟು ಯಕ್ಷಗಾನ ಪ್ರಸಂಗಕರ್ತ, ಸಾಹಿತಿ ಹಾಗೂ ಕಲಾವಿದ ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕರ್ನಾಟಕ ಯಕ್ಷಗಾನ ಅಕಾಡೆಮಿ ನೀಡುವ 2021ನೇ ಸಾಲಿನ ‘ಪಾರ್ತಿಸುಬ್ಬ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಡಾ.ಜಿ.ಎಲ್. ಹೆಗಡೆ ಅವರು ಸುದ್ದಿಗೋಷ್ಠಿಯಲ್ಲಿ ಸೋಮವಾರ ಈ ಕುರಿತು ಮಾಹಿತಿ ನೀಡಿದರು.

‘ಉಡುಪಿ ಜಿಲ್ಲೆ ಹೆಬ್ರಿಯ ವಸಂತ್ ಅವರು ಕಾವ್ಯ, ವಿಮರ್ಶೆ, ಗೀತರೂಪಕ, ನಿಘಂಟು ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ 100ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಯಕ್ಷಗಾನ ತಾಳಮದ್ದಳೆ ಕಲಾವಿದರಾಗಿ, ಗಮಕ-ಕಲೆಯಲ್ಲಿ ವ್ಯಾಖ್ಯಾನಕಾರರಾಗಿ ಪ್ರಸಿದ್ಧರಾಗಿದ್ದಾರೆ. ಪ್ರಶಸ್ತಿಯು ₹1 ಲಕ್ಷ ನಗದು, ಫಲಕ ಹಾಗೂ ಪ್ರಮಾಣಪತ್ರ ಒಳಗೊಂಡಿರಲಿದೆ. ಈ ತಿಂಗಳ ಕೊನೆಯ ವಾರದಲ್ಲಿ ಕಾರ್ಕಳದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ’ ಎಂದರು.

ಗೌರವ ಪ್ರಶಸ್ತಿ ವಿಜೇತರು (ತಲಾ ₹50 ಸಾವಿರ ನಗದು, ಫಲಕ ಮತ್ತು ಪ್ರಮಾಣ ಪತ್ರ): ಸತ್ಯ ನಾರಾಯಣ ವರದ ಹಾಸ್ಯಗಾರ (ಕರ್ಕಿ), ಮುತ್ತಪ್ಪ ತನಿಯ ಪೂಜಾರಿ (ಹೊರನಾಡು ಕನ್ನಡಿಗ), ನರೇಂದ್ರಕುಮಾರ್ ಜೈನ್ (ಉಜಿರೆ), ಮೂಡಲಗಿರಿಯಪ್ಪ (ಕಡವೀಗೆರೆ, ತುಮಕೂರು), ಎನ್. ಟಿ.ಮೂರ್ತಾಚಾರ್ಯ (ನೆಲ್ಲಿಗೆರೆ, ಮಂಡ್ಯ).

‘ಯಕ್ಷಸಿರಿ’ ಪ್ರಶಸ್ತಿ ಪುರಸ್ಕೃತರು (ತಲಾ ₹25 ಸಾವಿರ ನಗದು ಹಾಗೂ ಪ್ರಮಾಣಪತ್ರ): ಹಳ್ಳಾಡಿ ಜಯರಾಮ ಶೆಟ್ಟಿ (ಕುಂದಾಪುರ), ಗೋಪಾಲ ಗಾಣಿಗ ಆಜ್ರಿ (ಉಡುಪಿ), ಸೀತೂರು ಅನಂತಪದ್ಮನಾಭ ರಾವ್ (ಚಿಕ್ಕಮಗಳೂರು), ಕಡತೋಕ ಲಕ್ಷ್ಮೀನಾರಾಯಣ ಶಂಭು ಭಾಗವತ (ಹೊನ್ನಾವರ), ಬೋಳಾರ ಸುಬ್ಬಯ್ಯ ಶೆಟ್ಟಿ (ಮಂಗಳೂರು), ರಾಮ ಸಾಲಿಯಾನ್ ಮಂಗಲ್ಪಾಡಿ (ಕಾಸರಗೋಡು), ಕೊಕ್ಕಡ ಈಶ್ವರ ಭಟ್ (ಬಂಟ್ವಾಳ), ಅಡಿಗೋಣ ಬೀರಣ್ಣ ನಾಯ್ಕ (ಅಂಕೋಲ), ಭದ್ರಯ್ಯ (ಬೆಂಗಳೂರು), ಬಸವರಾಜಪ್ಪ (ಕೋಲಾರ).

ಪುಸ್ತಕ ಪ್ರಶಸ್ತಿ

ಕಾಸರಗೋಡಿನ ಕೆ.ರಮಾನಂದ ಬನಾರಿಯವರ ‘ಅರ್ಥಾಯನ’ ಹಾಗೂ ಮೈಸೂರಿನ ಎಚ್.ಆರ್. ಚೇತನ ಅವರ ‘ಮೂಡಲಪಾಯ ಯಕ್ಷಗಾನ’ ಕೃತಿಗಳು 2020ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಆಯ್ಕೆಯಾಗಿವೆ.

ಇವರಿಗೆ ತಲಾ ₹25 ಸಾವಿರ ನಗದು ಹಾಗೂ ಪ್ರಮಾಣಪತ್ರ ಲಭಿಸಲಿದೆ.

ಜಿಜ್ಞಾಸೆಗೆ ವಿವರಣೆ ಕೊಡಿ: ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರಾದವರು ಪೂರ್ಣಾವಧಿ ಕಾರ್ಯ ನಿರ್ವಹಿಸಬೇಕು ಎಂಬುದು ಬಿಡಿಎ ಕಾಯ್ದೆಯಲ್ಲಿಯೇ ಇದೆ. ಹೀಗಿದ್ದಾಗ, ಈ ಹುದ್ದೆಗೆ ಶಾಸಕರು ಅಧ್ಯಕ್ಷರಾದರೆ ಅಂತಹವರು ವಿಧಾನಸಭೆಯ ಕಲಾಪಕ್ಕೆ ಗೈರು ಹಾಜರಾಗಬಹುದೇ ಎಂಬ ಅಂಶವನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಿ’ ಎಂದು ಹೈಕೋರ್ಟ್ ಅರ್ಜಿದಾರರಿಗೆ ನಿರ್ದೇಶಿಸಿದೆ.

ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ಅವರನ್ನು ಬಿಡಿಎ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿರುವ ಕ್ರಮ ಪ್ರಶ್ನಿಸಿ ವಕೀಲ ಎ.ಎಸ್. ಹರೀಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪ್ರಿನ್ಸ್ ಐಸಾಕ್, ‘ಬಿಡಿಎ ಕಾಯ್ದೆ-1976ರ ಕಲಂ 3ರ ಪ್ರಕಾರ ಪ್ರಾಧಿಕಾರದ ಅಧ್ಯಕ್ಷರಾದವರು ಪೂರ್ಣಾವಧಿ ಕಾರ್ಯ ನಿರ್ವಹಿಸಬೇಕು. ಆದರೆ, ವಿಶ್ವನಾಥ್ ಅವರನ್ನು ನಾಮ ನಿರ್ದೇಶನದ ಅನುಸಾರ ಬಿಡಿಎ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಲಾಗಿದ್ದು ಇದು ಕ್ರಮ ಕಾನೂನು ಬಾಹಿರ’ ಎಂದು ನ್ಯಾಯಪೀಠದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಶಾಸಕರಾದವರು ಈ ಸ್ಥಾನಕ್ಕೆ ನೇಮಕವಾದರೆ ಅಧ್ಯಕ್ಷರಾಗಿ ಹೇಗೆ ಪೂರ್ಣಾವಧಿ ಕಾರ್ಯ ನಿರ್ವಹಿಸುತ್ತಾರೆ. ಅಂತೆಯೇ, ಬಿಡಿಎಯಲ್ಲಿ ಪೂರ್ಣಾವಧಿ ಕಾರ್ಯ ನಿರ್ವಹಿಸುವುದಾದರೆ ಅಂತಹವರು ಶಾಸಕರಾಗಿ ವಿಧಾನಸಭೆಗೆ ಗೈರು ಹಾಜರಾಗಬಹುದೇ ಎಂಬುದರ ಕಾನೂನು ಸ್ಪಷ್ಟತೆಯನ್ನು ನ್ಯಾಯಪೀಠಕ್ಕೆ ಸಾಬೀತುಪಡಿಸಿ’ ಎಂದು ಸೂಚಿಸಿ, ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದೆ.

ದಾವಣಗೆರೆ ಜಿಲ್ಲೆ ಚೀಲೂರು ಘಟಕ ● ಮಹಿಳೆಯರಿಂದಲೇ ಕಸ ಸಂಗ್ರಹ ವಾಹನ ಚಾಲನೆ

ತ್ಯಾಜ್ಯ ವಿಲೇವಾರಿ: ಗ್ರಾಮೀಣ ಮಹಿಳೆಯರ ಕೈಚಳಕ

● ಎಚ್.ಅನಿತಾ

ದಾವಣಗೆರೆ ಜಿಲ್ಲೆಯ ಚೀಲೂರು ಗ್ರಾಮ ಪಂಚಾಯಿತಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸವನ್ನು ವಿಂಗಡಿಸುತ್ತಿರುವ ಮಹಿಳೆಯರು

ದಾವಣಗೆರೆ: ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡಲು ಮತ್ತು ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಿಸಿದ್ದು, ಇಲ್ಲಿ ಕಸ ನಿರ್ವಹಣೆಯನ್ನು ಮಹಿಳೆಯರೇ ಮಾಡುತ್ತಿದ್ದಾರೆ.

ಸ್ವಚ್ಛ ಭಾರತ್ ಅಭಿಯಾನದಲ್ಲಿ ಘನತ್ಯಾಜ್ಯ ನಿರ್ವಹಣೆಯೂ ಪ್ರಮುಖವಾಗಿದೆ. ಗ್ರಾಮೀಣ ಮಹಿಳೆಯರ ಬದುಕಿಗೆ ದಾರಿ ಕಲ್ಪಿಸುವ ಉದ್ದೇಶದಿಂದ ಈ ಘಟಕಗಳ ನಿರ್ವಹಣೆ ಹೊಣೆಯನ್ನು ಮಹಿಳೆಯರಿಗೇ ವಹಿಸಲು ತೀರ್ಮಾನಿಸಲಾಗಿದೆ. ಅದರಂತೆ, ಗ್ರಾಮ ಪಂಚಾಯಿತಿ ಮತ್ತು ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಎನ್‌ಆರ್‌ಎಲ್‌ಎಮ್)ಯು ಸ್ಥಳೀಯ ಮಹಿಳಾ ಒಕ್ಕೂಟದ ಜತೆ ಒಪ್ಪಂದ ಮಾಡಿಕೊಂಡಿದೆ ಎಂದು ರಾಜ್ಯ ಘನ ಮತ್ತು ದ್ರವ ತ್ಯಾಜ್ಯ ಸಮಾಲೋಚಕ ಪಿಸೆ ಮಂಜುನಾಥ್ ತಿಳಿಸಿದ್ದಾರೆ.

ಮಾದರಿ ಘಟಕ: 'ದಾವಣಗೆರೆಯ ಚೀಲೂರು ಘಟಕದ ಮಹಿಳೆಯರು ತ್ಯಾಜ್ಯ ನಿರ್ವಹಣೆ ಜತೆಗೆ ಘಟಕದ ಆವರಣದಲ್ಲಿ ಕೈತೋಟವನ್ನೂ ನಿರ್ಮಿಸಿದ್ದಾರೆ. ಅಡುಗೆ ಎಣ್ಣೆ ಕವರ್, ಪ್ಲಾಸ್ಟಿಕ್ ಕವರ್, ಹಾಲಿನ ಕವರ್‌ಗಳನ್ನು ಬಳಸಿಕೊಂಡು ಅಡಿಕೆ ಸಸಿ, ಹಣ್ಣಿನ ಸಸಿಗಳನ್ನು ಬೆಳೆಸಿದ್ದಾರೆ. ತರಕಾರಿ, ಸೊಪ್ಪು ಬೆಳೆದು ಮಾರಾಟ ಮಾಡುವ ಮೂಲಕ ಘಟಕದ ಆದಾಯ ಹೆಚ್ಚಿಸಲು ಸಹಕಾರಿಯಾಗಿದ್ದಾರೆ. ಅಲಂಕಾರಿಕ ವಸ್ತುಗಳನ್ನೂ ತಯಾರಿಸಿದ್ದಾರೆ. ಹಸಿ ತ್ಯಾಜ್ಯದಿಂದ ಗೊಬ್ಬರ ಮಾಡುತ್ತಿದ್ದಾರೆ. ಸ್ಯಾನಿಟರಿ ನ್ಯಾಪ್‌ಕಿನ್ ಸುಡುವ ಯಂತ್ರಗಳನ್ನೂ ಇಲ್ಲಿ ಸ್ಥಾಪಿಸಲಾಗಿದೆ. ವಿವಿಧ ಗ್ರಾಮ ಪಂಚಾಯಿತಿಗಳಿಂದ ಇಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡು ಹೋಗುತ್ತಿದ್ದಾರೆ' ಎಂದು ಮಾಹಿತಿ ನೀಡುತ್ತಾರೆ ಎನ್‌ಆರ್‌ಎಲ್‌ಎಂ ದಾವಣಗೆರೆ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಎನ್.ಎಂ. ಭೋಜರಾಜ್, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಜಿಲ್ಲಾ ಸಮಾಲೋಚಕ ಪುರುಷೋತ್ತಮ ಕೆ. ಮತ್ತು ಶುಚಿತ್ವ ಮತ್ತು ನೈರ್ಮಲ್ಯ ಜಿಲ್ಲಾ ಸಮಾಲೋಚಕ ಕೆ.ಎಸ್. ಚಂದ್ರಶೇಖರ್.

ಧರ್ಮಸ್ಥಳಕ್ಕೆ ಬರುವ ಯಾತ್ರಿಗಳು ಘಾಟಿಯಲ್ಲಿ ಬಿಸಾಡುವ ತ್ಯಾಜ್ಯವನ್ನು ಆಯ್ದು ತಂದು ದಕ್ಷಿಣ ಕನ್ನಡ ಜಿಲ್ಲೆ ಚಾರ್ಮಾಡಿ ಗ್ರಾಮ ಪಂಚಾಯಿತಿ ಘಟಕದ ಮಹಿಳೆಯರು ಬೇರ್ಪಡಿಸುತ್ತಿದ್ದಾರೆ. ಮರುಬಳಕೆಯ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಉಡುಪಿ ಜಿಲ್ಲೆಯ ಬಡಗಬೆಟ್ಟು, ತೆಂಕ ನಿಡಿಯೂರು, ಹೆಜಮಾಡಿ, ಮೂಡಾರು, ಕೊಕ್ಕರ್ಣೆ, ಕೆಮ್ಮಣ್ಣು, ವಂಡ್ಸೆ ಸೇರಿ ಹಲವು ಪಂಚಾಯಿತಿ ವ್ಯಾಪ್ತಿಯಲ್ಲಿರುವ ಘಟಕಗಳು ಗ್ರಾಮ ಪಂಚಾಯಿತಿಯಿಂದ ಬಿಡಿಗಾಸು ಪಡೆಯದೆ ಸಂಪೂರ್ಣ ಆರ್ಥಿಕ ಸ್ವಾವಲಂಬನೆ ಸಾಧಿಸಿರುವುದು ವಿಶೇಷ.

ಸಮಗ್ರ ತ್ಯಾಜ್ಯ ವಿಲೇವಾರಿ: ಗ್ರಾಮೀಣ ಭಾಗಗಳಲ್ಲಿ ಸಂಗ್ರಹವಾಗುವ ಒಣ ಕಸವನ್ನು ಮತ್ತೆ ಸಮಗ್ರವಾಗಿ ವಿಲೇವಾರಿ ಮಾಡಲು ಬಳ್ಳಾರಿ, ದಕ್ಷಿಣ ಕನ್ನಡ, ರಾಮನಗರ ಉಡುಪಿಗಳಲ್ಲಿ ಸಮಗ್ರ ತ್ಯಾಜ್ಯ ವಿಲೇವಾರಿ ಘಟಕ (ಎಂಆರ್‌ಎಫ್) ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ರಾಜ್ಯದ ಮೊದಲ ಎಂಆರ್‌ಎಫ್ ಘಟಕ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಿಟ್ಟೆಯಲ್ಲಿ ಕಾರ್ಯಾರಂಭ ಮಾಡಿದೆ. ಎಂಆರ್‌ಎಫ್ ಘಟಕದ ಹಲವು ವಿಭಾಗಗಳಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಹಿಳಾ ದಿನದ ವಿಶೇಷ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗ್ರಾಮೀಣ ಪ್ರದೇಶದಲ್ಲಿ ಘಟಕಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರಿಗೆ ನರೇಗಾ ಅಡಿ ವೇತನ ನೀಡುವ ಬಗ್ಗೆ ಚರ್ಚೆ ನಡೆದಿದೆ.

ಡಾ.ವಿಜಯ ಮಹಾಂತೇಶ ದಾನಮ್ಮನವರ ಸಿಇಒ,ಜಿ.ಪಂ, ದಾವಣಗೆರೆ

ವಾಹನ ಚಾಲಕಿಯರು

ತ್ಯಾಜ್ಯ ಸಂಗ್ರಹಿಸುವ ವಾಹನಗಳಿಗೆ ಮಹಿಳೆಯರನ್ನೇ ಚಾಲಕರಾಗಿ ನೇಮಿಸಲು ನೂರಾರು ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ನೀಡಿದೆ. ದಾವಣಗೆರೆಯ ಪಲ್ಲಾಗಟ್ಟೆ, ಉಡುಪಿಯ ಮುಡಾರು, ಪಾಂಡೇಶ್ವರ, ಕೊಕ್ಕರ್ಣೆ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರೇ ಚಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಮೂಲಸೌಲಭ್ಯ, ಸಂಬಳಕ್ಕೆ ಮನವಿ

ಕೆಲವು ಘಟಕಗಳಲ್ಲಿ ನೀರಿನ ಸೌಲಭ್ಯ ಇಲ್ಲ. ಮಾಸ್ಕ್, ಗ್ಲೌಸ್, ಕೂರಲು ಮಣೆ, ಕೈತೊಳೆಯಲು ಸೋಪ್ ಸೇರಿ ಅಗತ್ಯ ಸಲಕರಣೆಗಳಿಲ್ಲ. ಕೆಲಸ ಆರಂಭಿಸಿ ಎಂಟು ತಿಂಗಳಾದರೂ ಸಂಬಳ ಸಿಕ್ಕಿಲ್ಲ. ಕೆಲ ಜನರು ತ್ಯಾಜ್ಯ ಶುಲ್ಕ ₹ 20 ನೀಡಿದರೆ, ಮತ್ತೆ ಕೆಲವರು ನೀಡುತ್ತಿಲ್ಲ. ಘಟಕಗಳು ಆರ್ಥಿಕ ಸ್ವಾವಲಂಬನೆ ಸಾಧಿಸುವವರೆಗೆ ಗ್ರಾಮ ಪಂಚಾಯಿತಿ ನೆರವು ನೀಡಬೇಕು. ಆದರೆ, ಕೆಲ ಗ್ರಾಮ ಪಂಚಾಯಿತಿಗಳ ಪಿಡಿಒಗಳು ಈ ಬಗ್ಗೆ ನಿರ್ಲಕ್ಷ್ಯ ತಾಳಿದ್ದಾರೆ.

ಅಂಕಿ-ಅಂಶಗಳು

5,955 ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ

5,703 ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಅನುಮೋದನೆ ನೀಡಿರುವ ಗ್ರಾ.ಪಂ.ಗಳು

3,624 ಗ್ರಾ.ಪಂ. ವ್ಯಾಪ್ತಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಘಟಕಗಳು

ಒಂದು ಗ್ರಾ.ಪಂ. ವ್ಯಾಪ್ತಿಯಲ್ಲಿ ವೆಚ್ಚದ ವಿವರ

₹15 ಲಕ್ಷ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶೆಡ್ ನಿರ್ಮಾಣ ವೆಚ್ಚ

₹5 ಲಕ್ಷ ಪ್ರತಿ ಗ್ರಾಮ ಪಂಚಾಯಿತಿಗೆ ನೀಡಿರುವ ಕಸ ಸಂಗ್ರಹಣ ವಾಹನ ವೆಚ್ಚ

₹40 ಸಾವಿರ ಕಾರ್ಯಾರಂಭಿಸಿರುವ ಘಟಕಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಸುಡುವ ಯಂತ್ರದ ವೆಚ್ಚ

ಪ್ರಜಾವಾಣಿ: ಪಿಯು ವಿದ್ಯಾರ್ಥಿಗಳಿಗೆ ಆನ್‌ಲೈನ್ ಬೋಧನಾ ಸರಣಿ

ಬೆಂಗಳೂರು: ಪಿಯುಸಿ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುವಂತಾಗಲು ಪ್ರಜಾವಾಣಿಯು ಈ ಬಾರಿಯೂ ತನ್ನ ಫೇಸ್‌ಬುಕ್, ಟ್ವಿಟರ್ ಹಾಗೂ ಯೂಟ್ಯೂಬ್ ತಾಣಗಳಲ್ಲಿ ಕರ್ನಾಟಕದ ಎಐಡಿಎಸ್‌ಒ ಸಹಯೋಗದಲ್ಲಿ, ನಾಡಿನ ಪ್ರಮುಖ ಉಪನ್ಯಾಸಕರಿಂದ ಬೋಧನಾ ಸರಣಿಯನ್ನು ಆರಂಭಿಸಿದೆ. ಪರೀಕ್ಷೆಗೆ ಸಜ್ಜಾಗುತ್ತಿರುವ ದ್ವಿತೀಯ ಪಿಯು ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವಂತಾಗಲು ಈ ಸರಣಿ ನೆರವಾಗಲಿದೆ.

ಪ್ರಜಾವಾಣಿಯ ಫೇಸ್‌ಬುಕ್ (fb.com/prajavani.net), ಯೂಟ್ಯೂಬ್ (youtube.com/prajavani) ಹಾಗೂ ಟ್ವಿಟರ್ (twitter.com/prajavani) ತಾಣಗಳಲ್ಲಿ ಸೋಮವಾರ ಆರಂಭವಾಗಿರುವ ಸರಣಿಯು ಮಾರ್ಚ್ 21ರವರೆಗೆ ಪ್ರತಿ ದಿನ ಸಂಜೆ 4ರಿಂದ 6 ಗಂಟೆಯವರೆಗೆ ಪ್ರಸಾರವಾಗಲಿದೆ.

ದಾವಣಗೆರೆಯ ಇಂಗ್ಲಿಷ್ ಉಪನ್ಯಾಸಕ ಟಿ.ವಿ.ಸುಬ್ಬರಾಜು ಅವರಿಂದ ಮಾರ್ಚ್ 8, 9 ರಂದು ಇಂಗ್ಲಿಷ್ ಟಿಪ್ಸ್, ಮಾ.10, 11, 12ರಂದು ರಾಯಚೂರಿನ ವಿದ್ಯಾನಿಧಿ ಪಿಯು ಕಾಲೇಜಿನ ಉಪ ಪ್ರಾಂಶುಪಾಲರಾದ ಶಂಕರ್ ಎ. ಅವರಿಂದ ಅಕೌಂಟೆನ್ಸಿ ಟಿಪ್ಸ್ ಲಭ್ಯವಾಗಲಿದೆ.

ಮಾ.13, 14, 15ರಂದು ರಾಯಚೂರಿನ ವಿದ್ಯಾನಿಧಿ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ.ಚಂದ್ರಗಿರೀಶ್ ಅವರಿಂದ ಜೀವಶಾಸ್ತ್ರ, ಮಾ.16, 17, 18ರಂದು ಕಲಬುರಗಿಯ ಅಶ್ವಿನಿ ಎ. ಅವರಿಂದ ರಸಾಯನಶಾಸ್ತ್ರ ಹಾಗೂ ಮಾ.19, 20 ಹಾಗೂ 21ರಂದು ಕಲಬುರಗಿಯ ಗಣಿತಶಾಸ್ತ್ರ ಉಪನ್ಯಾಸಕ ಮಂದಾರ ಹುಕ್ಕೇರಿ ಅವರಿಂದ ವಿದ್ಯಾರ್ಥಿಗಳಿಗೆ ಗಣಿತದ ಟಿಪ್ಸ್ ಲಭ್ಯವಾಗಲಿದೆ.

ಇದರ ವಿಡಿಯೊಗಳು ಪ್ರಜಾವಾಣಿಯ ಫೇಸ್‌ಬುಕ್, ಯೂಟ್ಯೂಬ್ ಮತ್ತು ಟ್ವಿಟರ್ ಪುಟಗಳಲ್ಲಿ ನೋಡಲು ಲಭ್ಯವಿರುತ್ತವೆ.

6 ತಿಂಗಳಲ್ಲಿ 500 ಜನೌಷಧಿ ಕೇಂದ್ರ: ಡಾ.ಸುಧಾಕರ್

ಮೈಸೂರು: 'ರಾಜ್ಯದಲ್ಲಿ ಇದೀಗ 952 ಜನೌಷಧಿ ಕೇಂದ್ರಗಳಿವೆ. ಮುಂದಿನ 6 ತಿಂಗಳಲ್ಲಿ ಹೊಸದಾಗಿ 500 ಕೇಂದ್ರ ಆರಂಭಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸೋಮವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಆರೋಗ್ಯ ಕೇಂದ್ರಗಳಲ್ಲೂ ಜನೌಷಧಿ ಕೇಂದ್ರ ತೆರೆಯುವ ಆಲೋಚನೆಯಿದೆ. ಔಷಧಿ ಬಗ್ಗೆ ಅಪನಂಬಿಕೆ ಬೇಡ. ಗುಣಮಟ್ಟದ ಔಷಧಿಗಳು ಕಡಿಮೆ ದರಕ್ಕೆ ಸಿಗಲಿವೆ' ಎಂದರು.

'ದೇಶದಲ್ಲಿ ನಾವು 3ನೇ ಸ್ಥಾನದಲ್ಲಿದ್ದೇವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಜನೌಷಧಿ ಕೇಂದ್ರ ಆರಂಭಿಸಿ, ಬಡವರು, ಮಧ್ಯಮ ವರ್ಗದವರಿಗೆ ಕಡಿಮೆ ಬೆಲೆಗೆ ಔಷಧಿ ಪೂರೈಸಿ ಮೊದಲ ಸ್ಥಾನಕ್ಕೆ ಬರುವ ಗುರಿ ಹೊಂದಿದ್ದೇವೆ ಎಂದರು..

ಕರ್ನಾಟಕ ಸರಕಾರ
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
ನಂ. ಬೆನಪ್ರಾ/ಲೋಇ/ಇ–ಟೆಂಡರ/2021–22/6377 ದಿನಾಂಕ:07/03/2022
ಇ–ಟೆಂಡರ ಪ್ರಕಟಣೆ
ತಿದ್ದುಪಡಿ ಟೆಂಡರ ಪ್ರಕಟಣೆ
ದಿನಾಂಕ: 04/03/2022 ರಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿಯಿಂದ ಕರೆಯಲಾದ ಟೆಂಡರ್ ಪ್ರಕಟಣೆ ನಂ. ಬೆನಪ್ರಾ/ಲೋಇ/ಇ–ಟೆಂಡರ/38/2021–22/6351 ದಿನಾಂಕ:04/03/2021 ರಲ್ಲಿ ನಮೂದಿಸಿದ ದಿನಾಂಕಗಳನ್ನು ಅನಿವಾರ್ಯ ಕಾರಣಗಳಿಂದ ಈ ಕೆಳಕಂಡಂತೆ ಮುಂದುಡಲಾಗಿದೆ.

ಟೆಂಡರ್ ಸಲ್ಲಿಸಲು ಮೊದಲು ನೀಡಿದ ಕೊನೆಯ ದಿನಾಂಕ	19.03.2022
ಟೆಂಡರ್ ಸಲ್ಲಿಸಲು ನೀಡಿದ ಪರಿಷ್ಕೃತ ಕೊನೆಯ ದಿನಾಂಕ	08.04.2022
ತಾಂತ್ರಿಕ ಬಿಡ್ ತೆರೆಯುವ ಮೊದಲು ನಿಗದಿಪಡಿಸಿದ ದಿನಾಂಕ	21.03.2022
ತಾಂತ್ರಿಕ ಬಿಡ್ ತೆರೆಯುವ ಪರಿಷ್ಕೃತ ದಿನಾಂಕ	11.04.2022

ಸಹಿ/– ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ
DIPR/BGM/RO-NO-1734/MCA/2021-22

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ
"ಕಾರ್ಮಿಕ ಭವನ" ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029,
ದೂ.ಸಂಖ್ಯೆ: 29753078, ಇಮೇಲ್: labour.commissioner42@gmail.com,
ವೆಬ್‌ಸೈಟ್: karmikaspandana@karnataka.gov.in
ಸಂ: ಎನ್‌ಜಿಒ–03/ಸಿಆರ್–42/2021–22 & ದಿನಾಂಕ : 04.03.2022
ಸಂ: ಎನ್‌ಜಿಒ–02/ಸಿಆರ್–33/2021–22
ಇ–ಟೆಂಡರ್ ಅಧಿಸೂಚನೆ
ಕಾರ್ಮಿಕ ಆಯುಕ್ತರು, ಬೆಂಗಳೂರು ಇವರು ಕಾರ್ಮಿಕ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪೂರೈಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಇ–ಆಡಳಿತ ಇಲಾಖೆಯ, ಇ–ಸಂಗ್ರಹಣಾ ವೇದಿಕೆಯ ಮುಖಾಂತರ ಎರಡು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 05.04.2022ರ ಸಾಯಂಕಾಲ 5.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ–ಸಂಗ್ರಹಣಾ ವೇದಿಕೆಯ ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಆಯುಕ್ತರು, ಕಾರ್ಮಿಕ ಇಲಾಖೆ
ವಾಸಾಸಂಇ/ಬೆಂ.ನ/ಶಿರಡಿಸಾಯಿ/3630/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸವದತ್ತಿ ಯಲ್ಲಮ್ಮಾ ಪುರಸಭೆ ಕಾರ್ಯಾಲಯ,
ಸವದತ್ತಿ–591126 ಜಿಲ್ಲಾ॥ ಬೆಳಗಾವಿ ರಾಜ್ಯ॥ ಕರ್ನಾಟಕ
Phone/Fax No: 08330-22226 website: www.saundattitown.gov.in
e-mail: itstaff_ulb_saundatti@yahoo.co.in
ಕ್ರ.ಸಂ. ಸಯಪು/ಕಿಅ/14ನೇಹ/ಸಾಮೂ/ಎಸ್.ಎಫ್.ಸಿ/ಶೇ29/ಪುನಿ/ಶೇ24.10%/2021–22/ ದಿನಾಂಕ: 14–03–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)
ಸವದತ್ತಿ ಯಲ್ಲಮ್ಮಾ ಪುರಸಭೆ ವ್ಯಾಪ್ತಿಯಲ್ಲಿ ಸನ್ 2021–22 ಪುರಸಭೆ ನಿಧಿ ಅನುದಾನದಡಿ ಶೇ. 24.10% ಸನ್ 2021–22 ನೇ ಸಾಲಿನ ಎಸ್.ಎಫ್.ಸಿ (ಮುಕ್ತ ನಿಧಿ) ಅನುದಾನ ಶೇ. 29% ಸನ್ 2016–17, 2019–20 ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, ಸನ್ 2016–17, 2017–18ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಕಾರ್ಯನಿರ್ವಹಣಾ ಅನುದಾ, ಎಸ್.ಬಿ.ಎಂ. ಯೋಜನೆಯಡಿ (ಎಸ್.ಡಬ್ಲ್ಯೂ.ಎಂ.ಡಿ.ಪಿಆರ್) ಅನುದಾನದಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಗಳಿಗೆ ಲೋಕೋಪಯೋಗಿ ಇಲಾಖೆ/ಜಿಲ್ಲಾ ಪಂಚಾಯತ್ ಇಂಜನೀಯರಿಂಗ್ ವಿಭಾಗದಲ್ಲಿ / ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಕೆ.ಡಬ್ಲು–1 ಕೆ.ಡಬ್ಲಯು–2, ಕೆ.ಡಬ್ಲು–3 ಹಾಗೂ ಅಧಿಕೃತ ಮಾರಾಟಗಾರರಿಂದ ಕೆ.ಜಿ–1 ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಿದ ಇಂಡೆಂಟ್ ನಂ. dma/2021-22/INDI 3581, DMA/2021-22/RD/WORK_INDENT 128909, DMA/2021-22/OW/WORK_INDENT 129024, DMA/2021-22/OW/WORK_INDENT 29019 ಕಿಲ್ಲಾ ಹತ್ತಿರ ಡಾ॥ ಬಿ.ಆರ್. ಅಂಬೇಡ್ಕರ ಮೂರ್ತಿ ಹತ್ತಿರ ಅಭಿವೃದ್ಧಿ ಕಾಮಗಾರಿ ಮಾಡುವುದು, ರಾಮಾಪೂರ ಸೈಟ್ ನಲ್ಲಿ ಸುತಗಟ್ಟಿ ಓಣೆಯಲ್ಲಿ ಜಲಕುಂಭ ನಿರ್ಮಿಸುವುದು ಹಾಗೂ ವಿಕಲಚೇತನರಿಗೆ ಶ್ರವಣ ದೋಷ ಯಂತ್ರಗಳ (ಕಿವಿಯ ಮಷೀನ್) ಖರೀದಿಸಿ ಪೂರೈಸುವುದು ಹೆಚ್ಚಿನ ಮಾಹಿತಿ ಮತ್ತು ಶರತ್ತುಗಳಿಗಾಗಿ website: www.saundattitown.mrc.gov.in & www.eproc.karnataka.gov.in ವೆಬ್‌ಸೈಟಿನಲ್ಲಿ ನೋಡಬಹುದು. ಟೆಂಡರ್ ಫಾರ್ಮ್ ವೆಬ್‌ಸೈಟನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 05–03–2022 ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪಲೋಡ್ (upload) ಮಾಡುವ ಕೊನೆಯ ದಿನಾಂಕ: 14–03–2022 ಸಾಯಂಕಾಲ 4:30 ಗಂಟೆಯವರೆಗೆ. ಟೆಂಡರ್‌ಗಳನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 15–03–2022 ರ ಸಾಯಂಕಾಲ 5:00 ಗಂಟೆಯು ನಂತರ ತೆರೆಯಲಾಗುವುದು. ಆರ್ಥಿಕ ಬಿಡ್ ತೆರೆಯುವ ದಿನಾಂಕ: 18–03–2022 ರ ಸಾಯಂಕಾಲ 5:00 ಗಂಟೆಯ ನಂತರ ತೆರೆಯಲಾಗುವುದು.
ಸಹಿ/– ಶ್ರೀ ಪಿ.ಎಂ. ಚೆನ್ನಪ್ಪನವರ ಮುಖ್ಯಾಧಿಕಾರಿ ಸವದತ್ತಿ ಯಲ್ಲಮ್ಮ ಪುರಸಭೆ ಸವದತ್ತಿ
ಸಹಿ/– ಶ್ರೀ ಆರ್.ವ್ಹಿ. ಕಾರದಗಿ ಅಧ್ಯಕ್ಷರು, ಸವದತ್ತಿ ಯಲ್ಲಮ್ಮ ಪುರಸಭೆ ಸವದತ್ತಿ
DIPO/RO No. 1715/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/ನಬಾರ್ಡ್–4202–8443–ಎಸ್‌ಸಿಪಿ–ಎಸ್‌ಡಿಪಿ/2021–22/6410/ ದಿನಾಂಕ: 07–03–2022
ಇ–ಟೆಂಡರ್ ಪ್ರಕಟಣೆ
ದಿನಾಂಕ : 07–03–2022ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 147653–2ನೇ ಕರೆ, 143641–3ನೇ ಕರೆ, 146417, 149751, 149946, 150068, 149963 ಮತ್ತು 150065ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 15–03–2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ಹಾಗೂ ಕಾಮಗಾರಿಗಳ ಇಂಡೆಂಟ್ ಸಂಖ್ಯೆ 140815–2ನೇ ಕರೆ, ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 21–03–2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಸತೀಶ.ಹೆಚ್.ಜಹಾಗೀರದಾರ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/508/21–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW-4:ಟೆಂ:2021–22: 4498 ದಿನಾಂಕ:03–03–2022.
ಅಲ್ಪಾವಧಿ ಟೆಂಡರ್ ಪ್ರಕಟಣೆ
2021–22ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯ ಮೈಕ್ರೋ ಸಾಮಾಜಿಕೇತರ – ಸಾಮಾನ್ಯ, ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. ಒಟ್ಟು ಕಾಮಗಾರಿಗಳ ಸಂಖ್ಯೆ: 03. ಅಂದಾಜು ಮೊತ್ತ ಗರಿಷ್ಠ ರೂ. 200.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 152.50 ಲಕ್ಷಗಳು ಇರುತ್ತದೆ. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: 147262, 147263 & 141406. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 23–03–2022 ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24–03–2022 ಸಮಯ 16.30 ಗಂಟೆ, ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.
ಸಹಿ/–ಕಾರ್ಯನಿರ್ವಾಹಕ ಇಂಜನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/581/ಎಂಸಿಎ/2021–22

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)ರವರ ಕಛೇರಿ, ಸೆಕ್ಟರ್. ನಂ: 6, ನವನಗರ ಬಾಗಲಕೋಟ–587103
ದೂರವಾಣಿ ಸಂಖ್ಯೆ: +91 9449877676 ಕಛೇರಿ ಸಂಖ್ಯೆ : 08354 235654
E-mail ID: seebgkt.hescom@gmail.com
Corporate Identity Number (CIN) : U31401KA2002SGC030437
No. SEE/BGKT/EEE(O)/AEE-2/21-22/10785-10799 Date:05-03-2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ
ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ, ಹೆಸ್ಕಾಂ, ಬಾಗಲಕೋಟ ರವರು "ಬಾಗಲಕೋಟ ವೃತ್ತದಲ್ಲಿ" 2021–22 ನೇ ಸಾಲಿನಲ್ಲಿ ಮಂಜೂರಾದ ಅಂದಾಜು ಪತ್ರಿಕೆಗಳ ಕಾಮಗಾರಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ ಸದರಿ ಪ್ರಕ್ರಿಯೆಗೆ ದಿನಾಂಕ : 14–03–2022 ರ 16:00 ಘಂಟೆಯೊಳಗೆ ಬಿಡ್‌ಗಳನ್ನು ಇ–ಪ್ರೋಕ್ಯುರ್‌ಮೆಂಟ್ ಮೂಲಕ ಸ್ವೀಕರಿಸಲಾಗುತ್ತದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಪಡೆಯಬಹುದಾಗಿದೆ.
ಸಹಿ/ ಅಧೀಕ್ಷಕ ಇಂಜನೀಯರ(ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಬಾಗಲಕೋಟ.
ವಾಸಾಇ/ಧಾ/1103/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
CITY MUNICIPAL COUNCIL, CHIKKAMAGALURU.
ಸಂಖ್ಯೆ:ಸಿಎಂಸಿ/ಸಿಕೆಎಂ/15ನೇ ಹಣಕಾಸು/ಸಿ.ಆರ್/01/2021–22 ದಿನಾಂಕ : 04.03.2022
: : ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ : :
ಈ ಕೆಳಕಂಡ ವಿವರದ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಷರತ್ತುಗಳಿಗೊಳಪಟ್ಟು ದ್ವಿ–ಲಕೋಟೆ ಪದ್ಧತಿಯಡಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1	DMA/2021-22/RD/WORK_INDENT126800/CALL-2	78.50	1,38,661.00

ಟೆಂಡರ್ ಫಾರಂ ಬೆಲೆ– ಇ–ಪೋರ್ಟಲ್‌ನಂತೆ ಕಾಲಾವಧಿ–03 ತಿಂಗಳು. (ಮಳೆಗಾಲ ಹೊರತುಪಡಿಸಿ)
1. ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:11.03.2022ರ 16.00 ಗಂಟೆ ವರೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:14.03.2022ರ 11.00 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ:16.03.2022ರ 11.00 ಗಂಟೆಗೆ
4. ಟೆಂಡರ್ ಪೂರ್ವಭಾವಿ ಸಭೆ ದಿ:08.03.2022ಕ್ಕೆ ಸಂಜೆ 4.00 ಗಂಟೆಗೆ ನಗರಸಭಾ ಕಛೇರಿಯಲ್ಲಿ
ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಯಾವುದೇ ಬದಲಾವಣೆಗಳಾದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.
ಸಹಿ/– (ಶ್ರೀ ವರಸಿದ್ಧಿ ವೇಣುಗೋಪಾಲ್) ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– (ಶ್ರೀಮತಿ ಸಿ.ಹೆಚ್.ಉಮಾದೇವಿ ಕೃಷ್ಣಪ್ಪ) ಉಪಾಧ್ಯಕ್ಷರು,ನಗರಸಭೆ, ಚಿಕ್ಕಮಗಳೂರು
ಸಹಿ/–(ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್.) ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ಶಿಕ್ಷಣ ವಂಚಿತರಾಗುತ್ತಿದ್ದೇವೆ – ಚಿಕ್ಕಮಗಳೂರು ಡಿ.ಸಿ.ಗೆ ವಿದ್ಯಾರ್ಥಿನಿಯರ ಅಹವಾಲು

'ತೀರ್ಪು ಬರುವವರೆಗೆ ಆನ್‌ಲೈನ್ ತರಗತಿಗೆ ಮನವಿ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರಿನಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಬಂದಿದ್ದ ವಿದ್ಯಾರ್ಥಿನಿಯರು.

ಚಿಕ್ಕಮಗಳೂರು: 'ಹಿಜಾಬ್ ವಿವಾದ ಕುರಿತಂತೆ ಹೈಕೋರ್ಟ್‌ನ ತೀರ್ಪು ಬರುವವರೆಗೂ ನಮಗೆ ಆನ್‌ಲೈನ್ ತರಗತಿ ನಡೆಸಲು ಜಿಲ್ಲಾಡಳಿತ ಕ್ರಮ ವಹಿಸಬೇಕು' ಎಂದು ವಿವಿಧ ಪದವಿ ಕಾಲೇಜುಗಳ ಕೆಲ ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ಅವರಿಗೆ ಮನವಿ ಸಲ್ಲಿಸಿದರು.

'ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಕಾಲೇಜಿನಲ್ಲಿ ಅವಕಾಶ ನೀಡುತ್ತಿಲ್ಲ. ಮುಸ್ಲಿಂ ವಿದ್ಯಾರ್ಥಿನಿಯರು ಶಿಕ್ಷಣದಿಂದ ವಂಚಿತರಾಗುತ್ತಿದ್ದೇವೆ' ಎಂದು ಅವರು ಮನವಿಯಲ್ಲಿ ಅಳಲು ತೋಡಿಕೊಂಡಿದ್ದಾರೆ.

'ಮಾರ್ಚ್ 16ರಿಂದ ಪದವಿ ಕಾಲೇಜಿನ ಪ್ರಾಯೋಗಿಕ ಪರೀಕ್ಷೆಗಳು ನಡೆಯಲಿವೆ. ಕೆಲ ವಿಷಯಗಳ ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು ಈಗಾಗಲೇ ನಡೆಯುತ್ತಿವೆ' ಎಂದು ಉಲ್ಲೇಖಿಸಿದ್ದಾರೆ.

'ಕಾಲೇಜು ಸಮವಸ್ತ್ರದ ವೇಲ್ ಅನ್ನು ತಲೆಯ ಮೇಲೆ ಹಾಕಿಕೊಂಡರೂ ಹಿಜಾಬ್ ಧರಿಸಲಾಗಿದೆ ಎಂದು ತರಗತಿಯಿಂದ ಹೊರಹಾಕಲಾಗುತ್ತಿದೆ. ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ಕಾಲೇಜು ಆವರಣ, ಸಭಾಂಗಣ ಅಥವಾ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ವಿದ್ಯಾರ್ಥಿನಿಯರು ಒತ್ತಾಯಿಸಿದರು.

ವಿದ್ಯಾರ್ಥಿನಿಯರಾದ ತಬಸ್ಸುಮ್, ಬುಶ್ರಾ, ರಿಯಾ, ಸಾನಿಯಾ ಬಾನು, ತಾನಿಯಾ, ಫರ್ಜಾನಾ ಇದ್ದರು.

ಹಿಜಾಬ್: ಬಜರಂಗ ದಳ ಪ್ರತಿಭಟನೆ

ಶಿವಮೊಗ್ಗ: ಹಿಜಾಬ್ ಧರಿಸಿದ್ದರೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂದು ಆರೋಪಿಸಿ ನಗರದ ಖಾಸಗಿ ಪಿಯು ಕಾಲೇಜು 4ಮುಂದೆ ಬಜರಂಗದಳದ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಹೈಕೋರ್ಟ್ ಆದೇಶವಿದ್ದರೂ ಹಿಜಾಬ್‌ಗೆ ಅವಕಾಶ ನೀಡಿದ್ದಾರೆ. ಆಡಳಿತ ಮಂಡಳಿ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪದವಿಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

'ಹೇಳಿಕೆ ಪಡೆದಿದ್ದೇವೆ. ವಿದ್ಯಾರ್ಥಿನಿಯರು ಪ್ರಥಮ ಪಿಯು ಪರೀಕ್ಷೆ ನಡೆಯುತ್ತಿರುವ ಕೊಠಡಿ ಒಳಗೆ ಹೋಗಿಲ್ಲ' ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗರಾಜ್ ಪಿ. ಕಾಗಲಕರ್ ಸ್ಪಷ್ಟಪಡಿಸಿದರು.

15 ಜನರ ವಿರುದ್ಧ ಪ್ರಕರಣ

ಮಂಗಳೂರು: ನಗರದ ರಥಬೀದಿಯ ದಯಾನಂದ ಪೈ-ಸತೀಶ್ ಪೈ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಿಜಾಬ್‌ಗೆ ಸಂಬಂಧಿಸಿ ಉಂಟಾಗಿದ್ದ ಗಲಾಟೆ ಕುರಿತಂತೆ ಪೊಲೀಸರು, 15 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಹಿಜಾಬ್ ಧರಿಸಿ ಕಾಲೇಜಿಗೆ ತೆರಳಿದ್ದ ನನಗೆ ತಡೆಯೊಡ್ಡಿ, ದೈಹಿಕ, ಮಾನಸಿಕ ಹಿಂಸೆ ನೀಡಿ, ನಿಂದಿಸಲಾಗಿದೆ' ಎಂದು ವಿದ್ಯಾರ್ಥಿನಿ ಬಂದರು ಠಾಣೆಗೆ ದೂರು ನೀಡಿದ್ದರು. ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಕೂಡ, 'ಸಾಮಾಜಿಕ ಜಾಲತಾಣದಲ್ಲಿ ನನಗೆ ಜೀವ ಬೆದರಿಕೆ ಹಾಕಲಾಗಿದೆ' ಎಂದು ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

ಬಗರ್ ಹುಕುಂ: ಆತ್ಮಹತ್ಯೆಗೆ ಯತ್ನಿಸಿದ್ದ ರೈತ ಮಹಿಳೆ ಸಾವು

ಮುಂಡರಗಿ (ಗದಗ): ಬಗರ್ ಹುಕುಂ ಜಮೀನಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕಂದಕ ತೆಗೆಯಲು ಮುಂದಾದಾಗ ಸಾಗುವಳಿದಾರರು ಹಾಗೂ ರೈತರ ಮಧ್ಯೆ ವಾಗ್ವಾದ ನಡೆದು, ಇಬ್ಬರು ರೈತ ಮಹಿಳೆಯರು ಅಧಿಕಾರಿಗಳ ಎದುರೇ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಈ ಪೈಕಿ ನಿರ್ಮಲಾ ಪಾಟೀಲ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕೆಲೂರ ಗ್ರಾಮದಲ್ಲಿ ಸೋಮವಾರ ಘಟನೆ ನಡೆದಿದ್ದು ನಿರ್ಮಲಾ ಪಾಟೀಲ ಹಾಗೂ ಸರೋಜಮ್ಮ ಪಾಟೀಲ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣವೇ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಪರಿಸ್ಥಿತಿ ಗಂಭೀರವಾಗಿದ್ದ ನಿರ್ಮಲಾ ಅವರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

'ರೈತರು ಸಾಗುವಳಿ ಮಾಡುತ್ತಿರುವ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಅಲ್ಲಿ ಸಾಗುವಳಿ ಮಾಡಲು ಅವಕಾಶವಿಲ್ಲ. ಈ ಕಾರಣದಿಂದ ಅಲ್ಲಿ ಕಂದಕ ತೆಗೆಯಲು ಕ್ರಮ ಕೈಗೊಳ್ಳಲಾಗಿದೆ' ಎಂದು ಆರ್‌ಎಫ್‌ಒ ಪ್ರದೀಪ ಪವಾರ ತಿಳಿಸಿದ್ದಾರೆ.

ಸಂಭ್ರಮದ ರಥೋತ್ಸವ ಯಾದಗಿರಿ ತಾಲ್ಲೂಕಿನ ಅಬ್ಬೆತುಮಕೂರು ವಿಶ್ವಾರಾಧ್ಯ ಮಠದ ಸಿದ್ಧಿಪುರುಷ ವಿಶ್ವಾರಾಧ್ಯರ ಭವ್ಯ ರಥೋತ್ಸವ ಸೋಮವಾರ ಸಂಜೆ ನೆರವೇರಿತು
ಪ್ರಜಾವಾಣಿ ಚಿತ್ರ/ರಾಜಕುಮಾರ ನಳ್ಳಿಕರ

35 ತಂಡಗಳಲ್ಲಿ 600 ಮಂದಿಯಿಂದ ಶ್ರಮದಾನ

ಚಾರ್ಮಾಡಿ ರಸ್ತೆ: ತ್ಯಾಜ್ಯ ವಿಲೇವಾರಿ

ಪ್ರಜಾವಾಣಿ ವಾರ್ತೆ

ಮೂಡಿಗೆರೆ ತಾಲ್ಲೂಕಿನ ಹ್ಯಾಂಡ್ ಪೋಸ್ಟ್ ಬಳಿ ಹೆದ್ದಾರಿ ಬದಿ ಬಿದ್ದಿದ್ದ ಪ್ಲಾಸ್ಟಿಕ್, ತ್ಯಾಜ್ಯವನ್ನು ಶಾಸಕ ಎಂ.ಪಿ.ಕುಮಾರಸ್ವಾಮಿ ಹೆಕ್ಕಿ ಚೀಲಕ್ಕೆ ಹಾಕಿದರು.

ಚಿಕ್ಕಮಗಳೂರು/ಮೂಡಿಗೆರೆ: ಶಿವರಾತ್ರಿ ಆಚರಣೆಗೆ ಧರ್ಮಸ್ಥಳಕ್ಕೆ ತೆರಳಿದ್ದ ಪಾದಯಾತ್ರಿಗಳು, ನಗರ ಹಾಗೂ ಚಾರ್ಮಾಡಿ ಘಾಟ್ ರಸ್ತೆಯ ಇಕ್ಕೆಲದಲ್ಲಿ ಬಿಸಾಡಿದ್ದ ಪ್ಲಾಸ್ಟಿಕ್, ತ್ಯಾಜ್ಯವನ್ನು ಸಂಗ್ರಹಿಸಿ, ತೆರವುಗೊಳಿಸಲಾಯಿತು.

ಜಿಲ್ಲಾ ಪಂಚಾಯಿತಿ, ಅರಣ್ಯ ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿ, ಸಂಘಟನೆಗಳು, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಸ್ವಯಂ ಸೇವಕರು ಸೋಮವಾರ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 2 ಗಂಟೆವರೆಗೆ ಶ್ರಮದಾನ ಮಾಡಿ ಸ್ವಚ್ಛತಾ ಕಾರ್ಯ ನಿರ್ವಹಿಸಿದರು.

ವರದಿ ಪರಿಣಾಮ

ಶಾಸಕ ಎಂ.ಪಿ. ಕುಮಾರಸ್ವಾಮಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ಪಾಲ್ಗೊಂಡಿದ್ದರು. 35 ತಂಡಗಳಲ್ಲಿ 600ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಚಿಕ್ಕಮಗಳೂರು ತಾಲ್ಲೂಕು ಮೂಗ್ತಿಹಳ್ಳಿಯಿಂದ ಹೆಸ್ಗಲ್‌ವರೆಗೆ ಕೆಲ ತಂಡಗಳು, ಮೂಡಿಗೆರೆಯಿಂದ ಚಾರ್ಮಾಡಿ ಘಾಟ್ ಮಾರ್ಗದಲ್ಲಿ ಚಿಕ್ಕಮಗಳೂರು ಜಿಲ್ಲಾ ಸರಹದ್ದಿನವರೆಗೆ ಕೆಲ ತಂಡಗಳು ಪ್ಲಾಸ್ಟಿಕ್ ಖಾಲಿ ಬಾಟಲಿಗಳು, ಪ್ಲೇಟ್, ಲೋಟ, ಪೊಟ್ಟಣ ಸೇರಿ ತ್ಯಾಜ್ಯಗಳನ್ನು ಚೀಲಗಳಲ್ಲಿ ಸಂಗ್ರಹಿಸಿ ಸ್ವಚ್ಛತಾ ವಾಹಿನಿ ವಾಹನಗಳಿಗೆ ತುಂಬಿದರು. ರಸ್ತೆ ಬದಿ ಅರಣ್ಯದಲ್ಲಿ ಬಿಸಾಕಿದ್ದ ಪ್ಲಾಸ್ಟಿಕ್, ತ್ಯಾಜ್ಯವನ್ನೂ ಹೆಕ್ಕಿದರು.

'35 ಲೋಡ್ ತ್ಯಾಜ್ಯ ವಿಲೇವಾರಿ ಮಾಡಲಾಯಿತು. ಮುಂದಿನ ಬಾರಿ ಮುಂಜಾಗ್ರತೆ ವಹಿಸಲಿದ್ದು, ಪಾದಯಾತ್ರಿಗಳಲ್ಲಿ ಜಾಗೃತಿ ಮೂಡಿಸಲಾಗುವುದು. ಈ ರೀತಿ ಆಗದಂತೆ ನಿಗಾ ವಹಿಸುತ್ತೇವೆ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಜಿ.ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಜಾವಾಣಿ' ವರದಿ ಪರಿಣಾಮ: ಧರ್ಮಸ್ಥಳಕ್ಕೆ ಪಾದಯಾತ್ರೆ ನಡೆಸುವ ಭಕ್ತರು ಚಾರ್ಮಾಡಿ ರಸ್ತೆಯ ಬದಿಗಳಲ್ಲಿ ಪ್ಲಾಸ್ಟಿಕ್, ತ್ಯಾಜ್ಯ ಎಸೆದಿರುವ ಕುರಿತು 'ಪ್ರಜಾವಾಣಿ'ಯಲ್ಲಿ ಮಾರ್ಚ್ 1ರಂದು ವರದಿ ಪ್ರಕಟವಾಗಿತ್ತು. ವರದಿಗೆ ಸ್ಪಂದಿಸಿ ಜಿಲ್ಲಾಡಳಿತ ಸ್ವಚ್ಛತೆಗೆ ಕ್ರಮವಹಿಸಿದೆ.

ದಿವಾಳಿಯತ್ತ ರಾಜ್ಯ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ

‘ಡಬಲ್ ಎಂಜಿನ್ ಅಲ್ಲ, ಡಬ್ಬಾ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಬಲ್ ಎಂಜಿನ್ ಸರ್ಕಾರ ಬಂದರೆ ರಾಜ್ಯವನ್ನು ಸ್ವರ್ಗವನ್ನಾಗಿ ಮಾಡುತ್ತೇವೆ ಎಂದು ಬಿಜೆಪಿಯವರು ಹೇಳಿಕೊಂಡಿದ್ದರು. ಅವರ ಕಾಲದಲ್ಲಿ ರಾಜ್ಯ ದಿವಾಳಿಯತ್ತ ಸಾಗಿದೆ. ಇಲ್ಲಿರುವುದು ಡಬಲ್ ಎಂಜಿನ್ ಸರ್ಕಾರವಲ್ಲ, ಡಬ್ಬಾ ಸರ್ಕಾರ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಸೋಮವಾರ ಪಾಲ್ಗೊಂಡು ಮಾತನಾಡಿದ ಅವರು, ‘ಬಸವರಾಜ ಬೊಮ್ಮಾಯಿ ಬಜೆಟ್ ಬಗ್ಗೆ ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆ. ಆದರೆ, ಎಲ್ಲ ನಿರೀಕ್ಷೆಗಳು ಹುಸಿಯಾಗಿವೆ. ಆರ್‌ಎಸ್‌ಎಸ್ ಹಿನ್ನೆಲೆಯವರು ಯಾರಾದರೂ ಇಂಥಾ ಬಜೆಟ್ ಮಂಡಿಸಿದ್ದರೆ ನನಗೇನೂ ಬೇಸರ ಆಗುತ್ತಾ ಇರಲಿಲ್ಲ. 2008ರ ವರೆಗೆ ಆರ್‌ಎಸ್‌ಎಸ್, ಬಿಜೆಪಿ ಸಂಪರ್ಕವೇ ಹೊಂದಿರದ ಬೊಮ್ಮಾಯಿ ಇಂಥಾ ಬಜೆಟ್ ಮಂಡನೆ ಮಾಡುತ್ತಾರೆಂಬ ನಿರೀಕ್ಷೆ ಮಾಡಿರಲಿಲ್ಲ. ಎಸ್.ಆರ್ ಬೊಮ್ಮಾಯಿ ಅವರ ಪ್ರಭಾವ ಮಗನ ಮೇಲಿದೆ ಎಂದು ನಂಬಿದ್ದೆ. ಆದರೆ, ತಂದೆಯ ಪ್ರಭಾವಕ್ಕಿಂತ ಆರ್‌ಎಸ್‌ಎಸ್ ಪ್ರಭಾವವೇ ಹೆಚ್ಚು ಬೀರಿದಂತೆ ಇದೆ’ ಎಂದರು.

ಆಗ ಕಂದಾಯ ಸಚಿವ ಆರ್.ಅಶೋಕ, ‘ಬೊಮ್ಮಾಯಿ ಅವರು ನಮಗಿಂತಲೂ ಹೆಚ್ಚು ಆರ್‌ಎಸ್‌ಎಸ್ ಆಗಿದ್ದಾರೆ ಈಗ. ಅದಕ್ಕೆ ಹೆಮ್ಮೆಯಾಗುತ್ತಿದೆ’ ಎಂದರು.

ಸಿದ್ದರಾಮಯ್ಯ, ‘ನೀವು ಸೇರಿದಂತೆ ಆರ್‌ಎಸ್‌ಎಸ್ ಮೂಲದವರು ಮುಖ್ಯಮಂತ್ರಿಯಾಗಲಿಲ್ಲವಲ್ಲ’ ಎಂದರು.

ಅಶೋಕ, ‘ಜೆಡಿಎಸ್‌ನಿಂದ ಬಂದ ನೀವು ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಗಲಿಲ್ಲವೇ’ ಎಂದು ಪ್ರಶ್ನಿಸಿದರು. ಅದಕ್ಕೆ ಸಿದ್ದರಾಮಯ್ಯ ಉತ್ತರ ನೀಡಲಿಲ್ಲ.

ಮೂರೇ ವರ್ಷಗಳಲ್ಲಿ 2.64 ಲಕ್ಷ ಕೋಟಿ ಸಾಲ: ‘2022-23 ನೇ ಸಾಲಿನಲ್ಲಿ ರಾಜಸ್ವ ಕೊರತೆ ₹14,699 ಕೋಟಿ. ರಾಜ್ಯದಲ್ಲಿ ವಿತ್ತೀಯ ಹೊಣೆಗಾರಿಕೆ ಕಾಯ್ದೆ ಅನುಮೋದನೆ ಆಗಿದ್ದು 2003ರಲ್ಲಿ. ಅದರ ಪ್ರಕಾರ 2006 ರ ಮಾರ್ಚ್ ವೇಳೆಗೆ, ವಿತ್ತೀಯ ಕೊರತೆ ಶೇ 3ಕ್ಕಿಂತ ಕಡಿಮೆ ಇರಬೇಕು, ರಾಜಸ್ವ ಉಳಿಕೆ ಇರಬೇಕು ಮತ್ತು ರಾಜ್ಯದ ಸಾಲ ಜಿಎಸ್‌ಡಿಪಿಯ (ಒಟ್ಟು ಆಂತರಿಕ ಉತ್ಪನ್ನ) ಶೇ 25 ಅನ್ನು ಮೀರುವಂತಿಲ್ಲ ಎಂದು ಹೇಳಲಾಗಿತ್ತು. ಈ ಕಾಯ್ದೆ ಜಾರಿಯಾದ ನಂತರ ನಾನು ಎಂಟು ಬಜೆಟ್‌ಗಳನ್ನು ಮಂಡಿಸಿದ್ದೇನೆ. ಎಲ್ಲ ಬಜೆಟ್‌ನಲ್ಲಿ ಆರ್ಥಿಕ ಶಿಸ್ತನ್ನು ಪಾಲನೆ ಮಾಡಿದ್ದೆ. ಇದೀಗ, ರಾಜಸ್ವ ಕೊರತೆಯ ಬಜೆಟ್ ಮಂಡಿಸಿದ್ದಾರೆ. ಈ ಕೊರತೆ ಹಣವನ್ನು ಸಾಲದ ಮೂಲಕ ತೀರಿಸಬೇಕು. ಅಂದರೆ ಇದು ಸಾಲ ಮಾಡಿ ಹೋಳಿಗೆ ತಿಂದಂತೆ’ ಎಂದು ವ್ಯಂಗ್ಯವಾಡಿದರು.

‘2018ರಲ್ಲಿ ರಾಜ್ಯದ ಒಟ್ಟು ಸಾಲ ₹2.42 ಲಕ್ಷ ಕೋಟಿ ಇತ್ತು. ಮುಂದಿನ ವರ್ಷದ ಮಾರ್ಚ್ ವೇಳೆಗೆ ರಾಜ್ಯದ ಒಟ್ಟು ಸಾಲ ₹5,18,366 ಕೋಟಿಗೆ ಏರಲಿದೆ. ಕಳೆದ ಮೂರು ವರ್ಷಗಳಲ್ಲೇ ₹2,64,368 ಕೋಟಿ ಸಾಲ ಮಾಡಲಾಗಿದೆ. ಈ ಸಾಲಕ್ಕೆ ಬಡ್ಡಿ ರೂಪದಲ್ಲೇ ಈ ವರ್ಷ ₹27 ಸಾವಿರ ಕೋಟಿ ಪಾವತಿಸಬೇಕಿದೆ. ಮುಂದಿನ ವರ್ಷ ಇದು ₹29,397 ಕೋಟಿ ಆಗಲಿದೆ. ಜೊತೆಗೆ ವರ್ಷಕ್ಕೆ ₹14 ಸಾವಿರ ಕೋಟಿ ಅಸಲು ಪಾವತಿಸಬೇಕು. ವರ್ಷವೊಂದಕ್ಕೆ ಅಸಲು ಮತ್ತು ಬಡ್ಡಿ ರೂಪದಲ್ಲಿ ₹43 ಸಾವಿರ ಕೋಟಿ ಪಾವತಿಸಬೇಕು. ಇದೇ ರೀತಿ ಮುಂದುವರಿದರೆ 2025-26 ನೇ ಸಾಲಿಗೆ ಬಡ್ಡಿ ರೂಪದಲ್ಲೇ ₹42,789 ಕೋಟಿ ಪಾವತಿಸಬೇಕಿದೆ’ ಎಂದರು.

‘ಕಳೆದ ಬಾರಿ ರಾಜ್ಯ ಸರ್ಕಾರದ ಬದ್ಧತಾ ವೆಚ್ಚ ಶೇ 102 ಇತ್ತು. ಬದ್ಧತಾ ವೆಚ್ಚ ಹೆಚ್ಚಾಗಿದ್ದಕ್ಕೆ ನಾನು ಟೀಕಿಸಿದ್ದೆ. ಹಾಗಾಗಿ ಈ ಬಾರಿ ಯೋಜನೆ ಆಧಾರಿತ ಬದ್ಧ ವೆಚ್ಚ ಮತ್ತು ಯೋಜನೆ ಆಧಾರಿತವಲ್ಲದ ಬದ್ಧ ವೆಚ್ಚ ಎಂದು ವಿಭಾಗಿಸಿ ಲೆಕ್ಕವೇ ಸಿಗದಂತೆ ಗೊಂದಲಮಯವಾಗಿಸಿದ್ದಾರೆ. ಹಣಕಾಸು ಇಲಾಖೆಯ ಅಧಿಕಾರಿಗಳಿಗೆ ಯಾರೋ ಅರ್ಥಶಾಸ್ತ್ರಜ್ಞರು ಸಲಹೆ ನೀಡಿರಬೇಕು’ ಎಂದು ಅವರು ಹೇಳಿದರು.

‘2020-21 ರಲ್ಲಿ ಆಸ್ತಿ ಸೃಜನೆಗೆ ಖರ್ಚು ಮಾಡಿರುವ ಬಂಡವಾಳ ವೆಚ್ಚ ₹48,075 ಕೋಟಿ. 2021-22ಕ್ಕೆ ₹42,366 ಕೋಟಿಗೆ ಇಳಿದಿದೆ. ಮುಂದಿನ ವರ್ಷ ₹46,955 ಕೋಟಿ ಖರ್ಚು ಮಾಡುತ್ತೇವೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕಾರ, ಈ ವೆಚ್ಚ 2023-24ಕ್ಕೆ ₹20,729 ಕೋಟಿಗೆ ಇಳಿಯಲಿದೆ. 2024-25 ಕ್ಕೆ ₹23,776 ಕೋಟಿ, 2025-26 ಕ್ಕೆ ₹26,847 ಕೋಟಿ ಆಗಲಿದೆ. ₹70 ಸಾವಿರ ಕೋಟಿ ಸಾಲ ತೆಗೆದುಕೊಂಡು ₹20 ಸಾವಿರ ಕೋಟಿಯನ್ನು ಆಸ್ತಿ ಸೃಜನೆಗೆ ಖರ್ಚು ಮಾಡುತ್ತಾರೆ. ಹೀಗಾದರೆ, ರಾಜ್ಯ ಬೆಳವಣಿಗೆಯ ಹಾದಿಯಲ್ಲಿ ಹಿಮ್ಮುಖವಾಗಿ ಚಲಿಸುತ್ತದೋ ಅಥವಾ ಮುಂದೆ ಸಾಗುತ್ತದೋ?’ ಎಂದು ಅವರು ಪ್ರಶ್ನಿಸಿದರು.

ವಿಧಾನ ಸಭೆಯಲ್ಲಿ ಸೋಮವಾರ ಆರಂಭವಾದ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಮಾತನಾಡಿದರು

ಅಶೋಕ ಕಾಲೆಳೆದ ಸಿದ್ದರಾಮಯ್ಯ, ಬಿಎಸ್‌ವೈ

ಸಿದ್ದರಾಮಯ್ಯ ಮಾತು ಆರಂಭಿಸುತ್ತಿದ್ದಂತೆ ಸಚಿವರಾದ ಆರ್.ಅಶೋಕ, ಮುನಿರತ್ನ ಅವರು ಮುಖ್ಯಮಂತ್ರಿ ಅವರ ಹಿಂದಿನ ಸಾಲಿನಲ್ಲಿ ಸುತ್ತಾಡುತ್ತಿದ್ದರು. ಆಗ ಸಿದ್ದರಾಮಯ್ಯ, ‘ಏಯ್ ಅಶೋಕ, ನೀವು ಹೀಗೆ ಸುತ್ತಾಡಿದರೆ ಮಾತನಾಡಲು ಕಷ್ಟ ಆಗುತ್ತದೆ. ನಿಮ್ಮ ಜಾಗದಲ್ಲಿ ಕುಳಿತುಕೊಳ್ಳಿ’ ಎಂದರು. ಅಶೋಕ, ‘ನಾನು ನೀರು ಕುಡಿಯಲು ಹೊರಟಿದ್ದೆ’ ಎಂದು ಸಮಜಾಯಿಷಿ ನೀಡಿದರು. ಸಚಿವರಿಗೆ ಅಲ್ಲಿಗೇ ನೀರು ತಂದುಕೊಡಿ ಎಂದು ಸಿದ್ದರಾಮಯ್ಯ ಸೂಚಿಸಿದರು. ಅಶೋಕ ತಮ್ಮ ಜಾಗದಲ್ಲಿ ಕುಳಿತರು. ಬಿಜೆಪಿಯ ಬಿ.ಎಸ್.ಯಡಿಯೂರಪ್ಪ, ‘ಅಶೋಕ ಹೊರಟಿದ್ದು ನೀರು ಕುಡಿಯಲು ಅಲ್ಲ’ ಎಂದು ಕಾಲೆಳೆದರು. ‘ಅದು ನನಗೂ ಗೊತ್ತು’ ಎಂದು ಸಿದ್ದರಾಮಯ್ಯ ಹೇಳಿದಾಗ ಸದನದಲ್ಲಿ ನಗುವಿನ ಅಲೆ ಎದ್ದಿತು.

ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಜ್ಯದ ಪಾಲು (ಮೊತ್ತ ₹ಕೋಟಿಗಳಲ್ಲಿ)

ವರ್ಷ	ರಾಜ್ಯ ಪಾಲು	ಕೇಂದ್ರ ಪಾಲು	ರಾಜ್ಯದ ಪಾಲು (ಶೇ)
2012-13	4,708	12,617	27
2013-14	4,079	12,231	25
2014-15	8,206	12,219	40
2015-16	11,424	13,928	38
2016-17	13,623	15,703	46
2018-19	19,225	14,727	57
2019-20	18,228	19,989	41
2020-21	20,020	16,286	55
2021-22	16,639	16,668	49.95

ಸಾಲ ಪ್ರಮಾಣ ಹೆಚ್ಚಳ (₹ಕೋಟಿಗಳಲ್ಲಿ)

ವರ್ಷ	ಜಿಎಸ್‌ಡಿಪಿ	ಸಾಲ	ಶೇ
2010-11	3,88,891	6714	1.8
2011-12	4,34,270	9,358	2.2
2012-13	5,20,766	13,465	2.6
2013-14	6,01,666	17,289	2.9
2014-15	6,85,207	21,875	3.2
2015-16	7,35,975	21,072	2.9
2016-17	11,77,334	31,156	2.8
2017-18	13,10,879	25,122	1.9
2018-19	14,08,112	41,914	3
2019-20	16,98,685	50,459	3
2020-21	18,03,609	72,121	4

ಬಿಟ್ ಕಾಯಿನ್ ಅಕ್ರಮ: ಸಿಬಿಐ ತನಿಖೆಗೆ ನಕಾರ

ಪ್ರಜಾವಾಣಿ ವಾರ್ತೆ

ಹರಿಪ್ರಸಾದ್

ಆರಗ ಜ್ಞಾನೇಂದ್ರ

ಬೆಂಗಳೂರು: ಬಿಟ್ ಕಾಯಿನ್ ಹ್ಯಾಕಿಂಗ್ ಅಕ್ರಮಗಳಿಗೆ ಸಂಬಂಧಿಸಿದ ಎಲ್ಲ ಪ್ರಕರಣಗಳ ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕೆಂಬ ಕಾಂಗ್ರೆಸ್ ಬೇಡಿಕೆಯನ್ನು ತಳ್ಳಿಹಾಕಿದ ಗೃಹ ಸಚಿವವ ಆರಗ ಜ್ಞಾನೇಂದ್ರ, ‘ರಾಜ್ಯ ಪೊಲೀಸರೇ ತನಿಖೆಯನ್ನು ಮುಂದುವರಿಸುತ್ತಾರೆ’ ಎಂದು ಪ್ರಕಟಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, ‘ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣ ರಾಜ್ಯದಿಂದ ಅಂತರರಾಷ್ಟ್ರೀಯ ಮಟ್ಟದವರೆಗೆ ವ್ಯಾಪಿಸಿದೆ. ಬೆಂಗಳೂರು ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲ. ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ರಾಜ್ಯ ಸರ್ಕಾರದ ಇ-ಸಂಗ್ರಹಣಾ ಪೋರ್ಟಲ್ ಹ್ಯಾಕ್ ಮಾಡಿ ಲಪಟಾಯಿಸಿದ್ದ ₹ 11.5 ಕೋಟಿಯನ್ನೂ ವಸೂಲಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ’ ಎಂದು ದೂರಿದರು.

‘ಅಮೆರಿಕದ ತನಿಖಾ ಸಂಸ್ಥೆ ಎಫ್‌ಬಿಐ ಕೂಡ ಇದೇ ಪ್ರಕರಣದ ಕುರಿತು ತನಿಖೆ ನಡೆಸುತ್ತಿದೆ. ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು, ಪ್ರಭಾವಿ ರಾಜಕಾರಣಿಗಳು ಅಕ್ರಮದಲ್ಲಿ ಶಾಮೀಲಾಗಿದ್ದಾರೆ. ಪ್ರಕರಣವನ್ನು ಸಿಬಿಐ, ಜಾರಿ ನಿರ್ದೇಶನಾಲಯಕ್ಕೆ ವರ್ಗಾಯಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಯಾವ ಪ್ರಗತಿ ಆಗಿದೆ.’ ಎಂದು ಕೇಳಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, ‘ಹ್ಯಾಕರ್ ಶ್ರೀಕೃಷ್ಣ ಐಷಾರಾಮಿ ಜೀವನ ನಡೆಸುತ್ತಿದ್ದಾನೆ. ಈ ಹಗರಣದಲ್ಲಿ ಐಪಿಎಸ್ ಅಧಿಕಾರಿಗಳು, ದೊಡ್ಡ ರಾಜಕಾರಣಿಗಳ ಪಾತ್ರವಿದೆ. ಇಲ್ಲಿನ ಪೊಲೀಸರಿಗೆ ತನಿಖೆ ಕಷ್ಟ ಆಗಬಹುದು. ಸಿಬಿಐಗೆ ತನಿಖೆಯ ಹೊಣೆ ಒಪ್ಪಿಸಿ’ ಎಂದು ಆಗ್ರಹಿಸಿದರು.

‘ಈ ಪ್ರಕರಣದಲ್ಲಿ ಸರ್ಕಾರದ ಬಗ್ಗೆಯೇ ಸಂಶಯ ಮೂಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದ ಹ್ಯಾಕರ್‌ಗಳು ಭಾಗಿಯಾದ ಮಾಹಿತಿ ಇದ್ದರೂ ಉನ್ನತಮಟ್ಟದ ತನಿಖೆಗೆ ಹಿಂದೇಟು ಏಕೆ’ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನಿಸಿದರು.

‘ತಮ್ಮ ಬಳಿ ದಾಖಲೆಗಳಿವೆ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಮಾಹಿತಿ ಮುಚ್ಚಿಡುವುದು ಕೂಡ ಅಪರಾಧ. ಅವರಲ್ಲಿರುವ ದಾಖಲೆಗಳನ್ನು ಸಭಾಪತಿಯವರ ಮೂಲಕ ವಶಕ್ಕೆ ಪಡೆದು ತನಿಖೆ ನಡೆಸಿ’ ಎಂದು ಬಿಜೆಪಿಯ ಆಯನೂರು ಮಂಜುನಾಥ ಸಲಹೆ ನೀಡಿದರು.

ದಾಖಲೆ ಕೊಟ್ಟರೆ ತನಿಖೆಗೆ ಸಿದ್ಧ: ಉತ್ತರ ನೀಡಿದ ಗೃಹ ಸಚಿವರು, ‘ಶ್ರೀಕೃಷ್ಣನ ತಪ್ಪೊಪ್ಪಿಗೆ ಹೇಳಿಕೆ ಆಧಾರದಲ್ಲಿ ಇಂಟರ್‌ಪೋಲ್ ಘಟಕಕ್ಕೆ ಮೂರು ಬಾರಿ ಪತ್ರ ಬರೆಯಲಾಗಿತ್ತು. ಅವರಿಂದ ಯಾವ ಪ್ರತಿಕ್ರಿಯೆಯೂ ಬಂದಿಲ್ಲ. ಬಿಟ್ ಕಾಯಿನ್ ಹ್ಯಾಕಿಂಗ್ ಮತ್ತು ಬಿಟ್ ಕಾಯಿನ್ ನೀಡುವ ನೆಪದಲ್ಲಿ ಹಣ ಪಡೆದು ವಂಚಿಸಿದ ಆರೋಪದಲ್ಲಿ 11 ಪ್ರಕರಣಗಳಿವೆ. ಎಲ್ಲವನ್ನೂ ನಮ್ಮ ಪೊಲೀಸರೇ ತನಿಖೆ ನಡೆಸುತ್ತಾರೆ’ ಎಂದರು.

ಈ ಪ್ರಕರಣದಲ್ಲಿ ಹಣ ಕಳೆದುಕೊಂಡಿರುವವರ ಯಾರೊಬ್ಬರೂ ದೂರು ಕೊಟ್ಟಿಲ್ಲ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರ ಬಳಿ ದಾಖಲೆಗಳಿದ್ದರೆ ಕೊಡಲಿ. ಅವುಗಳ ಆಧಾರದಲ್ಲಿ ತನಿಖೆಗೆ ಸಿದ್ಧ ಎಂದು ಪ್ರಕಟಿಸಿದರು.

‘10 ಟಿಎಂಸಿ ಅಡಿ ನೀರು ಬಳಕೆಗೆ ಅವಕಾಶ’

ಎತ್ತಿನಹೊಳೆ ಯೋಜನೆ: ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿಕೆ

ಪ್ರಜಾವಾಣಿ ವಾರ್ತೆ

ಗೋವಿಂದ ಕಾರಜೋಳ

ಬೆಂಗಳೂರು: ‘ಎತ್ತಿನಹೊಳೆ ಯೋಜನೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬೈರಗೊಂಡ್ಲು ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ 2 ಟಿಎಂಸಿ ಅಡಿ ಆಗಿದ್ದರೂ, ಅತ್ಯಾಧುನಿಕ ತಂತ್ರಜ್ಞಾನ ಬಳಸಿ 10 ಟಿಎಂಸಿ ಅಡಿ ನೀರು ಬಳಕೆಗೆ ಅವಕಾಶ ಮಾಡಲಾಗುವುದು’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ರಾಜೇಂದ್ರ ರಾಜಣ್ಣ ಪ್ರಸ್ತಾಪಿಸಿದ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ‘ಉದ್ದೇಶಿತ ಯೋಜನೆಯಿಂದ ರಾಮನಗರ, ಕೋಲಾರ, ಚಿಕ್ಕಮಗಳೂರು, ಹಾಸನ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಸೇರಿ ಏಳು ಜಿಲ್ಲೆಗಳಿಗೆ ಅನುಕೂಲವಾಗಲಿದೆ. ಬೈರಗೊಂಡ್ಲು ಜಲಾಶಯದಲ್ಲಿ ಸಂಗ್ರಹ ಪ್ರಮಾಣ ಕಡಿಮೆಯಿದ್ದರೂ ಬಳಕೆ ಪ್ರಮಾಣ ಹೆಚ್ಚಿಸಲು ಎಂಜಿನಿಯರ್‌ಗಳು, ತಂತ್ರಜ್ಞರು ನೀಲನಕ್ಷೆ ಸಿದ್ಧಪಡಿಸಿದ್ದಾರೆ’ ಎಂದರು.

‘ಎತ್ತಿನಹೊಳೆ ಯೋಜನೆ ಸ್ಥಗಿತವಾಗಲಿದೆ ಎಂದು ಆತಂಕಪಡುವ ಅಗತ್ಯವಿಲ್ಲ. ಯೋಜನೆ ಜಾರಿಗೆ ಸರ್ಕಾರ ಬದ್ಧವಾಗಿದೆ. ಆದ್ದರಿಂದಲೇ 2022–23ನೇ ಸಾಲಿನ ಬಜೆಟ್‌ನಲ್ಲಿ ₹ 3 ಸಾವಿರ ಕೋಟಿ ಮೀಸಲಿಡಲಾಗಿದೆ’ ಎಂದರು.

‘ಈ ಯೋಜನೆಗೆ ರೈತರಿಗೆ ಸೇರಿದ 11,745 ಎಕರೆ, ಸರ್ಕಾರದ 992 ಎಕರೆ ಮತ್ತು 118 ಎಕರೆ ಅರಣ್ಯ ಪ್ರದೇಶ ಸೇರಿ ಸುಮಾರು 12,857 ಎಕರೆ ಭೂಮಿಯ ಅವಶ್ಯ ಇದೆ. 2013ರಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಹೊಸ ಕಾಯ್ದೆ ಬಂದಿದ್ದು, ಅದರಂತೆ ಮಾರ್ಗಸೂಚಿ ದರದ ನಾಲ್ಕು ಪಟ್ಟು ಪರಿಹಾರ ಒದಗಿಸಬೇಕು. ಅಲ್ಲದೆ, ಒಂದು ಊರಿಂದ ಮತ್ತೊಂದು ಊರಿಗೆ ಮಾರ್ಗಸೂಚಿ ದರ ಬೇರೆ ಬೇರೆ ಆಗುತ್ತದೆ. ಆದರೆ, ರೈತರು ಒಂದೇ ರೀತಿಯ ಪರಿಹಾರ ಕೇಳುತ್ತಿರುವುದು ಕಗ್ಗಂಟಾಗಿದೆ. ಈಗ ಗೊಂದಲ ಪರಿಹರಿಸಲಾಗುತ್ತಿದೆ’ ಎಂದರು.

‘ಎತ್ತಿನಹೊಳೆ ಯೋಜನೆ ಕಾಮಗಾರಿಗಳಿಗೆ ಅನುದಾನವು ಲಭ್ಯವಿಲ್ಲದ ಪರಿಣಾಮ ಸಂಪೂರ್ಣ ಸ್ಥಗಿತಗೊಂಡಿದೆ. ಇದರಿಂದ ಕೋಲಾರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಜಿಲ್ಲೆಯ ಜನರಿಗೆ ತುಂಬಾ ನಿರಾಸೆ ಉಂಟಾಗಿದೆ’ ಎಂದು ರಾಜೇಂದ್ರ ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್ಸಿನ ಎಸ್. ರವಿ, ‘ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಎತ್ತಿನಹೊಳೆ ಯೋಜನೆ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ’ ಎಂದು ದೂರಿದರು.

ಅನುದಾನ ಹಾಗೂ ಬಾಕಿ ಮೊತ್ತ ಬಿಡುಗಡೆಯಾಗದೇ ಎತ್ತಿನಹೊಳೆ ಕಾಮಗಾರಿ ಸ್ಥಗಿತಗೊಂಡಿರುವ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಇತ್ತೀಚೆಗೆ ವರದಿ ಪ್ರಕಟವಾಗಿತ್ತು.

‘ನೇಣುಗಂಬ ಏರುವೆ’

‘ಎತ್ತಿನಹೊಳೆ ಯೋಜನೆ ಕೆಲವರ ಪಾಲಿಗೆ ಕಾಮಧೇನು’ ಎಂದು ಆಕ್ರೋಶ ವ್ಯಕ್ತಪಡಿಸಿದ ಜೆಡಿಎಸ್‌ನ ಭೋಜೇಗೌಡ, ‘₹ 50 ಸಾವಿರ ಕೋಟಿ ಮೀಸಲಿಟ್ಟರೂ ಈ ಯೋಜನೆ ಪೂರ್ಣಗೊಳ್ಳುವುದಿಲ್ಲ. ಯೋಜನೆ ಫಲ ನೀಡಿದರೆ ನೇಣುಗಂಬಕ್ಕೆ ಏರುತ್ತೇನೆ’ ಎಂದು ಸದನದಲ್ಲಿ ಪ್ರತಿಜ್ಞೆ ಮಾಡಿದರು.

‘ಈ ಯೋಜನೆಯಿಂದ ಅಧಿಕಾರಿಗಳು ಹಣ ತಿನ್ನುತ್ತಿದ್ದು ಪೂರ್ಣಗೊಳಿಸುವುದಕ್ಕೆ ಸಾಧ್ಯವೇ ಇಲ್ಲ. ಯೋಜನೆ ಜಾರಿ ಮಾಡುತ್ತಿರುವ ಭಾಗಗಳಲ್ಲಿ ಮಳೆ ಪ್ರಮಾಣ ವಾಡಿಕೆಗಿಂತ ಶೇ 10ರಷ್ಟು ಕಡಿಮೆ ಆಗುತ್ತಿದೆ. ಹೀಗಾದರೆ, ನೀರು ಎಲ್ಲಿಂದ ಲಭ್ಯವಾಗುತ್ತದೆ’ ಎಂದೂ ಪ್ರಶ್ನಿಸಿದರು.

‘ಪ್ರಜಾವಾಣಿ’ ಬಯಲಿಗೆಳೆದ ಅಕ್ರಮ ಪ್ರಕರಣಗಳು

ಸರ್ಕಾರಿ ಭೂ ಕಬಳಿಕೆ: ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಭೂಮಿಯನ್ನು ಲಪಟಾಯಿಸಿರುವ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆ ಬೇಗೂರು ಹೋಬಳಿಯ ಹುಳಿಮಾವು ಮತ್ತು ಇತರ ಗ್ರಾಮಗಳಲ್ಲಿ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಅವರು ನಿಯಮ 69 ರಡಿ ಪ್ರಸ್ತಾಪಿಸಿದಾಗ, ಸರ್ಕಾರಿ ಭೂಮಿಯನ್ನು ಮರಳಿ ವಶಕ್ಕೆ ತೆಗೆದುಕೊಳ್ಳಲು ಸಮರೋಪಾದಿಯಲ್ಲಿ ಸರ್ಕಾರ ಕೆಲಸ ಮಾಡಲಿದೆ ಎಂದರು. ಈ ಅಕ್ರಮಗಳ ಕುರಿತು ‘ಪ್ರಜಾವಾಣಿ’ ಸರಣಿ ವರದಿಯನ್ನು ಪ್ರಕಟಿಸಿತ್ತು.

ಈ ವಿಶೇಷ ತನಿಖಾ ತಂಡವು ನಕಲಿ ದಾಖಲೆಗಳ ಮೂಲಕ ಭೂಕಬಳಿಕೆಯ ವಿಚಾರವನ್ನಷ್ಟೇ ಕೇಂದ್ರೀಕರಿಸಿ ತನಿಖೆ ನಡೆಸಲಿದೆ. ಈ ರೀತಿಯ ಎಲ್ಲ ಪ್ರಕರಣಗಳನ್ನು ಎಸ್‌ಐಟಿಗೆ ವರ್ಗಾಯಿಸಲಾಗುವುದು. ಇದರಲ್ಲಿ ಭಾಗಿಯಾದ ಅಧಿಕಾರಿಗಳು ಮತ್ತು ಖಾಸಗಿ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಮತ್ತು ಸರ್ಕಾರಿ ಜಮೀನು ಕಬಳಿಕೆಗೆ ಪೂರ್ಣ ವಿರಾಮ ಹಾಕಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಉಪವಿಭಾಗಾಧಿಕಾರಿ ಕೆ.ರಂಗನಾಥ್ ವಿರುದ್ಧದ ಪ್ರಕರಣ ಡಿಪಿಆರ್‌ನಲ್ಲಿದೆ. ಈ ಪ್ರಕರಣದ ಹಿಂದೆ ಯಾರೆಲ್ಲ ಇದ್ದಾರೆ, ಫಲಾನುಭವಿಗಳು ಯಾರು ಎಂಬುದನ್ನು ಪತ್ತೆ ಮಾಡಲಾಗುವುದು. ಅಲ್ಲದೆ ಕೆ. ರಂಗನಾಥ್ ಅವರನ್ನು ಅಮಾನತುಗೊಳಿಸಲಾಗುವುದು ಎಂದೂ ತಿಳಿಸಿದರು.

‘ಭೂಮಾಫಿಯಾ ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯನ್ನು ಕಡಿದು ಹಾಕುತ್ತೇವೆ. ಇಂತಹ ಅಕ್ರಮಗಳು ನಡೆದರೆ ಸಂಬಂಧಿಸಿದ ವಿಭಾಗಾಧಿಕಾರಿ ಅಥವಾ ಜಿಲ್ಲಾಧಿಕಾರಿಗಳನ್ನು ಅವರ ಹೆಸರಿನಲ್ಲೇ ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದರು.

ಭೂಮಂಜೂರಾತಿ ಮಾಡುವ ಅಧಿಕಾರಿಗಳಿಗಿರುವ ಅರೆನ್ಯಾಯಿಕ ಅಧಿಕಾರ ಉಳಿಸಬೇಕೋ ಬೇಡವೋ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಅಧಿಕಾರ ಮುಂದುವರಿಸಿದರೂ, ಮೇಲುಸ್ತುವಾರಿಯನ್ನು ಹಿರಿಯ ಅಧಿಕಾರಿಗಳಿಗೆ ನೀಡುವ ಬಗ್ಗೆಯೂ ಚಿಂತನೆ ನಡೆಸಲಾಗುವುದು. ಅಲ್ಲದೆ, ಸರ್ಕಾರಿ ಭೂಮಿ ವಿಲೇವಾರಿಗೆ ಕಠಿಣ ಮಾರ್ಗಸೂಚಿಯನ್ನೂ ರೂಪಿಸಲಾಗುವುದು ಎಂದು ಹೇಳಿದರು.

ಸರ್ಕಾರಿ ಭೂಕಬಳಿಕೆ ತಡೆದು, ಮಟ್ಟ ಹಾಕಲು ಶಾಸಕ ಎ.ಟಿ.ರಾಮಸ್ವಾಮಿ ಅವರು ಬೆನ್ನು ಬಿಡದ ಬೇತಾಳನಂತೆ ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

‘ಇವಿಷ್ಟೇ ಅಲ್ಲ, ಇನ್ನು ಯಾವುದಾದರೂ ಪ್ರಕರಣಗಳನ್ನು ಇದ್ದರೆ ಮಾಹಿತಿ ಕೊಡಿ. ಅವುಗಳ ಬಗ್ಗೆಯೂ ತನಿಖೆ ನಡೆಸಲಾಗುವುದು’ ಎಂದು ಅವರು ರಾಮಸ್ವಾಮಿ ಅವರಿಗೆ ಭರವಸೆ ನೀಡಿದರು.

ಗೃಹ ಸಚಿವರಿದ್ದಾಗ ಮಾದಕ ವಸ್ತುಗಳ ಮಾಫಿಯಾ ಮೇಲೆ ಸಮರ ಸಾರಿದ ಮಾದರಿಯಲ್ಲೇ ಈಗ ಭೂಮಾಫಿಯಾ ವಿರುದ್ಧವೂ ಸಮರ ಸಾರಬೇಕು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ ನೀಡಿದರು.

ಭೂಕಬಳಿಕೆ ಮೌಲ್ಯ ₹5 ಲಕ್ಷ ಕೋಟಿ?

ಎ.ಟಿ. ರಾಮಸ್ವಾಮಿ

ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಆ ಮೂಲಕ ಕಬಳಿಕೆ ಮಾಡಿರುವ ಸರ್ಕಾರಿ ಜಮೀನಿನ ಮೌಲ್ಯ ಸುಮಾರು ₹5 ಲಕ್ಷ ಕೋಟಿಯಷ್ಟು ಆಗಬಹುದು ಎಂದು ಜೆಡಿಎಸ್ ಶಾಸಕ ಎ.ಟಿ.ರಾಮಸ್ವಾಮಿ ಹೇಳಿದರು.

‘ಸಿದ್ಧಾಂತ, ಧರ್ಮದ ಹಾದಿಯಲ್ಲಿ ರಾಜಕಾರಣ ಮಾಡುತ್ತೇವೆ ಎನ್ನುತ್ತೀರಿ. ರಾಮರಾಜ್ಯ ಕಟ್ಟುವುದಾಗಿಯೂ ಹೇಳುತ್ತೀರಿ. ಭೂ ಕಬಳಿಕೆಯ ರಾಕ್ಷಸರ ಹಾವಳಿ ನಿಯಂತ್ರಿಸದಿದ್ದರೆ ರಾಮ ರಾಜ್ಯ ಹೇಗೆ ಕಟ್ಟುತ್ತೀರಿ’ ಎಂದು ಅವರು ಸರ್ಕಾರವನ್ನು ತಿವಿದರು.

‘ಬೇಗೂರು ಹೋಬಳಿ ಹುಳಿಮಾವು ಗ್ರಾಮ ಮತ್ತು ಇತರ ಕಡೆಗಳಲ್ಲಿ ನಡೆದಿರುವ ಸುಮಾರು 15 ಪ್ರಕರಣಗಳನ್ನು ಪ್ರಸ್ತಾಪಿಸಿದ ಅವರು, ನಕಲಿ ದಾಖಲೆಗಳ ಮೂಲಕ ಸರ್ಕಾರಿ ಜಮೀನು ಕಬಳಿಕೆ ಮಾಡುತ್ತಿರುವುದನ್ನು ನೋಡಿಕೊಂಡು ಸರ್ಕಾರ ಸುಮ್ಮನೆ ಕುಳಿತಿದೆ. ಕಂದಾಯ ಇಲಾಖೆಯ ಹಿಂದಿನ ಪ್ರಧಾನ ಕಾರ್ಯದರ್ಶಿಯವರು ನೀಡಿದ ವರದಿ ಮೇಲೂ ಕ್ರಮ ಆಗಿಲ್ಲ. ಈ ಅಕ್ರಮ ದಂಧೆ ಭೂಮಿಯ ಮೇಲೆ ನಡೆಯುತ್ತಿರುವ ಅತ್ಯಾಚಾರ, ಅನಾಚಾರ. ಇವೆಲ್ಲ ನೋಡಿದರೆ ಮನಸ್ಸು ಕುದಿಯುತ್ತದೆ’ ಎಂದರು.

ಬೆತ್ತಲೆಯಾಗಿ ಓಡಾಡುವವರ ಈ ಜಗತ್ತಿನಲ್ಲಿ ನಾವು ಕೌಪೀನ ತೊಟ್ಟು ಓಡಾಡುವುದನ್ನು ನೋಡಿ ಅವರೆಲ್ಲ ನಗುತ್ತಾರೆ. ಹಾಗೆಂದು ಅನ್ಯಾಯ ನೋಡಿ ಸುಮ್ಮನೆ ಕೂರಲು ಆಗಲ್ಲ

ಕೆ.ಆರ್.ರಮೇಶ್ ಕುಮಾರ್, ಕಾಂಗ್ರೆಸ್ ಶಾಸಕ

ನಕಲಿ ದಾಖಲೆಗಳ ಮೂಲಕ ಭೂಕಬಳಿಕೆಗೆ ಅವಕಾಶ ನೀಡಿ ಭಾರತ್ ಮಾತಾ ಕೀ ಜೈ ಎಂದು ಹೇಳಲು ಯಾವ ಅಧಿಕಾರವಿದೆ? ಬಲಾಢ್ಯರು ಸರ್ಕಾರವನ್ನು ನಿಯಂತ್ರಣ ಮಾಡುತ್ತಿದ್ದಾರೆ

ಎ.ಟಿ.ರಾಮಸ್ವಾಮಿ, ಜೆಡಿಎಸ್ ಶಾಸಕ

ಬೊಮ್ಮಾಯಿ, ಸಿದ್ದರಾಮಯ್ಯ ಸವಾಲು–ಜವಾಬು

2023ಕ್ಕೆ ಮಾರಿ ಹಬ್ಬ ಇದೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2023 ಕ್ಕೆ ಮಾರಿ ಹಬ್ಬ ಇದೆ, ಸವಾಲು ಎದುರಿಸಲು ಸಿದ್ಧರಾಗಿ’.

ಹೀಗೆ ಪರಸ್ಪರ ಸವಾಲು ಹಾಕಿಕೊಂಡಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ವಿಧಾನಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಸಿದ್ದರಾಮಯ್ಯ ಮತ್ತು ಸಚಿವ ಈಶ್ವರಪ್ಪ ನಡುವಿನ ಸ್ವಾರಸ್ಯಕರ ಚರ್ಚೆ ಪರಸ್ಪರ ಸವಾಲಿಗೂ ಕಾರಣವಾಯಿತು.

‘2013 ರ ಚುನಾವಣೆಯ ವೇಳೆ ನಾವು ನೀಡಿದ್ದ 165 ಭರವಸೆಗಳಲ್ಲಿ ಶೇ 99 ರಷ್ಟು ಈಡೇರಿಸಿದ್ದೇವೆ. ನೀವು 2018 ರಲ್ಲಿ ನೀಡಿದ್ದ ಭರವಸೆಯಲ್ಲಿ ಎಷ್ಟು ಈಡೇರಿಸಿದ್ದೀರಿ ಎಂಬುದನ್ನು ಹೇಳಿ’ ಎಂದು ಸಿದ್ದರಾಮಯ್ಯ ಅವರು ಸಚಿವ ಕೆ.ಎಸ್.ಈಶ್ವರಪ್ಪ ಅವರಿಗೆ ಸವಾಲೆಸೆದರು.

‘ನೀವೇನು ಈಡೇರಿಸಿದ್ದೀರಿ ಎಂಬ ಪಟ್ಟಿ ಕೊಡಿ. ನೀವು ಎಲ್ಲವೂ ಈಡೇರಿಸಿದ್ದರೆ ಜನ ನಿಮ್ಮನ್ನು ಏಕೆ ಸೋಲಿಸುತ್ತಿದ್ದರು’ ಎಂದು ಈಶ್ವರಪ್ಪ ಪ್ರಶ್ನಿಸಿದರು. ‘ನಿಮ್ಮ ಪ್ರಣಾಳಿಕೆಯನ್ನು ತನ್ನಿ, ನಮ್ಮದೂ ತರುತ್ತೇವೆ. ಏನೇನು ಈಡೇರಿವೆ ಎಂಬುದರ ಬಗ್ಗೆ ಒಂದೇ ವೇದಿಕೆಯಲ್ಲಿ ಬಹಿರಂಗ ಚರ್ಚೆ ನಡೆಸೋಣ’ ಎಂದು ಸಿದ್ದರಾಮಯ್ಯ ಸವಾಲೆಸೆದರು.

ಆಗ ಮಧ್ಯ ಪ್ರವೇಶಿಸಿದ ಬೊಮ್ಮಾಯಿ, ‘ಪ್ರಣಾಳಿಕೆಯಲ್ಲಿ ಎಷ್ಟು ಈಡೇರಿಸಿದ್ದೀರಿ ಎಂಬುದು ಮುಖ್ಯವಲ್ಲ. ಕಾರ್ಯಕ್ರಮಗಳು ಜನರಿಗೆ ತಲುಪಿದೆಯೇ ಇಲ್ಲವೇ ಎಂಬುದು ಮುಖ್ಯ. ಜನರು ನೀಡುವ ತೀರ್ಪು ಅಂತಿಮ. ನಿಮ್ಮ ಕಾರ್ಯಕ್ರಮಗಳು ಜನರಿಗೆ ತಲುಪದ ಕಾರಣ ನೀವು ಚುನಾವಣೆಯಲ್ಲಿ ಗೆಲ್ಲಲಿಲ್ಲ. ನಾವು ಈ ಬಾರಿ ಬಜೆಟ್‌ನಲ್ಲಿ ಪ್ರಕಟಿಸಿದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುತ್ತೇವೆ. 2023 ರ ಚುನಾವಣೆಯಲ್ಲಿ ಮಾರಿ ಹಬ್ಬ ಯಾರಿಗೆ ಕಾದಿದೆ ಎಂಬುದು ಗೊತ್ತಾಗುತ್ತದೆ’ ಎಂದರು.

‘ನಿಮ್ಮ ಸವಾಲು ಎದುರಿಸಲು ಸಿದ್ಧರಿದ್ದೇವೆ. 2023 ರ ಚುನಾವಣೆಯಲ್ಲಿ ಮಾರಿ ಹಬ್ಬ ನಿಮಗೆ ಕಾದಿದೆ. ನಿಮ್ಮನ್ನು ಎದುರಿಸಲು ಸದಾ ಸಿದ್ಧರಿದ್ದೇವೆ. ನಾವು ಒಗ್ಗಟ್ಟಿನಿಂದ ನಿಮ್ಮನ್ನು ದೂಳೀಪಟ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ಅವರು ಹೇಳಿದರು.

‘ಫೋಟೊ ಹಾಕಬೇಕು ಅಂತ ಏನಿಲ್ಲ’

‘ನನ್ನ ಫೋಟೊ ಹಾಕಬೇಕು ಅಂತ ಏನಿಲ್ಲ. ನಾನ್ಯಾರು ಅನ್ನುವುದು ಜನರಿಗೆ ಗೊತ್ತು’ ಎಂದು ಸಿದ್ದರಾಮಯ್ಯ ಹೇಳಿದರು.

‘2023 ರ ಚುನಾವಣೆಯಲ್ಲಿ ಎದುರಿಸುವ ಮೊದಲು ನೀವು ನಿಮ್ಮ ಪಕ್ಷದಲ್ಲಿರುವವರನ್ನು ಎದುರಿಸಬೇಕು. ಸ್ನೇಹಿತರ ಜತೆ ಗುದ್ದಾಟ ನಡೆಸಬೇಕಾಗಿದೆ’ ಎಂದು ಸಚಿವ ಆರ್.ಅಶೋಕ ಅವರು ಕಿಚಾಯಿಸಿದರು.

‘ನೀವು ಇದೇ ಭ್ರಮೆಯಲ್ಲಿ ಇರಿ, ನಾವು ಒಗ್ಗಟ್ಟಿನಿಂದ ಹೋರಾಡಿ ನಿಮ್ಮನ್ನು ದೂಳೀಪಟ ಮಾಡುತ್ತೇವೆ ನೋಡುತ್ತಾ ಇರಿ’ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

ಅಷ್ಟಕ್ಕೆ ಸುಮ್ಮನಾಗದ ಅಶೋಕ ಅವರು, ‘ಇತ್ತೀಚೆಗೆ ನಿಮ್ಮ ಪಕ್ಷದವರು ಪೋಸ್ಟರ್‌ಗಳಲ್ಲಿ ನಿಮ್ಮ ಫೋಟೊವನ್ನೇ ಹಾಕುತ್ತಿಲ್ಲವಲ್ಲ’ ಎಂದು ಕಾಲೆಳೆದರು.

‘ಸಿದ್ದರಾಮಯ್ಯನ ಫೋಟೊ ಹಾಕಬೇಕಾಗಿಲ್ಲ. ಫೋಟೊ ಹಾಕಿ ಪರಿಚಯಿಸುವ ಅಗತ್ಯವೂ ಇಲ್ಲ. ನಾನು ಯಾರು ಎಂಬುದು ಜನರಿಗೆ ಗೊತ್ತು. ಯಾರಿಗೆ ಜನಪ್ರಿಯತೆ ಇಲ್ಲವೋ, ಇಮೇಜ್ ಇಲ್ಲವೂ ಅವರಿಗೆ ಫೋಟೊ ಅಗತ್ಯ ಇರುತ್ತದೆ’ ಎಂದು ಸಿದ್ದರಾಮಯ್ಯ ಹೇಳಿದರು.

‘1.36 ಲಕ್ಷ ಎಕರೆ ಒತ್ತುವರಿ ತೆರವಿಗೆ ಬಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1.36 ಲಕ್ಷ ಎಕರೆ ಸರ್ಕಾರಿ ಜಾಗದ ಒತ್ತುವರಿ ತೆರವಿಗೆ ಬಾಕಿ ಇದೆ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಸಿ.ಎನ್.ಬಾಲಕೃಷ್ಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 2013ರಿಂದ 2021ರ ಅವಧಿಯಲ್ಲಿ 2.68 ಲಕ್ಷ ಎಕರೆ ಒತ್ತುವರಿ ತೆರವು ಮಾಡಲಾಗಿದೆ’ ಎಂದಿದ್ದಾರೆ.

ಒತ್ತುವರಿದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಒತ್ತುವರಿ ತೆರವು ಮಾಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

‘ವಿದ್ಯುತ್ ಮಾರಾಟದಿಂದ ₹ 2,500 ಕೋಟಿ ಆದಾಯ’

ಬೆಂಗಳೂರು: ‘ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಆಗಿದ್ದರಿಂದ ಅದನ್ನು ಮಾರಾಟ ಮಾಡಿ ₹ 2,500 ಕೋಟಿ ಆದಾಯ ಗಳಿಸಲಾಗಿದೆ’ ಎಂದು ಇಂಧನ ಸಚಿವ ವಿ. ಸುನೀಲ್‌ಕುಮಾರ್ ತಿಳಿಸಿದರು.

ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಲ್ಲಿ ಈ ತಿಂಗಳು ಅತೀ ಹೆಚ್ಚು ವಿದ್ಯುತ್ ಬೇಡಿಕೆ ಬಂದಿದ್ದು, 14,741 ಮೆಗಾ ವ್ಯಾಟ್ ವಿದ್ಯುತ್ ಬಳಕೆ ಮಾಡಲಾಗಿದೆ. ಎಲ್ಲ ವಿದ್ಯುತ್ ಕೇಂದ್ರಗಳಿಂದ ಒಟ್ಟು 27,237.97 ಮೆಗಾ ವ್ಯಾಟ್ ಉತ್ಪಾದನೆಯಾಗಿದೆ’ ಎಂದರು.

ಹೈಬ್ರೀಡ್ ಪವರ್ ಪಾರ್ಕ್: ಬಿಜೆಪಿಯ ವೈ.ಎಂ. ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದಲ್ಲಿ ಕೊಪ್ಪಳ, ಧಾರವಾಡ, ಗದಗ, ವಿಜಯಪುರ, ದಾವಣಗೆರೆ, ಚಿತ್ರದುರ್ಗ, ವಿಜಯನಗರ, ತುಮಕೂರು ಜಿಲ್ಲೆಗಳನ್ನು ಕೇಂದ್ರವಾಗಿ ಇಟ್ಟುಕೊಂಡು ರಾಜ್ಯದಲ್ಲಿ ಐದು ಸಾವಿರ ಮೆಗಾ ವ್ಯಾಟ್ ಹೈಬ್ರೀಡ್ ಪವರ್ ಪಾರ್ಕ್ ಸ್ಥಾಪಿಸಲು ನಿರ್ಧರಿಸಲಾಗಿದೆ. ಮುಂದಿನ 10 ವರ್ಷದಲ್ಲಿ 22 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆ ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಲಾಗಿದೆ’ ಎಂದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾರ್ಜಿಂಗ್ ಸ್ಟೇಷನ್: ‘ಜಿಲ್ಲಾ ಕೇಂದ್ರ, ರಾಷ್ಟ್ರೀಯ ಹೆದ್ದಾರಿ, ಪ್ರವಾಸಿ ತಾಣಗಳಲ್ಲಿ ಚಾರ್ಜಿಂಗ್ ಸ್ಟೇಷನ್ ಮಾಡುವ ಬಗ್ಗೆ ನಿರ್ಧರಿಸಿದ್ದು, ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಜವಾಬ್ದಾರಿ ನೀಡಲಾಗಿದೆ’ ಎಂದು ಸುನೀಲ್ ಕುಮಾರ್ ತಿಳಿಸಿದರು.

‘ಟೈಲರ್‌ಗಳ ನೋಂದಣಿಗೆ ಅಭಿಯಾನ’

ಪ್ರಜಾವಾಣಿ ವಾರ್ತೆ

ಶಿವರಾಮ ಹೆಬ್ಬಾರ್

ಬೆಂಗಳೂರು: ರಾಜ್ಯದಲ್ಲಿರುವ ಟೈಲರ್‌ಗಳನ್ನು ಕೇಂದ್ರ ಸರ್ಕಾರದ ಇ-ಶ್ರಮ ಪೋರ್ಟಲ್‌ನಲ್ಲಿ ನೋಂದಾಯಿಸಲು ವಿಶೇಷ ಅಭಿಯಾನ ನಡೆಸಲಾಗುವುದು ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ಟೈಲರ್‌ಗಳಿಗೆ ಪ್ರತ್ಯೇಕವಾದ ಅಭಿವೃದ್ಧಿ ನಿಗಮ ಸ್ಥಾಪಿಸುವಂತೆ ಒತ್ತಾಯಿಸಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮತ್ತು ಕಾಂಗ್ರೆಸ್‌ನ ಕೆ. ಹರೀಶ್ ಕುಮಾರ್ ನಿಯಮ 330ರ ಅಡಿಯಲ್ಲಿ ಸೋಮವಾರ ನಡೆಸಿದ ಚರ್ಚೆಗೆ ಉತ್ತರಿಸಿದ ಸಚಿವರು ಈ ಭರವಸೆ ನೀಡಿದರು.

‘ಕೋವಿಡ್ ಅವಧಿಯಲ್ಲಿ ಅಸಂಘಟಿತ ಕಾರ್ಮಿಕರ ವಲಯದಲ್ಲಿ ಟೈಲರ್‌ಗಳನ್ನು ಗುರುತಿಸಿ ನೆರವು ನೀಡಲಾಗಿದೆ. ಟೈಲರ್‌ಗಳನ್ನು ಫಲಾನುಭವಿಗಳಾಗಿ ಆಯ್ಕೆಮಾಡಲು ಮಾಹಿತಿ ಕೊರತೆ ಇತ್ತು. ಈ ಕಾರಣಕ್ಕಾಗಿ ಇ-ಶ್ರಮ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಲಾಗುತ್ತಿದೆ. ಈವರೆಗೆ 4.24 ಲಕ್ಷ ಟೈಲರ್‌ಗಳು ನೋಂದಣಿ ಮಾಡಿಸಿಕೊಂಡಿದ್ದಾರೆ’ ಎಂದರು.

ಎಲ್ಲ ಟೈಲರ್‌ಗಳನ್ನೂ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುವುದು. ನೋಂದಾಯಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ಗುರುತಿನ ಚೀಟಿ ನೀಡಲಾಗುವುದು ಎಂದು ತಿಳಿಸಿದರು.

ತಮಿಳುನಾಡು ಮಾದರಿಯಲ್ಲಿ ಟೈಲರ್‌ಗಳಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸುವಂತೆ ಹರಿಪ್ರಸಾದ್ ಮತ್ತು ಹರೀಶ್ ಕುಮಾರ್ ಒತ್ತಾಯಿಸಿದರು. ಮುಖ್ಯಮಂತ್ರಿಯವರ ಜತೆ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಸುಮಿ ನಗರದಲ್ಲಿ ಸಿಲುಕಿರುವ ಭಾರತೀಯರು • ಪುಟಿನ್, ಝೆಲೆನ್‌ಸ್ಕಿ ಜತೆ ನರೇಂದ್ರ ಮೋದಿ ಮಾತುಕತೆ

ವಿದ್ಯಾರ್ಥಿಗಳ ಸುರಕ್ಷಿತ ತೆರವಿಗೆ ಮನವಿ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜತೆ ಸೋಮವಾರ ಪ್ರತ್ಯೇಕವಾಗಿ ಮಾತುಕತೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಉಕ್ರೇನ್‌ನ ಉತ್ತರ ಭಾಗದ ಸುಮಿ ನಗರದಲ್ಲಿ ಸಿಲುಕಿಕೊಂಡಿರುವ ಭಾರತೀಯ ವಿದ್ಯಾರ್ಥಿಗಳ ತೆರವಿಗೆ ನೆರವು ನೀಡುವಂತೆ ಮನವಿ ಮಾಡಿದರು.

ರಷ್ಯಾ ಹಾಗೂ ಉಕ್ರೇನ್ ನಡುವೆ ತೀವ್ರ ಪ್ರಮಾಣದ ಯುದ್ಧ ನಡೆಯುತ್ತಿರುವ ಸುಮಿ ನಗರದಲ್ಲಿ ಭಾರತದ ಸುಮಾರು 700 ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ.

ಸುಮಿ ನಗರ ಸೇರಿದಂತೆ, ಉಕ್ರೇನ್‌ನ ಕೆಲವು ಭಾಗಗಳಲ್ಲಿ ಕದನ ವಿರಾಮ ಘೋಷಣೆ ಹಾಗೂ ಯುದ್ಧ ಸಂತ್ರಸ್ತರ ತೆರವಿಗೆ ಮಾನವೀಯ ನೆಲೆಯಲ್ಲಿ 'ಸುರಕ್ಷಿತ ಕಾರಿಡಾರ್' ನಿರ್ಮಿಸುವ ರಷ್ಯಾದ ನಿರ್ಧಾರವನ್ನು ಪ್ರಧಾನಿ ಅಭಿನಂದಿಸಿದರು ಎಂದು ಮೂಲಗಳು ತಿಳಿಸಿವೆ.

ಉಕ್ರೇನ್‌ನ ಕ್ರಾಮಾಟೋರ್ಸ್ಕ್ ನಗರದ ಮೇಲೆ ಭಾನುವಾರ ರಷ್ಯಾದ ಪಡೆಗಳು ನಡೆಸಿದ ಕ್ಷಿಪಣಿ ಸ್ಫೋಟದ ಪರಿಣಾಮವಾಗಿ ಹಾನಿಗೊಳಗಾದ ಬಹುಮಹಡಿ ಕಟ್ಟಡವನ್ನು ಸ್ಥಳೀಯ ನಿವಾಸಿಯೊಬ್ಬರು ವೀಕ್ಷಿಸಿದರು — ಎಎಫ್‌ಪಿ ಚಿತ್ರ

ಕೀವ್, ಹಾರ್ಕಿವ್ ಹಾಗೂ ಸುಮಿ ನಗರಗಳಲ್ಲಿ ಕದನ ವಿರಾಮ ಜಾರಿ ಹಾಗೂ ಸಂತ್ರಸ್ತರ ತೆರವಿಗೆ ಕಾರಿಡಾರ್ ನಿರ್ಮಾಣಕ್ಕೆ ಅವಕಾಶ ನೀಡುವುದಾಗಿ ರಷ್ಯಾ ಅಧಿಕಾರಿಗಳು ಈ ಮುನ್ನ ತಿಳಿಸಿದ್ದರು.

ಪುಟಿನ್‌ಗೆ ಮೋದಿ ಸಲಹೆ: ಪುಟಿನ್ ಜೊತೆ ಮೋದಿ ಅವರು ಸುಮಾರು 50 ನಿಮಿಷ ಮಾತುಕತೆ ನಡೆಸಿದರು. ಉಕ್ರೇನ್ ಅಧ್ಯಕ್ಷರ ಜೊತೆ ನೇರವಾಗಿ ಮಾತುಕತೆ ನಡೆಸುವಂತೆ ಪುಟಿನ್‌ಗೆ ಮೋದಿ ಅವರು ಸಲಹೆ ನೀಡಿದರು ಎಂದು ತಿಳಿದುಬಂದಿದೆ. ಪ್ರಸ್ತುತ ಸ್ಥಿತಿ ಹಾಗೂ ಮಾತುಕತೆಯ ವಿವರಗಳನ್ನು ಪುಟಿನ್ ಅವರು ಮೋದಿ ಅವರಿಗೆ ನೀಡಿದರು. 11 ದಿನಗಳ ಹಿಂದೆ ಉಕ್ರೇನ್ ಬಿಕ್ಕಟ್ಟು ಆರಂಭವಾದ ಬಳಿಕ ಪುಟಿನ್–ಮೋದಿ ನಡುವೆ ನಡೆದ ಮೂರನೇ ದೂರವಾಣಿ ಸಂಭಾಷಣೆ ಇದಾಗಿದೆ.

ಝೆಲೆನ್‌ಸ್ಕಿಗೆ ಮೋದಿ ಧನ್ಯವಾದ: ಪುಟಿನ್ ಜೊತೆ ಮಾತುಕತೆ ನಡೆಸುವುದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಅಧ್ಯಕ್ಷರ ಜೊತೆ ಪ್ರಧಾನಿ 35 ನಿಮಿಷ ಮಾತುಕತೆ ನಡೆಸಿದರು. ಯುದ್ಧಪೀಡಿತ ಜಾಗಗಳಿಂದ ಭಾರತೀಯರನ್ನು ತೆರವು ಮಾಡಲು ನೆರವು ನೀಡಿದ ಝೆಲೆನ್‌ಸ್ಕಿ ಅವರಿಗೆ ಮೋದಿ ಧನ್ಯವಾದ ಹೇಳಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಮಿಯಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳ ಸುರಕ್ಷಿತ ತೆರವು ಕಾರ್ಯಾಚರಣೆಗೂ ನೆರವು ನೀಡುವಂತೆ ಝೆಲೆನ್‌ಸ್ಕಿ ಅವರಲ್ಲಿ ಪ್ರಧಾನಿ ಮನವಿ ಮಾಡಿದರು.

ಸಂಘರ್ಷ ಹಾಗೂ ಜನರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಪ್ರಧಾನಿ ಮೋದಿ ಅವರು ಮಾತುಕತೆ ವೇಳೆ ತೀವ್ರ ಕಳವಳ ವ್ಯಕ್ತಪಡಿಸಿದರು. ತಕ್ಷಣವೇ ಯುದ್ಧ ನಿಲುಗಡೆಗೆ ಆಗ್ರಹಿಸಿದರು ಎಂದು ಅಧಿಕೃತ ಮೂಲಗಳು ತಿಳಿಸಿವೆ.

'ಸಮಸ್ಯೆಗಳ ಇತ್ಯರ್ಥಕ್ಕೆ ಶಾಂತಿಯುತ ಮಾರ್ಗದ ಪರಿಹಾರವನ್ನು ಭಾರತ ಬೆಂಬಲಿಸುತ್ತದೆ. ಎರಡೂ ಕಡೆಯವರು ನೇರವಾಗಿ ಮಾತುಕತೆ ನಡೆಸಲು ಆಗ್ರಹಿಸುತ್ತದೆ' ಎಂದು ಪ್ರಧಾನಿ ತಿಳಿಸಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.



ಭಾರತದ ನಾಗರಿಕರಿಗೆ ಉಕ್ರೇನ್ ನೀಡಿದ ನೆರವನ್ನು ಮೋದಿ ಶ್ಲಾಘಿಸಿದರು. ಶಾಂತಿಯುತ ಮಾತುಕತೆ ಬಯಸುತ್ತಿರುವ ಉಕ್ರೇನ್ ನಿಲುವನ್ನು ಬೆಂಬಲಿಸಿದರು

ವೊಲೊಡಿಮಿರ್ ಝೆಲೆನ್‌ಸ್ಕಿ, ಉಕ್ರೇನ್ ಅಧ್ಯಕ್ಷ

ಸುಮಿ ನಗರದಿಂದ ಭಾರತದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತೆರವು ಮಾಡಲು ಅಗತ್ಯವಿರುವ ಎಲ್ಲಾ ನೆರವನ್ನು ರಷ್ಯಾ ಸೈನಿಕರು ನೀಡಲಿದ್ದಾರೆ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕಚೇರಿ

ರಷ್ಯಾ ಮತ್ತು ಉಕ್ರೇನ್ ಸೇನಾಪಡೆಗಳ ನಡುವಿನ ಸಂಘರ್ಷದ ಮಧ್ಯೆಯೇ ಉಕ್ರೇನ್ ಸೇನಾಪಡೆಯ ಲೇಸ್ಯಾ ಮತ್ತು ವ್ಯಾಲೆರಿ ವಿವಾಹವಾದರು. ಈ ವೇಳೆ ಸೇನಾ ಸಿಬ್ಬಂದಿ ವಧುವಿಗೆ ಹೆಲ್ಮೆಟ್ ತೊಡಿಸಿದರು — ಎಎಫ್‌ಪಿ ಚಿತ್ರ

ವಿಶ್ವಸಂಸ್ಥೆಯ ನ್ಯಾಯಾಲಯಕ್ಕೆ ಗೈರು ಹಾಜರಾದ ರಷ್ಯಾ

ದಿ ಹೇಗ್ (ಎಪಿ/ರಾಯಿಟರ್ಸ್): ರಷ್ಯಾದ ವಿರುದ್ಧ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಉಕ್ರೇನ್ ಸಲ್ಲಿಸಿದ ಅರ್ಜಿಯ ವಿಚಾರಣೆ ವೇಳೆ ರಷ್ಯಾ ಗೈರು ಹಾಜರಾಗಿದೆ.

ಮಾಸ್ಕೊ ತನ್ನ ಆಕ್ರಮಣವನ್ನು ಸಮರ್ಥಿಸಲು ನರಮೇಧದ ಕಾನೂನನ್ನು ತಪ್ಪಾಗಿ ಅನ್ವಯಿಸಿದೆ ಎಂದು ಆರೋಪಿಸಿರುವ ಉಕ್ರೇನ್, ಯುದ್ಧವನ್ನು ತಕ್ಷಣವೇ ನಿಲ್ಲಿಸುವಂತೆ ಕೋರಿ ವಿಶ್ವಸಂಸ್ಥೆಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಆದರೆ, ಸೋಮವಾರ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಹಾಜರಾಗದೇ ರಷ್ಯಾ ವಿಚಾರಣೆಯನ್ನು ಬಹಿಷ್ಕರಿಸಿದೆ.

ಸೋಮವಾರ ಬೆಳಿಗ್ಗೆ ನ್ಯಾಯಾಲಯದಲ್ಲಿ ರಷ್ಯಾದ ವಕೀಲರಿಗಾಗಿ ಕಾಯ್ದಿರಿಸಿದ ಆಸನಗಳ ಸಾಲು ಖಾಲಿಯಾಗಿತ್ತು. ರಷ್ಯಾದ ನಿಯೋಗವಿಲ್ಲದೆ ವಿಚಾರಣೆ ನಡೆಯಿತು.

ಒಟ್ಟು ಎರಡು ದಿನಗಳ ಕಾಲ ವಿಚಾರಣೆ ನಡೆಯಲಿದೆ.

ಬೇಡಿಕೆಗೆ ಉಕ್ರೇನ್ ಒಪ್ಪಿದರೆ ಯುದ್ಧ ಅಂತ್ಯ: ರಷ್ಯಾ

ಡಿಮಿಟ್ರಿ ಪೆಸ್ಕೋವ್

ಲಂಡನ್ (ರಾಯಿಟರ್ಸ್): ಕ್ರಿಮಿಯಾ ರಷ್ಯಾದ ಭಾಗ ಎಂದು ಒಪ್ಪುವುದು ಸೇರಿದಂತೆ ತನ್ನ ಹಲವು ಬೇಡಿಕೆಗಳನ್ನು ಉಕ್ರೇನ್ ಒಪ್ಪಿದ ಮರುಕ್ಷಣವೇ ಆ ದೇಶದ ಮೇಲಿನ ಯುದ್ಧವನ್ನು ನಿಲ್ಲಿಸುವುದಾಗಿ ರಷ್ಯಾ ಘೋಷಣೆ ಮಾಡಿದೆ.

ಉಕ್ರೇನ್ ತನ್ನ ಸೇನಾ ಚಟುವಟಿಕೆಗಳನ್ನು ನಿಲ್ಲಿಸಬೇಕು. ನ್ಯಾಟೊ ಸೇರಿ ಯಾವುದೇ ಒಕ್ಕೂಟವನ್ನು ಉಕ್ರೇನ್ ಸೇರದಂತೆ ಸಂವಿಧಾನ ಬದಲಾವಣೆ ಹಾಗೂ ಡೊನೆಟ್‌ಸ್ಕ್ ಮತ್ತು ಲುಗಾನ್‌ಸ್ಕ್ ಪ್ರತ್ಯೇಕ ಪ್ರದೇಶಗಳನ್ನು ಸ್ವಾಯತ್ತ ಪ್ರಾಂತ್ಯಗಳೆಂದು ಗುರುತಿಸಬೇಕು ಎಂಬುದು ರಷ್ಯಾದ ಬೇಡಿಕೆಗಳಾಗಿವೆ.

ಈ ಎಲ್ಲಾ ಬೇಡಿಕೆಗಳು ಈಡೇರಿದ ಮರುಕ್ಷಣವೇ ಉಕ್ರೇನ್ ಮೇಲಿನ ದಾಳಿ ನಿಲ್ಲಲಿದೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು ಹೇಳಿದ್ದಾರೆ.

ಈ ಬಗ್ಗೆ ಸೋಮವಾರ ರಾಯಿಟರ್ಸ್ ಸುದ್ದಿಸಂಸ್ಥೆ ಜತೆ ಮಾತನಾಡಿದ ಪೆಸ್ಕೋವ್ ಅವರು, 'ನಮ್ಮ ಬೇಡಿಕೆಗಳಿಗೆ ಒಪ್ಪಿದ ಮರುಕ್ಷಣವೇ ನಮ್ಮ ಸೇನಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಿದ್ದೇವೆ ಎಂಬ ಸಂದೇಶವನ್ನು ಉಕ್ರೇನ್‌ಗೆ ನೀಡಿದ್ದೇವೆ. ಈ ನಮ್ಮ ಷರತ್ತುಗಳು ಏನು ಎಂಬುದು ಉಕ್ರೇನ್‌ಗೆ ಚೆನ್ನಾಗಿ ಗೊತ್ತಿದೆ. ನ್ಯಾಟೊ ಸೇರಿದಂತೆ ಯಾವುದೇ ಅಂತರರಾಷ್ಟ್ರೀಯ ಒಕ್ಕೂಟಕ್ಕೆ ಉಕ್ರೇನ್ ಸೇರಬಾರದು. ಇದಕ್ಕಾಗಿ ಉಕ್ರೇನ್ ತನ್ನ ಸಂವಿಧಾನವನ್ನು ತಿದ್ದುಪಡಿ ಮಾಡಬೇಕು. ಜೊತೆಗೆ ಮೊದಲು ಉಕ್ರೇನ್ ಯೋಧರು ಯುದ್ಧವನ್ನು ನಿಲ್ಲಿಸಬೇಕು. ಆಗ ಯಾರೂ ಸಹ ಅವರ ಮೇಲೆ ದಾಳಿ ನಡೆಸುವುದಿಲ್ಲ' ಎಂದು ಹೇಳಿದ್ದಾರೆ.

ರಷ್ಯಾ ಆರೋಪ: ಉಕ್ರೇನ್ ಒಪ್ಪಂದವನ್ನು ಒಪ್ಪಿಕೊಳ್ಳದೆ, ನಾಗರಿಕರನ್ನು ಸ್ಥಳಾಂತರಿಸಲು ಮಾನವೀಯ ಕಾರಿಡಾರ್ ರಚಿಸಲು ಅಡ್ಡಿ ಉಂಟುಮಾಡುತ್ತಿದೆ ಎಂದು ರಷ್ಯಾ ರಕ್ಷಣಾ ಸಚಿವ ಆರೋಪಿಸಿದ್ದಾರೆ ಎಂದು ರಷ್ಯಾದ ಸುದ್ದಿ ಸಂಸ್ಥೆ ಸೋಮವಾರ ವರದಿ ಮಾಡಿದೆ.

ತನ್ನ ಬಾಂಬ್ ದಾಳಿಯಿಂದ ಸಂಕಷ್ಟದಲ್ಲಿ ಸಿಲುಕಿರುವ ಉಕ್ರೇನ್ ನಾಗರಿಕರನ್ನು ಬೆಲಾರೂಸ್‌ಗೆ ಸ್ಥಳಾಂತರಿಸಲು ರಷ್ಯಾದ ಹೊಸ ಮಾನವೀಯ ಕಾರಿಡಾರ್ ಅನ್ನು ಸೋಮವಾರ ಘೋಷಿಸಿತ್ತು.

ಇದನ್ನು ಖಂಡಿಸಿರುವ ಉಕ್ರೇನ್, ಇದು ಅನೈತಿಕ ನಡೆ ಎಂದಿದೆ.

10ರಂದು ರಷ್ಯಾ, ಉಕ್ರೇನ್, ಟರ್ಕಿ ವಿದೇಶಾಂಗ ಸಚಿವರ ಸಭೆ

ಇಸ್ತಾಂಬುಲ್ (ಎಎಫ್‌ಪಿ/ಎಪಿ): ದಕ್ಷಿಣ ಟರ್ಕಿಯಲ್ಲಿ ಉಕ್ರೇನ್, ರಷ್ಯಾ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಮಾರ್ಚ್ 10 ರಂದು ಟರ್ಕಿಯ ಕರಾವಳಿ ನಗರ ಅಂಟಲ್ಯದಲ್ಲಿ ಸಭೆ ಸೇರಲಿದ್ದಾರೆ ಎಂದು ರಾಜಧಾನಿ ಅಂಕಾರಾ ಸೋಮವಾರ ಪ್ರಕಟಿಸಿದೆ.

'ರಾಜತಾಂತ್ರಿಕ ಪ್ರಯತ್ನದ ಮೂಲಕ ನಮ್ಮ ಅಧ್ಯಕ್ಷರ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ನನ್ನ ಜೊತೆಗೆ ರಷ್ಯಾ ಹಾಗೂ ಉಕ್ರೇನ್‌ನ ವಿದೇಶಾಂಗ ಸಚಿವರಾದ ಸೆರ್ಗೆಯ್ ಲಾವ್ರೊವ್ ಮತ್ತು ಡಿಮಿಟ್ರೋ ಕುಲೆಬಾ ಭಾಗವಹಿಸಲಿದ್ದಾರೆ ಎಂದು ಟರ್ಕಿಯ ವಿದೇಶಾಂಗ ಸಚಿವ ಮೆವ್ಲುಟ್ ಕಾವುಸೊಗ್ಲು ಟ್ವೀಟ್‌ನಲ್ಲಿ ಹೇಳಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ಎರಡು ದೇಶಗಳಿಗೂ ಟರ್ಕಿಯು ನಿಕಟ ಸಂಬಂಧ ವನ್ನು ಹೊಂದಿದೆ. ಎರಡು ದೇಶಗಳ ನಡುವೆ ನಡೆಯುತ್ತಿರುವ ಯುದ್ಧವನ್ನು ಶಮನಗೊಳಿಸಲು ಟರ್ಕಿಯು ಮಧ್ಯಸ್ಥಿಕೆ ವಹಿಸಲಿದೆ ಎಂದು ಮೂಲಗಳು ತಿಳಿಸಿವೆ.

ನಾಗರಿಕರ ಸಾವಿನ ಸಂಖ್ಯೆ 406ಕ್ಕೆ ಏರಿಕೆ

ಜಿನಿವಾ (ಎಪಿ): ರಷ್ಯಾದ ಆಕ್ರಮಣ ಆರಂಭ ಮಾಡಿದ ದಿನದಿಂದ ಇಲ್ಲಿಯವರೆಗೆ ಉಕ್ರೇನ್‌ನಲ್ಲಿ 406 ನಾಗರಿಕರ ಸಾವುಗಳನ್ನು ಖಚಿತಪಡಿಸಲು ಸಾಧ್ಯವಾಗಿದೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿ ಹೇಳಿದೆ.

ಭಾನುವಾರ ಮಧ್ಯರಾತ್ರಿಯ ವೇಳೆಗೆ 801 ನಾಗರಿಕರು ಗಾಯಾಳುಗಳಾಗಿರುವ ಬಗ್ಗೆ ದೃಢಪಟ್ಟಿದೆ ಎಂದೂ ಅದು ತಿಳಿಸಿದೆ.

ಆದರೆ, ಯುದ್ಧಪೀಡಿತ ಪ್ರದೇಶದಲ್ಲಿ ಸಾವು–ನೋವುಗಳ ಸಂಖ್ಯೆ ಹೆಚ್ಚಿದೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

'ರಾಷ್ಟ್ರಧ್ವಜದ ಋಣ ಹೇಗೆ ತೀರಿಸಲಿ?'

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): 'ಯುದ್ಧಪೀಡಿತ ಉಕ್ರೇನ್‌ನಲ್ಲಿ ನಮ್ಮ ಜೀವ ಕಾಪಾಡಿದ ರಾಷ್ಟ್ರಧ್ವಜದ ಋಣವನ್ನು ತೀರಿಸುವುದಾದರೂ ಹೇಗೆ. ಈ ಋಣ ಎಂದಿಗೂ ತೀರಿಸಲು ಸಾಧ್ಯವಿಲ್ಲ'

ಉಕ್ರೇನ್‌ನಲ್ಲಿ ಸಿಲುಕಿದ್ದ ತುಮಕೂರು ತಾಲ್ಲೂಕಿನ ಅರಕೆರೆ ಗ್ರಾಮದ ವೈದ್ಯಕೀಯ ವಿದ್ಯಾರ್ಥಿನಿ ನಂದಿನಿ ಸೋಮವಾರ ಸುರಕ್ಷಿತವಾಗಿ ಪೋಷಕರ ಮಡಿಲು ಸೇರಿದ ನಂತರ ಭಾವುಕರಾಗಿ ಆಡಿದ ಮಾತುಗಳಿವು.

ಅರಕೆರೆ ಚಂದ್ರಪ್ಪ ಹಾಗೂ ವಿದ್ಯಾ ದಂಪತಿಯ ಪುತ್ರಿಯಾದ ಅವರು ಉಕ್ರೇನ್‌ಗೆ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ತೆರಳಿದ್ದರು. ಯುದ್ಧ ಘೋಷಣೆಯಾದ ಬಳಿಕ ಭಾರತಕ್ಕೆ ಬರಲಾಗದೆ ಕಾಲೇಜಿನಲ್ಲಿದ್ದ ಕರ್ನಾಟಕದ ಸ್ನೇಹಿತರ ಜೊತೆ ಬಂಕರ್‌ನಲ್ಲಿ ಉಳಿದಿದ್ದರು.

'ಯುದ್ಧದ ಸನ್ನಿವೇಶಗಳನ್ನು ಚಲನಚಿತ್ರದಲ್ಲಿ ನೋಡಿದ್ದೆ. ಆದರೆ, ಎಷ್ಟು ಭೀಕರವಾಗಿರುತ್ತದೆ ಎಂದು ಕಣ್ಣಾರೆ ನೋಡಿ ತಿಳಿಯಿತು. ಸೈರನ್, ರಾಕೆಟ್ ದಾಳಿ ಶಬ್ದ ಕೇಳಿ ನಾವು ಜೀವಂತವಾಗಿ ಊರು ಸೇರುವುದಿಲ್ಲವೆಂದು ಭಾವಿಸಿದ್ದೆವು' ಎಂದು ಅವರು 'ಪ್ರಜಾವಾಣಿ' ಜೊತೆ ಮಾತಿಗಿಳಿದರು.

ಯುದ್ಧದ ತೀವ್ರತೆ ಹೆಚ್ಚಾದಂತೆ ದಿನಸಿ ಖರೀದಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ನಂದಿನಿ ಅನುಭವ ಹಂಚಿಕೊಂಡರು.

'ಉಕ್ರೇನ್ ರಾಯಭಾರಿ ಕಚೇರಿ ಅಧಿಕಾರಿಗಳು ನಮಗೆ ಸ್ಪಂದಿಸಲಿಲ್ಲ. ನಾವೇ ಧೈರ್ಯ ಮಾಡಿ ಭಾರತದ ರಾಷ್ಟ್ರಧ್ವಜ ಹಿಡಿದು ಉಕ್ರೇನ್ ರೈಲು ಹತ್ತಿ ಲಿವಿ ಪ್ರಾಂತ್ಯ, ಅಲ್ಲಿಂದ ಬುಡಾಪೆಸ್ಟ್ ನಂತರ ರೊಮೇನಿಯಾ ತಲುಪಿದೆವು. ಬುಡಾಪೆಸ್ಟ್‌ನಲ್ಲಿ ಸ್ವಯಂಸೇವಕರು ಚರ್ಚ್‌ನಲ್ಲಿ ಉಳಿಯಲು ಅವಕಾಶ ಕಲ್ಪಿಸಿ, ಊಟದ ವ್ಯವಸ್ಥೆ ಮಾಡಿದ್ದರು. ನಂತರ ಸ್ವಂತ ಖರ್ಚಿನಲ್ಲಿ ರೊಮೇನಿಯಾ ತಲುಪಿದೆವು. ಅಲ್ಲಿ ಭಾರತೀಯ ರಾಯಭಾರ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ತಕ್ಷಣ ಸ್ಪಂದಿಸಿ ವಿಮಾನದಲ್ಲಿ ಆಸನದ ವ್ಯವಸ್ಥೆ ಕಲ್ಪಿಸಲು ಸಹಕರಿಸಿದರು' ಎಂದು ಅವರು ವಿವರಿಸಿದರು.

'ಯುದ್ಧದ ಭೀಕರತೆ ನೆನಪಿಸಿಕೊಂಡರೆ ಭಯವಾಗುತ್ತದೆ. ನಮ್ಮ ನೆರವಿಗೆ ನಿಂತ ಸರ್ಕಾರಕ್ಕೆ ಧನ್ಯವಾದ ಅರ್ಪಿಸುತ್ತೇನೆ. ನಮ್ಮ ಜೀವ ಕಾಪಾಡಿದ ರಾಷ್ಟ್ರಧ್ವಜದ ಋಣವನ್ನು ಎಂದಿಗೂ ತೀರಿಸಲು ಸಾಧ್ಯವಿಲ್ಲ' ಎಂದು ನಂದಿನಿ ಅವರು ಭಾವುಕರಾದರು.

ವೈದ್ಯಕೀಯ ಪ್ರವೇಶಕ್ಕೆ ನೀಟ್ ಪರೀಕ್ಷೆ ಅನಿವಾರ್ಯವೇ, ಬದಲಾವಣೆ ಬೇಕೆ?–ಸಂವಾದ

'ನೀಟ್ ರದ್ಧತಿಯ ವಾದ ಒಪ್ಪತಕ್ಕದ್ದಲ್ಲ'

ಬೆಂಗಳೂರು: 'ನೀಟ್ ಪದ್ಧತಿಯಲ್ಲಿ ನ್ಯೂನತೆಗಳಿರಬಹುದು. ಅವುಗಳನ್ನು ಪತ್ತೆಹಚ್ಚಿ ಸರಿಪಡಿಸಬೇಕು. ಅದನ್ನು ಬಿಟ್ಟು ವ್ಯವಸ್ಥೆಯನ್ನೇ ರದ್ದುಪಡಿಸುವಂತೆ ಒತ್ತಾಯಿಸುವುದು ಸರಿಯಲ್ಲ. ನಮ್ಮಲ್ಲಿ ಶಿಕ್ಷಣದ ವ್ಯಾಪಾರೀಕರಣ ನಡೆಯುತ್ತಿದೆ. ಅದು ಶುಲ್ಕ ಹೆಚ್ಚಳಕ್ಕೆ ರಹದಾರಿ ಮಾಡಿಕೊಟ್ಟಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ'...

'ವೈದ್ಯಕೀಯ ಪ್ರವೇಶಕ್ಕೆ ನೀಟ್ ಪರೀಕ್ಷೆ ಅನಿವಾರ್ಯವೇ, ಬದಲಾವಣೆ ಬೇಕೆ? ವಿಷಯದ ಕುರಿತು ಸೋಮವಾರ ನಡೆದ 'ಪ್ರಜಾವಾಣಿ' ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯವಿದು.

ಪ್ರಜಾವಾಣಿ ಸಂವಾದ

'ಶುಲ್ಕ ಹೆಚ್ಚಳದ ಬಗ್ಗೆ ಗಟ್ಟಿ ಧ್ವನಿ ಎತ್ತಬೇಕು'



'ಭಾರತದಲ್ಲಿ ವೈದ್ಯಕೀಯ ಶಿಕ್ಷಣ ಗೋಜಲಾಗಿರುವುದು ಹೊಸತೇನಲ್ಲ. 'ನೀಟ್ ಪದ್ಧತಿಯೇ ಸರಿಯಲ್ಲ. ಅದನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು' ಎಂಬ ವಾದ ಒಪ್ಪತಕ್ಕದಲ್ಲ. ವೈದ್ಯಕೀಯ ಶಿಕ್ಷಣದ ಪ್ರವೇಶಾತಿ ಜಗತ್ತಿನ ಎಲ್ಲಾ ಭಾಗಗಳಲ್ಲೂ ಅತ್ಯಂತ ಕ್ಲಿಷ್ಟ ಮತ್ತು ಸ್ಪರ್ಧಾತ್ಮಕವಾಗಿದೆ'.

'ರಾಜ್ಯದಲ್ಲಿ 60 ವೈದ್ಯಕೀಯ ಕಾಲೇಜುಗಳಿವೆ. 9 ಸಾವಿರಕ್ಕೂ ಹೆಚ್ಚು ಸೀಟುಗಳು ಲಭ್ಯವಿವೆ. ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂಬ ವಾದದಲ್ಲಿ ಹುರುಳಿಲ್ಲ. ಯುಪಿಎಸ್‌ಸಿ, ಜೆಇಇ ಪರೀಕ್ಷೆಗಳಿಂದಲೂ ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಅದರ ಬಗ್ಗೆ ಏಕೆ ಚಕಾರ ಎತ್ತುವುದಿಲ್ಲ'.

'ಶ್ರೀಮಂತರಿಗಾಗಿಯೇ ಖಾಸಗಿ ಕಾಲೇಜುಗಳಲ್ಲಿ ಸೀಟುಗಳನ್ನು ಕಾಯ್ದಿರಿಸಲಾಗುತ್ತಿದೆ. ಹೀಗಾಗಿ ಅರ್ಹರು ಸೀಟು ವಂಚಿತರಾಗುತ್ತಿದ್ದಾರೆ. ನೀಟ್ ಪರೀಕ್ಷೆ ಸರಳಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಿ. ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಪಿಯುಸಿ ಹಂತದಿಂದಲೇ ಈ ಕುರಿತು ತರಬೇತಿ ನೀಡಲಿ'.

'ಖಾಸಗಿ ಕಾಲೇಜುಗಳಲ್ಲಿ ಶುಲ್ಕ ಅನಿಯಂತ್ರಿತವಾಗಿದೆ. ಹೀಗಾಗಿ ಪರಿಸ್ಥಿತಿ ಬಿಗಡಾಯಿಸಿದೆ. ಎಲ್ಲಾ ಕಾಲೇಜುಗಳಲ್ಲಿಯೂ ಸರ್ಕಾರಿ ಕೋಟ ಶೇ 50ಕ್ಕಿಂತಲೂ ಹೆಚ್ಚಿರಬೇಕು. ಶುಲ್ಕ ನಿರ್ಧರಿಸಲು ಪ್ರತಿ ವರ್ಷ ಸಮಿತಿ ರಚಿಸಬೇಕು. ಸಚಿವರು ಹಾಗೂ ಖಾಸಗಿ ಕಾಲೇಜು ಆಡಳಿತ ಮಂಡಳಿಯವರು ತಮಗೆ ಬೇಕಾದ ಹಾಗೆ ಶುಲ್ಕ ಹೆಚ್ಚಳ ಮಾಡುತ್ತಿದ್ದಾರೆ. ಇದನ್ನು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಂಘಟನೆಗಳು ಪ್ರಶ್ನಿಸಬೇಕು'.

ಡಾ.ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯರು, ಸಾಮಾಜಿಕ ಕಾರ್ಯಕರ್ತ, ಮಂಗಳೂರು

ಪೂರ್ಣ ಸಂವಾದಕ್ಕಾಗಿ: https://youtu.be/PkdnZr7B1o4

'ಶಿಕ್ಷಣದ ವ್ಯಾಪಾರೀಕರಣ ನಿಲ್ಲಲಿ'

'ದೇಶದಲ್ಲಿ ಏಕರೂಪದ ವ್ಯವಸ್ಥೆ ಜಾರಿಗೊಳಿಸಲು ನೀಟ್ ಪರೀಕ್ಷೆ ಸಹಕಾರಿ. ಸಮಾನ ಅವಕಾಶ ಹಾಗೂ ಪಾರದರ್ಶಕತೆ ಕಾಪಾಡುವ ಉದ್ದೇಶ ಇದರ ಹಿಂದೆ ಅಡಕವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಯಾವ ಸಮಸ್ಯೆಯೂ ಇಲ್ಲ'.

'ಕೆಲ ರಾಜ್ಯಗಳು ಇನ್ನೂ ಕೇಂದ್ರೀಯ ಪಠ್ಯಕ್ರಮ ಅಳವಡಿಸಿಕೊಂಡಿಲ್ಲ. ಬಹು ಆಯ್ಕೆಯ ಪ್ರಶ್ನೆ ಪದ್ಧತಿಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಒಗ್ಗಿಕೊಂಡಿಲ್ಲ. ಖಾಸಗಿ ಕಾಲೇಜುಗಳು ಸರ್ಕಾರಿ ಕೋಟಾದಡಿ ಸೇರುವ ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು. ವಿದೇಶಗಳಲ್ಲಿ ಮ್ಯಾನೇಜ್‌ಮೆಂಟ್ ಕೋಟಾದಡಿ ದಾಖಲಾಗುವ ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ಪಡೆಯಲಾಗುತ್ತದೆ. ಹೀಗಾಗಿ ಅನೇಕರು ಆ ದೇಶಗಳಿಗೆ ಹೋಗುತ್ತಾರೆ'.

'ನಮ್ಮಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಹೆಚ್ಚು ಒತ್ತು ನೀಡಿದರೆ ವಿದೇಶಗಳಲ್ಲಿ 'ಥಿಯರಿ'ಗೆ ಮನ್ನಣೆ ನೀಡಲಾಗುತ್ತದೆ. ನಮ್ಮಲ್ಲಿ ಶಿಕ್ಷಣದ ವ್ಯಾಪಾರೀಕರಣ ಅವ್ಯಾಹತವಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು'.

ಡಾ.ಕೆ.ಎಸ್.ರವೀಂದ್ರನಾಥ್
ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ

'ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿ'

'ನೀಟ್ ಪರೀಕ್ಷೆಯಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ ಎಂಬ ಮಾತಿದೆ. ಹೀಗಾಗಿ ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಲಿ'.

'ಪರೀಕ್ಷೆ ಎದುರಿಸಿದವರಿಗೆಲ್ಲಾ ಸೀಟು ಸಿಗಬೇಕು ಎಂಬುದು ತಪ್ಪು ಕಲ್ಪನೆ. ವೈದ್ಯಕೀಯ ಶಿಕ್ಷಣದಲ್ಲಿ ಗುಣಮಟ್ಟ ಹಾಗೂ ಜ್ಞಾನ ಬಹಳ ಮುಖ್ಯ. ಈ ಮಾನದಂಡಗಳನ್ನು ಅಳೆಯುವುದು ನೀಟ್ ಪರೀಕ್ಷೆಯ ಉದ್ದೇಶ. ನಮ್ಮಲ್ಲಿ ಸೀಟುಗಳ ಕೊರತೆ ಇಲ್ಲ. ನೀಟ್‌ನಲ್ಲಿ 'ಪರ್ಸೆಂಟೇಜ್' ಬದಲು 'ಪರ್ಸೆಂಟೈಲ್' ಅನ್ನು ಪರಿಗಣಿಸಲಾಗುತ್ತದೆ. ಹೀಗಾಗಿ ಪರೀಕ್ಷೆ ಬರೆದವರಿಗೆಲ್ಲಾ ಸೀಟು ಸಿಗುವುದು ಕಷ್ಟ'.

'ನಮ್ಮಲ್ಲಿ ಮೆರಿಟ್ ಇದ್ದವರೂ ಹೆಚ್ಚಿನ ಶುಲ್ಕ ಪಾವತಿಸಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಅನೇಕರು ವಿದೇಶಗಳಿಗೆ ಹೋಗುತ್ತಾರೆ. ಸಮಸ್ಯೆ ಇರುವುದು ಶುಲ್ಕ ವ್ಯವಸ್ಥೆಯಲ್ಲಿ. ನೀಟ್‌ನಿಂದ ಅಲ್ಲ. ನಮ್ಮಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಕಠಿಣ ನಿಯಮಗಳ ಮೂಲಕ ನಮ್ಮ ವಿದ್ಯಾರ್ಥಿಗಳನ್ನು ವೈದ್ಯಕೀಯ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿದ್ದೇವೆಯೇ ಎಂಬ ಆತಂಕವೂ ಇದೆ'.

ಡಾ.ಜಿ.ಎಸ್.ವೆಂಕಟೇಶ್, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮಾಜಿ ನಿರ್ದೇಶಕ ಹಾಗೂ ಎಂ.ಎಸ್.ರಾಮಯ್ಯ ಸಮೂಹ ಸಂಸ್ಥೆಗಳ ಸಲಹೆಗಾರ

12ನೇ ವರ್ಷದ 'ಬೆಂಗಳೂರು– ಇಂಡಿಯಾ ನ್ಯಾನೊ' ಸಮ್ಮೇಳನಕ್ಕೆ ಚಾಲನೆ

ರೈತರಿಗೆ ನ್ಯಾನೊಯೂರಿಯಾ: ಬೊಮ್ಮಾಯಿ

ಬೆಂಗಳೂರು: 'ನ್ಯಾನೊ ತಂತ್ರಜ್ಞಾನದ ಮೂಲಕ ತಯಾರಿಸಿರುವ ಯೂರಿಯಾ ರಸಗೊಬ್ಬರವು ಪರೀಕ್ಷಾ ಹಂತದಲ್ಲಿ ಯಶಸ್ವಿಯಾಗಿದ್ದು, ಇದು ಮುಂಬರುವ ದಿನಗಳಲ್ಲಿ ರೈತರ ಬದುಕನ್ನು ಹಸನಾಗಿಸಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವರ್ಚುವಲ್ ಮಾದರಿಯಲ್ಲಿ ಆಯೋಜಿಸಿರುವ ಮೂರು ದಿನಗಳ 12ನೇ ವರ್ಷದ 'ಬೆಂಗಳೂರು-ಇಂಡಿಯಾ ನ್ಯಾನೊ ಸಮ್ಮೇಳನ' ವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನ್ಯಾನೊ ಯೂರಿಯಾವನ್ನು ರಾಜ್ಯದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಪರೀಕ್ಷೆಗೆ ಒಳಪಡಿಸಲಾಗಿದ್ದು, ಉತ್ತಮ ಫಲಿತಾಂಶ ಬಂದಿದೆ. ಮುಂಬರುವ ದಿನಗಳಲ್ಲಿ ಇದು ಕೃಷಿಕರ ಅವಿಭಾಜ್ಯ ಅಂಗವಾಗಲಿದ್ದು, ನ್ಯಾನೊ ತಂತ್ರಜ್ಞಾನವು ಬದುಕಿನಲ್ಲಿ ಮಹತ್ತರ ಬದಲಾವಣೆಗಳನ್ನು ತರಲಿದೆ' ಎಂದು ನುಡಿದರು.

ಬೆಂಗಳೂರಿನಲ್ಲಿ ಸೋಮವಾರ ನ್ಯಾನೊವಿಜ್ಞಾನಿ ಪ್ರೊ. ಎಸ್. ಸ್ವಾಮಿನಾಥನ್ ಅವರಿಗೆ ಪ್ರತಿಷ್ಠಿತ 'ಸಿಎನ್‌ಆರ್ ರಾವ್ ವಿಜ್ಞಾನ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು.

'ಬೆಂಗಳೂರಿನಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ವಿಶ್ವದರ್ಜೆಯ 180 ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಿವೆ. ಇವು ನ್ಯಾನೊ ತಂತ್ರಜ್ಞಾನವನ್ನು ಜನರ ಬಳಿಗೆ ಕೊಂಡೊಯ್ಯಲಿವೆ' ಎಂದು ಬೊಮ್ಮಾಯಿ ಹೇಳಿದರು.

ತಂಜಾವೂರಿನ ಎಸ್‌ಎಎಸ್‌ಟಿ-ಆರ್‌ಎ (ಸಾಸ್ತ್ರ) ಡೀಮ್ಡ್ ವಿಶ್ವವಿದ್ಯಾಲಯದ ವಿಜ್ಞಾನಿ ಪ್ರೊ.ಎಸ್. ಸ್ವಾಮಿನಾಥನ್ ಅವರಿಗೆ ಪ್ರತಿಷ್ಠಿತ ಪ್ರೊ. ಸಿಎನ್‌ಆರ್ ರಾವ್ ವಿಜ್ಞಾನ ಪ್ರಶಸ್ತಿ ಯನ್ನು ಪ್ರದಾನ ಮಾಡಲಾಯಿತು.

'ನ್ಯಾನೊ ತಂತ್ರಜ್ಞಾನ ನೀತಿಗೆ ಶೀಘ್ರ ರೂಪ'

'ಸರ್ಕಾರ ಶೀಘ್ರ ಸಮಗ್ರ ನ್ಯಾನೊ ತಂತ್ರಜ್ಞಾನ ನೀತಿ ಹೊರತರಲಿದೆ. ಈ ಮೂಲಕ ಸಂಶೋಧನಾ ಮತ್ತು ಔದ್ಯಮಿಕ ವಲಯಗಳ ರಡನ್ನೂ ಹತ್ತಿರಕ್ಕೆ ತರಲಾಗುವುದು. ಇದರಿಂದ, ನ್ಯಾನೊ ತಂತ್ರಜ್ಞಾನದ ಲಾಭವು ಸಮಾಜಕ್ಕೆ ಸಿಗಲಿದೆ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

'ಎಲ್ಲ ವಲಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ನ್ಯಾನೊ ತಂತ್ರಜ್ಞಾನದ ಮೂಲಕ ಮುಂದಿನ ಐದು ವರ್ಷಗಳಲ್ಲಿ ₹2314.25 ಕೋಟಿ ವಹಿವಾಟು ನಡೆಯಲಿದೆ' ಎಂದರು.

ವಾಸ್ತವ ತೆರೆದಿಟ್ಟ 'ಪ್ರಜಾವಾಣಿ'ಗೆ ಮೆಚ್ಚುಗೆ ಅಪಾರ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ವರ್ಗಾವಣೆ ದಂಧೆ ಕುರಿತು 'ಪ್ರಜಾವಾಣಿ' ಯಲ್ಲಿ ವಿಸ್ತೃತವಾಗಿ ಪ್ರಕಟವಾದ 'ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್' ಹಾಗೂ 'ಠಾಣೆ ಮಾಮೂಲಿ ವ್ಯವಸ್ಥೆ; ಜನ ಹೈರಾಣ' ವಿಶೇಷ ವರದಿಗೆ ರಾಜ್ಯದೆಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಪತ್ರಿಕೆಯ ಮುಖಪುಟದಲ್ಲಿ ಸೋಮವಾರ (ಮಾರ್ಚ್ 7) ಪ್ರಕಟವಾದ ವರದಿಯನ್ನು ರಾಜ್ಯದ ಜನ, ತಮ್ಮ ಜಾಲತಾಣದ ಪುಟಗಳಲ್ಲಿ ಹಂಚಿಕೊಂಡಿದ್ದಾರೆ. 'ವರ್ಗಾವಣೆ ದಂಧೆ ಯಾವಾಗ ಕೊನೆಯಾಗುತ್ತದೆ' ಎಂದು ಪ್ರಶ್ನಿಸುತ್ತಿದ್ದಾರೆ. ಆಯ್ದ ಕೆಲ ಪ್ರತಿಕ್ರಿಯೆಗಳು ಇಲ್ಲಿವೆ.

ಬಿಜೆಪಿಯವರೇ ಇದಕ್ಕೇನಂತೀರಿ?

ಅಭಿನಂದನೆಗಳು ಮುಖ್ಯಮಂತ್ರಿಯವರೇ, ನಿಮ್ಮ ಸರಕಾರದ ಅದರಲ್ಲೂ ಗೃಹ ಇಲಾಖೆಯ ದಕ್ಷತೆ ಬಗ್ಗೆ 'ಪ್ರಜಾವಾಣಿ' ಪತ್ರಿಕೆಯಲ್ಲಿ ಹಾಡಿ ಹೊಗಳಲಾಗಿದೆ. ಜನಸ್ನೇಹಿ ಪೊಲೀಸರು ಧನದಾಹಿಗಳಾಗಿದ್ದಾರೆ. ಫಿಕ್ಸಿಂಗ್, ಮಾಮೂಲಿ ವಸೂಲಿ ಸೌಖ್ಯವಾಗಿ ನಡೆಯುತ್ತಿದೆ. ಇಷ್ಟು ಒಳ್ಳೆಯ ಆಡಳಿತವನ್ನು ನಿಮ್ಮನ್ನು ಬಿಟ್ರೆ ಇನ್ಯಾರು ಕೊಡ್ತಾರೆ? ಬಿಜೆಪಿಯವರೇ ಇದಕ್ಕೇನಂತೀರಿ?

- ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ತಾರ್ಕಿಕ ಅಂತ್ಯ ಕಾಣಲಿ

ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೆ ಲಂಚ ಕೊಡಬೇಕೆಂಬ 'ಯಾರಿಗೂ ಗೊತ್ತಿರದಿದ್ದ ಸತ್ಯ' ಪ್ರಕಟಗೊಂಡಿದೆ. ಇತ್ತೀಚೆಗೆ ಗುತ್ತಿಗೆದಾರರು ರಾಜಕಾರಣಿಗಳಿಗೆ ಎಷ್ಟು ಪರ್ಸೆಂಟ್ ಕಮಿಷನ್ ಕೊಡಬೇಕೆಂಬುದು ಖಚಿತವಾದ ರೀತಿಯಲ್ಲೇ, ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೆ ದರಪಟ್ಟಿ ಎಷ್ಟೆಂದು ಸಂಬಂಧಪಟ್ಟವರಿಗೆಲ್ಲ ಖಚಿತವಾಯಿತು. ಲಂಚದ ವ್ಯವಹಾರ ನ್ಯಾಯಾಂಗದ ಗಮನಕ್ಕೆ ಬರಲಿ. ತಾರ್ಕಿಕ ಅಂತ್ಯ ಕಾಣಲಿ

– ರಾಜಾರಾಂ ತಲ್ಲೂರು, ಸಾಮಾಜಿಕ ವಿಶ್ಲೇಷಕ

ರಾಜ್ಯದ ಜನರನ್ನು ಪತ್ರಿಕೆ ಉಳಿಸುತ್ತಿದೆ

ಪತ್ರಿಕೋದ್ಯಮದ ಬಗ್ಗೆ ನಂಬಿಕೆ ಹೋಗಿತ್ತು. 'ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್' ಲೇಖನ ನೋಡಿದ ಬಳಿಕ ಪತ್ರಿಕೋದ್ಯಮದ ಮೇಲೆ ನಂಬಿಕೆ ಬರುತ್ತಿದೆ. ರಾಜ್ಯದ ಜನರನ್ನು ಉಳಿಸುತ್ತಿರುವ 'ಪ್ರಜಾವಾಣಿ' ಕೆಲಸ ಶ್ಲಾಘನೀಯ

– ಹೆಸರು ಹೇಳಲಿಚ್ಛಿಸದ ಹಿರಿಯ ಪೊಲೀಸ್ ಅಧಿಕಾರಿ

ಸೂಕ್ಷ್ಮತೆ ಗ್ರಹಿಸಿದ ಪತ್ರಿಕೆ



ಸಾರ್ವಜನಿಕರಿಗೆ ಸುಖಾಸುಮ್ಮನೇ ಕಷ್ಟ ಕೊಡುವುದು ಪೊಲೀಸ್ ಇಲಾಖೆ. ಇಲ್ಲಿಯ ವರ್ಗಾವಣೆ ದಂಧೆ ಹಾಗೂ ಅದರಿಂದ ಜನಸಾಮಾನ್ಯರ ಮೇಲಾಗುವ ಪರಿಣಾಮಗಳ ಬಗ್ಗೆ 'ಪ್ರಜಾವಾಣಿ' ಅತ್ಯುತ್ತಮ ವರದಿ ಪ್ರಕಟಿಸಿದೆ. ಸೂಕ್ಷ್ಮತೆ ಗ್ರಹಿಸಿದ ಪತ್ರಿಕೆ ಬಳಗಕ್ಕೆ ಅಭಿನಂದನೆಗಳು

–ಮುನಿರಾಜು, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

ನಿಜ, ವರ್ಗಾವಣೆಗೆ ಲಂಚ ಕೇಳ್ತಾರೆ...

ಪೊಲೀಸ್ ಇಲಾಖೆಯ ವರ್ಗಾವಣೆ ದಂಧೆಯ ವಾಸ್ತವ ಸಂಗತಿಯನ್ನೇ 'ಪ್ರಜಾವಾಣಿ' ಹೊರಗೆಡವಿದೆ. ನನಗೂ ಬೇರೆ ಕಡೆ ಕೆಲಸ ಮಾಡುವ ಆಸೆ ಇದೆ. ಆದರೆ, ವರ್ಗಾವಣೆಗೆ ಲಂಚ ಕೇಳುತ್ತಾರೆ. ಅಷ್ಟು ಹಣ ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಹೋಗಿ, ಜನರಿಂದ 'ಮಾಮೂಲಿ' ವಸೂಲಿ ಮಾಡುವುದು ಇಷ್ಟವಿಲ್ಲ. ಹೀಗಾಗಿ, ನಾನ್ ಎಕ್ಸಿಕ್ಯುಟಿವ್ ಹುದ್ದೆಯಲ್ಲೇ ಇದ್ದೇನೆ

– ಹೆಸರು ಹೇಳಲಿಚ್ಛಿಸದ ಬೆಂಗಳೂರು ಪೊಲೀಸ್ ಇನ್‌ಸ್ಪೆಕ್ಟರ್

ಉಕ್ರೇನ್‌ನಿಂದ ಪಾರಾಗಿ ಬಂದ ಬಳ್ಳಾರಿ ವಿದ್ಯಾರ್ಥಿಗಳು

'ರಷ್ಯಾ ಯೋಧರು ಹಣೆಗೆ ಗನ್ ಇಟ್ಟರು'

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಯುದ್ಧ ಪೀಡಿತ ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತದ ಕೆಲ ವಿದ್ಯಾರ್ಥಿಗಳು ಪವಾಡ ಸದೃಶ್ಯ ರೀತಿಯಲ್ಲಿ ಪಾರಾಗಿ ಬಂದಿದ್ದಾರೆ.

ಉಕ್ರೇನ್‌ನಿಂದ ಭಾರತಕ್ಕೆ ಮರಳಲು ಹೊರಟಿದ್ದ ಬಳ್ಳಾರಿ ಮೂಲದ ವಿದ್ಯಾರ್ಥಿಗಳನ್ನು ರಷ್ಯಾ ಯೋಧರು ಅಡ್ಡಗಟ್ಟಿ ತಲೆಗೆ ಬಂದೂಕು ಹಿಡಿದರು. ತಕ್ಷಣವೇ ಜಾಗೃತರಾದ ವಿದ್ಯಾರ್ಥಿಗಳು, 'ನಾವು ಭಾರತದ ಪ್ರಜೆಗಳು. ಬೇಕಿದ್ದರೆ ನಮ್ಮ ಪಾಸ್‌ಪೋರ್ಟ್ ನೋಡಿ' ಎಂದು ಹೇಳಿದರು. ಆನಂತರ ರಷ್ಯಾ ಯೋಧರು ಅವರನ್ನು ಬಿಟ್ಟು ಕಳುಹಿಸಿದರು.

ಉಕ್ರೇನ್‌ನಿಂದ ಬಳ್ಳಾರಿಗೆ ಮರಳಿದ ವಿದ್ಯಾರ್ಥಿಗಳ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದರು.

ಉಕ್ರೇನ್‌ನಿಂದ ತಯಬ್ ಕೌಸರ್, ಶಕೀಬ್, ಸಕೀಮ್, ಸಾಲೋಮನ್ ಎಂಬ ವಿದ್ಯಾರ್ಥಿಗಳು ಬಳ್ಳಾರಿಗೆ ಹಿಂತಿರುಗಿದ್ದಾರೆ. ಇವರೆಲ್ಲರೂ ಅಲ್ಲಿ ಎಂಬಿಬಿಎಸ್ ಓದುತ್ತಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ವಿದ್ಯಾರ್ಥಿಗಳ ಮನೆಗೆ ಸೋಮವಾರ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಾವಿನ ದವಡೆಯಿಂದ ಪಾರಾಗಿ ಬಂದ ತಮ್ಮ ಭಯಾನಕ ಅನುಭವಗಳನ್ನು ಅವರೊಂದಿಗೆ ಹಂಚಿಕೊಂಡರು.

'ನಾವು ಬಂಕರ್‌ನಿಂದ ರೈಲ್ವೆ ಸ್ಟೇಷನ್‌ಗೆ ಹೊರಟಾಗ ರಷ್ಯಾ ಸೈನಿಕರು ಎದುರಾದರು. ನಮ್ಮ ತಲೆಗೆ ಗನ್ ಇಟ್ಟು, ಎಲ್ಲಿಯವರು' ಎಂದು ಪ್ರಶ್ನಿಸಿದರು. 'ನಾವು ಭಾರತೀಯರು ಎಂದು ಹೇಳಿ ಪಾಸ್‌ಪೋರ್ಟ್ ತೋರಿಸಿದ ಬಳಿಕ ನಮ್ಮನ್ನು ಬಿಟ್ಟು ಕಳುಹಿಸಿದರು' ಎಂದು ಸಭಾ ಕೌಸರ್ ಆತಂಕದ ಕ್ಷಣಗಳನ್ನು ಮೆಲುಕು ಹಾಕಿದರು.

ಕ್ಷೇಮ ಕುಶಲ

ನಗು ನಗುತ ಬಾಳ್

ರಘು ವಿ.

ಬದುಕಿನಲ್ಲಿ ನಗೆಯೆಂಬುದು ಅಪರಿಮಿತ ಮೌಲ್ಯಯುಳ್ಳ ಸರಕು. ಅದು ನೀಡುವವರಿಗೂ ಪಡೆಯುವವರಿಗೂ ಸಂತೋಷವನ್ನು ನೀಡುವಂಥದ್ದು. ಜೊತೆಗೆ ಎದುರಿಗಿದ್ದ ವ್ಯಕ್ತಿ ನಕ್ಕಾಗ ಇತ್ತ ಕಡೆಯಿಂದಲೂ ನಗುವುದು ಅನಿವಾರ್ಯ ಕ್ರಿಯೆ. ಜೊತೆಗೆ ನಗೆಯಿಂದ ಮುಖದ ಸ್ನಾಯುಗಳು ಹೆಚ್ಚು ಸಡಿಲಗೊಂಡು ಮುಖಕಮಲವು ಅರಳುತ್ತದೆ. ಮನುಷ್ಯ ಮೂಲತಃ ಆನಂದಸ್ವರೂಪಿ. ಆನಂದವೇ ಬ್ರಹ್ಮ ಎಂದು ವೇದವು ಘೋಷಿಸುತ್ತದೆ. ಭಗವಂತನು ಕೂಡ ಆನಂದರೂಪಿಯಾದ್ದರಿಂದ, ಮನುಷ್ಯನು ಅವನ ಪ್ರತಿರೂಪವಾಗಿ ಆನಂದದಲ್ಲಿ ಇರಬೇಕಾದದ್ದು ಸಹಜ. ಆದರೆ ಇದನ್ನು ಮರೆತ ಮನುಷ್ಯಜೀವಿ ಮತ್ತೆ ಅದೇ ಆನಂದವನ್ನು ಪಡೆಯುವ ಮಾರ್ಗವನ್ನು ಹಿಡಿಯಬೇಕು.

'ಕನ್ನಡದ ಗೀತೆ' ಎನಿಸಿಕೊಂಡ ಕಗ್ಗದಲ್ಲಿ ನಗುವನ್ನು ಕುರಿತಂತೆ ಡಿ.ವಿ.ಜಿ.ಯವರು ನಗು ಮತ್ತು ಅಳುವನ್ನು 'ರಸಪಾಕ' ಎನ್ನುತ್ತಾರೆ. ನಗುವ ವ್ಯಕ್ತಿಯನ್ನು 'ಪರಿಮಳವನ್ನು ಹರಡುವ ಹೂವಿನಂತೆ' ಎಂದು ತಿಳಿಸುತ್ತಾರೆ. ಮತ್ತೊಂದು ಪದ್ಯದಲ್ಲಿ ಎಳೆಯ ಸಸಿ ದಿನದಿಂದ ದಿನಕ್ಕೆ ಹೊಸ ಚಿಗುರನ್ನು ಪಡೆವಂತೆ, ಚಿಲುಮೆಯಲ್ಲಿ ತಿಳಿ ನೀರು ನಿಲ್ಲದೆ ಸತತ ಉಕ್ಕುವಂತೆ, ಎಳೆಯ ಮಕ್ಕಳಲ್ಲಿ ತಿಳಿವು ಮೊಳೆತು ಬೆಳೆಯುವುದು ಇಳೆಯ ಸೊಗಸು ಎನ್ನುವ 'ತಿಮ್ಮಕವಿ' ಸೂಕ್ಷ್ಮವಾಗಿ ಈ ತಿಳಿವಳಿಕೆಯು ನಗೆಯ ರೂಪದಲ್ಲಿ ವ್ಯಕ್ತವಾಗುತ್ತದೆ ಎಂದು ಸೂಚಿಸುತ್ತಾರೆ.

ವರಕವಿ ಬೇಂದ್ರೆಯವರು ನಗೆಯನ್ನು ಮತ್ತೊಂದು ರೀತಿಯಲ್ಲಿ 'ಹಾಸ್ಯಕಿರಣತದನುಸರಣ, ತದಿತರ ಪಥಕಾಣೆನಾ' ಎಂದಿದ್ದಾರೆ. ಕಿರಣಗಳು ಬೆಳಕನ್ನು ಸೂಸುವಂತೆ ಮತ್ತು ಅದು ಪ್ರತಿಬಿಂಬಿತವಾಗುವಂತೆ ಮನುಜರ ನಗೆ, ಆನಂದದ ಅಭಿವ್ಯಕ್ತಿಗೆ ಇತರ ಮಾರ್ಗವಿಲ್ಲ ಎಂದು ಬೇಂದ್ರೆ ಇಲ್ಲಿ ಸೂಚಿಸುತ್ತಾರೆ. ಬೀಚಿಯವರು ಬಹಳ ಮೊನಚಾಗಿ ಹೀಗೆ ಹೇಳಿದ್ದಾರೆ: 'ನಗಿಸುವನು ತಿಂಮಪ್ಪ ನಗುವವನು ನಮ್ಮಪ್ಪ, ನಗುನಗುತ ನಗಿಸುವನು ಎಲ್ಲರಪ್ಪ; ನಗಲಾರದವನ ಕತ್ತೆ ಎಂದೊಡೆ, ಅಗಸನಾ ಕತ್ತೆ ಅತ್ತಿತ್ತೋ ತಿಂಮ.' ಸೃಷ್ಟಿಯ ಯಾವ ಪ್ರಾಣಿಯೂ ಸಂತೋಷವನ್ನು ಈ ಬಗೆಯಲ್ಲಿ ಅಂದರೆ ಮುಖದ ಮೇಲಿನ ಮಂದಹಾಸದೊಂದಿಗೆ ವ್ಯಕ್ತಪಡಿಸಲಾರದು. ಆದರೆ ಮನುಷ್ಯರಿಗೆ ಮಾತ್ರ ಅದಕ್ಕೆ ತಕ್ಕಂತಹ ಮೊಗದ ಲಕ್ಷಣವನ್ನು ನೀಡಲಾಗಿದೆ. ಗಂಟುಮೋರೆಗಿಂತ ನಗುಮೊಗದ ವ್ಯಕ್ತಿಯನ್ನು ಎಲ್ಲರೂ ಕಾಣಬಯಸುತ್ತಾರೆ. ಜಗತ್ತನ್ನು ಕನ್ನಡಿಗೆ ಹೋಲಿಸಲಾಗಿದೆ. ಅಥವಾ ಪ್ರತಿಧ್ವನಿಗೂ ಅನ್ವಯಿಸುವಂತೆ ಜಗದತ್ತ ಮೊಗ ಮಾಡಿ ನಕ್ಕಾಗ ಅದು ನಮ್ಮನ್ನು ನೋಡಿ ಮರುನಗೆ ನೀಡುತ್ತದೆ. ನಾವು ಅತ್ತರೆ ಅದು ನಮ್ಮನ್ನು ನೋಡಿ ಅಳುತ್ತದೆ. ಮೂಲತಃ ಆನಂದಸ್ವರೂಪಿಯೇ ಆದ ಮನುಷ್ಯ ನಗುತ್ತ ಬದುಕುವುದನ್ನು ಕಲಿಯಬೇಕು. ಕಗ್ಗ ಇದನ್ನು ಸೊಗಸಾಗಿ, 'ನಗುವುದು ಸಹಜದ ಧರ್ಮ, ನಗಿಸುವುದು ಪರಧರ್ಮ; ನಗುವ ಕೇಳುತ ನಗುವುದತಿಶಯದಧರ್ಮ, ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ನೀನು ಬೇಡಿಕೊಳೊ' ಎಂದು ಹೇಳುತ್ತಾ ಜೀವನದಲ್ಲಿ ನಗುವಿನ ಮೌಲ್ಯ ಎಷ್ಟು ಮುಖ್ಯವಾದುದು ಎಂಬುದನ್ನು ತಿಳಿಸುತ್ತದೆ.

ಸಾಹಿತ್ಯದಲ್ಲೂ ನಗೆಗೆ ಪ್ರಮುಖವಾದ ಸ್ಥಾನವಿದೆ. ರಾಷ್ಟ್ರಕವಿ ಕುವೆಂಪು ಅವರು ತಮ್ಮ 'ರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಒಂದು ಸಂದರ್ಭದಲ್ಲಿ ನಗುವನ್ನು ರಸವತ್ತಾಗಿ ತಂದಿದ್ದಾರೆ. ಅಭ್ಯಾಸವಿರದ ಸೀತೆ ಹಸಿ ಸೌದೆಯಲ್ಲಿ ಅಡುಗೆ ಮಾಡಿ ಹೊಗೆಯಿಂದ ಉಂಟಾದ ಇರಿಸು ಮುರಿಸನ್ನು ನೀಗಿಕೊಳ್ಳಲು ಮಸಿ ಮೆತ್ತಿದ ತನ್ನ ಕೈಗಳನ್ನು ಬಳಸಿಕೊಂಡಾಗ ಮೋರೆಯಲ್ಲಾ ಮಸಿಯಾಗಿ ಹೋದುದನ್ನು ಗಂಡ ಮತ್ತು ಮೈದುನನಿಗೆ ತಿಳಿಸುವ ಸಂದರ್ಭದಲ್ಲಿ ಅವರು ಅದನ್ನು ಉಲ್ಲಾಸದಿಂದ ಕೇಳಿ ಮಧ್ಯೆ ಮಧ್ಯೆ ನಗುವುದನ್ನು ಚಿತ್ರಿಸಿದ್ದಾರೆ. 'ನಗುತಳ್ಳೆಬಿರಿವಂತೆ' ಆ ನಗುವಿತ್ತು ಎಂದು ಕವಿ ತಿಳಿಸುತ್ತಾರೆ. ಈ ಬಗೆಯ ನಗುವಿಗೆ ಸ್ವಪ್ರತಿಷ್ಠೆ ಅಹಂಕಾರ ಸಂಬಂಧಗಳ ತೊಡಕು ಇರುವುದಿಲ್ಲ. ಮುಕ್ತವಾಗಿ ನಗಲು ಹೃದಯ ಮುಗ್ಧವಾಗಿರಬೇಕು, ಮನಸ್ಸು ನಿರಳವಾಗಿರಬೇಕು. ಬಲವಂತದ ನಗೆ ಸೊಗವನ್ನು, ಮುದವನ್ನು ನೀಡುವುದಿಲ್ಲ. ಮಕ್ಕಳು ನಗುವಾಗ ಅಲ್ಲಿ ಯಾವ ಬಗೆಯ ಕೃತ್ರಿಮತೆಯೂ ಇರುವುದಿಲ್ಲ. ಅಂತಹ ನಗು ಮಾತ್ರ ಕಡಲ ಮುತ್ತಿನಂತೆ ಮನೋಹರವಾಗಿ ಮುದವನ್ನು ನೀಡಬಲ್ಲದು.

ಖಲೀಲ್ ಗಿಬ್ರಾನ್ ನಗುವನ್ನು ಕುರಿತು ಹೀಗೆ ಹೇಳುತ್ತಾನೆ: 'ನನ್ನ ಎದೆಯ ನಗೆಯನ್ನು ನೂರು ಸಾವಿರ ನಿಧಿಯ ಕಾರಣಕ್ಕೂ ವಿನಿಮಯಿಸಲಾರೆ.' ಈ ಮಾತಿನ ಹಿಂದೆ ಜೀವನದ ಸಂತೃಪ್ತಿ ನಗೆಯ ಮೂಲಕ ವ್ಯಕ್ತವಾಗುತ್ತದೆಯೇ ಹೊರತು ಇನ್ನಾವ ತೋರಾಣಿಕೆಯ ಮೂಲಕವೂ ಅಲ್ಲ ಎಂಬ ಸೂಚನೆಯಿದೆ.

> ಅಶಾಶ್ವತವಾದ ಬದುಕಿನಲ್ಲಿ ನಗೆಯೆಂಬುದು ಶಾಶ್ವತ ಮೌಲ್ಯ. ಇಂತಹ ನಗೆ ನಮ್ಮದಾಗಲಿ.

ಮತ್ತೊಂದೆಡೆಯಲ್ಲಿ ಅವನು ಜೀಸಸ್ ಮತ್ತು ಭಗವಂತ ಕಾಡಿನಲ್ಲಿ ಒಟ್ಟಿಗೆ ಕೂತು ಮಾತನಾಡುವ ಬಗ್ಗೆ ಚಿತ್ರಿಸುತ್ತ, 'ಅವರಿಬ್ಬರೂ ಹೊಳೆಯ ಬದಿಯಲ್ಲಿ ಕುಳಿತು ತಮ್ಮ ತಮ್ಮ ಮಾತುಗಳನ್ನು ಹಂಚಿಕೊಂಡರು ಮತ್ತು ಜೀಸಸ್‌ನ ನಗೆ ಭಗವಂತನದ್ದಕ್ಕಿಂತ ಹೆಚ್ಚು ಉಲ್ಲಸಿತವಾಗಿತ್ತು' ಎನ್ನುತ್ತಾನೆ. ಎಂದರೆ ಆನಂದಸ್ವರೂಪಿಯಾದ ಭಗವಂತನಿಗಿಂತ ಅವನ ಭಕ್ತಿಯಲ್ಲಿ ಮತ್ತನಾದ ಭಕ್ತನ ನಗೆ ಇನ್ನೂ ಸೊಗಸಾಗಿರುತ್ತದೆ ಎಂಬುದನ್ನು ಸೂಚಿಸುತ್ತಾನೆ. ಇದನ್ನೇ ಪುರಂದರದಾಸರು 'ನೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಹಾಡಿ ಕುಣಿಯುತ್ತಾರೆ.

ಯಾವುದೇ ಅವತಾರಪುರುಷ ತಾನು ನಗೆಯಲ್ಲಿ ಮಿಂದು ಜಗತ್ತನ್ನು ನಗಿಸಿ ನಲಿದು, ಕುಣಿದು ಮರೆಯಾಗುತ್ತಾನೆ. ಹೀಗೆ ಅಶಾಶ್ವತವಾದ ಬದುಕಿನಲ್ಲಿ ನಗೆಯೆಂಬುದು ಶಾಶ್ವತ ಮೌಲ್ಯ. ಇಂತಹ ನಗೆ ನಮ್ಮದಾಗಲಿ. ❖

ಬೇಸಿಗೆಯ ಬಿಸಿಗೆ ತಂಪುಪಾನೀಯಗಳು

ಡಾ. ವಿಜಯಲಕ್ಷ್ಮಿ ಪಿ.

ಬೇಸಿಗೆ ಬಂತೆಂದರೆ ಐಸ್ ಕ್ರೀಂ ಅಂಗಡಿ, ಜ್ಯೂಸ್ ಅಂಗಡಿಗಳ ಮುಂದೆ ಜನವೋ ಜನ. ಬೇಸಿಗೆಯ ಬಾಯಾರಿಕೆ ನೀಗಲು ಇದೇ ಸುಲಭೋಪಾಯ ಎಂಬ ನಂಬಿಕೆ ಸಾಮಾನ್ಯ. ಆದರೆ ಹೆಚ್ಚಿನ ಜನರು 'ಬಾಯಾರಿಕೆ ಆಗ್ತಾ ಇತ್ತು, ಸೆಕೆ ಆಗ್ತಾ ಇತ್ತು, ಅದಕ್ಕೆ ಐಸ್ ಕ್ರೀಂ ತಿಂದೆ. ಆಮೇಲೆ ಗಂಟಲುನೋವು ಬಂತು, ಮತ್ತೆ ಕೆಮ್ಮು ಶುರು ಆಯ್ತು ಅದು ಕಡಿಮೆನೇ ಆಗ್ತಾ ಇಲ್ಲಾ' ಎಂದು ಹೇಳುತ್ತಾರೆ. ಬಗೆಬಗೆ ತಂಪಾದ ಸೋಡಾ, ತಂಪುಪಾನೀಯಗಳ ಹೆಸರಿನಲ್ಲಿ ಬರುವ ರಾಸಾಯನಿಕಗಳಿಂದ ತಯಾರಿಸಿದ ಪಾನೀಯಗಳು, ಇವುಗಳನ್ನು ಸೇವಿಸಿ ಹಲವು ಬಗೆಯಲ್ಲಿ ದೇಹವನ್ನು ತಂಪಾಗಿಸಲು ಪ್ರಯತ್ನಿಸುವವರು ಹಲವರು. ಆದರೆ ಇವಾವುವೂ ಬಾಯಾರಿಕೆಯನ್ನು ನೀಗಲು ಸುಲಭ ಉಪಾಯಗಳೇನಲ್ಲ.

ಬಿಸಿಲು ಮತ್ತು ಶ್ರಮಗಳಿಂದ ದೇಹದಲ್ಲಿ ದ್ರವಾಂಶ ಕಡಿಮೆಯಾಗಿದೆ ಎಂದು ದೇಹ ಕೊಡುವ ಸೂಚನೆಯೇ ಬಾಯಾರಿಕೆ. ದೇಹದಲ್ಲಿ ನೀರು ಕಡಿಮೆಯಾದಂತೆಲ್ಲಾ ದೇಹದ ಉಷ್ಣತೆ ಹೆಚ್ಚುತ್ತಾ ಹೋಗುತ್ತದೆ. ಇದನ್ನು ಸರಿಪಡಿಸಲು ಇರುವ ಉಪಾಯ ವಿಧವಿಧವಾದ ತಂಪಾದ ದ್ರವಪದಾರ್ಥಗಳ ಸೇವನೆ. ಇಲ್ಲಿ ಗಮನಿಸಬೇಕಾದ್ದು – ಯಾವುದು ದೇಹವನ್ನು ಆಭ್ಯಂತರವಾಗಿ ತಂಪಾಗಿಸಿ ದೇಹದ ಉಷ್ಣತೆಯನ್ನು ಕಾಪಾಡುತ್ತದೋ ಅದು ತಂಪು; ಸ್ಪರ್ಶದಿಂದ ತಂಪಾಗಿರುವ ಆಹಾರಗಳೆಲ್ಲವೂ ದೇಹದ ಉಷ್ಣತೆಯನ್ನು ಕಡಿಮೆ ಮಾಡುವುದಿಲ್ಲ. ನೀರುಮಜ್ಜಿಗೆ, ಹೆಸರುಕಾಳು, ರಸಭರಿತವಾದ ಹಣ್ಣುಗಳು, ಪಾನಕಗಳು, ಎಳನೀರು, ಸೌತೆಕಾಯಿ, ಕೋಕಮ್ ಅಥವಾ ಮುರುಗಲ ಹುಳಿಯ ಪಾನಕ, ಸೊಗದೇ ಬೇರಿನ ಶರಬತ್ತು – ಇಂತಹ ಪದಾರ್ಥಗಳನ್ನು ಬೇಸಿಗೆಯಲ್ಲಿ ಉಪಯೋಗಿಸಬೇಕು. ಇದೇ ರೀತಿ ಕಲ್ಲಂಗಡಿ ಅಥವಾ ಕರಬೂಜದೊಂದಿಗೆ ಸಾಕಷ್ಟು ನೀರಿನ ಸೇವನೆಯೂ ಆರೋಗ್ಯಕಾರಕವೇ.

ಮೊಳಕೆ ಬಂದ ಹೆಸರುಕಾಳನ್ನು ಉಪಯೋಗಿಸುವುದು, ಸೌತೆಕಾಯಿಯನ್ನು ಸೇರಿಸಿ ಕೋಸಂಬರಿ ಮಾಡಿ ಸೇವಿಸುವುದು ಕೂಡ ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಹೆಸರುಕಾಳನ್ನು ನೆನೆಸಿ ರುಬ್ಬಿ ಅದನ್ನು ಬಟ್ಟೆಯಲ್ಲಿ ಹಿಂಡಿ ರಸ ತೆಗೆದು ಅದಕ್ಕೆ ಬೆಲ್ಲ ಸೇರಿಸಿ, ಏಲಕ್ಕಿಯನ್ನು ಉದುರಿಸಿ ಪಾನಕ ಮಾಡಿ ಸೇವಿಸುವುದು ಬೇಸಿಗೆಯಲ್ಲಿ ಅತ್ಯಂತ ಉತ್ಕೃಷ್ಟ ಪಾನೀಯವಾಗಿದೆ. ದೇಹದ ದ್ರವಾಂಶವನ್ನು ಸರಿಪಡಿಸುವುದರ ಜೊತೆಗೆ ಪಿತ್ತವನ್ನು ಕಡಿಮೆ ಮಾಡಿ ಬೇಸಿಗೆಯಲ್ಲಿ ಉಂಟಾಗುವ ಅಮ್ಲಪಿತ್ತ, ಮೂಗು, ವಸಡು, ಮೂತ್ರ, ಗುದದ್ವಾರದಿಂದ ರಕ್ತ ಹೋಗುವ ಪ್ರಕ್ರಿಯೆಯನ್ನು ಇದು ತಡೆಗಟ್ಟುತ್ತದೆ. ದಾಳಿಂಬೆ, ದ್ರಾಕ್ಷಿ – ಅದರಲ್ಲೂ ಬೀಜವಿರುವ ಕಪ್ಪುದ್ರಾಕ್ಷಿಯನ್ನು ಬೀಜದ ಸಮೇತ ರುಬ್ಬಿ ಸ್ವಲ್ಪ ನೀರು ಸೇರಿಸಿ ಕುದಿಸಿ ತಣ್ಣಗಾದ ಮೇಲೆ ಸೇವಿಸುವುದು ಬಾಯಾರಿಕೆ ತಣಿಸುವುದರ ಜೊತೆಗೆ ದೇಹಬಲವನ್ನು ಹೆಚ್ಚಿಸಿ, ಮೈಯುರಿಯನ್ನು ಕಡಿಮೆ ಮಾಡುತ್ತದೆ. ಒಣದ್ರಾಕ್ಷಿ, ಅಂಜೂರ, ಖರ್ಜೂರ ಇವುಗಳನ್ನು ನೀರಿನಲ್ಲಿ ನೆನೆಸಿ, ಪುಡಿ ಮಾಡಿದ ಭತ್ತದ, ಜೋಳದ ಅಥವಾ ತಾವರೆ ಬೀಜದ ಅರಳು(ಮಕಾನ)ಗಳೊಡನೆ ಕಡೆದು ಅಥವಾ ರುಬ್ಬಿ, ಸಕ್ಕರೆ, ಏಲಕ್ಕಿ ಬೆರೆಸಿ ಪಾನಕದಂತೆ ಮಾಡಿ ಸೇವಿಸುವುದು ದೇಹದ ಉಷ್ಣತೆಯನ್ನು ಕಡಿಮೆಮಾಡುತ್ತದೆ; ಅಲ್ಲದೆ ಕೆಮ್ಮು, ತುರಿಕೆ, ನೆಗಡಿ ಇತ್ಯಾದಿ ಅಲರ್ಜಿಯಂತಹ ಸನ್ನಿವೇಶವನ್ನೂ ಕಡಿಮೆ ಮಾಡುತ್ತದೆ.

ಮಾವಿನ ಹಣ್ಣಿನೊಡನೆ ಹಸುವಿನ ಹಾಲನ್ನು ಸೇವಿಸುವುದು ವಾಡಿಕೆ. ಆದರೆ ಹಸುವಿನ ಹಾಲು ಮತ್ತು ಹಣ್ಣನ್ನು ಒಟ್ಟಿಗೆ ಸೇವಿಸುವುದು ಅನಾರೋಗ್ಯಕರ. ಮಾವಿನ ಹಣ್ಣಿನೊಡನೆ ತೆಂಗಿನಕಾಯಿ ಹಾಲನ್ನು ಬಳಸಬಹುದು. ತೆಂಗಿನತುರಿಯನ್ನು ರುಬ್ಬಿ ಹಿಂಡಿ ತೆಗೆದ ಹಾಲು ಮಾವಿನ ಹಣ್ಣಿನಿಂದ ಉತ್ಪನ್ನವಾಗುವ ಪಿತ್ತವನ್ನು ಕಡಿಮೆ ಮಾಡುತ್ತದೆ. ಯಾವುದೇ ಹಣ್ಣಿನ ರಸ ಅಥವಾ ಹಣ್ಣುಗಳ ಮಿಶ್ರಣದೊಡನೆ ತೆಂಗಿನಕಾಯಿಯ ಹಾಲನ್ನು ಬೆರೆಸುವುದು ಉತ್ತಮ. ಬೇಸಿಗೆಯಲ್ಲಿ ಹಸಿ ತರಕಾರಿಗಳ ಸೇವನೆಯು ದೇಹದ ಬಲವನ್ನು ಕಾಪಾಡುವಲ್ಲಿ ಮುಖ್ಯಪಾತ್ರ ವಹಿಸುತ್ತದೆ.

ಬೇಸಿಗೆಯಲ್ಲಿ ಅತಿಸಾರ ಅಥವಾ ಭೇದಿಯನ್ನು ತಡೆಗಟ್ಟಲು ಮತ್ತು ಭೇದಿಯ ಸಂದರ್ಭದಲ್ಲಿ ದ್ರವಾಂಶವನ್ನು ಕಾಪಾಡಲು ಹಾಲು ಒಡೆದ ನೀರು ಆಹಾರರೂಪದಲ್ಲಿರುವ ಉತ್ತಮ ಔಷಧವಾಗಿದೆ. ಅಲ್ಲದೆ ಕಾದಾರಿದ ನೀರಿಗೆ ಅಲ್ಪಪ್ರಮಾಣದಲ್ಲಿ ಉಪ್ಪು ಮತ್ತು ಸಕ್ಕರೆಯನ್ನು ಬೆರೆಸಿ ಸೇವಿಸುವುದು ಒಳ್ಳೆಯದು. ಮಜ್ಜಿಗೆ/ಮೊಸರಿಗೆ ಸಕ್ಕರೆ ಸೇರಿಸಿ (ಲಸ್ಸಿ) ಸೇವಿಸುವುದರಿಂದಲೂ ಬೇಸಿಗೆಯಲ್ಲಿ ಉಂಟಾಗುವ ವಾಂತಿ–ಭೇದಿಗಳನ್ನು ತಡೆಗಟ್ಟಬಹುದು.

ರಾಸಾಯನಿಕಗಳಿಂದ ತಯಾರಿಸಿದ, ಆರೋಗ್ಯವನ್ನು ಹಾಳುಮಾಡುವ ಪಾನೀಯಗಳನ್ನು ಸೇವಿಸದೆ ದೇಶೀಪಾನೀಯಗಳನ್ನು ಸೇವಿಸಿ ಬೇಸಿಗೆಯಲ್ಲಿ ಬಾಯಾರಿಕೆಯನ್ನು ನೀಗಿಸಿಕೊಳ್ಳೋಣ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಧಾತುಗಳ ಆವರ್ತನೀಯ ವರ್ಗೀಕರಣ

ಅಧ್ಯಾಯ 10: ರಸಾಯನಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು

- ಪ್ರಾರಂಭದಲ್ಲಿ ಧಾತುಗಳನ್ನು ಲೋಹಗಳು ಮತ್ತು ಅಲೋಹಗಳು ಎಂದು ಗುಂಪುಗೂಡಿಸಲಾಯಿತು.
- ನ್ಯೂಲ್ಯಾಂಡ್ಸ್ ಅವರ ಕೋಷ್ಟಕವು 56 ಧಾತುಗಳನ್ನು ಹೊಂದಿತ್ತು.
- ಅಷ್ಟಕಗಳ ನಿಯಮವು ಕೇವಲ ಕ್ಯಾಲ್ಸಿಯಂವರೆಗೆ ಮಾತ್ರ ಅನ್ವಯವಾಯಿತು.
- ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮವು ಹಗುರವಾದ ಧಾತುಗಳಿಗೆ ಮಾತ್ರ ಸರಿಹೊಂದುತ್ತದೆ.
- ಇಲೆಕ್ಟ್ರಾನಿಕ್ ವಿನ್ಯಾಸವು ಆಧುನಿಕ ಆವರ್ತಕೋಷ್ಟಕದ ಬೆನ್ನೆಲುಬಾಗಿದೆ.
- ಒಂದು ಕವಚಕ್ಕೆ ಸೇರಿಸಬಹುದಾದ ಗರಿಷ್ಟ ಇಲೆಕ್ಟ್ರಾನ್‌ಗಳ ಸಂಖ್ಯೆಯನ್ನು 2n2 ಸೂತ್ರದಿಂದ ಕಂಡುಹಿಡಿಯಬಹುದು.
- ಆಧುನಿಕ ಆವರ್ತ ಕೋಷ್ಟಕದಲ್ಲಿನ ಪ್ರವೃತ್ತಿಗಳು:

ಗುಣಗಳು	ಆವರ್ತದ ಮುಂದೆ ಹೋದಂತೆ	ವರ್ಗ/ಗುಂಪಿನ ಕೆಳಗೆ ಹೋದಂತೆ
1.ಪರಮಾಣು ತ್ರಿಜ್ಯ	ಕಡಿಮೆಯಾಗುತ್ತದೆ	ಹೆಚ್ಚಾಗುತ್ತದೆ
2.ಅಯಾನೀಕರಣ ಶಕ್ತಿ	ಹೆಚ್ಚಾಗುತ್ತದೆ	ಕಡಿಮೆಯಾಗುತ್ತದೆ
3.ಲೋಹೀಯ ಗುಣ	ಕಡಿಮೆಯಾಗುತ್ತದೆ	ಹೆಚ್ಚಾಗುತ್ತದೆ
4.ಅಲೋಹೀಯ ಗುಣ	ಹೆಚ್ಚಾಗುತ್ತದೆ	ಕಡಿಮೆಯಾಗುತ್ತದೆ
5.ವಿದ್ಯುತ್ ಧನೀಯತೆ	ಕಡಿಮೆಯಾಗುತ್ತದೆ	ಹೆಚ್ಚಾಗುತ್ತದೆ
6.ವಿದ್ಯುತ್ ಋಣೀಯತೆ	ಹೆಚ್ಚಾಗುತ್ತದೆ	ಕಡಿಮೆಯಾಗುತ್ತದೆ

ಸಂಭವನೀಯ ಪ್ರಶ್ನೆ-ಉತ್ತರಗಳು

ಈ ಕೆಳಗಿನ ನಿಯಮಗಳನ್ನು ವ್ಯಾಖ್ಯಾನಿಸಿ:

1. **ಡೋಬರೈನರ್‌ನ ತ್ರಿವಳಿಗಳ ನಿಯಮ:** ತ್ರಿವಳಿಯ ಮೂರು ಧಾತುಗಳನ್ನು ಅವುಗಳ ಪರಮಾಣುರಾಶಿಯ ಏರಿಕೆಯ ಕ್ರಮದಲ್ಲಿ ಬರೆದಾಗ, ಅವುಗಳಲ್ಲಿ ಮಧ್ಯದ ಧಾತುವಿನ ಪರಮಾಣುರಾಶಿಯು ಉಳಿದೆರಡು ಧಾತುಗಳ ಪರಮಾಣು ರಾಶಿಗಳ ಸರಿಸುಮಾರು ಸರಾಸರಿ.
2. **ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮ:** ಧಾತುಗಳನ್ನು ಅವುಗಳ ಪರಮಾಣುರಾಶಿಯ ಏರಿಕೆಯ ಕ್ರಮದಲ್ಲಿ ಬರೆದಾಗ, ಅವುಗಳಲ್ಲಿ ಮೊದಲನೇ ಧಾತು ಎಂಟನೇ ಧಾತುವನ್ನು ಹೋಲುತ್ತದೆ.
3. **ಮೆಂಡಲೀವ್‌ರವರ ಆವರ್ತ ನಿಯಮ:** ಧಾತುಗಳ ಗುಣಗಳು ಅವುಗಳ ಪರಮಾಣು ರಾಶಿಯ ಆವರ್ತನೀಯ ಪುನರಾವರ್ತನೆಗಳು.
4. **ಮೋಸ್ಲೆಯವರ ಆಧುನಿಕ ಆವರ್ತ ನಿಯಮ:** ಧಾತುಗಳ ಗುಣಗಳು ಅವುಗಳ ಪರಮಾಣು ಸಂಖ್ಯೆಯ ಆವರ್ತನೀಯ ಪುನರಾವರ್ತನೆಗಳು.
5. **ಆವರ್ತ ಮತ್ತು ವರ್ಗ/ಗುಂಪು ಎಂದರೇನು? ಆಧುನಿಕ ಆವರ್ತ ಕೋಷ್ಟಕದಲ್ಲಿರುವ ಆವರ್ತ ಮತ್ತು ಗುಂಪುಗಳು ಎಷ್ಟು?**
   - ಆವರ್ತ ಕೋಷ್ಟಕದ ಅಡ್ಡಸಾಲುಗಳನ್ನು ಆವರ್ತ, ಕಂಬಸಾಲುಗಳನ್ನು ವರ್ಗ/ಗುಂಪು ಎಂದೂ ಕರೆಯುತ್ತಾರೆ.
   - ಆಧುನಿಕ ಆವರ್ತ ಕೋಷ್ಟಕದಲ್ಲಿ 7 ಆವರ್ತ ಮತ್ತು 18 ಗುಂಪುಗಳಿವೆ.
6. **ಮೆಂಡಲೀವ್‌ರವರ ಆವರ್ತಕ ಕೋಷ್ಟಕದ 2 ಸಾಧನೆಗಳು ಮತ್ತು 2 ಮಿತಿಗಳನ್ನು ತಿಳಿಸಿ.**

ಸಾಧನೆಗಳು:
- ಮೆಂಡಲೀವ್ ತಮ್ಮ ಆವರ್ತಕ ಕೋಷ್ಟಕದಲ್ಲಿ ಕೆಲವು ಕಡೆ ಖಾಲಿ ಜಾಗಗಳನ್ನು ಬಿಟ್ಟನು. ಇದರಿಂದ ಅಲ್ಲಿಯವರೆಗೂ ಆವಿಷ್ಕರಿಸದೆ ಇದ್ದ ಧಾತುಗಳ ದೊರೆಯುವಿಕೆಯನ್ನು ಊಹಿಸಲು ಸಾಧ್ಯವಾಯಿತು.
- ರಾಜಾನಿಲಗಳನ್ನು ಆವಿಷ್ಕರಿಸಿದಾಗ ಈಗಾಗಲೆ ಅಸ್ತಿತ್ವದಲ್ಲಿರುವ ಜೋಡಣೆಗೆ ತೊಂದರೆ ಉಂಟುಮಾಡದೇ ಹೊಸ ಗುಂಪಿನಲ್ಲಿ ಇಡಬಹುದಾಗಿತ್ತು.

ಮಿತಿಗಳು:
- ಆವರ್ತ ಕೋಷ್ಟಕದಲ್ಲಿ ಹೈಡ್ರೋಜನ್‌ಗೆ ಯಾವುದೇ ಸ್ಥಿರಸ್ಥಾನವನ್ನು ಕೊಡಲು ಸಾಧ್ಯವಾಗಲಿಲ್ಲ.
- ಸಮಸ್ಥಾನಿಗಳು ಮೆಂಡಲೀವ್‌ರವರ ಆವರ್ತಕ ನಿಯಮಕ್ಕೆ ಸವಾಲೆಸೆದವು.

7.ಲೋಹಾಭಗಳು ಎಂದರೇನು? ಉದಾಹರಣೆ ಕೊಡಿ.
- ಲೋಹ ಮತ್ತು ಅಲೋಹ ಎರಡರ ಗುಣಗಳನ್ನು ಪ್ರದರ್ಶಿಸುವ ಧಾತುಗಳನ್ನು ಲೋಹಾಭಗಳು ಎನ್ನುವರು.

ಉದಾ: ಸಿಲಿಕಾನ್, ಜೆರ್ಮೇನಿಯಂ, ಬೋರಾನ್, ಆರ್ಸೆನಿಕ್, ಅಂಟಿಮನಿ ಇತ್ಯಾದಿ.

8. ಆಧುನಿಕ ಆವರ್ತ ಕೋಷ್ಟಕದಲ್ಲಿ 17 ನೇ ಗುಂಪಿನ ಧಾತುಗಳನ್ನು ಏನೆಂದು ಕರೆಯುತ್ತಾರೆ? ಉದಾಹರಣೆ ಕೊಡಿ.

ಹ್ಯಾಲೋಜನ್‌ಗಳು

ಉದಾ: ಫ್ಲೋರಿನ್, ಕ್ಲೋರಿನ್, ಬ್ರೋಮಿನ್ ಅಯೋಡಿನ್.

9. ಆಧುನಿಕ ಆವರ್ತ ಕೋಷ್ಟಕದಲ್ಲಿ 18 ನೇ ಗುಂಪಿನ ಧಾತುಗಳ ವಿಶೇಷತೆಯನ್ನು ವಿವರಿಸಿ. ಉದಾಹರಣೆ ಕೊಡಿ.
- ಈ ಗುಂಪಿನ ಧಾತುಗಳು ns^2np^6 ಇಲೆಕ್ಟ್ರಾನಿಕ್ ವಿನ್ಯಾಸವನ್ನು ಹೊಂದಿದ್ದು ಕೊನೆಯ ಕಕ್ಷೆಯು ಪೂರ್ಣ ತುಂಬಿರುತ್ತದೆ. ಆದ್ದರಿಂದ ಇದನ್ನು ಅಷ್ಟಕ ಜೋಡಣೆ ಎನ್ನುವರು. ಕೊನೆಯ ಕಕ್ಷೆ ಪೂರ್ತಿ ತುಂಬಿರುವುದರಿಂದ ಇವುಗಳ ವೇಲೆನ್ಸಿ ಸೊನ್ನೆ ಆಗಿರುತ್ತದೆ. ಆದ್ದರಿಂದ ಇವು ಸಾಮಾನ್ಯವಾಗಿ ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವುದಿಲ್ಲ. ಆದ್ದರಿಂದ ಇವುಗಳನ್ನು ಜಡಾನಿಲಗಳು ಎನ್ನುವರು.

ಉದಾ: ನಿಯಾನ್, ಆರ್ಗಾನ್, ಕ್ರಿಪ್ಟಾನ್, ಕ್ಸೆನಾನ್.

10. ಧಾತುಗಳ ಪರಮಾಣು ಸಂಖ್ಯೆಗಳು ಕ್ರಮವಾಗಿ 11, 14, 17,18 ಆಗಿದೆ.

ಎ)ಯಾವ ಧಾತುವಿನ ಪರಮಾಣು ಅಯಾನೀಕರಣ ಶಕ್ತಿ ಹೆಚ್ಚು?

ಪರಮಾಣು ಸಂಖ್ಯೆ 18

ಬಿ)ಯಾವ ಧಾತು ವಿದ್ಯುತ್ ಧನೀಯವಾಗಿದೆ?

ಪರಮಾಣು ಸಂಖ್ಯೆ 11

ಸಿ)ಯಾವ ಧಾತು/ಗಳು ಉತ್ತಮ ಅಲೋಹ/ಗಳು ಆಗಿದೆ/ವೆ?

ಪರಮಾಣು ಸಂಖ್ಯೆ 17 & 18

ಡಿ)ಯಾವ ಧಾತು ಜಡಾನಿಲವಾಗಿದೆ?

ಪರಮಾಣು ಸಂಖ್ಯೆ 18

11.ಕಾರಣ ಕೊಡಿ:

ಎ.ಆವರ್ತದ ಮುಂದೆ ಸಾಗಿದಂತೆ ಪರಮಾಣು ಗಾತ್ರ ಕಡಿಮೆಯಾಗುತ್ತದೆ.
- ಏಕೆಂದರೆ ಹೆಚ್ಚುವ ನ್ಯೂಕ್ಲಿಯಾಸ್‌ನ ಆವೇಶವು ಇಲೆಕ್ಟ್ರಾನ್‌ಗಳನ್ನು ನ್ಯೂಕ್ಲಿಯಸ್‌ನ ಹತ್ತಿರಕ್ಕೆ ಸೆಳೆಯುವುದು.

ಬಿ.ಆವರ್ತ ಕೋಷ್ಟಕದಲ್ಲಿ ಜಿ ಗುಂಪಿನ ಧಾತುಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ.
- ಏಕೆಂದರೆ ಜಿ ಬ್ಲಾಕ್ ಧಾತುಗಳಲ್ಲಿ ಅಡ್ಡಸಾಲಿನ ಸಾಮ್ಯತೆಗಿಂತ ಕಂಬಸಾಲಿನ ಸಾಮ್ಯತೆ ಹೆಚ್ಚು.

ಎ. ಬಾಲರಾಜು. ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿ ರಸಾಯನಶಾಸ್ತ್ರದ 'ಪಿರಿಯಾಡಿಕ್ ಕ್ಲಾಸಿಫಿಕೇಷನ್ ಆಫ್ ಎಲಿಮೆಂಟ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹ್ಯಾಲೋ ಆಲ್ಕೇನ್ ಮತ್ತು ಹ್ಯಾಲೋ ಅರೀನ್

ಮಾದರಿ ಪ್ರಶ್ನೋತ್ತರ

ರಸಾಯನಶಾಸ್ತ್ರ

ಪಿಯುಸಿ

24. ಹ್ಯಾಲೋ ಆಲ್ಕೇನ್ ಮತ್ತು ಹ್ಯಾಲೋ ಅರೀನ್ ಉಪಯೋಗಗಳನ್ನು ಬರೆಯಿರಿ

ಉತ್ತರ:- ಹ್ಯಾಲೋಆಲ್ಕೇನ್‌ನಲ್ಲಿರುವ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ SP_3 ಸಂಕರಣದ ಕಾರ್ಬನ್ ಪರಮಾಣುವಿನೊಂದಿಗೆ ಬಂಧಿಸಲ್ಪಟ್ಟಿದೆ. ಆದರೆ ಹ್ಯಾಲೋ ಆರೀನ್‌ನಲ್ಲಿರುವ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ SP_2 ಸಂಕರಣದ ಕಾರ್ಬನ್ ಪರಮಾಣುವಿಗೆ ಬಂಧಿಸಲ್ಪಟ್ಟಿದೆ.

ನಿಸರ್ಗದಲ್ಲಿ ಬಹಳಷ್ಟು ಹ್ಯಾಲೋಜನ್ ಸಂಯುಕ್ತಗಳಿವೆ ಮತ್ತು ಅವುಗಳಲ್ಲಿ ಹಲವು ವೈದ್ಯಕೀಯ ಚಿಕಿತ್ಸೆಗೆ ಉಪಯುಕ್ತವಾಗಿವೆ. ಹ್ಯಾಲೋಜನ್ ಸಂಯುಕ್ತಗಳು ವ್ಯಾಪಕವಾಗಿ ಕೈಗಾರಿಕೆ ಮತ್ತು ನಿತ್ಯಜೀವನದಲ್ಲಿ ಉಪಯುಕ್ತವಾಗಿವೆ. ಇವುಗಳನ್ನು ಸಾಪೇಕ್ಷವಾದ ಅಧೃವೀಯ ಸಂಯುಕ್ತಗಳಿಗೆ ದ್ರಾವಕವಾಗಿಯೂ ಮತ್ತು ಅನೇಕ ಸಾವಯವ ಸಂಯುಕ್ತಗಳ ಸಂಶ್ಲೇಷಣೆಯಲ್ಲಿ ಆರಂಭಿಕ ವಸ್ತುವಾಗಿಯೂ ಬಳಸುತ್ತಾರೆ. ಮಣ್ಣಿನ ಸೂಕ್ಷ್ಮಾಣು ಜೀವಿಯಿಂದ ಪಡೆದ 'ಕ್ಲೋರಾಂಫಿನಿಕಾಲ್' ಎಂಬ ಜೀವ ನಿರೋಧಕ ವಿಷಮಶೀತಜ್ವರದ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ. ನಮ್ಮ ದೇಹವು ಅಯೋಡಿನ್ ಯುಕ್ತ 'ಥೈರೋಕ್ಸಿನ್' ಎಂಬ ಹಾರ್ಮೋನ್ ಅನ್ನು ಉತ್ಪತ್ತಿ ಮಾಡುತ್ತದೆ. ಇದರ ಕೊರತೆಯು ಗಾಯಿಟರ್ ರೋಗವನ್ನು ಉಂಟುಮಾಡುತ್ತದೆ. ಸಂಶ್ಲೇಷಿತ ಹ್ಯಾಲೋಜನ್ ಸಂಯುಕ್ತಗಳಾದ 'ಕೋರೋಕ್ವಿನ್'ನನ್ನು ಮಲೇರಿಯಾದ ಚಿಕಿತ್ಸೆಯಲ್ಲಿಯೂ, ಶಸ್ತ್ರಚಿಕಿತ್ಸೆಯಲ್ಲಿ 'ಹ್ಯಾಲೋಥೇನ್'ನ್ನು ಅರೆವಳಿಕೆಯಾಗಿಯೂ (ಅನಸ್ತೇಶಿಯಾ) ಬಳಸುತ್ತಾರೆ. ಸಂಪೂರ್ಣ ಫ್ಲೋರಿನ್‌ಯುಕ್ತ ಕೆಲವು ಸಂಯುಕ್ತಗಳು ಇಂದಿಗೂ ಶಸ್ತ್ರಚಿಕಿತ್ಸೆಯಲ್ಲಿ 'ಬದಲಿ ರಕ್ತ ಸಾಮರ್ಥ್ಯ'ವುಳ್ಳವುಗಳು (potential blood substitutes) ಎಂದು ಪರಿಗಣಿಸಲಾಗಿದೆ.

25. ಯಾವುದಕ್ಕೆ ಆಲ್ಕೈಲೀನ್ ಡೈ ಹ್ಯಾಲೈಡ್ ಎನ್ನುವರು?

ಉತ್ತರ:- ಒಂದೇ ಬಗೆಯ ಹ್ಯಾಲೋಜನ್ ಅನ್ನು ಹೊಂದಿರುವ ಡೈ ಹ್ಯಾಲೋ ಆಲ್ಕೇನ್‌ಗಳನ್ನು ಆಲ್ಕೈಲಿಡೀನ್ ಅಥವಾ ಆಲ್ಕೈಲೀನ್ ಡೈ ಹ್ಯಾಲೈಡ್‌ಗಳು ಎನ್ನುವರು.

26. ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳ ವರ್ಗಿಕರಣವನ್ನು ಬರೆಯಿರಿ

ಉತ್ತರ:- ಒಂದೇ ಬಗೆಯ ಹ್ಯಾಲೋಜನ್‌ನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳನ್ನು 'ಜೆಮಿನಲ್ ಹ್ಯಾಲೈಡ್'ಗಳು (ಹ್ಯಾಲೋಜನ್ ಪರಮಾಣುಗಳು ಒಂದೇಕಾರ್ಬನ್‌ಗೆಬಂಧಿಸಿರುವ) ಮತ್ತು 'ವಿಸಿನಲ್‌ಹ್ಯಾಲೈಡ್‌ಗಳು' (ಹ್ಯಾಲೋಜನ್ ಪರಮಾಣುಗಳು ಅಕ್ಕ ಪಕ್ಕದ ಕಾರ್ಬನ್‌ನೊಂದಿಗಿರುವ) ಎಂದು ವರ್ಗೀಕರಿಸಿದೆ.

27) ಈ ಕೆಳಗಿನವುಗಳ ಉತ್ಪನ್ನಗಳ ಬರೆಯಿರಿ



ಉತ್ತರ:–



28. ಹ್ಯಾಲೋಆಲ್ಕೇನ್‌ಗಳ ಕ್ರಿಯೆಗಳನ್ನು ಯಾವ ಯಾವ ಗುಂಪುಗಳಾಗಿ ವಿಂಗಡಿಸಬಹುದು?

ಉತ್ತರ:- ಹ್ಯಾಲೋಆಲ್ಕೇನ್‌ಗಳ ಕ್ರಿಯೆಗಳನ್ನು ಈ ಕೆಳಗಿನ ಗುಂಪುಗಳಾಗಿ ವಿಂಗಡಿಸಬಹುದು. (i) ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳು (ii) ವರ್ಜ್ಯನ ಕ್ರಿಯೆಗಳು (iii) ಲೋಹಗಳೊಂದಿಗಿನ ಕ್ರಿಯೆಗಳು

29. ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ: ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆಯಲ್ಲಿ ನ್ಯೂಕ್ಲಿಯೋಕಾಂಕ್ಷಿಯು, ಭಾಗಶಃ ಧನಾವೇಶವನ್ನು ಹೊಂದಿದ ಹ್ಯಾಲೋಜನ್‌ನೊಂದಿಗೆ ಬಂಧಿಸಿರುವ ಕಾರ್ಬನ್ ಪರಮಾಣುವಿನ ಮೇಲೆ ವರ್ತಿಸುತ್ತದೆ. ಆದೇಶ್ಯಕ್ರಿಯೆಯಾದಂತೆ ನಿರ್ಗಮಿಸುವ ಹ್ಯಾಲೋಜನ್ ಪರಮಾಣು, ಹ್ಯಾಲೈಡ್ ಆಯಾನ್ ಆಗಿ ಹೊರಹೋಗುತ್ತದೆ. ಈ ಆದೇಶ್ಯ ಕ್ರಿಯೆಯು ನ್ಯೂಕ್ಲಿಯೋಕಾಂಕ್ಷಿಯಿಂದ ಪ್ರಾರಂಭಗೊಳ್ಳುವುದರಿಂದ ಇದನ್ನು ನ್ಯೂಕ್ಲಿಯೋಕಾಂಕ್ಷಿ ಆದೇಶ್ಯ ಕ್ರಿಯೆ ಎನ್ನುವರು.

30. ಯಾವುದಕ್ಕೆ 'ವಿಲೋಮ ವಿನ್ಯಾಸ' ಎನ್ನುವರು.

ಉತ್ತರ:- ದ್ವೈಅಣ್ವಿಕ ನ್ಯೂಕ್ಲಿಯೋಕಾಂಕ್ಷಿಯ ಸ್ಥಾನಪಲ್ಲಟ ಕ್ರಿಯೆಯನ್ನು S_N2 ವಿವರಿಸುತ್ತದೆ. ಒಳಬರುವ ನ್ಯೂಕ್ಲಿಯೋಕಾಂಕ್ಷಿ ಮತ್ತು ಆಲ್ಕೈಲ್ ಹ್ಯಾಲೈಡ್ ಪರಸ್ಪರ ಪ್ರತಿಕ್ರಿಯಿಸಿದಾಗ ಕಾರ್ಬನ್-ಹ್ಯಾಲೈಡ್ ಬಂಧ ವಿಭಜನೆಯಾಗಿ ಕಾರ್ಬನ್-OH ಬಂಧ ಉಂಟಾಗುತ್ತದೆ. ಈ ಎರಡು ಪ್ರಕ್ರಿಯೆಗಳು ಏಕಕಾಲದಲ್ಲಿ ಒಂದೇ ಹಂತದಲ್ಲಿ ನಡೆಯುವುದರಿಂದ 'ಮಧ್ಯಂತರಕಗಳು' ಉಂಟಾಗುವುದಿಲ್ಲ. ಕ್ರಿಯೆ ಮುಂದುವರಿಯುತ್ತಿರುವಂತೆ ನ್ಯೂಕ್ಲಿಯೋಕಾಂಕ್ಷಿ ಮತ್ತು ಕಾರ್ಬನ್ ನಡುವೆ ಬಂಧ ಉಂಟಾಗುವುದರಿಂದ ಕಾರ್ಬನ್ ಪರಮಾಣು ಮತ್ತು ಹೊರಹೋಗುವ ಗುಂಪಿನ ನಡುವಿನ ಬಂಧವು ದುರ್ಬಲವಾಗುವುದು. ಹೀಗಾದಾಗ ಬಿರುಗಾಳಿಗೆ ಹಿಂದು ಮುಂದಾಗಿ ತಿರುಗಿದ ಕೊಡೆಯಂತೆ ಹೊರಹೋಗುವ ಗುಂಪು ಕಾರ್ಬನ್ ಪರಮಾಣುವನ್ನು ಜೋರಾಗಿ ತಳ್ಳುವುದು. ಪರಿಣಾಮವಾಗಿ, ಉಂಟಾಗುವ ಉತ್ಪನ್ನದಲ್ಲಿ ಕಾರ್ಬನ್ ವಿಲೋಮ ವಿನ್ಯಾಸವನ್ನು ಪಡೆಯುತ್ತದೆ. ಈ ಪ್ರಕ್ರಿಯೆಯನ್ನು 'ವಿಲೋಮ ವಿನ್ಯಾಸ' ಎನ್ನುವರು.

31. ಯಾವ ವಿದ್ಯಮಾನವನ್ನು ದ್ಯುತಿ ಸಮಾಂಗತೆ (optical activity) ಎನ್ನುವರು?

ಉತ್ತರ:- ಕೆಲವು ಸಂಯುಕ್ತಗಳು ಸಮತಲದ್ರುವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್ ಅಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸುವ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು.

ಕೆಲವು ಸಂಯುಕ್ತಗಳು ಸಮತಲ ಧ್ರುವೀಕೃತ ಬೆಳಕನ್ನು ಬಲಕ್ಕೆ ತಿರುಗಿಸುತ್ತದೆ. ಎಂದರೆ ಗಡಿಯಾರದ ಚಲನೆಯ ದಿಕ್ಕಿನಲ್ಲಿ. ಇದನ್ನು ಬಲಭ್ರಾಮಕ (dextrorotatory) ಎನ್ನುವರು. ಇದನ್ನು ಭ್ರಮಣ ಕೋನಕ್ಕಿಂತ ಮುಂಚೆ 'd' ಅಥವಾ '+' ಚಿಹ್ನೆಯಿಂದ ಸೂಚಿಸುತ್ತಾರೆ. ಸಮತಲ ಧ್ರುವೀಕೃತ ಬೆಳಕನ್ನು ಎಡಕ್ಕೆ ತಿರುಗಿಸಿದರೆ (ಗಡಿಯಾರದ ಚಲನೆಯ ವಿರುದ್ಧ ದಿಕ್ಕಿನಲ್ಲಿ) ಅಂತಹ ಸಂಯುಕ್ತಗಳನ್ನು ಎಡಭ್ರಾಮಕ್ (laevorotatory) ಎನ್ನುವರು. ಭ್ರಮಣ ಕೋನದ ಮುಂಚೆ 'I' ರೂಪ ಅಥವಾ ಋಣ (–) ಚಿಹ್ನೆಯಿಂದ ಸೂಚಿಸುತ್ತಾರೆ. ಅಂತಹ ಧನ(+) ಮತ್ತು ಋಣ (-) ಸಮಾಂಗಿಗಳ ಸಂಯುಕ್ತಗಳನ್ನು ದ್ಯುತಿಸಮಾಂಗಿ(optical isomer)ಗಳೆಂದು ಮತ್ತು ಆ ವಿದ್ಯಮಾನವನ್ನು ದ್ಯುತಿ ಸಮಾಂಗತೆ (optical activity) ಎನ್ನುವರು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ರಸಾಯನಶಾಸ್ತ್ರದ ಆಂಗ್ಲ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

❦ ಸುಭಾಷಿತ ❦
ಮನುಷ್ಯನ ಎಲ್ಲ ಸಂಕಟಗಳಿಗೂ ಮುಖ್ಯವಾದ ಕಾರಣ ಆಧ್ಯಾತ್ಮಿಕ ಬಡತನವೇ ವಿನಾ ಭೌತಿಕ ವಸ್ತುಗಳ ಕೊರತೆಯಲ್ಲ.

-ಪರಮಹಂಸ ಯೋಗಾನಂದ

ಕುಡಿಯುವ ನೀರಲ್ಲಿ ಯುರೇನಿಯಂ ಮರೀಚಿಕೆಯೇ ಶುದ್ಧ ಜೀವಜಲ?

ನೀರಿಗಾಗಿ ಕೊಳವೆ ಬಾವಿಗಳನ್ನು ಆಳಕ್ಕೆ ಕೊರೆದಂತೆಲ್ಲ ಆರೋಗ್ಯಕ್ಕೆ ಮಾರಕವಾದ ಫ್ಲೋರೈಡ್, ಆರ್ಸೆನಿಕ್ ಮುಂತಾದ ವಿಷಕಾರಿ ಅಂಶಗಳು ಮೇಲಕ್ಕೆ ಬರುತ್ತಿರುತ್ತವೆ. ಕರ್ನಾಟಕದ ಪೂರ್ವಭಾಗದ ಕೆಲವು ಬರಪೀಡಿತ ಜಿಲ್ಲೆಗಳ ಕೊಳವೆ ಬಾವಿಗಳ ನೀರಿನಲ್ಲಿ ವಿಕಿರಣಪೂರಿತ ಯುರೇನಿಯಂ ಕೂಡ ಪತ್ತೆಯಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ಜಲತಜ್ಞರು ಕೆಲವು ತಿಂಗಳ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ 48 ಗ್ರಾಮಗಳಲ್ಲಿ ಅಪಾಯದ ಮಟ್ಟ ಮೀರಿದ ಪ್ರಮಾಣದಲ್ಲಿ ಯುರೇನಿಯಂ ಅಂಶ ಇದೆಯೆಂದು ವರದಿ ಮಾಡಿದ್ದರು. ಇದು 'ನಿಜಕ್ಕೂ ಆತಂಕಕಾರಿ' ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮೊನ್ನೆ ಬೆಂಗಳೂರಿನಲ್ಲಿ ಹೇಳಿದ್ದಾರೆ. ರಾಜ್ಯ ಸರ್ಕಾರ ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂತಲೂ ಹೇಳಿದ್ದಾರೆ. ಸಚಿವ ಶೇಖಾವತ್ ಅವರ ತವರು ರಾಜ್ಯದಲ್ಲಿ (ರಾಜಸ್ಥಾನ) ಈ ಸಮಸ್ಯೆ ಹತ್ತಾರು ವರ್ಷಗಳಿಂದ ಇದೆ. ಅಮೆರಿಕದ ಡ್ಯೂಕ್ ವಿಶ್ವವಿದ್ಯಾಲಯದ ತಜ್ಞರು ನಾಲ್ಕು ವರ್ಷಗಳ ಹಿಂದೆಯೇ ಅಲ್ಲಿನ ಮತ್ತು ಪಕ್ಕದ ಗುಜರಾತ್‌ನ 324 ಕೊಳವೆ ಬಾವಿಗಳ ನೀರಲ್ಲಿ ಯುರೇನಿಯಂ ಪ್ರಮಾಣ ಅಪಾಯದ ಮಟ್ಟವನ್ನು ಮೀರಿದೆ ಎಂದು ವರದಿ ಮಾಡಿದ್ದರು. ಆ ರಾಜ್ಯಗಳಲ್ಲಿ ಯಾವ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಸಚಿವರು (ಮರಳಿ ಹೋದ ನಂತರವಾದರೂ) ಕರ್ನಾಟಕಕ್ಕೆ ತಿಳಿಸಿದ್ದರೆ ಅನುಕೂಲವಾಗುತ್ತಿತ್ತು.

ಪಾತಾಳದಿಂದ ಬಂದ ಯುರೇನಿಯಂ ಮಾಲಿನ್ಯಕ್ಕೆ ಆಕಾಶದಿಂದ ಬರುವ ನೀರಲ್ಲೇ ಔಷಧವಿದೆ

ಕುಡಿಯುವ ನೀರಿನಲ್ಲಿ ಯುರೇನಿಯಂ ಪ್ರಮಾಣ ಜಾಸ್ತಿ ಇದ್ದರೆ ಅದರಿಂದ ಮೂತ್ರಪಿಂಡ ಕಾಯಿಲೆ, ಶಾರೀರಿಕ ಜಡತ್ವ, ಕ್ಯಾನ್ಸರ್ ಕೂಡ ಬರುತ್ತದೆ ಎಂದು ಆರೋಗ್ಯತಜ್ಞರು ಹೇಳುತ್ತಾರೆ. ಅದು ರೋಗನಿರೋಧಕ ಶಕ್ತಿಯನ್ನೇ ಕುಂದಿಸುವುದರಿಂದ ಯಾವ ಕಾಯಿಲೆಯೂ ಬರಬಹುದು. ಪ್ರತೀ ಲೀಟರ್ ನೀರಿನಲ್ಲಿ 30 ಮೈಕ್ರೊಗ್ರಾಮ್‌ಗಿಂತ ಹೆಚ್ಚಿಗೆ ಯುರೇನಿಯಂ ಇರಬಾರದೆಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಅದು 60 ಮೈಕ್ರೊಗ್ರಾಮ್‌ವರೆಗೆ ಇದ್ದರೂ ಪರವಾಗಿಲ್ಲ, ಅದಕ್ಕಿಂತ ಹೆಚ್ಚಿರಬಾರದು ಎಂದು ಭಾರತೀಯ ಪರಮಾಣು ತಜ್ಞರು ನಮ್ಮವರಿಗಾಗಿ ಗರಿಷ್ಠ ಮಿತಿಯನ್ನು ಏರಿಸಿದ್ದಾರೆ. ಮಾಲಿನ್ಯದ ವಿಷಯದಲ್ಲಿ ನಾವೇನೂ ಸುಧಾರಿತ ರಾಷ್ಟ್ರಗಳಷ್ಟು ಕಟ್ಟುನಿಟ್ಟಾಗಿ ಇರಬೇಕಾಗಿಲ್ಲ ಎಂಬ ಧೋರಣೆಯೇ ಸಮರ್ಥನೀಯವಲ್ಲ; ಅಂಥ ರಾಷ್ಟ್ರಗಳಿಂದ ಬರುವ ಭೋಗವಸ್ತುಗಳ ಗುಣಮಟ್ಟ ತುಸು ಕಳಪೆ ಇದ್ದರೂ ಪರವಾಗಿಲ್ಲ ಎಂಬ ಧೋರಣೆಯನ್ನು ತಳೆಯಲು ಸಾಧ್ಯವೇ? ಅದು ಹೇಗೂ ಇರಲಿ. ಕರ್ನಾಟಕದ 14 ಗ್ರಾಮಗಳಲ್ಲಿ (ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲೇ ಹೆಚ್ಚು) ಯುರೇನಿಯಂ ಪ್ರಮಾಣ 1,000 ಮೈಕ್ರೊಗ್ರಾಮ್‌ಗಿಂತ ಹೆಚ್ಚಿದೆ ಎಂದು ಬೆಂಗಳೂರಿನ ವಿಜ್ಞಾನಿಗಳು ಸಮೀಕ್ಷೆಯಲ್ಲಿ ಹೇಳಿದ್ದಾರೆ. ಇದು ಆತಂಕಕಾರಿ ಅಷ್ಟೇ ಅಲ್ಲ, ಆಘಾತಕಾರಿ. ಇದು ಗೊತ್ತಾಗಿ ಮೂರು ತಿಂಗಳುಗಳೇ ಕಳೆದಿವೆಯಾದರೂ ಚಿಕ್ಕಬಳ್ಳಾಪುರದವರೇ ಆದ ನಮ್ಮ ಆರೋಗ್ಯ ಸಚಿವ ಡಾ. ಸುಧಾಕರ್ ಏನಾದರೂ ಕ್ರಮ ಕೈಗೊಂಡರೇ ಅಥವಾ ಕೇಂದ್ರ ಜಲ ಸಚಿವರ ಆಗಮನಕ್ಕೆ ಕಾಯುತ್ತಿದ್ದರೇ?

ಬಿಸಿಲ ಬೇಗೆ, ಜಲಸಾಕ್ಷರತೆಯ ಅಭಾವ, ಆರೋಗ್ಯ ಸೇವೆಗಳ ಅಲಭ್ಯತೆ ಮುಂತಾದ ಸಂಕಟಗಳಲ್ಲಿ ನಲುಗುತ್ತಿರುವ ಗ್ರಾಮೀಣ ಜನರ ಪಾಲಿಗೆ ಒಂದೆಡೆ ಅಂತರ್ಜಲ ಪಾತಾಳಕ್ಕೆ ಇಳಿಯುತ್ತಿದೆ. ಇನ್ನೊಂದೆಡೆ ಮೇಲೆತ್ತಿದ ನೀರೂ ಅಪಾಯಕಾರಿ ಆಗಿರುವಾಗ ವಿಧಿಯನ್ನು ಹಳಿಯುತ್ತ ಕೂರಲಾಗದು. ಯುರೇನಿಯಂ ಎಂಬುದು ನೈಸರ್ಗಿಕ ಮಾಲಿನ್ಯ ನಿಜ. ಆದರೆ ಕೆರೆಕಟ್ಟೆಗಳ ಕಡೆಗಣನೆ, ನೀರಿನ ದುಂದುಬಳಕೆ, ಮರಳು ಗಣಿಗಾರಿಕೆ, ನೆಡುತೋಪು ಮುಂತಾದ ಕಾರಣಗಳಿಂದಾಗಿ ನಿಸರ್ಗವನ್ನು ಬದಲಿಸಿದ್ದರಿಂದ ಅದು ನಾವೇ ಬರಮಾಡಿಕೊಂಡ ಆಪತ್ತು ಎಂಬುದನ್ನು ಮರೆಯುವಂತಿಲ್ಲ. ಪಾತಾಳದಿಂದೆದ್ದು ಬಂದ ಸಂಕಟದ ನಿವಾರಣೆಗೆ ಆಕಾಶದಲ್ಲೇ ಅತಿ ಸುಲಭದ ಉಪಾಯಗಳೂ ಇವೆ. ಕೋಲಾರ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ಸರಾಸರಿ 800 ಮಿಲಿಮೀಟರಿನಷ್ಟು ಮಳೆ ಬೀಳುತ್ತದೆ. ಅದನ್ನು ಹಿಡಿದಿಟ್ಟುಕೊಂಡರೆ ಪ್ರತೀ ಹೆಕ್ಟೇರಿಗೆ 80 ಲಕ್ಷ ಲೀಟರ್ ನೀರು ಲಭಿಸುತ್ತದೆ. ಅದನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಕುಡಿಯಲು ಪೂರೈಸಿದರೆ ಅದರಲ್ಲಿ ನೀರಿನ ಗಡಸುತನ, ಫ್ಲೋರೈಡ್, ಆರ್ಸೆನಿಕ್, ಯುರೇನಿಯಂ ಯಾವುದೂ ಇರಲಾರದು. ಐವತ್ತು ವರ್ಷಗಳಿಂದ ಗೊತ್ತಿರುವ ಈ ಸರಳ ವಿಧಾನವನ್ನು ಒಂದಾದರೂ ತಾಲ್ಲೂಕಿನ ಒಂದಾದರೂ ಗ್ರಾಮ ಹಾಗಿರಲಿ, ಸರ್ಕಾರಿ ಕಚೇರಿಯಲ್ಲಾದರೂ ಮಾದರಿ ಮಟ್ಟದಲ್ಲಿ ಕಾರ್ಯಗತ ಮಾಡಿದ ಉದಾಹರಣೆ ಇದೆಯೇ? ಮಾತೆತ್ತಿದರೆ ರಾಜಕಾರಣಿಗಳು ಎತ್ತಿನಹೊಳೆ, ಮೇಕೆದಾಟು, ಲಿಂಗನಮಕ್ಕಿಯಿಂದ ನೀರು ತರುತ್ತೇವೆಂದು ಹೇಳುತ್ತಾರೆ. ಚುನಾವಣೆ ಬಂದಾಗಲೆಲ್ಲ ಸಾವಿರಾರು ಕೋಟಿ ಅಂದಾಜುವೆಚ್ಚದ ಅಂಥ ಕನಸಿನ ಬಾಜಾಬಜಂತ್ರಿ ನಡೆಯುತ್ತದೆ. ನೀರಿನಲ್ಲಿ ಯುರೇನಿಯಂ ಪ್ರಮಾಣ ಜಾಸ್ತಿ ಇರುವ ಪಂಜಾಬ್‌ನಲ್ಲಿ ರೋಗಿಗಳಿಗಾಗಿ 'ಕ್ಯಾನ್ಸರ್ ಟ್ರೇನ್' ಓಡುತ್ತಿದೆ ಎಂಬುದು ನೆನಪಾದರೆ ನಾಳೆ ನಮ್ಮಲ್ಲೂ ಕ್ಯಾನ್ಸರ್ ಟ್ರೇನ್, ಕಿಡ್ನಿ ಟ್ರೇನ್‌ಗಳನ್ನು ಆರಂಭಿಸುತ್ತೇವೆಂದು ಕೂಡ ಘೋಷಿಸಬಹುದು. ಅಂಥ ಬಿಸಿಲ್ಗುದುರೆಗಳ ಬದಲು, ಸುಲಭ, ತ್ವರಿತ ಜಾರಿಗೆ ಬರಬಹುದಾದ ಮಳೆನೀರು ಸಂಗ್ರಹದ ಸಣ್ಣಸಣ್ಣ ಕ್ರಮಗಳನ್ನು ಕೈಗೊಂಡರೆ ಸಮಾಜವನ್ನು ಕಾಡುವ ಅದೆಷ್ಟೋ ರೋಗಗಳಿಗೆ ಅದು ಮದ್ದಾಗಬಹುದು. ಕೋಲಾರವೇ ಮಾದರಿಯಾಗಬಹುದು.

ದಿನದ ಟ್ವೀಟ್

ರೆಸಾರ್ಟ್ ಮಾಲೀಕರಿಗೆ ಖುಷಿ!

ಚುನಾವಣೋತ್ತರ ಸಮೀಕ್ಷೆ ಬಳಿಕ ಅತ್ಯಂತ ಖುಷಿಯಲ್ಲಿ ಇರುವವರು ರೆಸಾರ್ಟ್ ಮಾಲೀಕರು. ಮುಂದಿನ ಒಂದು ವಾರ ಹಲವು ರೆಸಾರ್ಟ್‌ಗಳು ತುಂಬಿ ತುಳುಕುತ್ತವೆ ಅನಿಸುತ್ತದೆ.

ಸುಮಂತ್ ರಾಮನ್, ಟಿ.ವಿ. ನಿರೂಪಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಉಕ್ರೇನ್‌ಗೆ ಓದಲಿಕ್ಕೆ ಹೋಗಿದ್ದ ಸುಮಾರು 20 ಸಾವಿರ ಭಾರತೀಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಶೈಕ್ಷಣಿಕ ಸಾಲ ಪಡೆದುಕೊಂಡಿದ್ದಾರೆ. ಅವರ ಮೇಲೆ ಈಗ ಬಡ್ಡಿ ಹಾಗೂ ಸಾಲ ಮರುಪಾವತಿಯ ಹೊರೆ ಬಿದ್ದಿದೆ. ಕಳೆದ ಏಳು ವರ್ಷಗಳಲ್ಲಿ ಮೋದಿ ನೇತೃತ್ವದ ಸರ್ಕಾರವು ತನಗೆ ಹತ್ತಿರವಾಗಿದ್ದವರು ಪಡೆದಿದ್ದ ₹ 10.72 ಲಕ್ಷ ಕೋಟಿಯಷ್ಟು ಭಾರಿ ಮೊತ್ತದ ಸಾಲವನ್ನು ಮನ್ನಾ ಮಾಡಿದೆ. ಈಗ ಮೋದಿ ಅವರು ಉದಾರವಾದ ಮನಸ್ಸಿನಿಂದ ಈ ಶೈಕ್ಷಣಿಕ ಸಾಲವನ್ನು ಪುನರ್‌ರೂಪಿಸಬೇಕು ಅಥವಾ ಮನ್ನಾ ಮಾಡಬೇಕು.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಶನಿವಾರ, 8-3-1997

- **ಮಹಿಳೆ: ಮನೋಭಾವ ಬದಲಾವಣೆಗೆ ಕರೆ**

ನವದೆಹಲಿ, ಮಾ. 7 (ಯುಎನ್‌ಐ), (ಪಿಟಿಐ)– ಸಾರ್ವತ್ರಿಕ ಭಾರತೀಯ ಮೌಲ್ಯವಾದ ಗಟ್ಟಿ ಕುಟುಂಬ ಬಾಂಧವ್ಯಗಳ ಸಂರಕ್ಷಣೆಯೊಂದಿಗೇ ಮಹಿಳೆಯರ ಬಗ್ಗೆ ಸಮಾಜದ ಮನೋಭಾವ ಬದಲಾವಣೆಗೆ ಕರೆ ನೀಡುವುದರೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನದ ಆಚರಣೆಗಳು ಇಂದು ಇಲ್ಲಿ ಆರಂಭವಾದವು.

ಮಹಿಳಾ ಸಬಲೀಕರಣದ ಬಗ್ಗೆ ಪುರುಷರನ್ನು ಸಂವೇದನಾಶೀಲರಾಗಿಸುವ ಕಾರ್ಯ ಇಂದು ತುರ್ತಾಗಿ ಆಗಬೇಕಿದೆ. ಈ ಮೂಲಕ ಆಗುವ ಉನ್ನತ ಸಾಮಾಜಿಕ ಬದಲಾವಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಇದರ ಜತೆಗೇ ಬಲವಾದ ಕೌಟುಂಬಿಕ ಬಾಂಧವ್ಯಗಳನ್ನು ಸಂರಕ್ಷಿಸಲೂ ಯತ್ನಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಸರಳಾ ಗೋಪಾಲನ್ ಕರೆ ನೀಡಿದರು.

- **ಉಕ್ರೇನ್‌ನಿಂದ ಪಾಕ್‌ಗೆ ಸಮರ ಟ್ಯಾಂಕ್ ಪೂರೈಕೆ**

ಲಂಡನ್, ಮಾ. 7 (ಪಿಟಿಐ)– ಕಳೆದ ವರ್ಷ ಖರೀದಿಸಿದ್ದ 320 ಟಿ– ಔಡ್ ಮುಖ್ಯ ಸಮರ ಟ್ಯಾಂಕ್‌ಗಳ (ಎಂಬಿಟಿ)ಮೊದಲ ಕಂತನ್ನು ಉಕ್ರೇನ್‌ನಿಂದ ಪಾಕಿಸ್ತಾನ ಪಡೆದುಕೊಂಡಿದೆ ಎಂದು ಜೇನ್ ರಕ್ಷಣಾ ಸಾಪ್ತಾಹಿಕದ ಇತ್ತೀಚಿನ ಸಂಚಿಕೆ ವರದಿ ಮಾಡಿದೆ.

ಆದರೆ, ಈ ಸಮರ ಟ್ಯಾಂಕ್‌ಗಳ ಸರಬರಾಜು ರಷ್ಯಾ ಮತ್ತು ಉಕ್ರೇನ್ ಅಧಿಕಾರಗಳ ಮಧ್ಯೆ ಘರ್ಷಣೆಗೆ ಕಾರಣವಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 8-3-1972

- **ಮುಂದಿನ ಗುಜರಾತ್ ಮುಖ್ಯಮಂತ್ರಿ ಅದೃಷ್ಟ ಮಹಿಳೆಯರ ಕೈಯಲ್ಲಿ**

ಅಹಮದಾಬಾದ್, ಮಾ. 7– ಗುಜರಾತ್ ಮುಖ್ಯಮಂತ್ರಿ ಸ್ಥಾನ ಗಳಿಸಲು ಆಕಾಂಕ್ಷೆ ಹೊಂದಿರುವವರಲ್ಲಿ ಒಬ್ಬರಾದ ಪ್ರದೇಶ ಕಾಂಗ್ರೆಸ್ (ಆಡಳಿತ) ಅಧ್ಯಕ್ಷ ರತೂಭಾಯಿ ಅದಾನಿ ಅವರ ಜಯಾಪಜಯ ಬಹುಮಟ್ಟಿಗೆ ಮಹಿಳೆಯರ ಕೈಯಲ್ಲಿದೆ.

ನಾಳೆ ಮತದಾನ ನಡೆಯುವ ಜುನಾಗಡ ಜಿಲ್ಲೆಯ ಉನಾ ಕ್ಷೇತ್ರದಿಂದ ಅದಾನಿ ಅವರು ವಿಧಾನಸಭೆಗೆ ಸ್ಪರ್ಧಿಸಿದ್ದಾರೆ. ಅಲ್ಲಿನ 69,368 ಜನ ಮತದಾರರಲ್ಲಿ 34,960 ಜನರು ಮಹಿಳೆಯರು. ಆ ಕ್ಷೇತ್ರ ಮಾತ್ರವಲ್ಲದೆ ಇತರ 27 ಕ್ಷೇತ್ರಗಳಲ್ಲಿ ಮಹಿಳೆಯರದೇ ಮೇಲುಗೈ.

- **ಕಲ್ಬುರ್ಗಿ ಘಟನೆ: ನಷ್ಟದ ಅಂದಾಜಿಗೆ 5 ಮಂದಿ ಸದಸ್ಯರ ಸಮಿತಿ ರಚನೆ**

ಕಲ್ಬುರ್ಗಿ, ಮಾ. 7– ಕಲ್ಬುರ್ಗಿ ನಗರದಲ್ಲಿ ನಡೆದ ಮೂರು ದಿನಗಳ ಲೂಟಿ ಹಾಗೂ ಗಲಭೆಗಳಲ್ಲಿ ಆದ ನಷ್ಟವನ್ನು ಅಂದಾಜು ಮಾಡಲು ರಾಜ್ಯ ಸರ್ಕಾರ ಐವರು ಸದಸ್ಯರ ಸಮಿತಿಯೊಂದನ್ನು ನೇಮಕ ಮಾಡಿದೆ.

ಕೋಟೆಗಳಳಿಯಲಿ, ಬಯಲ ಹೆದ್ದಾರಿಯಲಿ ಭಯವಿರದೆ ಪಯಣ ಸಾಗಲಿ

ಸ್ನೇಹವೇ ಶೌರ್ಯವೆಂಬ ಹೆಣ್ಣುನಡೆಯ ದಾರಿ

ವಿಶ್ಲೇಷಣೆ

ಸಬಿತಾ ಬನ್ನಾಡಿ

'ನಾನು ನಿಮ್ಮನ್ನು ಕಚ್ಚುವುದಿಲ್ಲ, ನಿಮಗೆ ಭಯವಾಗುತ್ತದೆಯೇ' ಎಂದಿದ್ದು, ಯುದ್ಧದ ದಾಳಿಯ ನಡುವೆಯೇ ತಾನೇ ಶಸ್ತ್ರ ಹಿಡಿದು ಒಬ್ಬಂಟಿಯಾಗಿ ಹೋರಾಡಲು ಬೀದಿಗಿಳಿದ ಸಂತ್ರಸ್ತ ದೇಶದ ಅಧ್ಯಕ್ಷ ಎಂಬುದು ಮಹತ್ವದ ಸಂಗತಿ. ಆತನ ಮಾತಿಗೆ ನೂರು ಮತಾಪುಗಳ ಶಕ್ತಿ ಇರುತ್ತದೆ. ಮಾತುಕತೆಯ ಸಂದರ್ಭದಲ್ಲಿ ಮೂವತ್ತು ಅಡಿ ಉದ್ದದ ಟೇಬಲ್‌ನ ಒಂದು ತುದಿಯಲ್ಲಿ ಕುಳಿತುಕೊಳ್ಳುವ ಪುಟಿನ್ ಬಗ್ಗೆ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರ ಈ ವ್ಯಂಗ್ಯ ಕೇವಲ ಮಾತಲ್ಲ.

ದೊಡ್ಡ ದೇಶ ಆನೆಯಂಥಾ ರಷ್ಯಾ, ಆಡಿನಂಥಾ ಉಕ್ರೇನ್‌ನ ಮೇಲೆ ದಾಳಿ ಮಾಡಿದ್ದು, ಭೂಮಿ ಗೆದ್ದರೂ, ಮಾನ ಸೋತಿದ್ದನ್ನು ಈ ಶತಮಾನದ ಪಾಠವಾಗಿ ಜಗತ್ತು ನೋಡಬೇಕಿದೆ. ಈ ಶತಮಾನದಲ್ಲಿ ದೊಡ್ಡ, ಮುಂದುವರಿದ ದೇಶಗಳ ನಾಯಕರುಗಳು ಮಾನಕ್ಕಿಂತಲೂ, ಸುಳ್ಳಾದರೂ ಸರಿ, ಸಮ್ಮಾನವೇ ದೊಡ್ಡದು ಎಂಬಂತೆ ನಡೆದುಕೊಂಡು, ಜನರನ್ನೂ ಭ್ರಷ್ಟರನ್ನಾಗಿಸುವಲ್ಲಿ ದಾಪುಗಾಲು ಹಾಕುತ್ತಿರುವಾಗ, ಉಕ್ರೇನ್ ಪ್ರಾಣಕ್ಕಿಂತಲೂ ಮಾನವೇ ಹಿರಿದು, ಸತ್ಯದ ದಾರಿಯಲ್ಲೇ ನಡೆಯುತ್ತೇವೆ ಎಂದು ಇಡೀ ದೇಶದ ಪ್ರಜೆಗಳಲ್ಲಿ ಆ ಭಾವ ತುಂಬಿ ಒಗ್ಗಟ್ಟಿನಿಂದ ನಡೆದುಕೊಳ್ಳುತ್ತಿರುವುದು ಖಂಡಿತಾ ದೊಡ್ಡ ದೇಶಗಳ 'ದೊಡ್ಡ' ನಾಯಕರಿಗೆ ಇರಿಸುಮುರಿಸು ಮಾಡಿರುತ್ತದೆ.

ಈಗಾಗಲೇ ಚೀನಾವು ರಷ್ಯಾವನ್ನು ಬೆಂಬಲಿಸಿ ಎಂದು ತನ್ನ ಪ್ರಜೆಗಳಿಗೆ ಅಲವತ್ತುಕೊಂಡಿದೆ. ಆದರೆ ರಷ್ಯಾದ ಪ್ರಜೆಗಳೇ ರಷ್ಯಾ ಬೆಂಬಲಕ್ಕಿಲ್ಲ ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಇದು ಕೇವಲ ಯುದ್ಧದ ಪ್ರಶ್ನೆಯಲ್ಲ, ಇದು ನಾಯಕತ್ವದ ನಡೆಯು ಹೇಗಿರಬೇಕು ಎಂಬ ಪ್ರಶ್ನೆಯೂ ಆಗಿದೆ. ಜಾಗತಿಕ ಯುದ್ಧಗಳಿಗೆ, ಆಕ್ರಮಣಗಳಿಗೆ ಕಾರಣವಾದ ಎಲ್ಲ 'ಬಲಿಷ್ಠ' ನಾಯಕತ್ವದ ಮಾದರಿಯು ಶೌರ್ಯವನ್ನು ತಪ್ಪಾಗಿ ವ್ಯಾಖ್ಯಾನಿಸಿದ, ಕೆಲವೇ ಗಂಡಸರು ಹುಟ್ಟುಹಾಕಿ ಎಲ್ಲ ಗಂಡಸರ ಮೇಲೆ ಹೇರಿಕೆ ಮಾಡಿದ (ಹಲವು ಹೆಂಗಸರು ಅದನ್ನು ನಂಬಿ ಅನುಕರಣೆ ಮಾಡಲೆತ್ನಿಸುವ) 'ಸಿದ್ಧ ಗಂಡು ಮಾದರಿ' ಯಾಗಿದ್ದು, ಇದರ ಕೊರತೆಗಳನ್ನು ಕಂಡುಕೊಳ್ಳಲು ಕೂಡಾ ಈ ಸಿದ್ಧಮಾದರಿಯಲ್ಲಿನ ನಂಬಿಕೆಗಳು ಅಡ್ಡಿ ಮಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಉಕ್ರೇನ್ ಬಗ್ಗೆ ಮತ್ತೆ ಮತ್ತೆ ಬರುತ್ತಿರುವ ಮಾತೆಂದರೆ, ಅವರು ರಷ್ಯನ್ನರನ್ನು ಪ್ರೀತಿಸುತ್ತಿದ್ದರು, ಸಹೋದರತೆಯಿಂದ ನೋಡುತ್ತಿದ್ದರು ಎಂಬುದಾಗಿದೆ. ಇಂದು ಜಗತ್ತು ಇಡಬೇಕಾದ ಹೆಜ್ಜೆ ಯಾವುದು ಎಂಬ ಬಗ್ಗೆ ಇತಿಹಾಸಜ್ಞ ನೋಹಾ ಹರಾರಿ, 'ನಾವೀಗ ಹಣ ತೊಡಗಿಸಬೇಕಾದುದು ಮಿಲಿಟರಿಯ ಮೇಲಲ್ಲ, ಬದಲಿಗೆ ಜನರ ಶಿಕ್ಷಣ, ಆರೋಗ್ಯ, ಸುಸ್ಥಿರ ಪರಿಸರ ಇತ್ಯಾದಿಗಳ ಮೇಲೆ. ಪುಟಿನ್ ಮಿಲಿಟರಿ ಮೇಲೆ ಅತಿ ಹೆಚ್ಚು ಖರ್ಚು ಮಾಡುತ್ತಿದ್ದು, ಇದರಿಂದಾಗಿ ಅಲ್ಲಿನ ಜನರ ಜೀವನವೆಚ್ಚ ಹೆಚ್ಚಾಗಿದೆ. ಬಲಿಷ್ಠ ಮಿಲಿಟರಿಯ ತನಗೆ ಉಕ್ರೇನ್ ಇಪ್ಪತ್ನಾಲ್ಕು ಗಂಟೆಗಳಲ್ಲಿ ಹೂ ನೀಡಿ ಸ್ವಾಗತಿಸಿ ಶರಣಾಗುತ್ತದೆ ಎಂಬುದು ಒಬ್ಬ ವ್ಯಕ್ತಿಯ ಭ್ರಮಾಧೀನ ಸ್ಥಿತಿಯ ನಂಬಿಕೆಯಾಗಿದ್ದು, ಭವಿಷ್ಯದಲ್ಲಿ ಜಗತ್ತು ಬೆಲೆ ತೆರಬೇಕಾಗಿದೆ' ಎನ್ನುತ್ತಾರೆ.

ಈ ಹೊತ್ತು ಯಾವುದೇ ದೇಶ ತನ್ನ ನೆರೆಹೊರೆಯ ದೇಶಗಳೊಂದಿಗೆ ಇರಬೇಕಾದ ರೀತಿ ಯಾವುದು ಎನ್ನುವುದಕ್ಕೆ ಯುರೋಪಿಯನ್ ಒಕ್ಕೂಟ ಕಣ್ಣಮುಂದಿರುವ ಸದ್ಯದ ಒಳ್ಳೆಯ ದಾರಿಯಾಗಿದೆ. ಅನೇಕ ಪುಟ್ಟ ಪುಟ್ಟ ದೇಶಗಳ ಗೊಂಚಲಿನಂತೆ ಇರುವ ಯುರೋಪ್‌ನ ಹಲವು ದೇಶಗಳು ಸ್ವ ಇಚ್ಛೆಯಿಂದ ಯುರೋಪಿಯನ್ ಒಕ್ಕೂಟಕ್ಕೆ ಸೇರಿಕೊಂಡಿವೆ. ಹೀಗೆ ಮಾಡಿಕೊಂಡು, ಶಾಂತವಾಗಿಯೇ ಎಲ್ಲವೂ ಆರ್ಥಿಕವಾಗಿ ವಿಶೇಷ ಯಶಸ್ಸನ್ನು ಪಡೆದುಕೊಂಡಿವೆ. ಈಗ ಉಕ್ರೇನ್ ಕೂಡಾ ತಾನು ಈ ಒಕ್ಕೂಟದ ಭಾಗವಾಗುತ್ತೇನೆ ಎನ್ನುತ್ತಿದೆ. ಈ ದೇಶಗಳ ನಡುವೆ ಜನರ ವ್ಯಾಪಾರ ವಹಿವಾಟು, ಓಡಾಟವೂ ಮುಕ್ತವಾಗಿದೆ. ಕೋಟೆ ಕಟ್ಟಿಕೊಂಡು, ಯಾರು ನಮ್ಮ ಮೇಲೆ ಆಕ್ರಮಣ ಮಾಡುತ್ತಾರೋ ಎಂದು ಹೆದರಿಕೊಂಡು ಕಾವಲು ಪಡೆ ನೇಮಿಸಿಕೊಂಡು ಕಾಯುತ್ತಾ ಕುಳಿತುಕೊಳ್ಳುವುದು ಮಾನಸಿಕವಾಗಿ ನಮ್ಮನ್ನು ಜರ್ಝರಿತರನ್ನಾಗಿಸುತ್ತದೆ. ಇಷ್ಟೆಲ್ಲಾ ಮಾಡಿ, ಅಭಿವೃದ್ಧಿ ಸಾಧಿಸಬೇಕು ಅನ್ನುತ್ತಾ ನಾವು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿಯೇ ಪ್ರಖರ ದೀಪಕ್ಕೆ ಸುತ್ತುವ ಪತಂಗದ ಮಾದರಿಯಾಗಿದ್ದು ಬೇರೆ ಶತ್ರುಗಳೇನು, ನಮ್ಮ ಜೀವನಶೈಲಿಯೇ ನಮ್ಮ ಶತ್ರುಗಳಾಗಿರುವಾಗ, ಈ ಯುದ್ಧಗಳು ನಾಶದ ವೇಗವರ್ಧಕಗಳಾಗಿ ಮಾತ್ರ ಕೆಲಸ ಮಾಡಬಲ್ಲವು. ಇದಕ್ಕೆ ಭಿನ್ನವಾದ ತಾಯಿ ಮಾದರಿಯೊಂದು ನಮ್ಮ ನಡುವೆ ಇದ್ದು, ಅದನ್ನು ಮುನ್ನೆಲೆಗೆ ತರಬೇಕಿದೆ. ವಿನಾಶವಲ್ಲ, ವಿವೇಕ. ಇರುವುದನ್ನು ಕಾಪಿಟ್ಟುಕೊಳ್ಳುವ ಮಾತೃತ್ವ, ನಿನ್ನೊಂದಿಗೆ ನಾನು ಮತ್ತು ಮುಂದೆ ಹುಟ್ಟಲಿರುವವರು ಎಂಬ ಈ ಹೆಣ್ಣು ನಡೆಯನ್ನು ಒಪ್ಪಿಕೊಳ್ಳಲು ಇರುವ ಅಹಂಕಾರವನ್ನು ಜಗತ್ತು ತೊರೆದ ದಿನ ಈ ಜಗತ್ತು ಸ್ವರ್ಗವೆನಿಸುತ್ತದೆ.

'ಹನಿಲ್ಯಾಂಡ್' ಎಂಬ ಟರ್ಕಿಶ್ ಸಿನಿಮಾವೊಂದಿದೆ. ಅದರಲ್ಲಿ ಬೆಟ್ಟಗಳ ತಪ್ಪಲಿನ ಬಯಲಿನಲ್ಲಿನ ಒಂಟಿ ಮನೆಯಲ್ಲಿ ತಾಯಿಯೊಂದಿಗೆ ಇರುವ ಬೋಸ್ನಿಯಾ ಹೆಣ್ಣುಮಗಳು ಕಾಡಿನ ಜೇನುಗಳನ್ನು ಕಲ್ಲಿನ ಪೊಟರೆಯೊಳಗೆ ನೈಸರ್ಗಿಕ ಕೃಷಿ ಮಾಡಿ, ಪೇಟೆಯಲ್ಲಿ ಮಾರಿ ತನಗೆ ಬೇಕಾದ್ದನ್ನು ಕೊಂಡುಕೊಂಡು ನೆಮ್ಮದಿಯಲ್ಲಿ ಇರುತ್ತಾಳೆ. ಆ ಜೇನುಗಳಿಗೆ ಅವಳು ಎಂದೂ ಹಾನಿ ಮಾಡುವುದಿಲ್ಲ. ಅರ್ಧಭಾಗ ಅವುಗಳಿಗೆ ಬಿಟ್ಟು ಇನ್ನರ್ಧ ಮಾತ್ರ ತಾನು ಪಡೆಯುತ್ತಾಳೆ. ಹೀಗಾಗಿ ಅವು ಯಾರನ್ನೂ ಕಚ್ಚುವುದಿಲ್ಲ ಮತ್ತು ಸಂತತಿಯೂ ಹೆಚ್ಚುತ್ತದೆ. ಹೀಗಿರುವಾಗ ಇದ್ದಕ್ಕಿದ್ದಂತೆ ಹತ್ತಾರು ಜನರ ಒಂದು ಕುಟುಂಬ ತನ್ನ ನೂರಾರು ಹಸು, ಲಾರಿಗಟ್ಟಲೆ ಸಾಮಾನು, ಯಂತ್ರಗಳು ಎಲ್ಲವನ್ನೂ ಹೇರಿಕೊಂಡು ದೂಳೆಬ್ಬಿಸುತ್ತಾ, ಗಲಾಟೆ ಮಾಡುತ್ತಾ ಅಲ್ಲಿಗೆ ಬಂದು ನೆಲೆಸುತ್ತದೆ. ಜೇನಿನ ಪೆಟ್ಟಿಗೆ ಸ್ಥಾಪಿಸಿ ಇವಳ ಮಾದರಿಯನ್ನು ನಗೆಪಾಟಲು ಮಾಡಿ, ಎಲ್ಲ ಹುಟ್ಟುಗಳನ್ನೂ ತಾವೇ ಬಳಸಿ ಅವಳ ಜೇನುಹುಳಗಳನ್ನೂ ನಾಶ ಮಾಡಿ ಹಿಂಡಿಕೊಂಡು, ಕೊನೆ ಕೊನೆಗೆ ಜೇನಿನ ಸಂತತಿಯೇ ನಾಶವಾಗಿ ಬದುಕಿಗಾಗಿ ಇನ್ನೆಲ್ಲಿಗೋ ವಲಸೆ ಹೋಗುತ್ತಾರೆ. ಈಕೆ ಕಾಡಲ್ಲಿ ಅಲೆದು ಹೇಗೋ ಉಳಿಸಿದ್ದ ಒಂದು ಹುಟ್ಟನ್ನು ನೋಡುವಲ್ಲಿಗೆ ಸಿನಿಮಾ ಮುಗಿಯುತ್ತದೆ. ಅಲ್ಲಲ್ಲಿ ಈ ಭೂಮಿತತ್ವದ ಜನರು ಉಳಿಸಿದ್ದಕ್ಕಷ್ಟೇ ನಾವಿನ್ನೂ ಇದ್ದೇವೆ, ಠೇಂಕಾರದಲ್ಲಿ ಮೆರೆಯುತ್ತಿದ್ದೇವೆ.

ಮಹಿಳಾ ದಿನಾಚರಣೆ ಪುನಃ ಬಂದಿದೆ. ಇದು ದಿನ ಮತ್ತು ಆಚರಣೆ ಅಷ್ಟೇ ಅಲ್ಲ. ಇದು ಕೇವಲ ಹೆಣ್ಣಿನ ಹಕ್ಕಿನ ಮಾತೂ ಅಲ್ಲ. ಇದು ತಾಯಿಯೊಬ್ಬಳು ತನ್ನ ಗಂಡು ಮತ್ತು ಹೆಣ್ಣು ಮಕ್ಕಳೆಲ್ಲರನ್ನು ಸಮಾನ ನೋವು ಕೊಟ್ಟು ಹೆತ್ತು, ಸಮಾನ ಸಂತಸದಲ್ಲಿ ಪೊರೆದು, ಶಿಕ್ಷಣ ಮತ್ತು ಅದಕ್ಕಾಗಿ ತಕ್ಕ ಅಪಾಯಕಾರಿಯಲ್ಲದ ಶಿಕ್ಷೆ ನೀಡಿ ಪೊರೆದ ಆಡಳಿತ ಮಾದರಿಯನ್ನು ಜಗತ್ತು ಸ್ವೀಕರಿಸಬೇಕಾದ ದಿನವೂ ಆಗಿದೆ.

ನಮ್ಮ ಕರ್ನಾಟಕದಲ್ಲೂ ಒಂದು ಮಹಿಳಾ ಒಕ್ಕೂಟವಿದೆ. ಈ ಒಕ್ಕೂಟಕ್ಕೆ ಯಾವುದೇ ಅಧ್ಯಕ್ಷರಾಗಲೀ ಪದಾಧಿಕಾರಿಗಳಾಗಲೀ ಯಾವುದೇ ಸದಸ್ಯತ್ವ ಶುಲ್ಕವಾಗಲೀ ಇಲ್ಲ. ಲಿಂಗಭೇದವಿಲ್ಲದೆ ಮಾನವೀಯ ತತ್ವದಲ್ಲಿ ನಂಬಿಕೆ ಇರುವವರೆಲ್ಲರೂ ಇದರ ಸದಸ್ಯರೂ ಕಾರ್ಯಕರ್ತರೂ ಆಗಬಹುದು. ಇದು ಯಾವುದೇ ರೀತಿಯ ದೌರ್ಜನ್ಯದ ವಿರುದ್ಧ ಜಾಗೃತಿ ಮತ್ತು ಪರ್ಯಾಯ ನಡೆಯನ್ನು ನಮ್ಮಿಂದಲೇ ಆರಂಭಿಸಬೇಕು ಎಂಬ ನಂಬಿಕೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಪ್ರತೀ ವರ್ಷವೂ ಒಂದೊಂದು ಜಿಲ್ಲೆಗೆ ತೆರಳಿ, ಅಲ್ಲಿ ವರ್ಷವಿಡೀ ಅರಿವಿನ ಪಯಣಗಳನ್ನು ಮಾಡಿ ಮಾರ್ಚ್ 8ರಂದು ಸಮಾರಂಭದೊಂದಿಗೆ ಇನ್ನೊಂದು ಜಿಲ್ಲೆಗೆ ಪಯಣ ಹೊರಡುತ್ತದೆ. ಈ ವರ್ಷ ಕಲಬುರಗಿಯಲ್ಲಿ ನಡೆಯುತ್ತಿದ್ದು, ಇದನ್ನು ಉದ್ಘಾಟಿಸುವುದು ಬೀಜಗಳನ್ನು ಕಾಪಿಡುವ ತಾಯಿ ಪುಟ್ಟೀರಮ್ಮ.

ಈ ಹೆಣ್ಣುಮಾದರಿಯ ಶಿಕ್ಷಣವು ಪುಟಿನ್‌ರನ್ನೂ ಸೇರಿಸಿ ಸದಾ ಆಕ್ರಮಣವೇ ಶೌರ್ಯ ಎಂದು ಭಾವಿಸಿರುವ ಎಲ್ಲ ಪುಕ್ಕಲೆದೆಯವರಿಗೂ ಸಿಗಲಿ.

ಲೇಖಕಿ: ಪ್ರಾಧ್ಯಾಪಕಿ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ

ಚುರುಮುರಿ



ಉಕ್ರೇನ್ ಪಾದಯಾತ್ರೆ

• ಲಿಂಗರಾಜು ಡಿ.ಎಸ್.

'ನಮ್ ಬಸಣ್ಣ ಚಿನ್ನ ತೂಗಿದಂಗೆ ಬಜೆಟ್ಟು ರೆಡಿ ಮಾಡಿ ಕೊಟ್ಟರದೇನೋ ಸರಿ, ಆದರೆ ರಾಜಕೀಯ ಪಾದಯಾತ್ರೆ ಮಾಡೋರಿಗೂ ನೀರಿನ ವ್ಯಾನು ಯೋಜನೆ ಘೋಷಣೆ ಮಾಡಬೇಕಾಗಿತ್ತು' ಅಂತ ನೊಂದ್ಕಂಡರು ತುರೇಮಣೆ.

'ಅಲ್ಲಾ ಸಾ, ಎಂಬಿಬಿಎಸ್ ಓದಕೋಗಿದ್ದ ಪಾಪದ ಹುಡ್ಲು ಉಕ್ರೇನಿನಗೆ ಹೆದರಿ ಹೇರ್ ಲಿಫ್ಟ್ ಮಾಡಿಕ್ಯಂಡವೆ. ಅವುನ್ನ ವಾಪಸ್ ಕರಕಬರದು ಯಂಗೆ ಅಂತ ಯೋಚ್ನೆ ಮಾಡದೆ ನಗಸಾರ ಆಡ್ತಿರಾ?' ಅಂತ ಸಿಟ್ಟು ತೋರಿಸಿದೆ.

'ರಾಜಕಾರಣಿಗಳು, ರಿಯಲ್ ಎಸ್ಟೇಟ್ ಕುಳಗಳು ಜಾತಿಗೊಂದು, ಬೀದಿಗೊಂದು ಮೆಡಿಕಲ್ ಕಾಲೇಜು ತಕ್ಕಂದು ಕೋಟಿ-ಕೋಟಿ ಡೊನೇಶನ್ ಕೇಳ್ತ ಕುಂತವರೆ. ಬುದುವಂತ ಮಕ್ಕಳಿಗೆ ಫ್ರೀ ಸೀಟು ಕೊಡಕ್ಕಾಗಲ್ವೇನಾ? ಉಕ್ರೇನಿಗೋದೋರು ಇಲ್ಲಿ ಅರ್ಹತಾ ಪರೀಕ್ಷೇನೆ ಪಾಸು ಮಾಡಕ್ಕಾಗಲ್ಲ ಅಂತ ಚ್ವಾರೆ ಮಾತಾಡತರೆ ಮಂತ್ರಿಗಳು' ಅಂತ ಬೇಜಾರಾದರು.

'ಉಕ್ರೇನಿಂದ ಹುಡ್ಲು ವೀಡಿಯೋ ಮಾಡಿದ್ವಂತೆ ಕನ್ರೋ. 'ನಾವು ರಷ್ಯಾ ದೇಸಕ್ಕೆ ನಡಕೋಯ್ತಿವಿ. ಮುಂದುಕ್ಕೆ ನೀವೇ ಜವಾಬ್ದಾರರು' ಅಂತ!' ಯಂಟಪ್ಪಣ್ಣ ಚಿಂತೆಗೆ ಬಿತ್ತು.

'ಅಣ್ಣೆ, ರಾಜಕಾರಣಿಗಳು ಮ್ಯಾಕೆದಾಟು ಪಾದಯಾತ್ರೆ ಮಾಡಿ ದೂಳೆಬ್ಬಿಸಿದ ಖುಷಿಲವ್ರೆ. 'ಸ್ಯಾನೆ ಮಜವಾಗದೆ! ಹಿಂಗೇ ಮಹದಾಯಿ, ಎತ್ತಿನಹೊಳೆ, ಕೃಷ್ಣಾ ಪಾದಯಾತ್ರೆ ಮಾಡುತ್ಲೇ ಇರಮು' ಅಂತ ಕೈ ಪಕ್ಷ ಅಂದದಂತೆ. ಉಕ್ರೇನಲ್ಲಿ ಹುಡ್ಲು ಕೈಲಿ ಹಿಡಿದುದ್ದು ಕಾಂಗ್ರೆಸ್ ಧ್ವಜ ಅಂದ್ಕಂಡು ಅಲ್ಲಿಗೂ ಪಾದಯಾತ್ರೆ ಮಾಡಬೌದು. ಮುಂದೆ ಅಧಿಕಾರ ಹಿಡಿಯಕ್ಕೆ ಅನುಕೂಲಾಯ್ತದೆ ಅಂತ ಮಂತ್ರಿಗಳು 'ನಾವೇ ಉಕ್ರೇನಿಗೆ ಪಾದಯಾತ್ರೆ ಮಾಡಿ ಹುಡ್ಲುನೆಲ್ಲಾ ಎತ್ತಾಕ್ಯಂದು ಬತ್ತೀವಿ!' ಅಂತ ದಿಬ್ಬಣ ಹೊಂಡಬೌದಂತೆ' ಅಂದ್ರು ತುರೇಮಣೆ.

'ಅದ್ಕೆ ಮಂತೆ ಶಾಸಕಾಂಗ ದರಿದ್ರವಾಗ್ಯದೆ ಅಂತ ದತ್ತಣ್ಣ ನೊಂದ್ಕಂಡಿರದು' ಅಂದೆ.

'ಅದಿರ್ಲಿ ರಶ್ಯಾದೋವು ಇವುನ್ನೆಲ್ಲಾ ಯುದ್ಧ ಕೈದಿಗಳು ಅಂತ ಒಳಾಕ್ಯಾಂಡ್ರೇನು ಮಾಡದ್ಲಾ?' ಯಂಟಪ್ಪಣ್ಣ ತನ್ನ ಶಂಕೆ ಹೇಳಿತು.

'ಬುಡಿ ಯಂಟಪ್ಪಣ್ಣ, ರಾಜ್ಯ ನೆಮ್ಮದಿಯಾಗಿರತದೆ' ಅನ್ನದಾ ತುರೇಮಣೆ.

ಸಂಗತ

ಸುಸ್ಥಿರ ಭವಿಷ್ಯಕ್ಕೆ ಒಗ್ಗಟ್ಟಿನ ವಿಜ್ಞಾನ

ಸಮಸ್ಯೆಯ ಕುರಿತು ಆಯಾ ಇಲಾಖೆಯು ವಿಶ್ಲೇಷಣೆ, ಪರೀಕ್ಷೆ, ಸಂಶೋಧನೆ, ಅಧ್ಯಯನವನ್ನು ಪ್ರತ್ಯೇಕವಾಗಿ ಕೈಗೊಂಡರೆ ಅದರ ವ್ಯಾಪ್ತಿ ತುಂಬಾ ಸೀಮಿತವಾಗಿರುತ್ತದೆ

• ಶ್ರೀಗುರು

ದೇಶದ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯೊಂದರಲ್ಲಿ ಕೆಲಸ ಮಾಡುವ ನನ್ನ ವಿಜ್ಞಾನಿ ಗೆಳೆಯನೊಬ್ಬ, ಬೆಂಗಳೂರು ಸಮೀಪದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿರುವ ನೀರಿನ ತಾಣಗಳ ನೀರು ಕಲುಷಿತಗೊಂಡಿದ್ದರಿಂದ ಅದನ್ನು ಕುಡಿಯುವ ವನ್ಯಪ್ರಾಣಿಗಳ ಆರೋಗ್ಯದ ಮೇಲೆ ಯಾವ ಅಡ್ಡ ಪರಿಣಾಮಗಳಾಗುತ್ತವೆ ಎಂಬುದನ್ನು ಅಭ್ಯಸಿಸಲು ರಿಸರ್ಚ್ ಗ್ರಾಂಟ್ ಕೋರಿ ಅರ್ಜಿ ಹಾಕಿದ್ದ. ಅರ್ಜಿಗೆ ಉತ್ತರ ಬರೆದ ಉನ್ನತ ಸಮಿತಿಯು 'ನಿಮ್ಮ ಈ ಅಧ್ಯಯನಕ್ಕೆ ಯಾವ ತಂತ್ರಜ್ಞಾನ ಸಂಸ್ಥೆಗಳು, ಇಲಾಖೆಗಳು, ವಿಜ್ಞಾನಿಗಳು ಕೈಜೋಡಿಸಬಹುದೆಂಬ ವಿವರಗಳನ್ನು ಸಲ್ಲಿಸಿದಲ್ಲಿ ಅರ್ಜಿಯನ್ನು ಪರಿಗಣಿಸಬೇಕೋ ಬೇಡವೋ ಎಂದು ನಿರ್ಧರಿಸಬಹುದು' ಎಂದಿತ್ತು.

'ನಾನು ಮಾಡುವ ಸಂಶೋಧನೆ ಏಳೆಂಟು ಇಲಾಖೆಗಳಿಗೆ ಸಂಬಂಧಿಸಿದೆ. ಅವರನ್ನೆಲ್ಲಾ ಕೇಳುತ್ತ ಕೂತರೆ, ವನ್ಯಪ್ರಾಣಿಗಳ ಕತೆ ಮುಗಿದಂತೆಯೆ' ಎಂದವನು, 'ಹಿಂದೆಲ್ಲ ನೇರವಾಗಿ ಅನುಮತಿ ಸಿಗುತ್ತಿತ್ತು, ಈಗ ಹೊಸದೇನೋ ನಿಯಮ ಮಾಡಿದ್ದಾರೆ. ಸಂಶೋಧನೆ ನಡೆಸುವಾಗ ಸಂಬಂಧಪಟ್ಟ ಇಲಾಖೆ, ಉದ್ಯಮ, ವಿಶ್ವವಿದ್ಯಾಲಯ, ಸ್ಥಳೀಯ ಸಂಸ್ಥೆಗಳ ಸಹಯೋಗ ಪಡೆಯಬೇಕು. ಆಗ ಮಾತ್ರ ಅನುಮತಿ, ಅನುದಾನ ಎರಡೂ ಸಿಗುತ್ತವೆ' ಎಂದು ಖಿನ್ನನಾದ.

ಹೌದು, ಭಾರತ ಸರ್ಕಾರದ ಹೊಸ ನೀತಿಯ ಪ್ರಕಾರ, ಯಾವ ಯಾವ ಕ್ಷೇತ್ರದಲ್ಲಿ ಸಂಶೋಧನೆಯ ತೀವ್ರ ಅಗತ್ಯವಿದೆ ಎಂಬ ಪಟ್ಟಿ, ಸಂಬಂಧಪಡುವ ಇಲಾಖೆ, ಪ್ರಯೋಗಾಲಯ, ವಿಭಾಗ ಯಾವುವೆಂದು ಗುರುತಿಸಿ, ಇಂತಿಂತಹವರು ಸೇರಿ ಕೆಲಸ ಮಾಡಬಹುದು ಎಂಬ ಮಾಹಿತಿ ಮತ್ತು ಪ್ರಾಥಮಿಕ ರೂಪುರೇಷೆಗಳು ಈಗಾಗಲೇ ಲಭ್ಯವಿವೆ.

ಹಿಂದೆಲ್ಲಾ ಒಂದು ಇಲಾಖೆಯಲ್ಲಿ ನಡೆಯುತ್ತಿದ್ದ ಸಂಶೋಧನೆಗಳು ಬೇರೊಂದು ಅಧ್ಯಯನ ವಿಭಾಗಕ್ಕೆ, ಸಂಶೋಧನಾ ತಂಡಕ್ಕೆ ಗೊತ್ತಾಗುತ್ತಲೇ ಇರಲಿಲ್ಲ. ಉದಾಹರಣೆಗೆ, ಅಭಯಾರಣ್ಯದ ವ್ಯಾಪ್ತಿಯ ಕೆರೆ-ಸರೋವರಗಳ ಮಾಲಿನ್ಯವು ಅರಣ್ಯ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ, ಸೂಕ್ಷ್ಮಜೀವಿ ಪರಿಸರ ಇಲಾಖೆ, ಪಶುಸಂಗೋಪನಾ ಇಲಾಖೆ... ಹೀಗೆ ನಾಲ್ಕಾರು ವಿಭಾಗಗಳಿಗೆ ಸಂಬಂಧಿಸಿರುತ್ತದೆ. ಸಮಸ್ಯೆಯ ಕುರಿತು ಆಯಾ ಇಲಾಖೆಗಳು ವಿಶ್ಲೇಷಣೆ, ಪರೀಕ್ಷೆ, ಸಂಶೋಧನೆ, ಅಧ್ಯಯನವನ್ನು ಪ್ರತ್ಯೇಕವಾಗಿ ಕೈಗೊಂಡರೆ ಅದರ ವ್ಯಾಪ್ತಿ ತುಂಬಾ ಸೀಮಿತವಾಗಿರುತ್ತದೆ. ಅದರ ಬದಲು ಸಮಸ್ಯೆಗೆ ಸಂಬಂಧಿಸಿದ ಇಲಾಖೆಗಳ ಪ್ರತಿನಿಧಿಗಳು, ತಜ್ಞರು, ತಂತ್ರಜ್ಞಾನ ಸಂಸ್ಥೆಗಳು ಪೂರ್ವಾಧ್ಯಯನದ ಆಧಾರದ ಮೇಲೆ ಯೋಜನೆಯೊಂದನ್ನು ಸಿದ್ಧ ಮಾಡಿಕೊಂಡು ಒಟ್ಟಿಗೇ ಕೆಲಸ ಮಾಡಿದರೆ ಹಲವು ಅನುಕೂಲಗಳಾಗುತ್ತವೆ.

ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವಮಟ್ಟದಲ್ಲಿ ಯೋಜಿಸಿಕೊಂಡಿರುವ ಹದಿನೇಳು ವಿಷಯಗಳು ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಆದ್ದರಿಂದ ನಾವು ಎದುರಿಸುತ್ತಿರುವ ಸಮಸ್ಯೆಯ ಪರಿಹಾರ ಯಾರೋ ಒಬ್ಬರ ಬಳಿ ಇರುವುದಿಲ್ಲ. ಇತರರಿಗೂ ಸಮಸ್ಯೆಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರಗಳು ತಿಳಿದಿರುತ್ತವೆ. ಅವರೆಲ್ಲ ಒಂದು ತಂಡವಾಗಿ ಕೆಲಸ ಮಾಡಿದರೆ ಸಮಯವೂ ಉಳಿದು, ಖರ್ಚೂ ಕಡಿಮೆಯಾಗಿ ಸಮಸ್ಯೆಯ ನೆಲದಲ್ಲಿ ಪರಿಹಾರದ ಸಸಿ ಹುಟ್ಟಿ ಅಭಿವೃದ್ಧಿಯ ಜೀವ ಮೊಳೆಯುತ್ತದೆ. ಕೊರೊನಾಪೀಡಿತ ಕಳೆದೆರಡು ವರ್ಷಗಳಲ್ಲಿ ವೈದ್ಯರು, ಸಂಶೋಧಕರು, ಲ್ಯಾಬ್‌ನವರು, ಸರ್ಕಾರದ ಪ್ರತಿನಿಧಿಗಳು, ಲಸಿಕೆ ತಯಾರಕ ಉದ್ಯಮದವರೆಲ್ಲ ಒಟ್ಟಿಗೆ ಸೇರಿ ಅದನ್ನು ತಹಬಂದಿಗೆ ತರಲು ಹೋರಾಡುತ್ತಿದ್ದಾರೆ. ಸಿಎಸ್‌ಐಆರ್– ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯ ನಿರ್ದೇಶಕ ಡಾ. ಶೇಖರ್ ಸಿ. ಮಂಡೆ, 'ಒಟ್ಟು ಪ್ರಯತ್ನ ಎನ್ನುವುದು ಕೇವಲ ವ್ಯಕ್ತಿಗಳನ್ನು ಒಗ್ಗೂಡಿಸಿ ಕೆಲಸ ಮಾಡಿಸುವುದಲ್ಲ, ವಿವಿಧ ಅಧ್ಯಯನ ರಂಗಗಳೂ ಒಂದೇ ಸೂರಿನಡಿಯಲ್ಲಿ ಕೆಲಸ ಮಾಡಬೇಕು' ಎನ್ನುತ್ತಾರೆ.

ಕಳೆದ ಜೂನ್‌ನಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಇತ್ತೀಚಿನ ರೂಪುರೇಷೆಗಳನ್ನು ಬಿಡುಗಡೆ ಮಾಡಿದ್ದ ನೀತಿ ಆಯೋಗವು ಹಮ್ಮಿಕೊಂಡ ಕೆಲಸವನ್ನು ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಸಚಿವಾಲಯಗಳು ಒಟ್ಟಾಗಿ ಮಾಡುವುದು, ದೇಶದ ಎಲ್ಲ ವೈಜ್ಞಾನಿಕ ಸಂಶೋಧನಾ ಕೇಂದ್ರಗಳನ್ನು ಸಂಶೋಧನೆಯ ವಿಷಯಗಳಿಗೆ ಸಂಬಂಧಿಸಿದಂತೆ ಹತ್ತಿರ ತರುವುದು, ನೇರವಾಗಿ ವಿಜ್ಞಾನಕ್ಕೆ ಸಂಬಂಧಿಸದೇ ಇದ್ದರೂ ವಿಜ್ಞಾನಕ್ಕೆ ನೆರವಾಗಬಲ್ಲ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮತ್ತು ಉದ್ಯಮ, ನವೋದ್ಯಮ, ಸ್ವತಂತ್ರ ಸಂಸ್ಥೆಗಳನ್ನು ಒಳಗೊಂಡು ಸಂಶೋಧನೆ ನಡೆಸುವುದು ಇಂದಿನ ಅಗತ್ಯ ಎಂದಿತ್ತು.

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದರ್ ಸಿಂಗ್, 'ಒಬ್ಬೊಬ್ಬರೇ ಕೆಲಸ ಮಾಡುವ ಕಾಲ ಮುಗಿದುಹೋಯಿತು. ಇನ್ನೇನಿದ್ದರೂ ಒಟ್ಟಾಗಿ ದುಡಿಯಬೇಕು. ಪ್ರತೀ ಸಂಶೋಧನೆ, ಫಲದ ಹಿಂದೆ ಅನೇಕ ಇಲಾಖೆಗಳ ಪರಿಶ್ರಮವಿರಬೇಕು. ಆಗ ಮಾತ್ರ ನಾವು ಸುಸ್ಥಿರ ಅಭಿವೃದ್ಧಿ ಗುರಿ ತಲುಪಲು ಸಾಧ್ಯ' ಎಂದಿದ್ದಾರೆ. ಹಾಗಂದದ್ದೇ ತಡ 33 ವಿವಿಧ ಸಚಿವಾಲಯಗಳು ಒಟ್ಟಿಗೆ ಸೇರಿ 168 ವೈಜ್ಞಾನಿಕ ಪ್ರಸ್ತಾವಗಳನ್ನು ಸರ್ಕಾರದ ಮುಂದಿಟ್ಟು ಅನುಮೋದನೆಗಾಗಿ ಕಾಯುತ್ತಿವೆ. ಎಲ್ಲರನ್ನೂ ಒಳಗೊಂಡು, ಎಲ್ಲರಿಗೂ ಬೇಕಾಗುವ ಕೆಲಸ ಮಾಡುವುದೇ ಅಭಿವೃದ್ಧಿಯ ಮೂಲ ತತ್ವವಾಗಿದೆ.

ವಾಚಕರ ವಾಣಿ

ಆಡಳಿತದ ಅರಾಜಕತೆಯೇ ಸರಿ

ಗಡಿ ಕಾಯುವ ಯೋಧರಿಗೆ ಇರುವಷ್ಟೇ ಗೌರವ ನಾಡಿನಲ್ಲಿ ಸಂವಿಧಾನಾತ್ಮಕ ರಕ್ಷಣೆಗೆ ನಿಲ್ಲುವ ಪೊಲೀಸರ ಬಗ್ಗೆಯೂ ಸಮಾಜದಲ್ಲಿ ಇರಬೇಕಿತ್ತು. ಇತ್ತೀಚಿನ ದಿನಗಳಲ್ಲಿ ರಾಜಕಾರಣ ಬದಲಾದಂತೆ, ರಾಜಕಾರಣಿಗಳು ಪೊಲೀಸರನ್ನೇ ಬಳಸಿಕೊಂಡು ಹಣ ಮಾಡುವ ಹಂತಕ್ಕೆ ತಲುಪಿರುವುದು (ಪ್ರ.ವಾ., ಮಾರ್ಚ್ 7) ಆಡಳಿತದ ಅರಾಜಕತೆ. ವರ್ಗಾವಣೆಯಲ್ಲಿ ದುಡ್ಡಿನ ದಂಧೆ ನಡೆದರೆ ಪ್ರಾಮಾಣಿಕ ನಡೆ ಹೇಗೆ ಸಾಧ್ಯ? ಇದು ಮುಂದುವರಿದು ಸಿಬ್ಬಂದಿ ನೇಮಕಾತಿಯಲ್ಲೂ ಭ್ರಷ್ಟಾಚಾರ ಇಣುಕಿದರೆ ಸಮಾಜಕ್ಕೆ ಯಾರು ರಕ್ಷಣೆ ಕೊಟ್ಟಾರು?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಬುದ್ಧಿ ಹೇಳಲಿ, ಟೀಕಿಸುವುದು ಸಲ್ಲ

ಉಕ್ರೇನ್‌ನಲ್ಲಿ ಸಿಲುಕಿದ ಭಾರತದ ವೈದ್ಯಕೀಯ ವಿದ್ಯಾರ್ಥಿಗಳು ಸಹಾಯಕ್ಕಾಗಿ ಮೊರೆಯಿಟ್ಟ ವಿಡಿಯೊಗಳನ್ನು ಇಲ್ಲಿನ ಕೆಲವರು ಹಂಚಿಕೊಂಡು, ಅವರನ್ನು ಕೆಟ್ಟದಾಗಿ ಬಿಂಬಿಸುವ ರೀತಿ ನೋಡಿದರೆ, ನಮ್ಮ ದೇಶದ ಸಂಸ್ಕೃತಿ ಎತ್ತ ಸಾಗುತ್ತಿದೆ ಎಂದು ಯೋಚಿಸಲೂ ಭಯವಾಗುತ್ತಿದೆ. ಶಿವಮೊಗ್ಗ ಜಿಲ್ಲೆಯ ಸಾಗರದ ವೈದ್ಯಕೀಯ ವಿದ್ಯಾರ್ಥಿನಿ ಶಿಲ್ಪಾ ರಾಡ್ರಿಗಸ್ 'ಒಂದು ಯುದ್ಧ ಗೆದ್ದೆವು, ಇನ್ನೊಂದು ಗೆಲ್ಲಬೇಕಿದೆ' (ಪ್ರ.ವಾ., ಮಾರ್ಚ್ 7) ಎಂದಿರುವ ಮಾತು ಬಹಳ ಅರ್ಥಗರ್ಭಿತವಾಗಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಓದಲು ಶಕ್ತಿ ಇಲ್ಲದ ಮಧ್ಯಮ ವರ್ಗದ ವಿದ್ಯಾರ್ಥಿಗಳನ್ನಷ್ಟೇ ಸಾಮಾಜಿಕ ಮಾಧ್ಯಮಗಳಲ್ಲಿ ಗುರಿ ಮಾಡಿ ತೇಜೋವಧೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಆಡಳಿತಾರೂಢ ಸರ್ಕಾರಗಳಿಂದ ಸಹಾಯ ಅಪೇಕ್ಷಿಸಿದ್ದು ತಪ್ಪೇ?

ಹಾಗಿದ್ದರೆ ಉಕ್ರೇನ್‌ನಲ್ಲಿ ಪಡೆಯುತ್ತಿರುವ ಕಡಿಮೆ ವೆಚ್ಚದ ಶುಲ್ಕವನ್ನು ನಮ್ಮ ಪುಢಾರಿಗಳ ಒಡೆತನದಲ್ಲಿರುವ ಇಲ್ಲಿನ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲೂ ನಿರ್ದಾಕ್ಷಿಣ್ಯವಾಗಿ ನಿಗದಿ ಮಾಡಲಿ. ಇದರಿಂದ ಭಾರತವನ್ನು ತೊರೆಯುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಇಲ್ಲಿಯೇ ಉಳಿಸಿಕೊಂಡಂತೆ ಆಗುತ್ತದೆ, ಕೋಟ್ಯಂತರ ರೂಪಾಯಿ ವಿದೇಶಿ ವಿನಿಮಯದ ಹರಿವನ್ನೂ ತಡೆದಂತಾಗುತ್ತದೆ. ದೇಶದ ಬಗ್ಗೆ, ರಾಜಕೀಯ ನಾಯಕರ ಬಗ್ಗೆ ಅಸಹನೆ ವ್ಯಕ್ತಪಡಿಸಿದ ವಿದ್ಯಾರ್ಥಿಗಳಿಗೆ ಬುದ್ಧಿ ಹೇಳಬೇಕೇ ವಿನಾ ಅವರನ್ನು ಟೀಕಿಸುವುದು ಸಲ್ಲದು.

ಟಿ. ಉಮಾ ಶಂಕರ್ ಲಕ್ಷ್ಮೀಪುರ, ಬೆಂಗಳೂರು

ಗುಣಾತ್ಮಕ ಜರ್ನಲ್‌ಗಳ ಪಟ್ಟಿಯಲ್ಲೂ ತಾರತಮ್ಯ

'ಯುಜಿಸಿ ಪರೀಕ್ಷೆ: ಏಕೆ ಈ ತಾರತಮ್ಯ?' ಎಂಬ ಲೇಖನವು (ಸಂಗತ, ಮಾರ್ಚ್ 7) ಯುಜಿಸಿ ನಡೆಸುವ ಎನ್‌ಇಟಿ/ಜೆಆರ್‌ಎಫ್ ಪರೀಕ್ಷೆಯಲ್ಲಿ ಕನ್ನಡದ ಅಭ್ಯರ್ಥಿಗಳಿಗೆ ಆಗುತ್ತಿರುವ ಸಮಸ್ಯೆಗಳನ್ನು ತೆರೆದಿಟ್ಟಿದೆ ಮತ್ತು 2018ರಿಂದ ಹಿಂದಿ, ಸಂಸ್ಕೃತ ಭಾಷೆಗಳ ವಿದ್ಯಾರ್ಥಿಗಳು ಕನ್ನಡ ಸೇರಿದಂತೆ ಇತರ ಭಾಷೆಗಳಿಗೆ ಹೋಲಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಎನ್‌ಇಟಿ/ಜೆಆರ್‌ಎಫ್ ಫೆಲೊಶಿಪ್‌ಗೆ ಆಯ್ಕೆಯಾಗುತ್ತಿರುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದೆ. ಆದರೆ ಇದು ಈ ಪರೀಕ್ಷೆಗೆ ಮಾತ್ರ ಸೀಮಿತವಾಗಿಲ್ಲ. 2019ರಲ್ಲಿ ಯುಜಿಸಿ ಜಾರಿಗೆ ತಂದಿರುವ ಯುಜಿಸಿ-ಕೇರ್ ಲಿಸ್ಟ್ ಎನ್ನುವ ಗುಣಾತ್ಮಕ ಜರ್ನಲ್‌ಗಳ ಪಟ್ಟಿಯಲ್ಲಿ ಕನ್ನಡದ ಕೇವಲ ಒಂಬತ್ತು ಜರ್ನಲ್‌ಗಳನ್ನು ಸೇರಿಸಲಾಗಿದೆ. ಇದೇ ಪಟ್ಟಿಯಲ್ಲಿ ಹಿಂದಿಯ 145 ಮತ್ತು ಸಂಸ್ಕೃತದ 45 ಜರ್ನಲ್‌ಗಳಿವೆ. ಅಂದರೆ ಹಿಂದಿ ಮತ್ತು ಸಂಸ್ಕೃತದ ಜರ್ನಲ್‌ಗಳು ಕ್ರಮವಾಗಿ ಶೇ 48 ಮತ್ತು 15ರಷ್ಟಿದ್ದರೆ ಕನ್ನಡದ ಜರ್ನಲ್‌ಗಳು ಶೇ 3ರಷ್ಟು ಮಾತ್ರ. ಈ ಮಟ್ಟದಲ್ಲಿ ಹಿಂದಿ ಮತ್ತು ಸಂಸ್ಕೃತದ ಜರ್ನಲ್‌ಗಳನ್ನು ಪಟ್ಟಿಯಲ್ಲಿ ಸೇರಿಸಲು ಅನುಸರಿಸಿರುವ ಮಾನದಂಡಗಳು ಯಾವುವು ಎನ್ನುವುದು ಅಸ್ಪಷ್ಟವಾಗಿದೆ. ಇದು, ಇತರ ಭಾಷೆಗಳ ಸಂಶೋಧನಾ ನಿಯತಕಾಲಿಕಗಳನ್ನು ವ್ಯವಸ್ಥಿತವಾಗಿ ಹೊರಗಿಡುವ ತಂತ್ರದ ಭಾಗವಾಗಿ ಗೋಚರಿಸುತ್ತಿದೆ.

ಇದರ ಪರಿಣಾಮವಾಗಿ, ಕನ್ನಡ ಭಾಷೆಯಲ್ಲಿ ಸಂಶೋಧನಾ ನಿರತರಾಗಿರುವ ಮತ್ತು ವೃತ್ತಿ ಪದೋನ್ನತಿ ಪಡೆಯಲು ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು ತಮ್ಮ ಸಂಶೋಧನಾ ಲೇಖನಗಳನ್ನು ಪ್ರಕಟಿಸಲು ಯುಜಿಸಿ-ಕೇರ್ ಲಿಸ್ಟ್‌ನಲ್ಲಿರುವ ಕೆಲ ಜರ್ನಲ್‌ಗಳಿಗೆ ಬಹಳಷ್ಟು ಹಣ ನೀಡಬೇಕಾಗಿದೆ. ಇದನ್ನು ಅನುಕೂಲಕರವಾಗಿ ಪರಿಗಣಿಸಿ ಕೆಲ ಜರ್ನಲ್‌ಗಳ ಸಂಪಾದಕರು ಲೇಖನಗಳನ್ನು ಪ್ರಕಟಿಸಲು ಸಂಶೋಧಕರು ಮತ್ತು ಅಧ್ಯಾಪಕರಿಂದ ಮನಬಂದಂತೆ ಹಣ ವಸೂಲಿ ಮಾಡುತ್ತಿದ್ದಾರೆ. ಜೊತೆಗೆ ಇದರಿಂದ ಕಳಪೆ ಗುಣಮಟ್ಟದ ಸಂಶೋಧನಾ ಲೇಖನಗಳ ಪ್ರಕಟಣೆಗೆ ಪರೋಕ್ಷವಾಗಿ ಉತ್ತೇಜನ ನೀಡಿದಂತಾಗಿದೆ.

ವಸಂತ ರಾಜು ಎನ್., ತಲಕಾಡು

ಎಲ್ಲ ಯೋಜನೆಗಳೂ ಅನುಷ್ಠಾನಕ್ಕೆ ಬಂದರೆ...

ರಾಜ್ಯದ ಪ್ರಸಕ್ತ ಬಜೆಟ್‌ನಲ್ಲಿ ಸರ್ಕಾರ ಸರ್ವರನ್ನೂ ಲಕ್ಷ್ಯದಲ್ಲಿ ಇಟ್ಟುಕೊಂಡು, ಜನರ ಬದುಕು ಹಸನಾಗಲು ಅನೇಕ ಯೋಜನೆಗಳನ್ನು ರೂಪಿಸಿದೆ. ಇದು ಅನುಷ್ಠಾನಕ್ಕೆ ಬಂದರೆ ರಾಜ್ಯವು ರಾಮರಾಜ್ಯವಾಗುತ್ತದೆ. ಹಿಂದಿನ ಬಜೆಟ್‌ಗಳೂ ಇಂತಹುದೇ ಆಶಾಭಾವನೆಯನ್ನು ಹುಟ್ಟಿಸಿದ್ದವು. ಸರಿಯಾಗಿ ಹಣ ವಿತರಣೆಯಾಗಿ ಯೋಜನೆಗಳು ಅನುಷ್ಠಾನಗೊಂಡರೂ ಪ್ರಗತಿ ಮಾತ್ರ ಏಕೆ ಸಾಧ್ಯವಾಗಿಲ್ಲ ಎನ್ನುವ ಪ್ರಶ್ನೆ ಕಾಡುವುದು ಸಹಜ. ಇದಕ್ಕೆ ಕಾರಣ ಹುಡುಕಿದರೆ ನಮ್ಮ ಹದಗೆಟ್ಟ ರಸ್ತೆಗಳೇ ಜ್ವಲಂತ ಸಾಕ್ಷಿ. ರಸ್ತೆ ದುರಸ್ತಿಯಾಗಿ ತಿಂಗಳಿಲ್ಲ, ಮತ್ತೆ ಗುಂಡಿಗಳು. ಬಿರುಕು ಬಿಟ್ಟ ಮನೆಗಳು... ಹೀಗೆ ಒಂದೇ ಎರಡೇ...

ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಕಚೇರಿ ಮೇಲೆ ಇತ್ತೀಚೆಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಳಿ ಮಾಡಿದಾಗ ಪತ್ತೆಯಾದ ಅಕ್ರಮ ವ್ಯವಹಾರಗಳ ಪಟ್ಟಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ್ದು. ಗ್ರಾಮ ಪಂಚಾಯಿತಿಯಿಂದ ಹಿಡಿದು ನಗರಸಭೆ, ಪುರಸಭೆಗಳವರೆಗೆ ಲಂಚದ ಪಿಡುಗು ತಾಂಡವವಾಡುತ್ತಿದೆ. ಯಾರಾದರೂ ಲಂಚ ಕೊಡಲಾರದೆ ತತ್ತರಿಸಿ ಇದನ್ನು ಜಾಗೃತ ದಳದ ಗಮನಕ್ಕೆ ತಂದಾಗ ಮಾತ್ರ ಪ್ರಕರಣ ಬಯಲಾಗುವುದು. ಸಾರ್ವಜನಿಕರಿಗೆ ಇದು ಸಾಮಾನ್ಯ ಎನ್ನುವಂತೆ ಆಗಿರುವುದರಿಂದ ನೂರಕ್ಕೆ ತೊಂಬತ್ತಕ್ಕೂ ಹೆಚ್ಚು ಪ್ರಕರಣಗಳು ಬಯಲಾಗುವುದೇ ಇಲ್ಲ. ಇದನ್ನು ನಿಯಂತ್ರಿಸಲು ಎಸಿಬಿ ಈಗಿನ ಹತ್ತಲ್ಲ ನೂರು ಪಟ್ಟು ಶಕ್ತಿಯುತ ಆಗಬೇಕು. ಈ ದಿಸೆಯಲ್ಲಿ ಸರ್ಕಾರ ಇಚ್ಛಾಶಕ್ತಿ ತೋರಬೇಕು.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮಾನತೆಯ ಹಾದಿಯಲ್ಲಿ...

‘ಸುಸ್ಥಿರ ನಾಳೆಗೆ ಇಂದಿನ ಲಿಂಗ ಸಮಾನತೆ’ ಇದು ಈ ವರ್ಷದ ಅಂತರರಾಷ್ಟ್ರೀಯ ಮಹಿಳಾ ದಿನದ ಘೋಷ ವಾಕ್ಯ. ಸಮಾನ ಅವಕಾಶ, ಸಮಾನ ವೇತನ, ತೀರ್ಮಾನ ಕೈಗೊಳ್ಳುವಲ್ಲಿ ಸಮಾನ ಅಧಿಕಾರ ಇವು ಲಿಂಗ ಸಮಾನತೆಯ ಮೂಲ ಆಧಾರಗಳು. ಪುರುಷ ಪಾರಮ್ಯದ ಕ್ಷೇತ್ರದಲ್ಲಿ ಸಮಾನ ಅವಕಾಶಗಳನ್ನು ಸೃಷ್ಟಿಸಿಕೊಂಡು ಸಾಧನೆ ಮಾಡಿದ ಮೂವರು ವಿಶೇಷ ಸಾಧಕಿಯರ ಪರಿಚಯ ನಿಮ್ಮ ಮುಂದಿದೆ. ಸುಸ್ಥಿರ ನಾಳೆಗಾಗಿ ಕೌಟುಂಬಿಕ ಮೌಲ್ಯಗಳಲ್ಲಿ ಬದಲಾವಣೆ ತರಬೇಕಿರುವುದು ಇಂದಿನ ತುರ್ತಾಗಿದೆ. ಯಾವ ಸಣ್ಣ ಬದಲಾವಣೆಗಳು, ನಮ್ಮ ನಾಳೆಗಳನ್ನು ಸುಸ್ಥಿರಗೊಳಿಸಲಿವೆ ಎಂಬುದನ್ನು ಸಮಾಲೋಚಕಿ ಪಲ್ಲವಿ ಅಡಿಗ ಅವರು ಇಲ್ಲಿ ಹಂಚಿಕೊಂಡಿದ್ದಾರೆ.

ಧೈರ್ಯವೊಂದೇ ಸಾಧನ– ರಾಧಾ ರವಿ

ಕ್ಯಾಂಟರ್(ಮಿನಿ ಟ್ರಕ್) ಚಲಾಯಿಸುತ್ತಿರುವ ರಾಧಾ ರವಿ –ಚಿತ್ರ: ಎಂ.ಎಸ್‌ಮಂಜುನಾಥ್

ಹೆಸರು: ರಾಧಾ ರವಿ, ಬೆಂಗಳೂರು, **ವಿದ್ಯಾರ್ಹತೆ:** ಎಸ್‌ಎಸ್‌ಎಲ್‌ಸಿ, **ಕ್ಷೇತ್ರ:** ಟ್ರಕ್ ಡ್ರೈವಿಂಗ್, ವ್ಯಾಪಾರ.

ನಂಬಿದ ಕೆಲಸಗಾರರು ಕೈಕೊಟ್ಟಾಗ, ಕೊರೊನಾ ಸಂದರ್ಭದಲ್ಲಿ ನಮ್ಮ ಕೈಹಿಡಿದದ್ದು ತೆಂಗಿನಕಾಯಿ ವ್ಯಾಪಾರ. ಮಂಡ್ಯ ಜಿಲ್ಲೆಯ ಎಡೆಯೂರಿನಿಂದ ಬೆಂಗಳೂರು ಸೇರಿದಂತೆ ರಾಜ್ಯದ ಬೇರೆಬೇರೆ ಊರುಗಳಿಗೆ ದೊಡ್ಡ ಲಗೇಜ್ ಗಾಡಿಗಳಲ್ಲಿ ಕಾಯಿ ಹಾಕಿಕೊಂಡು ಹೋಗಿ ಮಾರಾಟ ಮಾಡುವೆ. 2,805 ಕೆ.ಜಿ. ತೂಗುವ ಅಶೋಕ ಲೇಲ್ಯಾಂಡ್ ದೋಸ್ತ್ ಗಾಡಿ, ಟ್ರಕ್ ಸೇರಿದಂತೆ ದೊಡ್ಡ ಗಾಡಿಗಳು ನನ್ನ ಸಂಗಾತಿ. ಕಾರು ಚಾಲಕರಾಗಿರುವ ಪತಿ ರವಿ ಅವರು ನನ್ನ ಡ್ರೈವಿಂಗ್ ಗುರು. ಕಾರುಗಳ ಮಾರಾಟ ಅವರ ವೃತ್ತಿ. ಅಗತ್ಯವಿದ್ದಾಗ ಇತರ ಊರುಗಳಿಗೆ ಕಾರುಗಳನ್ನು ಬಿಟ್ಟುಬರುವೆ. ಇಬ್ಬರು ಪುಟ್ಟ ಮಕ್ಕಳನ್ನು ಅಮ್ಮ ನೋಡಿಕೊಳ್ತಾರೆ.

ಕೆಲಸ ಇದ್ದಾಗ ಹೊತ್ತುಗೊತ್ತು ಇಲ್ಲದೇ ನಿಗದಿತ ಗಮ್ಯ ತಲುಪುವುದಷ್ಟೇ ತಲೆಯಲ್ಲಿರುತ್ತೆ. ಹಾಸನ, ಮಂಡ್ಯ, ಮೈಸೂರು, ಕುಣಿಗಲ್, ತಮಿಳುನಾಡಿನ ಗಡಿ ಮೊದಲಾದ ಕಡೆಗಳಲ್ಲಿ ಆರ್ಡರ್ ಇದ್ದಾಗ ಸಾವಿರಾರು ತೆಂಗಿನಕಾಯಿ ತಗೊಂಡು ಲಗೇಜ್ ಗಾಡಿ ಡ್ರೈವ್ ಮಾಡಿಕೊಂಡು ಒಬ್ಬಳೇ ಕೊಟ್ಟು ಬಂದಿದ್ದೇನೆ. ಸಂಸಾರದ ಬಂಡಿ ಸಾಗಲು ಗಂಡ–ಹೆಂಡತಿ ಇಬ್ಬರೂ ದುಡಿಯಬೇಕು. ಡ್ರೈವಿಂಗ್ ಕಲಿತದ್ದು ನನ್ನ ಬದುಕಿಗೆ ದಾರಿಯಾಗಿದೆ. ಆರಂಭದಲ್ಲಿ ರಾತ್ರಿ ವೇಳೆ ಭಯವಾಗುತ್ತಿತ್ತು. ಈಗ ಆಗಲ್ಲ. ಒಮ್ಮೆ ಹೆದ್ದಾರಿಯಲ್ಲೇ ಗಾಡಿ ಕೆಟ್ಟಾಗ ಅಲ್ಲಿದ್ದ ಗಂಡಸರು ಸಹಾಯ ಮಾಡಿದ್ದು ಮರೆಯಲಾರೆ. ಹೆಣ್ಣುಮಕ್ಕಳಿಗೆ ಯಾವುದಾದರೂ ಒಂದು ವಿದ್ಯೆಯೋ, ಕೌಶಲವೋ ತಿಳಿದಿರಬೇಕು. ಬದುಕು ಯಾವಾಗ ಹೇಗಿರುತ್ತೋ ಗೊತ್ತಿಲ್ಲ. ಗಾಡಿ ಓಡಿಸುವುದಷ್ಟೇ ಅಲ್ಲ, ಟೈರ್ ಬದಲಾಯಿಸುವುದು ಸೇರಿದಂತೆ ಇತರ ಸಣ್ಣಪುಟ್ಟ ರಿಪೇರಿ ಕೆಲಸಗಳೂ ಗೊತ್ತು. ಟ್ರಕ್‌ಗಳಲ್ಲಿ ಲಗೇಜ್ ತಗೊಂಡು ಹೋಗುವಾಗ ದಾರಿಯಲ್ಲಿ ನೋಡಿದವರು ಅಚ್ಚರಿ ವ್ಯಕ್ತಪಡಿಸುತ್ತಾರೆ. ಯಾವ ಕೆಲಸದಲ್ಲೂ ಹೆಣ್ಣು–ಗಂಡು ಅನ್ನುವ ತಾರತಮ್ಯ ಸಲ್ಲದು. ಮನದಲ್ಲಿ ಧೈರ್ಯ ಮತ್ತು ನಮ್ಮ ಮೇಲೆ ನಮಗೆ ನಂಬಿಕೆ ಇದ್ದರೆ ಮಾತ್ರ ಅಂದುಕೊಂಡಿದ್ದನ್ನು ಸಾಧಿಸಬಹುದು.

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ

ಸಾಧನೆಗೆ ಕುಟುಂಬದ ಬೆಂಬಲ ಮುಖ್ಯ

ಹೆಸರು: ಸನಾ ಮಳಗಿ (28), ಹುಬ್ಬಳ್ಳಿ **ವಿದ್ಯಾರ್ಹತೆ:** ದ್ವಿತೀಯ ಪಿಯುಸಿ. **ಸಾಧನೆಯ ಕ್ಷೇತ್ರ:** ಪವರ್ ಲಿಫ್ಟಿಂಗ್ (ಸ್ಟ್ರಾಂಗ್ ವುಮೆನ್ ಆಫ್ ಕರ್ನಾಟಕ ಅವಾರ್ಡ್ ವಿನ್ನರ್)

ನಾವು ಹಾಕುವ ಬಟ್ಟೆಗಿಂತ ನಮ್ಮಲ್ಲಿರುವ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸುವ ಜನ ಜೊತೆಗಿದ್ದಾಗ ಕಷ್ಟದ ಕೆಲಸವೂ ಸುಲಭವಾಗುತ್ತೆ.

ಸಾಧಿಸಬೇಕೆಂಬ ಹಂಬಲ ಬಲವಾಗಿದ್ದರೆ, ಎಂಥಾ ಟೀಕೆಗಳನ್ನಾದರೂ ಎದುರಿಸಬಹುದು. ಆದರೆ ಕುಟುಂಬದವರ ಬೆಂಬಲ ತುಂಬಾ ಮುಖ್ಯ. ನನ್ನ ಸಾಧನೆಗೆ ಬೆಂಬಲವಾಗಿ ನಿಂತವರು ನನ್ನ ಅಪ್ಪ ಮತ್ತುಅಣ್ಣಂದಿರು. ಪವರ್ ಲಿಫ್ಟ್ ಮಾಡುವಾಗ ಧರಿಸುವ ಬಟ್ಟೆ ಬಗ್ಗೆ ನನ್ನ ಅಮ್ಮನಿಗೆ ಆರಂಭದಲ್ಲಿ ತುಸು ಅಸಮಾಧಾನವಿತ್ತು. ಹೆಣ್ಣು ಮಕ್ಕಳು ಆ ರೀತಿ ಬಟ್ಟೆ ಧರಿಸುವುದರಿಂದ ಸಮಾಜ ಅವರನ್ನು ನೋಡುವ ದೃಷ್ಟಿಯೇ ಬೇರೆ ಎಂದು. ಆದರೆ ಅಪ್ಪ ನೈತಿಕ ಬೆಂಬಲ ನೀಡುವುದರ ಜೊತೆಗೆ ನಾನು ಭಾಗವಹಿಸಿದ ಮೊದಲ ಸ್ಪರ್ಧೆಗೆ ಜೊತೆಗೆ ಬಂದಿದ್ದರು.

ನನ್ನ ಮಗಳು ಪಡುವ ಕಷ್ಟ ನನಗೆ ಗೊತ್ತಿದೆ. ಆಕೆ ಖಂಡಿತ ಸಾಧನೆ ಮಾಡೇ ಮಾಡುತ್ತಾಳೆ ಎಂದು ಹೀಯಾಳಿಸಿದ ಜನರಿಗೆ ಅಪ್ಪ ನೀಡುತ್ತಿದ್ದ ಉತ್ತರವೇ ಈ ಕ್ಷೇತ್ರದಲ್ಲೇ ಸಾಧಿಸಲು ನನಗೆ ಪ್ರೇರಣೆಯಾಯಿತು.

ಶಾಲಾ-ಕಾಲೇಜು ದಿನಗಳಲ್ಲೇ ಕ್ರೀಡೆಯಲ್ಲಿ ಆಸಕ್ತಿ ಇತ್ತು. ನೌಕರಿ ಪಡೆಯಬೇಕೆಂಬ ಉದ್ದೇಶದಿಂದ ಐದಾರು ವರ್ಷದ ಹಿಂದೆ ರನ್ನಿಂಗ್ ಹಾಗೂ ಗುಂಡು ಎಸೆತ ಪ್ರ್ಯಾಕ್ಟೀಸ್ ಮಾಡಲು ಹುಬ್ಬಳ್ಳಿಯ ರೈಲ್ವೆ ಮೈದಾನಕ್ಕೆ ಹೋಗುತ್ತಿದ್ದೆ. ಪಕ್ಕದಲ್ಲೇ ಜಿಮ್ ನಡೆಸುತ್ತಿದ್ದ ತರಬೇತುದಾರ ಅಬ್ದುಲ್ ಮುನಾಫ್ ಅವರು ನನ್ನಲ್ಲಿರುವ ಪ್ರತಿಭೆ ಗುರುತಿಸಿ, ಉಚಿತವಾಗಿ ಪವರ್ ಲಿಫ್ಟಿಂಗ್ ತರಬೇತಿ ನೀಡಿದರು. ಅವರ ಪ್ರೋತ್ಸಾಹ, ತರಬೇತಿ ಪರಿಣಾಮ 2017 ರಿಂದ ಸತತವಾಗಿ ನಾಲ್ಕು ವರ್ಷ ‘ಸ್ಟ್ರಾಂಗ್ ವುಮೆನ್ ಆಫ್ ಕರ್ನಾಟಕ ಅವಾರ್ಡ್’ ನನಗೆ ದೊರೆತಿದೆ.

ನಿತ್ಯ ಕನಿಷ್ಠ ನಾಲ್ಕು ಗಂಟೆ ಪ್ರ್ಯಾಕ್ಟೀಸ್ ಮಾಡುತ್ತಿದ್ದೆ. ಮನೆಗೆ ಹೋಗುವಾಗ ರಾತ್ರಿ ತಡವಾಗುತ್ತಿತ್ತು. ಆಗ ಕೂಡ ಜನ ಟೀಕೆ ಮಾಡುತ್ತಿದ್ದರು. ಗುರಿ ತಲುಪುವುದಷ್ಟೆ ನನ್ನ ಉದ್ದೇಶವಾಗಿದ್ದರಿಂದ ನಾನು ಅವರ ಮಾತಿಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಕೆಲ ಕಡೆ ತರಬೇತಿ ಪಡೆಯುವ ಸಂದರ್ಭದಲ್ಲಿ ಮಹಿಳೆಯರು ದೈಹಿಕ, ಮಾನಸಿಕ ದೌರ್ಜನ್ಯವನ್ನು ಎದುರಿಸಬೇಕಾಗುತ್ತದೆ. ಆಗ ಅದನ್ನು ಸಹಿಸಿಕೊಳ್ಳದೇ,ಮೆಟ್ಟಿ ನಿಲ್ಲುವ ಸಾಹಸತೋರಬೇಕು. ಗುರಿಎಷ್ಟುಮುಖ್ಯವೋ, ಸ್ವಾಭಿಮಾನವೂ ಅಷ್ಟೆ ಮುಖ್ಯ.

ನಿರೂಪಣೆ: ಗೌರಮ್ಮ ಕಟ್ಟಿಮನಿ

ಪವರ್ ಲಿಫ್ಟಿಂಗ್ ಅಭ್ಯಾಸ ಮಾಡುತ್ತಿರುವ ಹುಬ್ಬಳ್ಳಿಯ ಸನಾ ಮಳಗಿ –ಚಿತ್ರ/ತಾಜುದ್ದೀನ್ ಆಜಾದ್

ನಾವು ಹೆಚ್ಚು ಮುಕ್ತವಾಗಬೇಕು...

ಜಯಲಕ್ಷ್ಮಿ ಪಾಟೀಲ್ ನಟಿ, ಕವಯತ್ರಿ, ಸಂಘಟಕಿ

ಸೃಜನಶೀಲ ಕ್ಷೇತ್ರ, ಮನರಂಜನಾ ಕ್ಷೇತ್ರ ಅಂತ ತಗೊಂಡಾಗ ನಾವು ಭಾಳ ನಿರಾಶಾವಾದಿಗಳಾಗೂ ಅಗತ್ಯ ಬೀಳೂದಿಲ್ಲ ಅಂತ ಅನಸ್ತದ. ಅಭಿನಯ, ನಟನೆ, ಸಾಹಿತ್ಯ, ಸಿನಿಮಾ, ರಂಗಭೂಮಿ, ಜಾಹೀರಾತು... ಅಂತೆಲ್ಲಾ ನಾವೇನು ಕರೀತಿವಿ, ಈ ಕ್ಷೇತ್ರದೊಳಗ ಮಹಿಳೆಯರ ಅಗತ್ಯ ಭಾಳ ಐತಿ. ಇದರಿಂದಾಗಿ ಅಲ್ಲಿ ಸಿಗೊ ಅವಕಾಶಗಳ ಬಗ್ಗೆ ಆಗಲಿ, ಸಮಾನ ವೇತನದ ಬಗ್ಗೇನೇ ಆಗಲಿ ನಾವು ಹೆಚ್ಚೇನೂ ಹತಾಶರಾಗಬೇಕಿಲ್ಲ.

ರಂಗಭೂಮಿ ಮತ್ತು ಧಾರಾವಾಹಿಯಲ್ಲಿ ಹೆಣ್ಮಕ್ಕಳಿಗೆ ಛಲೊ ಸಂಭಾವನೆ ಐತಿ. ಕೆಲವೊಮ್ಮೆ ತಡ ಆಗ್ತದ, ಆದ್ರ ಅದು ಹೆಣ್ಮಕ್ಕಳಿಗೆ ಮಾತ್ರ ಅಲ್ಲ, ಎಲ್ಲಾರಿಗೂ ಆಗ್ತದ. ಸಿನಿಮಾ ಕ್ಷೇತ್ರ ತಗೊಳ್ಳೋದಾದ್ರ, ಅದ್ರಾಗ ದೊಡ್ಡದೊಡ್ಡ ಸ್ಟಾರ್‌ನಟರಿಗೆ ಸಿಗೊ ಸಂಭಾವನೆನೇ ಬ್ಯಾರೆ, ನಟಿಯರಿಗೆ, ಅದರಲ್ಲೂ ಪೋಷಕ ನಟಿಯರಿಗೆ ಸಿಗೊ ಸಂಭಾವನೆನೇ ಬ್ಯಾರೆ. ಅಲ್ಲಿ ಸಮಾನತೆ ತರಬೇಕಾದ್ರ ಭಾಳ ದೊಡ್ಡಮಟ್ಟದ ಪರಿವರ್ತನೆ ಆಗಬೇಕು.

ಆದ್ರ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಒಂದು ಐತಿ. ಏನಂದ್ರ, ಇಲ್ಲಿ ಮಹಿಳೆಯರನ್ನ ಅದೇ ಸಾಂಪ್ರದಾಯಿಕ ಚೌಕಟ್ಟನ್ಯಾಗ ತುರುಕೊ ಛಾಳಿ ಭಾಳ ದಟ್ಟವಾಗೇ ಐತಿ. ತಿರಗಾಮುರಗಾ ಅವೇ ಜವಾಬ್ದಾರಿಗಳು, ಅವವೇ ಪಾತ್ರಗಳು, ಅವೇ ಅವಕಾಶಗಳು... ಭಾಳಷ್ಟು ಜನ ಹೆಣ್ಮಕ್ಕಳೂ ಅವನ್ನೇ ಒಪ್ಪಿಕೊಂಡು ಸಿದ್ಧಸೂತ್ರಗಳೊಳಗ ಸುತ್ತುಹೊಡಿತಾರ. ಹೆಣ್ಮಕ್ಕಳನ್ನ ನೋಡುವ ಹಾಗೂ ಬಿಂಬಿಸುವ ಈ ಪ್ರವೃತ್ತಿ ಭಾಳ ಬದಲಾಗಬೇಕು. ಸ್ವತಃ ಹೆಣ್ಮಕ್ಕಳು ಇದನ್ನ ಮೀರಲಾಕ ಪ್ರಯತ್ನ ಪಡಬೇಕು. ಹೊಸತನದ ಕಡೆ ನಾವು ತುಡಿಬೇಕು. ಈ ಕಾಲದ ಹೆಣ್ಮಕ್ಕಳಾಗಿ, ಹೊಸತನವನ್ನ ಆವಾಹನೆ ಮಾಡಿಕೊಳ್ಳಾಕ ಹೆದರಬಾರದು. ನಾವು ಹೆಚ್ಚು ಮುಕ್ತವಾಗಬೇಕು, ಹೊಸದಾರಿಗಳೆಡೆಗೆ ದೃಷ್ಟಿ ಹರಿಸಬೇಕು. ಆದ್ರ, ಯಾರೂ ನಡೆಯದ ದಾರಿಗಳು ಯಾವತ್ತೂ ಸುಲಭವಾಗಿರೂದಿಲ್ಲ. ಅಲ್ಲಿ ಕಲ್ಲು–ಮುಳ್ಳು ತುಸು ಜಾಸ್ತಿನೇ ಇರ್ತಾವ. ಗಟ್ಟಿತನ ಬೇಕಾಕ್ಕೇತಿ.

ನನ್ನದೇ ಅನುಭವದಿಂದ ಹೇಳಬೇಕಂದ್ರ ನನ್ನದಾರಿ, ನಾ ಆರಿಸಿಕೊಂಡ ದಾರಿ, ನಾ ನಡೆದ ದಾರಿ... ಅದು ಸುಲಭದ್ದೇನೂ ಆಗಿರಲಿಲ್ಲ. ಎದುರಿಸಿ, ಮುಂದೆ ನಡೆದು, ಹಿಂತಿರುಗಿ ನೋಡಿದಾಗ ಎಂಥ ಧನ್ಯಭಾವ ಅಂದ್ರ, ಆ ದಾರಿಯುದ್ದಕ್ಕೂ ಅನುಭವಿಸಿದ ಸಂಕಷ್ಟಗಳು ಹಿಂದೆ ಸರಿದು, ನೆಮ್ಮದಿಯ ನಿಟ್ಟುಸಿರೊಂದು ಎದೆಯಿಂದ ಛಿಲ್ಲನೆ ಚಿಮ್ತದ.

ನಿರೂಪಣೆ: ಸುಶೀಲಾ ಡೋಣೂರ

ಮಗ, ಮಗಳು ಅಲ್ಲ, ಮಗು ಮಕ್ಕಳು ಎಂಬುದೇ ಸತ್ಯ!

ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿಯೇ ಮಗ–ಮಗಳ ನಡುವೆ ಲಿಂಗ ತಾರತಮ್ಯವಿದೆ. ಕೌಟುಂಬಿಕ ಮೌಲ್ಯಗಳಲ್ಲಿ ತರತಮವಿಲ್ಲದೆ, ಮಕ್ಕಳನ್ನು ನೋಡದೆ ಹೇಗೆ ಬೆಳೆಸಬೇಕು ಎಂದು ವಿಜಯಪುರದ ಮನೋಶಾಸ್ತ್ರಜ್ಞೆ ಪಲ್ಲವಿ ಅಡಿಗ ‘ಪ್ರಜಾವಾಣಿ’ಗೆ ನೀಡಿರುವ ಸಲಹೆಗಳು ಇಲ್ಲಿವೆ.

- ಮಗ ಮತ್ತು ಮಗಳ ನಡುವೆ ಜಗಳ ಬಂದಾಗ, ಇಬ್ಬರಿಗೂ ಸಮನಾಗಿಯೇ ತಿಳಿಹೇಳಬೇಕು. ಮಗಳಿಗೆ ಗದರಿ, ಮಗನಿಗೆ ರಿಯಾಯಿತಿ ನೀಡಬಾರದು.
- ಸಣ್ಣ ಸಣ್ಣ ಕೆಲಸಗಳನ್ನೂ ಕೂಡ ಸಮಾನವಾಗಿ ಹಂಚಬೇಕು. ಹೆಣ್ಣುಕೆಲಸ, ಗಂಡು ಕೆಲಸಗಳೆಂದು ವಿಂಗಡಿಸಬಾರದು
- ಅಡುಗೆ, ಮನೆಗೆಲಸ ಮುಂತಾದವನ್ನೂ ಗಂಡುಮಕ್ಕಳಿಗೂ ಹೇಳಿಕೊಡಬೇಕು.
- ಒಂದೇ ಮಗು ಇದ್ದರೂ ಲಿಂಗ ಸಂವೇದನೆ ಇರುವಂತೆ ನೋಡಬೇಕು. ಮೇಲರಿಮೆಯಾಗಲೀ, ಕೀಳರಿಮೆಯಾಗಲೀ ಬೆಳೆಯಕೂಡದಂತೆ ಎಚ್ಚರ ವಹಿಸಬೇಕು.
- ಮನೆಯಲ್ಲಿ ಮಕ್ಕಳೊಂದಿಗೆ ಆಗಾಗ ಚರ್ಚೆಯಲ್ಲಿ ತೊಡಗಿಸಿಕೊಳ್ಳಬೇಕು. ಮಗನ ಬಗ್ಗೆ ಒಲವು, ಮಗಳ ಬಗ್ಗೆ ತಾತ್ಸಾರ ತೋರದೆ, ಇಬ್ಬರಿಗೂ ಸಮನಾಗಿ ಮಾತನಾಡುವ ಅವಕಾಶ ನೀಡಬೇಕು. ಕೇಳುವ ವ್ಯವಧಾನ ತೋರಬೇಕು.
- ಪರಸ್ಪರ ಗೌರವಿಸುವುದನ್ನು ಎಲ್ಲ ಮಕ್ಕಳಿಗೂ ಹೇಳಿಕೊಡಬೇಕು. ಊಟಕ್ಕೆ ತಟ್ಟೆಹಾಕುವ, ನೀರು ತಂದು ಕೊಡುವಂಥ ಸಾಮಾನ್ಯ ಕೆಲಸಗಳನ್ನೂ ಮಗನ ಬಳಿ ಮಾಡಿಸಬೇಕು
- ತಮ್ಮದೇ ತಪ್ಪು ಇದ್ದರೂ ಗಂಡು ಮಕ್ಕಳು ಒಪ್ಪುವುದಿಲ್ಲ. ವಾದಿಸುತ್ತಾರೆ. ಈ ಅಹಂಕಾರದ ಮನೋಭಾವವನ್ನು ಮಗುವಾಗಿದ್ದಾಗಲೇ ಸರಿಪಡಿಸಬೇಕು. ಇಲ್ಲದಿದ್ದರೆ ಈ ಪ್ರವೃತ್ತಿ ವರ್ತನಾ ದೋಷವನ್ನು ಹುಟ್ಟುಹಾಕುತ್ತದೆ.
- ಕೌಟುಂಬಿಕ ಮೌಲ್ಯಗಳನ್ನು ಮಗು ಅನುಸರಿಸುತ್ತ ಇರುತ್ತದೆ ಎಂಬುದು ನೆನಪಿರಲಿ. 1ರಿಂದ 5 ವರ್ಷಗಳವರೆಗೂ ಮೌಲ್ಯಗಳನ್ನು ಕಲಿಯುವ ಪ್ರಯತ್ನ ಮಾಡುತ್ತಿರುತ್ತದೆ. 5 ವರ್ಷಗಳ ನಂತರ ನೀತಿ ಕಥೆಗಳ ಮೂಲಕ ಕೌಟುಂಬಿಕ, ಸಾಮಾಜಿಕ, ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು.
- ಇಂದಿನ ಮಕ್ಕಳಲ್ಲಿ ತಾಳ್ಮೆ ಕಡಿಮೆ, ಸಿಟ್ಟು ಹೆಚ್ಚು. ಅತಿಯಾದ ಮುದ್ದು ಮತ್ತು ಅತಿಯಾದ ಶಿಸ್ತು ಎರಡೂ ಒಳಿತಲ್ಲ. ಮಕ್ಕಳೊಂದಿಗೆ ಸ್ನೇಹ ಮತ್ತು ಸಂಯಮದಿಂದ ಇದ್ದರೆ ಹಂಚಿಕೊಳ್ಳುವ ಗುಣ ಬೆಳೆಯುತ್ತದೆ. ಸಿಟ್ಟಿನ ಮೇಲೆ ಕಡಿವಾಣ ಹಾಕಬಹುದು.
- ಬಾಲ್ಯದಲ್ಲಿ ಕೇಳಿದ್ದನ್ನೆಲ್ಲಾ ಕೊಡಿಸಿ ದೊಡ್ಡವರಾದ ಮೇಲೆ ಗೆರೆ ಕೊರೆಯುತ್ತಾ ಹಟಮಾರಿಗಳಾಗುತ್ತಾರೆ. ಮಕ್ಕಳು ಬೆಳೆಯು ಸ್ನೇಹಿತರಂತೆ ಪರಿಗಣಿಸಿ, ಆರ್ಥಿಕ ಸ್ಥಿತಿಯ ಕುರಿತು ಮನಗಾಣಿಸಬೇಕು.
- ಮಕ್ಕಳಿಗೆ ಸಮಾನ ಅವಕಾಶಗಳನ್ನು ನೀಡುತ್ತ ಅವರಲ್ಲಿರುವ ವಿಶಿಷ್ಟ ಗುಣಗಳಿಗೆ ಉತ್ತೇಜನ ನೀಡುತ್ತ ಬರಬೇಕು. ಅವರಲ್ಲಿ ತಮ್ಮ ಬಗ್ಗೆ ಆತ್ಮವಿಶ್ವಾಸ ಮೂಡಿದರೆ ಒಳ್ಳೆಯ ಮಗುವಾಗಿ ಬೆಳೆಯುವುದು ಸಾಧ್ಯವಾಗುತ್ತದೆ.
- ಮನೆಯ ಮರ್ಯಾದೆ ಮಗಳ ಸ್ವತ್ತಲ್ಲ, ಮಗನ ಜವಾಬ್ದಾರಿಯೂ ಹೌದು. ಇವೆರಡನ್ನೂ ಮನಗಾಣಿಸುವಲ್ಲಿ ಜವಾಬ್ದಾರಿಯುತ ನಡವಳಿಕೆ ಇದ್ದರೆ ಲಿಂಗ ಸಮಾನತೆ ಕೌಟುಂಬಿಕ ಮೌಲ್ಯಗಳಲ್ಲಿ ಮೂಡುತ್ತ ಬರುತ್ತದೆ.

ನಿರೂಪಣೆ: ಸಂಧ್ಯಾರಾಣಿ ಎಚ್.ಎಂ

ಪಲ್ಲವಿ ಅಡಿಗ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘**ಸಮಾಜವಾದಿ ಪಕ್ಷದ** ಅಭ್ಯರ್ಥಿಗಳು ತಾವು ಸೋಲುತ್ತೇವೆ ಎಂದು ಗೊತ್ತಾದರೆ, ತಮ್ಮ ಮತಗಳೆಲ್ಲವೂ ಬಿಜೆಪಿ ಅಥವಾ ಬೇರೆ ಪಕ್ಷಗಳಿಗೆ ವರ್ಗಾಯಿಸಬೇಕು. ಆ ಮೂಲಕ ಬಿಎಸ್‌ಪಿ ಅಭ್ಯರ್ಥಿಗಳು ಸೋಲುವಂತೆ ನೋಡಿಕೊಳ್ಳಬೇಕು. ಬಿಎಸ್‌ಪಿ ಅಭ್ಯರ್ಥಿಗಳು ಎಲ್ಲಿಯೂ ಆರಿಸಿ ಬರಬಾರದು’ ಎಂಬ ವಿವರ ಇರುವ ಪತ್ರದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸಮಾಜವಾದಿ ಪಕ್ಷದ ಲೆಟರ್‌ಹೆಡ್‌ನಲ್ಲಿ ಈ ಪತ್ರ ಬರೆಯಲಾಗಿದೆ. ಬಿಎಸ್‌ಪಿಯನ್ನು ಸೋಲಿಸಲು ಎಸ್‌ಪಿ ಹೀಗೆ ಮಾಡುತ್ತಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸಲಾಗಿದೆ.

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ವೈರಲ್ ಆಗಿರುವ ಚಿತ್ರದಲ್ಲಿ ಇರುವ ಲೆಟರ್‌ಹೆಡ್‌ಗೂ, ಸಮಾಜವಾದಿ ಪಕ್ಷದ ಲೆಟರ್‌ಹೆಡ್‌ಗೂ ವ್ಯತ್ಯಾಸವಿದೆ. ವೈರಲ್ ಆಗಿರುವ ಪತ್ರದ ವಿರುದ್ಧ ಸಮಾಜವಾದಿ ಪಕ್ಷವು ಮಾರ್ಚ್ 3ರಂದು ಲಖನೌ ಪೊಲೀಸರು ಮತ್ತು ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ಸಂಬಂಧ ಎಫ್‌ಐಆರ್ ಸಹ ದಾಖಲಾಗಿದೆ. ಮತದಾರರನ್ನು ತನ್ನತ್ತ ಸೆಳೆಯಲು ಬಿಜೆಪಿ ಈ ತಂತ್ರ ರೂಪಿಸಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಜೀವಿ-ವಿಧಿಗಳ ಒಪ್ಪಂದ

ಬೆನ್ನಿನಗಲವನಳೆದು ಹೊರೆಗೆ ನೀನದನೊಡ್ಡು |
ತನ್ನದೆನುವುದನು ವಿಧಿ ತಾನೆ ಕೊಳಲಿ ಬಿಡು ||
ಬನ್ನ ನಿನಗೊದಗಲದನಾತ್ಮ ಶಿಕ್ಷಣವೆನ್ನು |
ಮಾನ್ಯದೊಪ್ಪಂದವಿದು – ಮಂಕುತಿಮ್ಮ || 579 ||

ಪದ-ಅರ್ಥ: ಬೆನ್ನಿನಗಲವನಳೆದು = ಬೆನ್ನಿನ + ಅಗಲವನು + ಅಳೆದು, ನೀನದನೊಡ್ಡು = ನೀನು- + ಅದನು + ಒಡ್ಡು, ತನ್ನದೆನುವುದನು = ತನ್ನದು + ಎನುವುದನು, ಬನ್ನ = ಭಂಗ, ಸೋಲು, ನಿನಗೊದಗಲದನಾತ್ಮ ಶಿಕ್ಷಣವೆನ್ನು = ನಿನಗೆ + ಒದಗಲು + ಅದನು + ಆತ್ಮಶಿಕ್ಷಣ + ಎನ್ನು, ಮಾನ್ಯದೊಪ್ಪಂದವಿದು = ಮಾನ್ಯದ(ಒಪ್ಪುವ) + ಒಪ್ಪಂದ + ಇದು.

ವಾಚ್ಯಾರ್ಥ: ನಿನ್ನ ಬೆನ್ನಿನ ಅಗಲವನ್ನು ಅಳೆದು, ಎಂದರೆ ನಿನ್ನ ಶಕ್ತಿಯ ಮಿತಿಗಳನ್ನು ಅರಿತು, ಕಾರ್ಯಕ್ಕೆ ನೀನು ಒಪ್ಪಿ ಭಾರ ಹೊರು. ವಿಧಿ ಯಾವುದನ್ನಾದರೂ ತನ್ನದು ಎಂದರೆ ಅದಕ್ಕೆ ಅದನ್ನು ಬಿಟ್ಟು ಬಿಡು. ಮಾಡುವ ಕಾರ್ಯದಲ್ಲಿ ಸೋಲುಂಟಾದರೆ ಅದನ್ನು ಆತ್ಮಶಿಕ್ಷಣವೆಂದು ಭಾವಿಸು. ಇದು ನಿನಗೂ ಮತ್ತು ವಿಧಿಗೂ ಇರುವ ಒಪ್ಪಿತವಾದ ಒಪ್ಪಂದ.

ವಿವರಣೆ: ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರ,

ಈಶಾವಾಸ್ಯಮಿದಗ್ಂ ಸರ್ವಂ |
ಯತ್ಕಿಂಚ ಜಗತ್ಯಾಂ ಜಗತ್ ||
ತೇನ ತ್ಯಕ್ತೇನ ಭುಂಜೀಥಾಃ |
ಮಾಗೃಧಃ ಕಸ್ಯಸ್ವಿತ್ ಧನಂ ||

‘ಜಗತ್ತಿನಲ್ಲಿ ಯಾವುಯಾವುದು ಇದೆಯೋ ಅದೆಲ್ಲ ಈಶ್ವರನ ಮನೆ ಮತ್ತು ಅದಕ್ಕೆಲ್ಲ ಈಶ್ವರನೇ ಮನೆ. ಈ ಜಗತ್ತನ್ನು ನೀನು ನನ್ನದಲ್ಲವೆಂಬ ಭಾವದಿಂದ ಅನುಭವಿಸತಕ್ಕದ್ದು. ಇದನ್ನು ಈಶ್ವರನ ಪ್ರಸಾದವೆಂದು ಸ್ವೀಕರಿಸತಕ್ಕದ್ದು. ಯಾರೊಬ್ಬರ ಒಡವೆಗಾಗಿಯೂ ಆಸೆಪಡಬೇಡ’.

ಅದೇ ಉಪನಿಷತ್ತಿನ ಎರಡನೇ ಮಂತ್ರ ಹೇಳುತ್ತದೆ,

ಕುರ್ವನ್ನೇವೇಹ ಕರ್ಮಾಣಿ |
ಜಿಜೀವಿಷೇಚ್ಛತಗ್ಂ ಸಮಾಃ ||
ಏವಂ ತ್ವಯಿ ನಾನ್ಯಥೇತೋಽಸ್ತಿ |
ನ ಕರ್ಮ ಲಿಪ್ಯತೇ ನರೇ ||

‘ಈ ಲೋಕದಲ್ಲಿ ನೀನು ಮಾಡಬೇಕಾದ ಕರ್ತವ್ಯಗಳನ್ನು ಮಾಡಿಕೊಂಡೇ ನೂರು ವರ್ಷ ಬಾಳಲು ಮನಸ್ಸು ಮಾಡು. ಈಶ್ವರ ಸೇವಾಬುದ್ಧಿಯಿಂದ ಕೆಲಸ ಮಾಡಿದರೆ ನಿನಗೆ ಕರ್ಮದ ದೋಷ ತಟ್ಟುವುದಿಲ್ಲ. ಸದ್ಗತಿಯನ್ನು ಪಡೆಯಲು ಅದಲ್ಲದೆ ಬೇರೆ ದಾರಿಯಿಲ್ಲ’.

ಇವೆರಡೂ ಮಂತ್ರಗಳ ಅರ್ಥವನ್ನು ಸಮನ್ವಯಿಸಿದರೆ ಈ ಕಗ್ಗದ ಅರ್ಥ ಹೊಳೆಯುತ್ತದೆ. ನಾವು ಸದಾ ಕರ್ತವ್ಯಪರರಾಗಿಯೇ ಇರಬೇಕು. ಇದು ಈಶ್ವರನ ಅಥವಾ ವಿಧಿಯ ಪ್ರಪಂಚ ಎಂದು ತಿಳಿದಿದ್ದೂ ಪ್ರಯತ್ನ ಮಾಡಲೇಬೇಕು. ನಮ್ಮ ಶಕ್ತಿಯ ಮಿತಿಗಳನ್ನು ಅರಿತು (ಬೆನ್ನಿನ ಅಗಲವನ್ನು ಅಳೆದು), ಆ ಮಿತಿಯನ್ನು ಮೀರುವವರೆಗೆ ದುಡಿಯಬೇಕು. ಕೆಲವು ಕಾರ್ಯಗಳು ಸಾಧ್ಯವಾಗದಾಗ ಅವು ವಿಧಿಯ ಮುಡಿಪು ಎಂದು ಅದಕ್ಕೇ ಬಿಟ್ಟುಬಿಡು. ಕಾರ್ಯವಾಗದೇ ಭಂಗ ಬಂದದ್ದನ್ನು ವಿಧಿ ನಿನಗೆ ನೀಡಿದ ಆತ್ಮಶಿಕ್ಷಣ ಎಂದು ಬಗೆ. ಯಾಕೆಂದರೆ ಉಪನಿಷತ್ತಿನ ಮಾತಿನಂತೆ, ಈ ಪ್ರಪಂಚ ಈಶ್ವರನದು, ಕರ್ತವ್ಯ ನನ್ನದು. ಸಾಧನೆಯಾದರೆ ಸಂತೋಷ, ಆಗದಿದ್ದರೆ ವಿಧಿ ನೀಡಿದ ಆತ್ಮಶಿಕ್ಷಣ. ಈ ತರದ ಮನುಷ್ಯ ಪ್ರಯತ್ನ ಮತ್ತು ವಿಧಿಗಳ ನಡುವಿನ ಒಪ್ಪಂದ ನಿಷ್ಕಾಮ ಕರ್ಮಕ್ಕೆ ಅವಶ್ಯವಾದದ್ದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 8, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 24 ನೇ ದಿನ
ತಿಥಿ: (ಫಾಲ್ಗುಣ ಶುಕ್ಲ) ಷಷ್ಠಿ ಗಂ. 24-32 ನಕ್ಷತ್ರ: ಕೃತ್ತಿಕಾ ಅಹೋರಾತ್ರ ಯೋಗ: ವೈಧೃತಿ ಗಂ. 24-27, ಕರಣ: ಕೌಲವ ಗಂ. 11-28. ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 06-46 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 04 ಶಬನ್
ಅದೃಷ್ಟ ಸಂಖ್ಯೆ: 1, 8

ಮೇಷ: ನಿಮ್ಮ ಕೆಲಸ ಕಾರ್ಯದಲ್ಲಿ ಪದೇ ಪದೇ ತೋರಿ ಬರುತ್ತಿದ್ದ ಅಡ್ಡಿ ಆತಂಕಗಳು ದೂರಾಗಲಿವೆ. ನಿಮ್ಮ ಇಷ್ಟದ ಪ್ರಕಾರವೇ ನಿಮ್ಮ ಎಲ್ಲಾ ಕಾರ್ಯಗಳು ನಡೆಯುವ ಕಾಲ ಈ ದಿನವಾಗಿದೆ. ಮಹಾಗಣಪತಿಯನ್ನು ಆರಾಧಿಸಿ.

ವೃಷಭ: ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟಂತಹ ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಈ ದಿನ ಇತ್ಯರ್ಥಗೊಳ್ಳುವ ಸಂಭವವಿದೆ. ಹಾದಿಯಲ್ಲಿ ಹೋಗುವ ಸಮಸ್ಯೆಯನ್ನು ಮೈ ಮೇಲೆ ಎಳೆದುಕೊಳ್ಳುವ ಘಟನೆ ನಡೆಯುವುದು.

ಮಿಥುನ: ಗೃಹನಿರ್ಮಾಣ ಕಾರ್ಯ ಆಮೆಯ ವೇಗದಲ್ಲಿ ಸಾಗುವುದರಿಂದ ಮನಸ್ಸಿಗೆ ತುಸು ತಳವಳ, ಹೆದರಿಕೆ ಮೂಡಲಿದೆ. ಈ ದಿನದ ನಿರಾಸೆಯ ಜೀವನಶೈಲಿಯು ಹಂತ ಹಂತವಾಗಿ ಮುಕ್ತಾಯವಾಗುವುದು.

ಕರ್ಕಾಟಕ: ಎಷ್ಟೆ ಕಷ್ಟಬಂದರೂ ನಿಮ್ಮ ಗುರಿಯನ್ನು ಸಾಧಿಸಿಯೇ ತೀರುತ್ತೀರಿ. ಅದರ ಪರಿಣಾಮವಾಗಿ ಜೀವನದ ಮುಂದಿನ ಹಾದಿಯು ಸುಗಮವಾಗಲಿದೆ. ಶ್ರೀ ವೇಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶುಭವಾಗುತ್ತದೆ.

ಸಿಂಹ: ಅನೇಕ ಕ್ಷೇತ್ರಗಳಲ್ಲಿ ಹೊತ್ತು-ಗೊತ್ತು, ಆಹಾರ- ವಿಶ್ರಾಂತಿ ಇಲ್ಲದೆ ದುಡಿಯುವ ನಿಮಗೆ ಜನಗಳ ದೃಷ್ಟಿ ದೋಷ ಸ್ವಲ್ಪ ಮಟ್ಟಿನ ಆರೋಗ್ಯ ಹಾಳು ಮಾಡುವುದು. ಮಗಳ ವಿವಾಹ ಪ್ರಸ್ತಾವನೆ ಶುಭದಲ್ಲಿ ಮುಕ್ತಾಯವಾಗಲಿದೆ.

ಕನ್ಯಾ: ಯಾವುದೇ ಪರಿಸ್ಥಿತಿಯಲ್ಲಿಯೂ ನಿಮ್ಮ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವ ತೀರ್ಮಾನವನ್ನು ಮಾಡದಿರಿ. ನಿಮ್ಮ ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರವಾಗುವುದು.

ತುಲಾ: ರಾಜಕಾರಣಿಗಳು ದಿನದ ಹೆಚ್ಚಿನ ಸಮಯವನ್ನು ಸಾಮಾಜಿಕ ಹಿತಾಸಕ್ತಿಗಾಗಿ ಕಳೆಯಬೇಕಾಗುವುದು. ಆಯುರ್ವೇದದ ಪ್ರಭಾವದಿಂದ ಆರೋಗ್ಯ ಸುಧಾರಣೆ. ವೃತ್ತಿ , ಕುಟುಂಬದ ಜವಾಬ್ದಾರಿ ಸಮವಾಗಿ ಸ್ವೀಕರಿಸಿ.

ವೃಶ್ಚಿಕ: ಇತರರನ್ನು ಹೀಯಾಳಿಸುವ, ಅನಾವಶ್ಯಕವಾಗಿ ತಿರಸ್ಕರಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ.

ಧನು: ಈ ದಿನ ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು.

ಮಕರ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಮಾಡಿದ ತಪ್ಪಿನಿಂದಾಗಿ ನಷ್ಟವನ್ನು ಅನುಭವಿಸಬೇಕಾಗುವುದು. ಮಾಡುವ ಕೆಲಸದ ಬಗ್ಗೆ ಅಧ್ಯಯನವನ್ನು ನಡೆಸಿ. ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವವು.

ಕುಂಭ: ಈ ದಿನದ ಕಹಿ ಘಟನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಅವಶ್ಯಕತೆ ಇಲ್ಲ. ಅಂತಹ ಘಟನೆಗಳನ್ನು ನಿರ್ಲಕ್ಷಿಸಬಹುದು. ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲವಾಗಿದೆ.

ಮೀನ: ಹಿರಿಯರು ಮೊದಲಿನಿಂದ ಕುಟುಂಬದಲ್ಲಿ ನಡೆಸಿಕೊಂಡು ಬಂದ ಧಾರ್ಮಿಕ ವಿಧಿವಿಧಾನವನ್ನು ಆಚರಿಸುವ ಬಗ್ಗೆ ತೀರ್ಮಾನಿಸಿ. ಲೋಹದ ವಸ್ತುಗಳನ್ನು ವ್ಯಾಪಾರ ಮಾಡುವವರಿಗೆ ದುಪ್ಪಟ್ಟು ಲಾಭ.

ಪದಬಂಧ 4891

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನೆನಪಿನಿಂದ ಮಾಸದ ತಿಂಗಳು! (2)
5.ಪೂರ್ತಿ ಹಿಡಿಯದ ಗ್ರಹಣ (5)
6.ಪರಾಜಿತನು ಹಿಡಿದಿರುವ ಅಗಲವಾದ ತಟ್ಟೆ (3)
7.ಓದುವಿಕೆಯನ್ನು ಹೀಗೆನ್ನಿ (3)
8.ಸಂಗೀತ ಕೃತಿಗಳನ್ನು ರಚಿಸುವವನು (5)
9.ಸತ್ತವರನ್ನು ಹೂಳುವ ಜಾಗ (3)
10.ದವಸ ಧಾನ್ಯಗಳು ಸಮೃದ್ಧವಾಗುವಿಕೆ (3)
13.ಆನಂದವನ್ನು ಉಂಟು ಮಾಡುವುದು (5)
14.ಇದು ಸೋವಿಯಾದುದು! (2)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ರೂಪವಿದ್ದಾಗ ಯೋಗ್ಯನಾದವನು ಕಾಣುತ್ತಾನೆ (4)
2.ಗ್ರಹ ಕೊನೆಗಿದ್ದಾಗಿನ ಹತೋಟಿ (3)
4.ನೆಮ್ಮದಿ ಹೀಗೆ ಬಂದಿದೆ (4)
5.ಖಂಡತುಂಡವಾಗಿ ಮಾತನಾಡುವವನು (5)
7.ಈತ ಹಕ್ಕುದಾರ (5)
9.ಅತಿಯಾದ ಆನಂದ (4)
11.ತಪ್ಪನ್ನು ಕ್ಷಮಿಸುವುದು (4)
12.ದನಕ್ಕಾಗಿ ನಡೆದ ಹೋರಾಟ (3)



4890ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಎಡಚ 3.ಕೈಚಳಕ 5.ಘಟ 6.ದರವೇಶಿ 7.ಅತಿಕ್ರಮಪ್ರವೇಶ 10.ಸುಮಬಾಣ 11.ಶುಕ 13.ಗಮನಾರ್ಹ 14.ದಮಡಿ

ಮೇಲಿಂದ ಕೆಳಕ್ಕೆ: 1.ಎಡ್ಡ 2.ಚರಟ 4.ಕಕ್ಷಶಿ 5.ಘನಅ 6.ದಮಾಪ್ರ 8.ಕ್ರಮೇಣ 9.ಶತಕ 10.ಸುಭಗ 11.ಶುಭದ 12.ಚಡಿ

ಸುಡೊಕು 5277

7		4		5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6			9	1	7		
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5276 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಷೇರುಪೇಟೆ ವಹಿವಾಟು 1491



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,245
ಇಂದಿನ ಅಂತ್ಯ	15,863
▼	382
ದಿನದ ಕನಿಷ್ಠ	15,711

ವಿನಿಮಯ ದರ

$ ಡಾಲರ್	76.93
£ ಪೌಂಡ್	101.32
€ ಯುರೊ	83.65
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹370
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹370

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಪೌಷ್ಟಿಕ ಆಹಾರ ಸೇವಿಸಿ

ರಷ್ಯಾ–ಉಕ್ರೇನ್ ಸಂಘರ್ಷ: ನಿಲ್ಲದ ವಿದೇಶಿ ಬಂಡವಾಳ ಹೊರಹರಿವು

ತೈಲ ದರ ಏರಿಕೆಗೆ ಪೇಟೆ ಕುಸಿತ

ಮುಂಬೈ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಕಚ್ಚಾ ತೈಲ ದರವು ಭಾರಿ ಏರಿಕೆ ಕಂಡಿದೆ. ಹಣದುಬ್ಬರ ದರ ವಿಪರೀತ ಆಗಬಹುದು, ಆರ್ಥಿಕ ಬೆಳವಣಿಗೆ ಪ್ರಮಾಣ ಕಡಿಮೆ ಆಗಬಹುದು ಎಂಬ ಆತಂಕ ಎದುರಾಗಿದೆ. ಇದರಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸೂಚ್ಯಂಕಗಳು ಹೆಚ್ಚಿನ ಕುಸಿತ ಕಾಣುವಂತಾಯಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದ್ದು, ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿದ್ದು ಸಹ ವಹಿವಾಟಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಿದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ ಇಳಿಮುಖವಾಗಿಯೇ ವಹಿವಾಟು ಆರಂಭಿಸಿತು. ದಿನದ ನಡುವಿನಲ್ಲಿ 1,966 ಅಂಶ ಕುಸಿತ ಕಂಡು 52,367ಕ್ಕೆ ತಲುಪಿತ್ತು. ನಂತರ ತುಸು ಚೇತರಿಕೆ ಕಂಡು ಕುಸಿತದ ಪ್ರಮಾಣವು 1,491ಕ್ಕೆ ತಲುಪಿತು. 52,842 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 382 ಅಂಶ ಇಳಿಕೆ ಕಂಡು 15,863 ಅಂಶಗಳಿಗೆ ತಲುಪಿತು.

ಎರಡೂ ಸೂಚ್ಯಂಕಗಳು ಏಳು ತಿಂಗಳ ಕನಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ.

ಅಮೆರಿಕ ಮತ್ತು ಯುರೋಪ್‌ನ ದೇಶಗಳು ರಷ್ಯಾದ ತೈಲ ರಫ್ತಿನ ಮೇಲೆ ನಿಷೇಧ ಹೇರಬಹುದು ಎನ್ನುವ ಆತಂಕ ಎದುರಾಗಿದೆ. ಇದರಿಂದಾಗಿ ಕಚ್ಚಾ ತೈಲ ದರವು 2008ರ ಜುಲೈ ಬಳಿಕದ ಗರಿಷ್ಠ ಮಟ್ಟ ತಲುಪಿದೆ. ಇದರ ಪರಿಣಾಮವಾಗಿ ದೇಶಿ ಷೇರುಪೇಟೆಗಳಲ್ಲಿ ಅತಿಯಾದ ಮಾರಾಟದ ಒತ್ತಡ ಕಂಡುಬಂತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಇನ್ನಷ್ಟು ನಿರ್ಬಂಧ ಹೇರಬಹುದು ಎನ್ನುವ ಆತಂಕ ಹಾಗೂ ಕಚ್ಚಾ ತೈಲ ದರ ಏರಿಕೆಯಿಂದಾಗಿ ಮಾರುಕಟ್ಟೆಯಲ್ಲಿ ಹೆಚ್ಚಿನ ಕುಸಿತ ಕಂಡುಬಂದಿತು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಏಳು ತಿಂಗಳ ಕನಿಷ್ಠ ಮಟ್ಟದಲ್ಲಿ ದಿನದ ವಹಿವಾಟು ಅಂತ್ಯ
- ನಾಲ್ಕು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 3,404 ಅಂಶ ಕುಸಿತ
- ಬಿಎಸ್‌ಇ ಮಿಡ್, ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 2.30ರವರೆಗೂ ಇಳಿಕೆ

4 ದಿನಗಳಲ್ಲಿ ₹ 11.28 ಲಕ್ಷ ಕೋಟಿ ಸಂಪತ್ತು ನಷ್ಟ

ಮುಂಬೈ ಷೇರುಪೇಟೆಯಲ್ಲಿ ಕಂಡುಬಂದ ನಕಾರಾತ್ಮಕ ವಹಿವಾಟಿನಿಂದಾಗಿ ನಾಲ್ಕು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 11.28 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 241.10 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು ಸದ್ಯದ ಮಟ್ಟಿಗೆ ಬಗೆಹರಿಯುವ ಸೂಚನೆ ಕಂಡುಬರುತ್ತಿಲ್ಲ. ಹೀಗಾಗಿ ಅಲ್ಪಾವಧಿಯಲ್ಲಿ ದೇಶಿ ಷೇರುಪೇಟೆಗಳ ವಹಿವಾಟು ಅಸ್ಥಿರವಾಗಿಯೇ ಇರಲಿದೆ. ಜಾಗತಿಕ ಷೇರುಪೇಟೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ವಹಿವಾಟು ನಡೆಸುವುದು ಒಳಿತು ಎಂದೂ ಅವರು ಹೂಡಿಕೆದಾರರಿಗೆ ಸಲಹೆ ನೀಡಿದ್ದಾರೆ.

ಕೈಸುಡುತ್ತಿರುವ ಅಡುಗೆ ಎಣ್ಣೆ

ಒಂದನೇ ಪುಟದಿಂದ

ಖರೀದಿಗೆ ಮಿತಿ: ಬೆಂಗಳೂರು, ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ಕೆಲವು ಸೂಪರ್‌ಮಾರ್ಕೆಟ್‌ಗಳಲ್ಲಿ ಅಡುಗೆ ಎಣ್ಣೆ ಖರೀದಿಯ ಮೇಲೆ ಮಿತಿ ಹೇರಲಾಗಿದೆ. ಕೆಲವೆಡೆ ಕಿರಾಣಿ ಅಂಗಡಿಗಳಲ್ಲಿಯೂ ಮಿತಿ ಹೇರಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಟಿಎಸ್‌ಎಸ್ ಸೂಪರ್ ಮಾರ್ಕೆಟ್‌ನಲ್ಲಿ ಗ್ರಾಹಕರಿಗೆ ಬೇಡಿಕೆಯಷ್ಟು ನೀಡಲಾಗುತ್ತಿದ್ದರೂ ಸಗಟು ವ್ಯಾಪಾರಿಗಳಿಗೆ ಅಡುಗೆ ಎಣ್ಣೆ ನೀಡುತ್ತಿಲ್ಲ.

‘ಮೂರ್ನಾಲ್ಕು ದಿನಗಳಿಂದ ಅಡುಗೆ ಎಣ್ಣೆ ಪೂರೈಕೆ ಆಗುತ್ತಿಲ್ಲ. ಹೀಗಾಗಿ ಮಿತಿ ವಿಧಿಸಲಾಗಿದೆ’ ಎಂದು ಕಲಬುರಗಿಯ ಸೂಪರ್‌ಮಾರ್ಕೆಟ್ ಸಿಬ್ಬಂದಿ ಒಬ್ಬರು ತಿಳಿಸಿದರು.

ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅಡುಗೆ ಎಣ್ಣೆ ದರವು ಲೀಟರ್‌ಗೆ ₹ 30ರಷ್ಟು ಏರಿಕೆಯಾಗಿದೆ. ಕಿರಾಣಿ ಅಂಗಡಿಗಳಲ್ಲಿ ₹ 155ರ ಸೂರ್ಯಕಾಂತಿ ಎಣ್ಣೆ ಪೊಟ್ಟಣಗಳನ್ನು ₹ 185ಕ್ಕೆ ಮಾರಲಾಗುತ್ತಿದೆ.

ವ್ಯಾಪಕವಾಗಿ ಬಳಕೆಯಾಗುವ ಯಾವುದೇ ಒಂದು ಅಡುಗೆ ಎಣ್ಣೆಯ ಬೆಲೆ ದುಬಾರಿಯಾದರೆ ಅದರ ಪರಿಣಾಮವು ಇತರ ಅಡುಗೆ ಎಣ್ಣೆಗಳ ಬೆಲೆಯ ಮೇಲೆಯೂ ಇರುತ್ತದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಭಾರತದಲ್ಲಿ ವಾರ್ಷಿಕ ಸರಿಸುಮಾರು 2 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಉತ್ಪಾದನೆ ಆಗುತ್ತದೆ. ಇದರಿಂದ ದೇಶಿ ಬೇಡಿಕೆ ಪೂರೈಸಲು ಸಾಧ್ಯವೇ ಇಲ್ಲ ಎಂದು ಮಾರುಕಟ್ಟೆ ಮೂಲಗಳು ಹೇಳಿವೆ. ಅಡುಗೆ ಎಣ್ಣೆಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವ ಬಗ್ಗೆ ಆಲೋಚಿಸಲಾಗುತ್ತಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ಫೆಬ್ರುವರಿ ಕೊನೆಯ ವಾರದಲ್ಲಿ ಹೇಳಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	44929-45359
ಬೆಟ್ಟೆ	36119-36569
ಕೆಂಪುಗೋಟು	30600-31000
ರಾಶಿ	4449-44889
ಕಾರ್ಕಳ	
ಹೊಸತು	40000-44500
ಹಳತು	46000-53000
ಕುಮಟ	
ಚಿಪ್ಪು	23209-30199
ಕೋಕ	13089-26090
ಫ್ಯಾಕ್ಟರಿ	12090-18979
ಹಳೆಚಾಲಿ	46090-48219
ಹೊಸಚಾಲಿ	35189-41099
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	21099-29809
ಚಾಲಿ	46639-46639
ಕೋಕ	20099-27299
ಹೊಸಚಾಲಿ	35299-40339
ಕೆಂಪುಗೋಟು	24399-32209
ರಾಶಿ	44159-46509
ತಟ್ಟಿಬೆಟ್ಟೆ	36469-41219
ಶಿರಸಿ	
ಬೆಟ್ಟೆ	30899-45299
ಬಿಳಿಗೋಟು	23269-43099
ಚಾಲಿ	33109-41418
ರಾಶಿ	30639-47199
ಯಲ್ಲಾಪುರ	
ಬಿಳಿಗೋಟು	26699-32869
ಚಾಲಿ	35682-41519
ಕೋಕ	18899-28299
ಕೆಂಪುಗೋಟು	28919-36969
ರಾಶಿ	46199-52899
ತಟ್ಟಿಬೆಟ್ಟೆ	38099-45590
ರಾಮನಗರ ರೇಷ್ಮೆ	
ಮಿಶ್ರತಳಿ	400-766
ದ್ವಿತಳಿ	444-960

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15600	15600	224.25 ಸೆಂಟ್ಸ್
ಎಸಿ	7560	7600	7700	
ಆರ್‌ಪಿ	8100	8200	8300	ಲಂಡನ್
ಆರ್‌ಸಿ	4000	3800	3875	2038 ಡಾಲರ್ಸ್

ಹತ್ತೇ ದಿನಗಳಲ್ಲಿ ಪ್ರತಿ ಟನ್ ಬೆಲೆ ₹ 5,783 ದುಬಾರಿ

ಅಡುಗೆ ಎಣ್ಣೆ ದರ ಏರಿಕೆ ನಿಯಂತ್ರಣ ಕಷ್ಟ

• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಅಡುಗೆ ಎಣ್ಣೆಯ ದರ ಗಗನಕ್ಕೇರುವುದನ್ನು ನಿಯಂತ್ರಿಸಲು ಯಾವುದೇ ಮಾರ್ಗೋಪಾಯ ಇಲ್ಲ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

‘ದೇಶದ ಅಡುಗೆ ಎಣ್ಣೆಯ ಒಟ್ಟು ಬೇಡಿಕೆಯಲ್ಲಿ ಶೇ 55ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಆಮದಾಗುವ ಕಚ್ಚಾ ಅಡುಗೆ ಎಣ್ಣೆಗಳಲ್ಲಿ, ತಾಳೆ ಎಣ್ಣೆಯ ಪಾಲು ಶೇ 62ರಷ್ಟು, ಸೋಯಾಬೀನ್ ಎಣ್ಣೆಯ ಪಾಲು ಶೇ 21ರಷ್ಟು ಹಾಗೂ ಸೂರ್ಯಕಾಂತಿ ಎಣ್ಣೆಯ ಪಾಲು ಶೇ 14ರಷ್ಟಿದೆ’ ಎಂದು ವಿಶ್ಲೇಷಿಸುತ್ತಾರೆ ಸಾಮಾಜಿಕ–ಆರ್ಥಿಕ ತಜ್ಞರು.

‘ಜಗತ್ತಿನ ಒಟ್ಟು ಸೂರ್ಯಕಾಂತಿ ಎಣ್ಣೆ ರಫ್ತಿನಲ್ಲಿ ಉಕ್ರೇನ್ ಮತ್ತು ರಷ್ಯಾದ ಪಾಲು ಶೇ 72ರಷ್ಟಿದೆ. ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಸೂರ್ಯಕಾಂತಿ ಎಣ್ಣೆ ಪೂರೈಕೆಯಲ್ಲಿ ಸಮಸ್ಯೆ ಆಗಿದೆ. ಹತ್ತೇ ದಿನಗಳಲ್ಲಿ ಪ್ರತಿ ಟನ್ ಅಡುಗೆ ಎಣ್ಣೆ ದರ ಸರಿಸುಮಾರು ₹ 5,783ರಷ್ಟು ಹೆಚ್ಚಳವಾಗಿದೆ. ಬೆಲೆ ಹೆಚ್ಚಳ ಇನ್ನಷ್ಟು ಆಗಲಿದೆ’ ಎಂದು ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ (ಐಸೆಕ್) ತಜ್ಞ ಡಾ. ಖಲೀಲ್ ಷಾ ಅಭಿಪ್ರಾಯಪಟ್ಟರು.

ಡಾ. ಖಲೀಲ್ ಷಾ

‘ಉಕ್ರೇನ್ ಹವಾಮಾನ ಸೂರ್ಯಕಾಂತಿ ಬೆಳೆಗೆ ಹೇಳಿ ಮಾಡಿಸಿದಂತಿದೆ. ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಸೂರ್ಯಕಾಂತಿ ಕಟಾವಿಗೆ ಬರುತ್ತಿತ್ತು. ಈಗ ಯುದ್ಧ ನಡೆಯುತ್ತಿರುವುದರಿಂದ ಕಚ್ಚಾ ಎಣ್ಣೆ ಪೂರೈಕೆಗೆ ಏಟು ಬೀಳಬಹುದು. ಜಾಗತಿಕ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರವೂ ಹೆಚ್ಚಿದೆ. ಅಡುಗೆ ಎಣ್ಣೆಯ ಸಾಗಣೆ ವೆಚ್ಚವೂ ಹೆಚ್ಚಾಗಲಿದ್ದು, ಇದು ಕೂಡ ದರ ಏರಿಕೆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲಿದೆ’ ಎಂದು ಅವರು ವಿಶ್ಲೇಷಿಸಿದರು.

ಹಿಂದಿನ ವರ್ಷವೂ ಅಡುಗೆ ಎಣ್ಣೆ ದರ ಗಗನಕ್ಕೇರಿತ್ತು. ಆ ಬಳಿಕ ದೇಶದಲ್ಲಿ ಎಣ್ಣೆಕಾಳು ಬೆಳೆ ಹೆಚ್ಚಿಸಲು ಕೇಂದ್ರ ಸರ್ಕಾರ ಅನೇಕ ಉತ್ತೇಜನ ಕ್ರಮಗಳನ್ನು ಕೈಗೊಂಡಿತ್ತು. ಇದರಿಂದಾಗಿ 2021–22ರಲ್ಲಿ ಶೇಂಗಾ, ಸಾಸಿವೆ, ಸೋಯಾಬೀನ್, ಸೂರ್ಯಕಾಂತಿ ಸೇರಿದಂತೆ ಒಂಬತ್ತು ಬಗೆಯ ಎಣ್ಣೆಕಾಳು ಉತ್ಪಾದನೆ ಕಳೆದ ಸಾಲಿಗಿಂತ ಶೇ 3.34ರಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ.

‘ದೇಶದಲ್ಲಿ ಎಣ್ಣೆಕಾಳು ಉತ್ಪಾದನೆ ಹೆಚ್ಚಾದರೂ ಅಡುಗೆ ಎಣ್ಣೆ ದರ ಏರಿಕೆಯನ್ನು ತಕ್ಷಣಕ್ಕೆ ತಡೆಯಲು ಆಗದು. ಈ ಹಿಂದೆ ಹಳ್ಳಿ–ಹಳ್ಳಿಗಳಲ್ಲೂ ಎಣ್ಣೆ ತೆಗೆಯುವ ಗಾಣಗಳಿದ್ದವು. ಈ ವ್ಯವಸ್ಥೆ ಸಂಪೂರ್ಣ ನಾಶವಾಗಿದೆ. ಪ್ರಸ್ತುತ ನಮ್ಮ ದೇಶದ ಅಡುಗೆ ಎಣ್ಣೆ ಮಾರುಕಟ್ಟೆ ಕೇವಲ ನಾಲ್ಕೈದು ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿದೆ. ಇಂತಹ ಬಿಕ್ಕಟ್ಟಿನ ಸನ್ನಿವೇಶ ಬಳಸಿಕೊಂಡು ಅವರು ಹೆಚ್ಚು ಲಾಭ ಗಳಿಸಲು ಪ್ರಯತ್ನಿಸುತ್ತಾರೆ’ ಎಂದು ಖಲೀಲ್ ಅಭಿಪ್ರಾಯಪಟ್ಟರು.

‘ಅಡುಗೆ ಎಣ್ಣೆ ಮೇಲಿನ ಆಮದು ಸುಂಕವನ್ನು 2022ರ ಮಾರ್ಚ್ ಅಂತ್ಯದವರೆಗೆ ಅನ್ವಯವಾಗುವಂತೆ ಇಳಿಸಲಾಗಿದೆ. ಇದನ್ನು ಸೆಪ್ಟೆಂಬರ್ 30ರವರೆಗೆ ಮುಂದುವರಿಯುವ ಸಾಧ್ಯತೆ ಹೆಚ್ಚು. ಆದರೆ, ಇದು ಕೂಡ ಅಡುಗೆ ಎಣ್ಣೆ ದರ ಇಳಿಸಲು ನೆರವಿಗೆ ಬರುತ್ತದೆ ಎಂದೆನಿಸದು’ ಎನ್ನುತ್ತಾರೆ ಅವರು.

ಅಡುಗೆ ಎಣ್ಣೆ ಆಮದು ಹೆಚ್ಚಳ



ಭಾರತಕ್ಕೆ ಅಡುಗೆ ಎಣ್ಣೆ ಪೂರೈಸುವ ದೇಶಗಳು

ತಾಳೆ ಎಣ್ಣೆ	ಮಲೇಷ್ಯಾ, ಇಂಡೋನೇಷ್ಯಾ
ಸೋಯಾಬೀನ್	ಅರ್ಜೆಂಟೀನಾ, ಬ್ರೆಜಿಲ್
ಸೂರ್ಯಕಾಂತಿ ಎಣ್ಣೆ	ಉಕ್ರೇನ್, ರಷ್ಯಾ, ಅರ್ಜೆಂಟೀನಾ

ಸಂಘರ್ಷ ಮುಂದುವರಿದರೆ ಮತ್ತಷ್ಟು ದುಬಾರಿ

ಒಂದನೇ ಪುಟದಿಂದ

ವಿತರಕರ ಬಳಿ ಸಾಮಾನ್ಯವಾಗಿ ಮೂರರಿಂದ ನಾಲ್ಕು ತಿಂಗಳಿಗೆ ಸಾಕಾಗುವಷ್ಟು ದಾಸ್ತಾನು ಇರುತ್ತದೆ. ಹೀಗಾಗಿ ತಕ್ಷಣಕ್ಕೆ ದೊಡ್ಡ ಮಟ್ಟದ ಕೊರತೆ ಆಗಲಿಕ್ಕಿಲ್ಲ. ಹೀಗಿದ್ದರೂ ಮಾರುಕಟ್ಟೆಯಲ್ಲಿ ತೀವ್ರ ಅಭಾವ ಸೃಷ್ಟಿಯಾಗುವುದನ್ನು ತಪ್ಪಿಸಲು ಕಂಪನಿಗಳೇ ವಿತರಕರಿಗೆ ಮಿತಿ ಹೇರುತ್ತಿವೆ. ಇಂತಿಷ್ಟೇ ಮಾರಾಟ ಮಾಡಬೇಕು ಎನ್ನುವ ಗುರಿ ಇಟ್ಟುಕೊಳ್ಳದಂತೆ ವಿತರಕರಿಗೆ ಸೂಚನೆ ನೀಡಿವೆ ಎಂದು ವರ್ತಕರೊಬ್ಬರು ಮಾಹಿತಿ ನೀಡಿದರು.

ಸೂರ್ಯಕಾಂತಿ ಎಣ್ಣೆಯ ಬೆಲೆ ಹೆಚ್ಚಳ ಆಗಿದ್ದರೂ ಸದ್ಯದ ಮಟ್ಟಿಗೆ ಮಾರುಕಟ್ಟೆಯಲ್ಲಿ ಕೊರತೆ ಕಂಡುಬಂದಿಲ್ಲ. ಆದರೆ, ರಷ್ಯಾ–ಉಕ್ರೇನ್ ಬಿಕ್ಕಟ್ಟು ಮುಂದುವರಿದರೆ ಮುಂದಿನ ದಿನಗಳಲ್ಲಿ ಸೂರ್ಯಕಾಂತಿ ಎಣ್ಣೆ ಲಭ್ಯತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂದು ಬೆಂಗಳೂರಿನಲ್ಲಿ ಖಾದ್ಯತೈಲದ ಸಗಟು ಮತ್ತು ರಿಟೇಲ್ ಮಾರಾಟ ನಡೆಸುತ್ತಿರುವ ವರ್ತಕರೊಬ್ಬರು ಹೇಳಿದರು.

ಆಮದುದಾರರು, ದೊಡ್ಡ ಕಂಪನಿಗಳ ಮಟ್ಟದಲ್ಲಿ ಸೂರ್ಯಕಾಂತಿ ಎಣ್ಣೆಯ ಕೊರತೆ ಉಂಟಾಗಿದೆ. ಹೀಗಿದ್ದರೂ ಪೂರೈಕೆ ಸಂಪೂರ್ಣವಾಗಿ ನಿಂತಿಲ್ಲ. ಮೊದಲು 50 ಟನ್ ಸಿಗುತ್ತಿತ್ತು. ಈಗ 10 ಟನ್‌ಗಳಿಂದ 15 ಟನ್‌ಗಳಷ್ಟಾದರೂ ಸಿಗುತ್ತಿದೆ ಎಂದು ಅವರು ವಿವರಿಸಿದರು.

ಬೀಳುವ ಮಾರುಕಟ್ಟೆಯಲ್ಲಿ ನೀವು ಬೀಳದಿರಿ

ಷೇರು ಮಾತು
ಶರತ್ ಎಂ.ಎಸ್.

ನನ್ನ ಸ್ನೇಹಿತನೊಬ್ಬ ಇತ್ತೀಚೆಗಷ್ಟೇ ಷೇರು ಮಾರುಕಟ್ಟೆ ಪ್ರವೇಶಿಸಿ ಒಂದಷ್ಟು ಲಾಭ ಕಂಡಿದ್ದ. ಅದೇ ಜೋಶ್‌ನಲ್ಲಿ ಹೆಚ್ಚೆಚ್ಚು ಹೂಡಿಕೆ ಮಾಡುವ ಅಂದಾಜಿನಲ್ಲಿದ್ದ. ಆದರೆ ರಷ್ಯಾ-ಉಕ್ರೇನ್ ಯುದ್ಧ ಘೋಷಣೆಯಾದ ದಿನ ಅವನಿಂದ ಒಂದು ಕರೆ ಬಂತು. ‘ಸೂಚ್ಯಂಕಗಳು ಬೀಳುತ್ತಿವೆ, ಕೂಡಲೇ ಎಲ್ಲಾ ಷೇರುಗಳನ್ನು ಮಾರಾಟ ಮಾಡದಿದ್ರೆ ಮತ್ತಷ್ಟು ನಷ್ಟವಾಗುವುದಲ್ಲವೇ’ ಎಂದು ಕೇಳಿದ. ‘ತಲೆಹೋಗುವ ಪರಿಸ್ಥಿತಿ ಬಂದಿಲ್ಲ. ಸ್ವಲ್ಪ ಸಮಾಧಾನವಾಗಿ ಇರಪ್ಪ’ ಅಂತ ಹೇಳಿದೆ.

‘ಅಯ್ಯೋ, ಏನ್ ಮಾತಾಡ್ತಿದ್ದೀಯಾ ನೀನು? ಇರೋ ಅಲ್ಪಸ್ವಲ್ಪ ಹಣನೂ ಕರಗೋದ್ರೆ ಏನ್ ಮಾಡೋದು’ ಅಂದ. ‘ಸುಮ್ಮನಿರಪ್ಪ. ಮಾರುಕಟ್ಟೆಯಲ್ಲಿ ಏಳೋದು, ಬೀಳೋದು ಸಹಜ’ ಅಂದೆ. ಮಾರನೆಯ ದಿನ ಅವನೇ ಫೋನ್ ಮಾಡಿ, ‘ಷೇರುಪೇಟೆ ಸೂಚ್ಯಂಕಗಳು ಸುಧಾರಿಸಿವೆ, ನಿನ್ನೆ ಮಾರಾಟ ಮಾಡಿದ್ರೆ ಎಷ್ಟೊಂದು ನಷ್ಟ ಆಗ್ತಿತ್ತಲ್ವಾ’ ಅಂದ. ಇದು ನನ್ನ ಸ್ನೇಹಿತನೊಬ್ಬನ ಸಮಸ್ಯೆಯಲ್ಲ. ಷೇರು ಮಾರುಕಟ್ಟೆಯನ್ನು ಮೊದಲ ಬಾರಿಗೆ ಪ್ರವೇಶ ಮಾಡಿರುವ ಬಹುತೇಕರ ಮನಸ್ಥಿತಿ ಇದು. ಏರಿಳಿತದ ಮಾರುಕಟ್ಟೆಯಲ್ಲಿ ಯಾವ ತಪ್ಪುಗಳನ್ನು ಮಾಡಬಾರದು ಎನ್ನುವ ಬಗ್ಗೆ ಗಮನಿಸೋಣ.

1. ಏರಿಳಿತಗಳು ಸಹಜ: 1992ರಲ್ಲಿ ಹರ್ಷದ್ ಮೆಹ್ತಾ ಹಗರಣದ ಕಾರಣದಿಂದಾಗಿ ಷೇರು ಮಾರುಕಟ್ಟೆ ಭಾರೀ ಕುಸಿತ ಕಂಡಿತ್ತು. 1999ರಲ್ಲಿ ಡಾಟ್ ಕಾಂ ಬಬಲ್‌ನಿಂದಾಗಿ ಸೂಚ್ಯಂಕಗಳು ಕೆಳಮುಖವಾಗಿದ್ದವು. 2008ರಲ್ಲಿ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲೂ ಷೇರುಪೇಟೆ ಇಳಿಕೆ ದಾಖಲಿಸಿತ್ತು. 2020ರಲ್ಲಿ ಕೊರೊನಾ ಕಾರಣಕ್ಕೆ ಸೂಚ್ಯಂಕಗಳು ಗಣನೀಯವಾಗಿ ತಗ್ಗಿದ್ದವು. 1991ರಲ್ಲಿ ಸೆನ್ಸೆಕ್ಸ್ 5,000 ಅಂಶಗಳಿಗಿಂತ ಕೆಳಗಿತ್ತು. ಇವತ್ತು ಸೆನ್ಸೆಕ್ಸ್ 52,000 ಅಂಶಗಳ ಗಡಿಯಲ್ಲಿದೆ.

ಏರಿಳಿತಗಳೆಲ್ಲ ತಾತ್ಕಾಲಿಕ, ದೀರ್ಘಾವಧಿಯಲ್ಲಿ ಷೇರು ಮಾರುಕಟ್ಟೆಯು ಹೂಡಿಕೆದಾರರಿಗೆ ಭರ್ಜರಿ ಲಾಭವನ್ನೇ ತಂದುಕೊಟ್ಟಿರುವುದು ಮೇಲಿನ ಉದಾಹರಣೆಗಳಿಂದ ಮನದಟ್ಟಾಗುತ್ತದೆ.

2. ಕುಸಿಯುವುದು ಸಹಜ: ಷೇರುಪೇಟೆ ಸೂಚ್ಯಂಕಗಳು ಶೇ 10ರಿಂದ ಶೇ 20ರವರೆಗೆ ಕುಸಿತ ಕಾಣುವುದು ಸಾಮಾನ್ಯ. ಆದರೆ ನಿರ್ದಿಷ್ಟ ಷೇರುಗಳ ವಿಚಾರಕ್ಕೆ ಬಂದಾಗ ಕುಸಿತ ಮತ್ತಷ್ಟು ತೀವ್ರವಾಗಿದ್ದರೂ ಆಶ್ಚರ್ಯಪಡಬೇಕಿಲ್ಲ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಕೆಂದರೆ ಇಷ್ಟು ಕುಸಿತ ಎದುರಿಸಲು ನಾವು ಮಾನಸಿಕವಾಗಿ ಸಿದ್ಧರಾಗಿರಲೇಬೇಕು. ಹೆಚ್ಚು ಲಾಭ ತಂದುಕೊಟ್ಟಿರುವ ದೈತ್ಯ ಕಂಪನಿಗಳ ಷೇರು ಬೆಲೆ ಕೂಡ ಆಗಾಗ ಶೇ 30ಕ್ಕೂ ಹೆಚ್ಚು ಕುಸಿತ ಕಂಡಿದೆ ಎನ್ನುವುದನ್ನು ಅರಿಯಬೇಕು.

3. ಯಾವ ಕಂಪನಿಯ ಮೇಲೆ ಹೂಡಿಕೆ ಎಂಬುದು ಮುಖ್ಯ: ಭಾರತದ ಷೇರು ಮಾರುಕಟ್ಟೆಯಲ್ಲಿ ಸದ್ಯ 7,400ಕ್ಕೂ ಹೆಚ್ಚು ಕಂಪನಿಗಳಿವೆ. ಆದರೆ, ನೆನಪಿರಲಿ 1990ರಿಂದ 2018ರವರೆಗೆ ಷೇರು ಮಾರುಕಟ್ಟೆಯಲ್ಲಿ ಶೇ 1ರಷ್ಟು ಕಂಪನಿಗಳು ಮಾತ್ರ ಹೂಡಿಕೆದಾರರಿಗೆ ಶೇ 83ರಷ್ಟು ಸಂಪತ್ತು ಸೃಷ್ಟಿಸಿಕೊಟ್ಟಿವೆ. ಹೂಡಿಕೆಗೂ ಮುನ್ನ ಸರಿಯಾದ ಕಂಪನಿ ಆಯ್ಕೆ ಮಾಡಿಕೊಂಡು, ಪೂರ್ವಾಪರ ಅಧ್ಯಯನ ಮಾಡಿ ಹೂಡಿಕೆ ನಿರ್ಧಾರ ತೆಗೆದುಕೊಳ್ಳಬೇಕು. ಭದ್ರ ಬುನಾದಿ ಇಲ್ಲದ ಕಂಪನಿಯಲ್ಲಿ ಹೂಡಿಕೆ ಮಾಡಿದಾಗ ಮೂಲ ಬಂಡವಾಳವೇ ಇಲ್ಲವಾಗುವ ಸಾಧ್ಯತೆ ಇರುತ್ತದೆ. ಒಳ್ಳೆಯ ಕಂಪನಿ ಆಯ್ಕೆ ಮಾಡಿ ಹೂಡಿಕೆ ಮಾಡಿದಾಗ ಮಾರುಕಟ್ಟೆಯ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ.

4. ವೈವಿಧ್ಯತೆ ಕಾಯ್ದುಕೊಳ್ಳಿ: ಬೀಳುವ ಮಾರುಕಟ್ಟೆಯಲ್ಲಿ ನೀವು ಜಾರಿ ಬೀಳದಿರಲು ಮಾಡಬೇಕಿರುವ ಮೊದಲ ಕೆಲಸ ಹೂಡಿಕೆಯಲ್ಲಿ ವೈವಿಧ್ಯತೆ ಸಾಧಿಸುವುದು. ಅಂಚೆ ಕಚೇರಿ ಹೂಡಿಕೆಗಳು, ಬಾಂಡ್‌ಗಳು, ಪಿಪಿಎಫ್, ಎನ್‌ಪಿಎಸ್, ಇಪಿಎಫ್, ಚಿನ್ನದ ಮೇಲೆ ಹೂಡಿಕೆ ಹೀಗೆ ಎಲ್ಲ ರೀತಿಯ ಹೂಡಿಕೆಗಳಲ್ಲಿ ಹಣ ತೊಡಗಿಸಿದಾಗ ಮಾರುಕಟ್ಟೆಯ ಏರಿಳಿತದ ಅಲೆಯಲ್ಲಿ ಹೂಡಿಕೆದಾರ ಈಜಿ ದಡ ಸೇರಬಹುದು.

ಮುಂಬೈ ಧಾರಣೆ

ಶೇಂಗಾ

7-3-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	8400-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1555 (1540)
ಒಂದು ವಾರದ ಡೆಲಿವರಿ	1545 (1535)
ಸೋಯಾ ಕಚ್ಚಾ	1560 (1520)
ಪಾಮ್ ವಾರದ ಡೆಲಿವರಿ	1538 (1518)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,200 (52,290)
ಬೆಳ್ಳಿ ಕೆ.ಜಿ 70,500 (69,100)

ಆವರಣದಲ್ಲಿ ಶನಿವಾರದ ಧಾರಣೆ

ಬ್ಯಾಂಕ್ ಆಫ್ ಬರೋಡಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ, ಮಾರ್ಚ್ 31ರವರೆಗೆ ಎಂಎಸ್‌ಎಂಇ ಉತ್ಸವ್ ಅಭಿಯಾನ ಹಮ್ಮಿಕೊಂಡಿದ್ದು ಇದರ ಭಾಗವಾಗಿ ಮಾರ್ಚ್ 5ರಂದು ಗ್ರಾಹಕರ ಸಮಾವೇಶ ಆಯೋಜಿಸಿತ್ತು.

ಬೆಂಗಳೂರು ವಲಯದ ಮುಖ್ಯಸ್ಥ ಸುಧಾಕರ ಡಿ. ನಾಯಕ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದೇಶಿ ವಿನಿಮಯ ಸೇವೆಗಳು, ಎಂಎಸ್‌ಎಂಇ ವಲಯಕ್ಕೆ ಮೀಸಲಾಗಿರುವ ವಿಶೇಷ ಸೇವೆಗಳ ಬಗ್ಗೆ ಕಾರ್ಯಕ್ರಮದಲ್ಲಿ ಮಾಹಿತಿ ನೀಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

19ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಡಿ. ಶಾರದಮ್ಮ
ನಿಧನ: 08.03.2003
ಲೇಟ್ ಶ್ರೀ ಕೆ. ರಾಮಯ್ಯರವರ ಧರ್ಮಪತ್ನಿ
ಮಾಜಿ ನಗರಸಭಾ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಂಸ್ಥಾಪಕರು: ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ವೈಕುಂಠ ಸಮಾರಾಧನೆ

ಶ್ರೀ ರಾಮುರವರು
(ನಿವೃತ್ತ ಶಾಖಾಧಿಕಾರಿ ಹೈಕೋರ್ಟ್, ಬೆಂಗಳೂರು)
ಇವರು ದಿನಾಂಕ: 25.02.2022 ರಂದು ದೈವಾಧೀನರಾಧರೆಂದು ತಿಳಿಸಲು ವಿಷಾಧಿಸುತ್ತೇವೆ, ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 08.03.2022 ನೇ ಮಂಗಳವಾರ ಬೆಳಗ್ಗೆ 11.30ಕ್ಕೆ ಮೃತರ ಸ್ವಗೃಹ ನಂ. 548, 9ನೇ ಮುಖ್ಯ ರಸ್ತೆ, ಎಂ.ಸಿ.ಲೇಔಟ್, ವಿಜಯನಗರ, ಬೆಂಗಳೂರು–560040 ರಲ್ಲಿ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಮೃತರ ಕುಟುಂಬದವರು.
ಮೊಬೈಲ್: 9148969887/ 9845252868.

LOOKING TO BUILD, BUY OR SELL A PROPERTY
Please refer Classifieds on Sunday

ಸವಿನೆನಪು



ಡಾ|| ಸಿ. ಮಾದಯ್ಯ
ಧರ್ಮಪತ್ನಿ ಡಾ|| ಎನ್. ಕಮಲ. 567, 11ನೇ ಅಡ್ಡ ರಸ್ತೆ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು.
ನಿವೃತ್ತ. ಸೂಪರಿಂಟೆಂಡೆಂಟ್
ಎಸ್.ಡಿ.ಎಸ್ ಸ್ಯಾನಿಟೋರಿಯಂ, ಬೆಂಗಳೂರು.
ಮಾಜಿ ಥೋರಾಸಿಕ್ ಸರ್ಜರಿ ಪ್ರಾಧ್ಯಾಪಕರು, ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು.
ಮಾಜಿ ಪ್ರಾಂಶುಪಾಲರು, ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು.
ಮಾಜಿ ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು.
ದಿನಾಂಕ: 26–02–2022 ನೇ ಶನಿವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇಂತಿ ಶೋಕತಪ್ತರುಗಳಾದ: ಡಾ. ಎನ್. ಕಮಲ ಡಾ. ಎಂ. ಹೇಮಲತಾ, ಎಂ. ಗೋಪಾಲಕೃಷ್ಣ ಎಂ. ಕೋಮಲ, ಮತ್ತು ಕುಟುಂಬಸ್ಥರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ .

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

URGENTLY REQUIRED: Field Sales Executive & Telemarketing Executive. Earn Rs. 25000 per month + Incentives. Position for graduates. Whatsapp/ Call: 7303996850

Wanted

WANTED DELIVERY Executive! Earn Upto 35000/Month. Joining Bonus 5000/- Please Call 08046805960. Earn 5000* Joining Bonus and 3000* Referral Bonus. Call Now : 08046805961

General

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಕಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.*ಅಸಾಧ್ಯವಾದದ್ದು ಇಲ್ಲಿ ಸಾಧ್ಯ*.9535883556

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್.30/04/22 ವೈಷ್ಣೋದೇವಿ, ಕುಲು, ಮನಾಲಿ. 19/04/22 ಗುಜರಾತ್ ಸೋಮನಾಥ್, ನಾಗನಾಥ, ದ್ವಾರಕ. 12/05/22 ಚಾರ್ಧಾಮ್ ಯಾತ್ರಾ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಧ್ಯಯನ ವರದಿಯಲ್ಲಿ ಉಲ್ಲೇಖ • ಕೋವಿಡ್ ಪ್ರತಿರೋಧಕವಾಗಿ ಬಳಕೆಗೆ ಉತ್ತೇಜಿಸಿದ್ದ ಆಯುಷ್

‘ಅಮೃತಬಳ್ಳಿ ಔಷಧದಿಂದ ಜಠರಕ್ಕೆ ಹಾನಿ’

• ಕಲ್ಯಾಣ್ ರೇ

ನವದೆಹಲಿ: ಕೋವಿಡ್-19 ವಿರುದ್ಧ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಬಳಸುವಂತೆ ಆಯುಷ್ ಇಲಾಖೆಯು ಉತ್ತೇಜಿಸಿದ್ದ ಅಮೃತಬಳ್ಳಿ ಆಧರಿತ ಗುಳಿಗೆ ಮತ್ತು ಪುಡಿಯನ್ನು (ಗಿಲಾಯ್) ಸೇವಿಸಿದ್ದ ಹಲವರ ಜಠರಕ್ಕೆ ಹಾನಿಯಾಗಿದೆ ಎಂದು ಅಧ್ಯಯನ ವರದಿ ಹೇಳಿದೆ. ದೇಶದ ಹಲವು ಆಸ್ಪತ್ರೆಗಳ ತಜ್ಞ ವೈದ್ಯರ ತಂಡವು ಈ ಅಧ್ಯಯನವನ್ನು ನಡೆಸಿತ್ತು.

ದೇಶದ 12 ನಗರಗಳಲ್ಲಿನ ಆಸ್ಪತ್ರೆಗಳಲ್ಲಿ ಈ ಅಧ್ಯಯನ ನಡೆಸಲಾಗಿದೆ. ಅಧ್ಯಯನಕ್ಕೆ ಒಳಪಡಿಸಿದವರಲ್ಲಿ 43 ಜನರ ಜಠರಕ್ಕೆ ಹಾನಿಯಾಗಿದೆ. ಈ ಜನರ ಜಠರದಲ್ಲಿ ಗಿಲಾಯ್ ವಿಷಕಾರಿಯಾಗಿ ಪರಿಣಮಿಸಿದೆ ಎಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

2021ರಲ್ಲಿ ಇದೇ ಔಷಧಗಳನ್ನು ಬಳಸಿದ್ದವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಆಗಲೂ ಆರು ಜನರ ಜಠರಕ್ಕೆ ಹಾನಿಯಾಗಿದ್ದದ್ದು ಪತ್ತೆಯಾಗಿತ್ತು. ಈ ಬಗ್ಗೆ ಅಧ್ಯಯನ ವರದಿ ಪ್ರಕಟವಾಗಿತ್ತು. ಆನಂತರದ ಒಂಬತ್ತು ತಿಂಗಳಲ್ಲಿ ಆಯುಷ್, ಗಿಲಾಯ್ ಅತಿಹೆಚ್ಚು ಬಳಕೆಯಿಂದ ಜಠರಕ್ಕೆ ಹಾನಿಯಾಗಿದೆ ಎಂದು ಮೂರು ಬಾರಿ ಪ್ರಕಟಣೆ ಹೊರಡಿಸಿದೆ. ಆದರೆ, ಗಿಲಾಯ್‌ನ ಸುರಕ್ಷಿತ ಬಳಕೆಯ ಪ್ರಮಾಣ ಎಷ್ಟು ಎಂಬುದನ್ನು ಆಯುಷ್ ಸ್ಪಷ್ಟಪಡಿಸಿಲ್ಲ.

ಗಿಲಾಯ್‌ನ ಅತಿಹೆಚ್ಚು ಬಳಕೆಯಿಂದ ಜಠರಕ್ಕೆ ಹಾನಿಯಾಗಿಲ್ಲ ಎಂದು ಈ ಅಧ್ಯಯನ ವರದಿಯು ಹೇಳುತ್ತದೆ. ‘ಈ ರೋಗಿಗಳ ಜಠರದಲ್ಲಿ ಗಾಯಗಳಾಗಿದ್ದು, ಗಿಲಾಯ್‌ನ ಅತಿಹೆಚ್ಚು ಬಳಕೆಯಿಂದ ಆದ ಹಾನಿಯಂತೆ ಅದು ಗೋಚರಿಸುತ್ತಿಲ್ಲ. ಬದಲಿಗೆ ಯಾವುದೇ ಪ್ರಮಾಣದಲ್ಲಿ, ಯಾವುದೇ ಅವಧಿಯಲ್ಲಿ ಬಳಸಿದರೂ ಉಂಟಾಗುವ ಗಾಯಗಳಂತೆ ಇವೆ. ಇದು ರೋಗ ನಿರೋಧಕ ಶಕ್ತಿಯು ಸ್ವಯಂಚಾಲಿತವಾಗಿ ಬಿಡುಗಡೆಯಾದ್ದರಿಂದ ಉಂಟಾದ ಗಾಯಗಳಂತೆ ಇವೆ’ ಎಂದು ಅಲುವಾದಲ್ಲಿನ ರಾಜಗಿರಿ ಹಾಸ್ಪಿಟಲ್‌ನ ಜಠರತಜ್ಞ ಸಿರಿಯಾಕ್ ಅಬೇ ಫಿಲಿಪ್ಸ್ ಹೇಳಿದ್ದಾರೆ. ಈ ಅಧ್ಯಯನ ತಂಡವನ್ನು ಫಿಲಿಪ್ಸ್ ಮುನ್ನಡೆಸಿದ್ದರು.

‘ಸ್ವಯಂಚಾಲಿತವಾಗಿ ರೋಗ ನಿರೋಧಕ ಶಕ್ತಿ ಜಾಗೃತವಾಗುವ ಸಮಸ್ಯೆ ಇರುವವರಲ್ಲಿ ಗಿಲಾಯ್‌ನಿಂದ ಅಪಾಯವಾಗುವ ಸಂಭವವಿದೆ. ಇದರಿಂದ ದೇಹದ ಹಲವು ಅಂಗಗಳು, ಮುಖ್ಯವಾಗಿ ಜಠರದ ಪ್ರತಿರೋಧಕ ಶಕ್ತಿಯು ಮಾರ್ಪಾಡಾಗುವ ಸಾಧ್ಯತೆ ಇರುತ್ತದೆ. ಆ ಮೂಲಕ ಆ ಅಂಗಕ್ಕೆ ಹಾನಿಯಾಗುವ ಅಪಾಯವಿರುತ್ತದೆ. ಹೀಗಾಗಿ ರಕ್ತದೊತ್ತಡ, ಮಧುಮೇಹ ಮತ್ತು ಸಂಧಿವಾತದಂತಹ ಸಮಸ್ಯೆ ಇರುವವರು ಗಿಲಾಯ್ ಸೇವನೆಗೂ ಮುನ್ನ ಎಚ್ಚರಿಕೆ ವಹಿಸಬೇಕು’ ಎಂದು ಅವರು ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಕೇಳಲು ಆಯುಷ್ ಕಾರ್ಯದರ್ಶಿ ವೈದ್ಯ ರಾಜೇಶ್ ಕೋಟೆಚಾ ಅವರನ್ನು ಸಂಪರ್ಕಿಸಲಾಯಿತು. ಆದರೆ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಆದರೆ ಈ ಅಧ್ಯಯನ ವರದಿಗಳು ಪ್ರಕಟವಾದ ನಂತರ ಆಯುಷ್ ಸಚಿವಾಲಯವೇ ಸ್ಪಷ್ಟೀಕರಣ ನೀಡಿತ್ತು. ‘ಗಿಲಾಯ್ ಅನ್ನು ಬಹಳ ಹಿಂದಿನಿಂದ ಆಯುರ್ವೇದ ರೋಗ ನಿರೋಧಕ ಶಕ್ತಿವರ್ಧಕವಾಗಿ ಬಳಸಲಾಗುತ್ತಿದೆ. ಹೀಗಾಗಿ ಕೋವಿಡ್-19 ವಿರುದ್ಧ ಇದನ್ನು ಬಳಸಲಾಗುತ್ತಿದೆ. ಇದು ವಿಷಕಾರಿ ಎಂದು ಪರಿಗಣಿಸಲು ಸಾಧ್ಯವಿಲ್ಲ’ ಎಂದು ಆಯುಷ್ 2022ರ ಫೆಬ್ರುವರಿ 16ರಂದು ಹೇಳಿತ್ತು.

2021ರ ಜುಲೈ 7ರಂದು, ‘ಗಿಲಾಯ್ ಬಳಕೆಯಿಂದ ಜಠರಕ್ಕೆ ಹಾನಿಯಾಗುತ್ತದೆ ಎಂಬುದು ದಾರಿ ತಪ್ಪಿಸುವಂತಹ ವಿಷಯ’ ಎಂದು ಆಯುಷ್ ಹೇಳಿತ್ತು.

‘ಶಕ್ತಿ ವೃದ್ಧಿಸುವುದಿಲ್ಲ’

‘ರೋಗ ನಿರೋಧಕ ಶಕ್ತಿ ವೃದ್ಧಕ ಎಂದು ಮಾರಾಟ ಮಾಡಲಾಗುವ ಔಷಧಗಳಲ್ಲಿ ಬಹುತೇಕವು, ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವುದಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಗಿಲಾಯ್ ಅನ್ನು ಸಹ ಇದೇ ರೀತಿಯಲ್ಲಿ ಇದೇ ರೀತಿ ಮಾರಾಟ ಮಾಡಲಾಗುತ್ತಿದೆ. ಎಲ್ಲಾ ಔಷಧಗಳನ್ನು ದೀರ್ಘಾವಧಿಯ ಪರೀಕ್ಷೆಗೆ ಒಳಪಡಿಸಬೇಕು. ಆದರೆ, ಸಂಬಂಧಿತ ಪ್ರಾಧಿಕಾರಗಳು ಮಾನ್ಯತೆ ನೀಡುವಲ್ಲಿ ಈ ಔಷಧವನ್ನು ಸುಮ್ಮನೆ ಮುಂದಕ್ಕೆ ತಳ್ಳಲಾಗಿದೆ. ಇದು ಸರಿಯಲ್ಲ’ ಎಂದು ದೆಹಲಿಯ ರಾಷ್ಟ್ರೀಯ ರೋಗನಿರೋಧಕ ಶಕ್ತಿ ಸಂಸ್ಥೆಯ ನಿವೃತ್ತ ರೋಗನಿರೋಧಕಶಕ್ತಿ ತಜ್ಞ ಸತ್ಯಜಿತ್ ರಥ್ ಹೇಳಿದ್ದಾರೆ.

ಪೈಲಟ್ ದಕ್ಷತೆಯಿಂದ ಬದುಕುಳಿದೆ: ಮಮತಾ

ಕೋಲ್ಕತ್ತ (ಪಿಟಿಐ): ತಾವು ಪ್ರಯಾಣಿಸುತ್ತಿದ್ದ ವಿಮಾನ ಆಕಾಶದ ಮಧ್ಯೆ ಹಾರಾಡುತ್ತಿದ್ದಾಗ ಮತ್ತೊಂದು ವಿಮಾನವು ಡಿಕ್ಕಿಯಾಗುವಷ್ಟು ಹತ್ತಿರಕ್ಕೆ ಬಂದಿತ್ತು. ಆದರೆ ನಮ್ಮ ವಿಮಾನದ ಪೈಲಟ್ ಅವರ ಸಮಯಪ್ರಜ್ಞೆಯಿಂದ ಈ ದುರಂತ ತಪ್ಪಿತು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಹೇಳಿದ್ದಾರೆ.

ಈ ಘಟನೆಯಲ್ಲಿ ಮಮತಾ ಬ್ಯಾನರ್ಜಿ ಅವರ ಬೆನ್ನು ಮತ್ತು ಎದೆಗೆ ಗಾಯವಾಗಿದ್ದು, ಈ ಕುರಿತು ವರದಿ ಸಲ್ಲಿಸುವಂತೆ ನಾಗರಿಕ ವಿಮಾನಯಾನ ನಿರ್ದೇಶನಾಲಯ(ಡಿಜಿಸಿಎ)ಕ್ಕೆ ಪಶ್ಚಿಮ ಬಂಗಾಳ ಸರ್ಕಾರ ಸೂಚಿಸಿದೆ. ಅಲ್ಲದೆ ಮಮತಾ ಅವರ ಚಾರ್ಟರ್ಡ್ ವಿಮಾನ ಹಾರಾಟಕ್ಕೆ ಅನುಮೋದನೆ ನೀಡಲಾಗಿತ್ತೇ ಎಂಬ ಬಗ್ಗೆ ಮಾಹಿತಿ ನೀಡುವಂತೆಯೂ ಡಿಜಿಸಿಎಗೆ ಸೂಚಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ ಪರ ಪ್ರಚಾರ ನಡೆಸಿ ವಾಪಸ್ ಬಂಗಾಳಕ್ಕೆ ತೆರಳುವ ವೇಳೆ ಈ ಘಟನೆ ಸಂಭವಿಸಿದೆ.

ಕೋವಿಡ್ ನಕಲಿ ಪ್ರಮಾಣಪತ್ರ ವಿತರಣೆ: ಸ್ವತಂತ್ರ ತನಿಖೆಗೆ ‘ಸುಪ್ರೀಂ’ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದ ಸಾವಿಗೀಡಾದವರಿಗೆ ನೀಡಲಾಗುವ ಪರಿಹಾರ ಪಡೆಯಲು ಕೆಲವರಿಗೆ ನಕಲಿ ವೈದ್ಯಕೀಯ ಪ್ರಮಾಣಪತ್ರ ನೀಡಿರುವ ವೈದ್ಯರ ಕುರಿತು ಸ್ವತಂತ್ರ ತನಿಖೆಗೆ ಆದೇಶಿಸಬಹುದು ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

‘ಕೋವಿಡ್ ಸೋಂಕು ತಗುಲಿರುವ ಕುರಿತು ವೈದ್ಯರು ನಕಲಿ ಪ್ರಮಾಣಪತ್ರ ನೀಡುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದು ತುಂಬಾ ಗಂಭೀರ ವಿಷಯವೂ ಆಗಿದೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಮೂರ್ತಿ ಎಂ.ಆರ್. ಶಾ ನೇತೃತ್ವದ ಪೀಠ, ಇದರಲ್ಲಿ ಸರ್ಕಾರೀ ವೈದ್ಯರೂ ಭಾಗಿ ಆಗಿರುವುದರಿಂದ ಸ್ವತಂತ್ರ ತನಿಖೆಯ ಅಗತ್ಯವಿದೆ ಎಂದು ಹೇಳಿದೆ.

ಕೋವಿಡ್-19 ನಕಲಿ ಪ್ರಮಾಣಪತ್ರ ಸಲ್ಲಿಸುವ ಮೂಲಕ ₹ 50,000 ಪರಿಹಾರ ಪಡೆಯುವುದನ್ನು ತಡೆಯಲು ಮುಂದಿನ ವಾರದೊಳಗೆ ಕಾರ್ಯತಂತ್ರ ರೂಪಿಸುವಂತೆ ಹಿರಿಯ ವಕೀಲ ಆರ್.ಬಸಂತ್ ಹಾಗೂ ಕೇರಳ ಮತ್ತು ಮಹಾರಾಷ್ಟ್ರ ಸರ್ಕಾರಗಳ ಪರ ವಾದ ಮಂಡಿಸಿದ ವಕೀಲರಿಗೆ ಪೀಠ ಸೂಚಿಸಿತು.

‘ಇಂಥ ಅಕ್ರಮವು ಅರ್ಹರ ಪರಿಹಾರವನ್ನು ಕಸಿದುಕೊಳ್ಳಬಹುದು. ಹಾಗಾಗಿ, ನಮ್ಮ ಆದೇಶದ ದುರುಪಯೋಗ ಆಗಲು ಅವಕಾಶ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರನ್ನು ಒಳಗೊಂಡ ಪೀಠ ಹೇಳಿತು.

ಕೆಲವು ರಾಜ್ಯ ಸರ್ಕಾರಗಳು ವೈದ್ಯರು ನೀಡಿದ ನಕಲಿ ಪ್ರಮಾಣಪತ್ರಗಳನ್ನು ಪತ್ತೆ ಮಾಡಿವೆ. ಇಂಥ ಅಕ್ರಮವು ಮುಂದಿನ ಐದಾರು ವರ್ಷಗಳವರೆಗೆ ನಿರಂತರವಾಗಿ ಮುಂದುವರಿಯುವ ಅಪಾಯವೂ ಇದೆ’ ಎಂದು ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬ ಸದಸ್ಯರಿಗೆ ವಿತರಿಸಲಾಗುವ ಪರಿಹಾರಕ್ಕೆ ಸಂಬಂಧಿಸಿದಂತೆ ವಕೀಲ ಗೌರವ್ ಕುಮಾರ್ ಬನ್ಸಲ್ ಮತ್ತು ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ನಕಲಿ ಪ್ರಮಾಣಪತ್ರದ ಕುರಿತು ಚರ್ಚೆ ನಡೆಯಿತು.

ಚಿತ್ರಾ ರಾಮಕೃಷ್ಣ ಸಿಬಿಐ ವಶಕ್ಕೆ

ಚಿತ್ರಾ

ನವದೆಹಲಿ: ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಚಿತ್ರಾ ರಾಮಕೃಷ್ಣ ಅವರನ್ನು ದೆಹಲಿಯ ನ್ಯಾಯಾಲಯ ಏಳು ದಿನಗಳವರೆಗೆ ಸಿಬಿಐ ವಶಕ್ಕೆ ನೀಡಿದೆ.

ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶ ಸಂಜೀವ್ ಅಗರ್‌ವಾಲ್ ಅವರು ಸೋಮವಾರ ಈ ಆದೇಶ ನೀಡಿದ್ದಾರೆ.

ಚಿತ್ರಾ ಅವರನ್ನು ಹೆಚ್ಚಿನ ವಿಚಾರಣೆಗಾಗಿ 14 ದಿನಗಳವರೆಗೆ ವಶಕ್ಕೆ ನೀಡಬೇಕೆಂದು ಸಿಬಿಐ, ನ್ಯಾಯಾಲಯವನ್ನು ಕೋರಿತ್ತು.

‘ಚಿತ್ರಾ ಅವರಿಂದ ವಶಪಡಿಸಿಕೊಂಡಿರುವ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ಅವರು ತನಿಖಾಧಿಕಾರಿಗಳನ್ನು ದಾರಿತಪ್ಪಿಸುತ್ತಿದ್ದಾರೆ. ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಪ್ರಕರಣದ ಹಿಂದಿನ ಪಿತೂರಿ ಹಾಗೂ ಅದರಲ್ಲಿ ಭಾಗಿಯಾಗಿರುವ ಇತರ ಎನ್‌ಎಸ್‌ಇ ಅಧಿಕಾರಿಗಳನ್ನು ಮತ್ತು ದಲ್ಲಾಳಿಗಳನ್ನು ಪತ್ತೆಹಚ್ಚಬೇಕಿದೆ’ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯಲ್ಲಿ ಸಿಬಿಐ ತಿಳಿಸಿದೆ.

‘ಈಗಾಗಲೇ ಸಿಬಿಐ ವಶದಲ್ಲಿರುವ ಇನ್ನೊಬ್ಬ ಆರೋಪಿ ಆನಂದ ಸುಬ್ರಮಣಿಯನ್ ಅವರನ್ನೂ ಲಭ್ಯವಿರುವ ಡಿಜಿಟಲ್ ಸಾಕ್ಷ್ಯಗಳ ಆಧಾರದಲ್ಲಿ ವಿಚಾರಣೆಗೆ ಒಳಪಡಿಸುವ ಅಗತ್ಯ ಇದೆ’ ಎಂದೂ ಸಿಬಿಐ ಪ್ರತಿಪಾದಿಸಿದೆ.

‘ಆನಂದ ಸುಬ್ರಮಣಿಯನ್ ಜೊತೆ ಪಿತೂರಿ ನಡೆಸಿ ಚಿತ್ರಾ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದೂ ಸಿಬಿಐ ಆರೋಪಿಸಿದೆ. ಚಿತ್ರಾ ಅವರನ್ನು ಸಿಬಿಐ ಅಧಿಕಾರಿಗಳು ಭಾನುವಾರ ಬಂಧಿಸಿದ್ದರು.

ಜನೌಷಧದಿಂದ ₹ 13 ಸಾವಿರ ಕೋಟಿ ಉಳಿತಾಯ: ಮೋದಿ

ನವದೆಹಲಿ (ಪಿಟಿಐ): ‘ಕೈಗೆಟುಕುವ ದರದಲ್ಲಿ ಗುಣಮಟ್ಟದ ಔಷಧ ಪೂರೈಸುವ ಜನೌಷಧ ಕೇಂದ್ರಗಳ ಲಾಭ ಬಡವರು, ಮಧ್ಯಮ ವರ್ಗದ ಜನರಿಗೆ ಆಗಿದೆ. ಈ ವರ್ಗದ ಕುಟುಂಬಗಳಿಗೆ ₹13,000 ಕೋಟಿ ಉಳಿತಾಯವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

‘ಜನೌಷಧ ದಿವಸ್’ ನಿಮಿತ್ತ ಸೋಮವಾರ ಜನೌಷಧ ಯೋಜನೆಯ ಫಲಾನುಭವಿಗಳ ಜೊತೆಗೆ ಸಂವಾದ ನಡೆಸಿ ಯೋಜನೆಯ ಅನುಕೂಲಗಳ ಕುರಿತಂತೆ ಪ್ರತಿಕ್ರಿಯೆಯನ್ನು ಪಡೆದುಕೊಂಡರು.

‘ಔಷಧಗಳ ದುಬಾರಿ ಬೆಲೆ ಕುರಿತು ಜನರಿಗಿದ್ದ ಆತಂಕವನ್ನು ಈ ಜನೌಷಧ ಕೇಂದ್ರಗಳು ನಿವಾರಿಸಿವೆ. ದೇಶದಾದ್ಯಂತ ಸುಮಾರು 8,500 ಜನೌಷಧ ಮಳಿಗೆಗಳಿವೆ. ಇವು, ಸರ್ಕಾರಿ ಮಳಿಗೆಗಳಷ್ಟೇ ಅಲ್ಲ, ಸಾಮಾನ್ಯ ಜನರಿಗೆ ಪರಿಹಾರದ ಕೇಂದ್ರಗಳೂ ಆಗಿವೆ’ ಎಂದು ಹೇಳಿದರು.

ಕ್ಯಾನ್ಸರ್, ಕ್ಷಯ, ಸಕ್ಕರೆಕಾಯಿಲೆ ಮತ್ತು ಹೃದಯ ಸಂಬಂಧಿ ಸಮಸ್ಯೆಗಳ ಚಿಕಿತ್ಸೆಗೆ ಬಳಸುವ ಸುಮಾರು 800 ಔಷಧಗಳ ದರವನ್ನು ಸರ್ಕಾರವು ನಿಯಂತ್ರಿಸಿದೆ. ಅಲ್ಲದೆ, ಮಂಡಿ ಕಸಿಗೆ ಬಳಸುವ ಸ್ಟಂಟ್‌ಗಳ ವೆಚ್ಚ ಕಡಿಮೆಯಾಗಿದೆ ಎಂದು ತಿಳಿಸಿದರು.

‘ಕನ್ಯಾ ಶಿಕ್ಷಾ ಪ್ರವೇಶ’

ನವದೆಹಲಿ (ಪಿಟಿಐ): ಶಾಲೆಯಿಂದ ಹೊರಗುಳಿದಿರುವ 11ರಿಂದ 14ರ ವಯೋಮಾನದ ಸುಮಾರು 4 ಲಕ್ಷ ಬಾಲಕಿಯರನ್ನು ಶಿಕ್ಷಣ ವ್ಯವಸ್ಥೆಗೆ ಮರಳಿ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ ‘ಕನ್ಯಾ ಶಿಕ್ಷಾ ಪ್ರವೇಶ’ ಉತ್ಸವಕ್ಕೆ ಸೋಮವಾರ ಚಾಲನೆ ನೀಡಿದೆ.

ಇದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಶಿಕ್ಷಣ ಸಚಿವಾಲಯ ಜಂಟಿಯಾಗಿ ಕೈಗೊಂಡಿರುವ ಕಾರ್ಯಕ್ರಮ.

ಶಾಲೆಯಿಂದ ಹೊರಗುಳಿದಿರುವ ಈ ನಾಲ್ಕು ಲಕ್ಷ ಹದಿಯಹರೆಯದ ಬಾಲಕಿಯರು ಪೂರಕ ಪೌಷ್ಟಿಕಾಂಶ ಹಾಗೂ ಕೌಶಲ ತರಬೇತಿಗಾಗಿ ಅಂಗನವಾಡಿಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರನ್ನು ಆದಷ್ಟು ಬೇಗ ಔಪಚಾರಿಕ ಶಾಲಾ ವ್ಯವಸ್ಥೆಗೆ ಕರೆತರಲು ಶ್ರಮಿಸುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಇಂದೇವರ್ ಪಾಂಡೆ ಹೇಳಿದರು.

ಈಗಾಗಲೇ ಚಾಲ್ತಿಯಲ್ಲಿರುವ ಹದಿಹರೆಯದ ಬಾಲಕಿಯರ ಯೋಜನೆಯಡಿ (ಎಸ್‌ಎಜಿ) 2018-19ನೇ ಸಾಲಿನಲ್ಲಿ 11.88 ಲಕ್ಷ ಬಾಲಕಿಯರು ಫಲಾನುಭವಿಗಳಾಗಿದ್ದರು. 2021ರಲ್ಲಿ ಈ ಸಂಖ್ಯೆ 5.03 ಲಕ್ಷಕ್ಕೆ ಇಳಿಕೆಯಾಗಿದೆ ಎಂದು ಪಾಂಡೆ ಅವರು ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

‘ಪ್ರಚೋದಿಸುವ ಉಡುಗೆ ತೊಟ್ಟರೆ ಇನ್ನೊಬ್ಬರನ್ನು ದೂಷಿಸಲಾಗದು’

ಪ್ರಜಾವಾಣಿ ವಾರ್ತೆ

ಭಾರತಿ ವಿಷ್ಣುವರ್ಧನ್

ಬೆಂಗಳೂರು: ‘ಯಾವತ್ತೂ ಹೆಣ್ಣು ಹೆಣ್ಣಾಗಿರಬೇಕು. ನಮ್ಮನ್ನು ನಾವು ಯಾವ ರೀತಿ ಬಿಂಬಿಸುತ್ತೇವೆಯೋ ಅದೇ ರೀತಿ ಗೌರವ ನಮಗೆ ಸಿಗುತ್ತದೆ. ನಾವೇ ಇನ್ನೊಬ್ಬರನ್ನು ಪ್ರಚೋದಿಸುವಂಥ ಉಡುಗೆ ತೊಟ್ಟರೆ, ಅವರನ್ನು ದೂಷಿಸಲು ಆಗುವುದಿಲ್ಲ. ನಮ್ಮನ್ನು ನಾವೇ ದೂಷಣೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ..’

ಹೀಗಂದವರು ಖ್ಯಾತ ನಟಿ ಭಾರತಿ ವಿಷ್ಣುವರ್ಧನ್. 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸೋಮವಾರ ನಡೆದ ಮಾತುಕತೆ ವೇಳೆ, ‘ಯುವ ನಟಿಯರಿಗೆ, ಹೆಣ್ಣುಮಕ್ಕಳಿಗೆ ಏನು ಕಿವಿಮಾತು ಹೇಳುತ್ತೀರಿ?’ ಎಂಬ ಪ್ರಶ್ನೆಯನ್ನು ನಟ ಅನು ಪ್ರಭಾಕರ್ ಮುಂದಿಟ್ಟಾಗ ಭಾರತಿಯವರ ಉತ್ತರ ಹೀಗಿತ್ತು.

ಮಾತುಕತೆಗೂ ಮುನ್ನ ಭಾರತಿ ವಿಷ್ಣುವರ್ಧನ್ ಅವರ ಸಿನಿಮಾ, ಜೀವನ ಪಯಣಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರ ‘ಬಾಳೆ ಬಂಗಾರ’ ಪ್ರದರ್ಶನಗೊಂಡಿತು.

ಪ್ರದರ್ಶನದ ಬಳಿಕ ನಡೆದ ಮಾತುಕತೆಯಲ್ಲಿ, ‘ಅತ್ಯುತ್ತಮ ನಟನೆಯ ಕೌಶಲ ಇರುವ ನಟಿಯರು, ಕಲಾವಿದರು ಪ್ರಸ್ತುತ ಚಿತ್ರರಂಗದಲ್ಲಿದ್ದಾರೆ. ಆದರೆ ಅವರ ಉಡುಗೆ ವಿಚಾರಕ್ಕೆ ನನ್ನ ವಿರೋಧವಿದೆ. ಈ ರೀತಿ ಉಡುಗೆ ತೊಟ್ಟವರನ್ನು ನೋಡಿದಾಗ ನನಗೆ ಮುಜುಗರ ಆಗುತ್ತದೆ. ಇವರಿಗೆ ಹೇಳುವವರೇ ಇಲ್ಲವೇ ಎನಿಸುತ್ತದೆ. ಇದಕ್ಕೆ ಪೋಷಕರು ಕಾರಣರಾಗುತ್ತಾರೆ. ಅವರು ಒಳ್ಳೆಯ ದಾರಿಯಲ್ಲಿ ಮಕ್ಕಳನ್ನು ನಡೆಸಬೇಕು. ಸಿನಿಮಾದಲ್ಲಿ ಒಂದು ಪಾತ್ರಕ್ಕಾಗಿ ಇಂಥ ಉಡುಗೆ ಹಾಕಿದರೆ ತೊಂದರೆ ಇಲ್ಲ. ಆದರೆ ಈ ರೀತಿ ರಸ್ತೆಯಲ್ಲಿ ಹಾಕಿಕೊಂಡು ಹೋದರೆ ಹೇಗೆ. ಅದು ಬೇಸರ ತರಿಸುತ್ತದೆ’ ಎಂದು ಭಾರತಿ ಅವರು ಹೇಳಿದರು.

ಕೋಲಾ, ಪೆಪ್ಸಿ ಘಟಕಗಳಿಗೆ ₹ 25 ಕೋಟಿ ದಂಡ

ನವದೆಹಲಿ: ಉತ್ತರ ಪ್ರದೇಶದಲ್ಲಿ ಅಕ್ರಮವಾಗಿ ಅಂತರ್ಜಲ ಹೊರತೆಗೆಯುವ ಮೂಲಕ ಪರಿಸರ ಹಾನಿಗೆ ಕಾರಣವಾಗಿರುವ ಅಮೆರಿಕ ಮೂಲದ ಕೋಕಾ ಕೋಲಾ ಮತ್ತು ಪೆಪ್ಸಿ ಕಂಪೆನಿಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ₹ 25 ಕೋಟಿ ದಂಡ ವಿಧಿಸಿದೆ.

ಅಂತರ್ಜಲ ಬಳಕೆಗೆ ಅಗತ್ಯ ನಿರಾಕ್ಷೇಪಣಾ ಪತ್ರ ಪಡೆಯದೇ ಕಾರ್ಯನಿರ್ವಹಿಸುವ ಮೂಲಕ ಈ ಎರಡೂ ಕಂಪೆನಿಗಳು ಕೇಂದ್ರ ಅಂತರ್ಜಲ ಪ್ರಾಧಿಕಾರ ರೂಪಿಸಿರುವ ಪರಿಸರ ಕಾನೂನನ್ನು ಉಲ್ಲಂಘಿಸಿವೆ ಎಂದು ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯೆಲ್ ನೇತೃತ್ವದ ಎನ್‌ಜಿಟಿ ಪ್ರಧಾನ ಪೀಠ ತಿಳಿಸಿದೆ

ಪಶ್ಚಿಮ ಬಂಗಾಳ ಸ್ಥಳೀಯಾಡಳಿತ ಚುನಾವಣೆ ವೇಳೆ ನಡೆದಿತ್ತು ಎನ್ನಲಾದ ಹಿಂಸಾಚಾರದ ವಿರುದ್ಧ ರಾಜ್ಯದ ಬಿಜೆಪಿ ಶಾಸಕರು ಬಜೆಟ್ ಅಧಿವೇಶನದ ಉದ್ಘಾಟನಾ ಭಾಷಣದ ವೇಳೆ ಸೋಮವಾರ ಸಭಾಧ್ಯಕ್ಷರ ಪೀಠದ ಮುಂಬಾಗಕ್ಕೆ ಬಂದು ಪ್ರತಿಭಟಿಸಿದರು. ಇದರಿಂದ ಬೇಸರಗೊಂಡ ರಾಜ್ಯಪಾಲ ಜಗದೀಪ್ ಧನ್ಕರ್ ಅವರು ಭಾಷಣ ಓದದೇ ಸಭೆಯಿಂದ ನಿರ್ಗಮಿಸಲು ಮುಂದಾದರು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿನಂತಿ ಮೇರೆಗೆ ಒಂದು ಸಾಲು ಭಾಷಣ ಓದಿ, ಭಾಷಣವನ್ನು ಸಭೆಗೆ ಮಂಡಿಸಿದ್ದೇನೆ ಎಂದು ಹೇಳಿ ನಿರ್ಗಮಿಸಿದರು. –ಪಿಟಿಐ ಚಿತ್ರ

ಪಿಂಚಣಿ ಮುಂದುವರಿಕೆ

ನವದೆಹಲಿ(ಪಿಟಿಐ): ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ಮೇಲೆ ಅವಲಂಬಿತರಾದವರಿಗೆ ಪಿಂಚಣಿ ನೀಡುವ ನಿಟ್ಟಿನಲ್ಲಿ ₹3274.87 ಕೋಟಿ ಮೀಸಲಿಡುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಈ ಹಣವನ್ನು 2025-26ರವರೆಗೆ ಸದ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ವಾರ್ನ್ ಸಾವು ಸಹಜ: ವೈದ್ಯರ ವರದಿ

ಶೇನ್ ವಾರ್ನ್ –ಪಿಟಿಐ ಚಿತ್ರ

ಕೊಹ್ ಸಮುಯಿ, ಥಾಯ್ಲೆಂಡ್ (ಎಎಫ್‌ಪಿ): ಸ್ಪಿನ್ ಮಾಂತ್ರಿಕ, ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರ ಮರಣೋತ್ತರ ಪರೀಕ್ಷೆಯ ವರದಿ ಬಂದಿದ್ದು ಅವರದು ಅಸಹಜ ಸಾವು ಅಲ್ಲ ಎಂದು ಥಾಯ್ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಗೆಳೆಯರ ಜೊತೆ ಇಲ್ಲಿಗೆ ಪ್ರವಾಸಕ್ಕೆಂದು ಬಂದಿರುವ ವಾರ್ನ್ ಅವರು ಥಾಯ್ ಹಾಲಿಡೇ ಐಲ್ಯಾಂಡ್‌ನಲ್ಲಿ ಉಳಿದುಕೊಂಡಿದ್ದರು. ಶುಕ್ರವಾರ ಸಂಜೆ ಅಸ್ವಸ್ಥರಾಗಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ಆದರೆ ದಾರಿಮಧ್ಯದಲ್ಲೇ ಅವರು ಕೊನೆಯುಸಿರೆಳೆದಿದ್ದಾರೆ ಎಂದು ವೈದ್ಯರು ತಿಳಿಸಿದ್ದರು.

ಲೆಗ್ ಸ್ಪಿನ್ನರ್ ವಾರ್ನ್ ಅವರಿದ್ದ ಹೋಟೆಲ್ ಕೊಠಡಿಯಲ್ಲಿ ರಕ್ತದ ಕಲೆಗಳು ಕಂಡುಬಂದಿವೆ ಎಂದು ಭಾನುವಾರ ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಸಾವಿನ ಬಗ್ಗೆ ಸಂದೇಹಗಳು ಎದ್ದಿದ್ದವು. 52 ವರ್ಷದ ವಾರ್ನ್ ಹೃದಯಾಘಾತದಿಂದ ಸಾವಿಗೀಡಾಗಿದ್ದರು ಎಂದು ವೈದ್ಯರು ಶುಕ್ರವಾರ ತಿಳಿಸಿದ್ದರು.

’ಶೇನ್ ವಾರ್ನ್ ಅವರ ಮರಣೋತ್ತರ ಪರೀಕ್ಷಾ ವರದಿ ತನಿಖಾಧಿಕಾರಿಗಳ ಕೈಸೇರಿದೆ. ಸಹಜ ಸಾವು ಎಂದು ವೈದ್ಯರು ದೃಢಪಡಿಸಿದ್ದಾರೆ. ಈ ವಿಷಯವನ್ನು ವಾರ್ನ್ ಅವರ ಕುಟುಂಬದವರಿಗೆ ತಿಳಿಸಿದ್ದು ಅವರು ಅದನ್ನು ಒಪ್ಪಿಕೊಂಡಿದ್ದಾರೆ. ವರದಿಯನ್ನು ತನಿಖಾಧಿಕಾರಿಗಳು ಶೀಘ್ರದಲ್ಲೇ ಸಂಬಂಧಪಟ್ಟವರಿಗೆ ಹಸ್ತಾಂತರಿಸಲಿದ್ದಾರೆ’ ಎಂದು ಪೊಲೀಸ್ ಇಲಾಖೆಯ ಉಪವಕ್ತಾರ ಕೃಸಾನ ಪತ್ತನಚರೊಮ್ ತಿಳಿಸಿದ್ದಾರೆ.

ಶೇನ್ ಕುರಿತ ಹೇಳಿಕೆ: ವಿಷಾದ

ಲೆಗ್ ಸ್ಪಿನ್ ಮೂಲಕ ವಿಶ್ವದ ಬ್ಯಾಟರ್‌ಗಳನ್ನು ನಲುಗಿಸಿದ ಶೇನ್ ವಾರ್ನ್ ಮಾಂತ್ರಿಕ ಬೌಲರ್ ನಿಜ. ಆದರೆ ಅವರು ಎಲ್ಲ ಕಾಲದ ಸರ್ವಶ್ರೇಷ್ಠ ಸ್ಪಿನ್ನರ್ ಅಲ್ಲ ಎಂದು ಹೇಳಿದ್ದ ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಬಳಿಕ ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದಾರೆ.

‘ಭಾರತದಲ್ಲಿ ಶೇನ್ ವಾರ್ನ್ ಅವರಿಗೆ ಹೆಚ್ಚು ಸಾಧನೆ ಮಾಡಲು ಆಗಲಿಲ್ಲ. ಭಾರತದ ಸ್ಪಿನ್ನರ್‌ಗಳು ಮತ್ತು ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಅವರು ಶೇನ್ ವಾರ್ನ್‌ಗಿಂತ ಶ್ರೇಷ್ಠರು’ ಎಂದು ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಭಾರತದ ಮಾಜಿ ನಾಯಕ ಗವಾಸ್ಕರ್ ಹೇಳಿದ್ದರು.

ತಮ್ಮ ಹೇಳಿಕೆ ಕುರಿತು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿರುವ ಅವರು ‘ಹೋಲಿಕೆಗಳಿಗೆ ಇದು ಸರಿಯಾದ ಸಮಯ ಅಲ್ಲ’ ಎಂದಿದ್ದಾರೆ.

‘ವಾರ್ನ್ ಶ್ರೇಷ್ಠ ಆಟಗಾರ. ರಾಡ್ನಿ ಮಾರ್ಷ್ ಕೂಡ ಉತ್ತಮ ವಿಕೆಟ್ ಕೀಪರ್. ಅವರ ಆತ್ಮಕ್ಕೆ ಶಾಂತಿ ಸಿಗಲಿ’ ಎಂದಿದ್ದಾರೆ.

ಸಹೋದ್ಯೋಗಿಗೆ ಗುಂಡಿಕ್ಕಿ ಯೋಧ ಆತ್ಮಹತ್ಯೆ

ನವದೆಹಲಿ (ಪಿಟಿಐ): ಸಹೋದ್ಯೋಗಿಯನ್ನು ಗುಂಡಿಕ್ಕಿಕೊಂದ ಬಿಎಸ್‌ಎಫ್ ಯೋಧ ಬಳಿಕ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಬಿಎಸ್‌ಎಫ್ ಜಲಂಗಿ ಕ್ಯಾಂಪ್‌ನಲ್ಲಿ ಸೋಮವಾರ ನಡೆದಿದೆ.

ಭಾರತ –ಬಾಂಗ್ಲಾ ಗಡಿ ಕಾವಲಿಗೆ ನಿಯೋಜಿಸಿದ್ದ ಕ್ಯಾಂಪ್‌ನಲ್ಲಿ ಘಟನೆ ಸಂಭವಿಸಿದೆ. ಅಧಿಕಾರಿಗಳ ಪ್ರಕಾರ, ಕೃತ್ಯವು ಬೆಳಿಗ್ಗೆ 6.30ಕ್ಕೆ ನಡೆದಿದೆ. ಸ್ಥಳೀಯ ಪೊಲೀಸ್ ಠಾಣೆ ನೀಡಿದ್ದ ಸಮನ್ಸ್ ಇಬ್ಬರ ನಡುವೆ ಘರ್ಷಣೆಗೆ ಕಾರಣವಾಗಿತ್ತು.

ಹೆಡ್ ಕಾನ್‌ಸ್ಟೆಬಲ್ ಜಾನ್ಸನ್ ಟೊಪ್ಪೊ ಗುಂಡುಹಾರಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ಗುಂಡೇಟಿನಿಂದ ಇವರ ಸಹೋದ್ಯೋಗಿ ಹೆಡ್ ಕಾನ್‌ಸ್ಟೆಬಲ್ ಎಸ್.ಜಿ.ಶೇಖರ್ ಮೃತಪಟ್ಟಿದ್ದಾರೆ.

ಗಡಿ ಭಾಗದಲ್ಲಿ ರೈತರೊಬ್ಬರನ್ನು ವಶಕ್ಕೆ ತೆಗೆದುಕೊಂಡಿದ್ದ ಸಂಬಂಧಿತ ಪ್ರಕರಣದಲ್ಲಿ ಸಮನ್ಸ್ ನೀಡಲಾಗಿತ್ತು ಎಂದು ಹೇಳಲಾಗಿದೆ. ಆದರೆ, ಘಟನೆ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ತನಿಖೆಯ ನಂತರವೇ ಕಾರಣ ತಿಳಿದುಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರವಷ್ಟೇ ಪಂಜಾಬ್‌ನ ಅಮೃತಸರದಲ್ಲಿ ಯೋಧನೊಬ್ಬ ನಾಲ್ವರನ್ನು ಕೊಂದು, ನಂತರ ಆತ್ಮಹತ್ಯೆ ಮಾಡಿಕೊಂಡಿದ್ದ ಘಟನೆ ನಡೆದಿದೆ. ಇದರ ಬೆನ್ನಲ್ಲೇ ಅಂತಹುದೇ ಮತ್ತೊಂದು ಘಟನೆ ವರದಿಯಾಗಿದೆ.

ಆತ್ಮಹತ್ಯೆ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಆವಂತಿಪೋರಾ ಸೇನಾ ಶಿಬಿರದಲ್ಲಿ ಯೋಧ ಮೋಹಿತ್ ಸೋಮವಾರ ತಮ್ಮ ಸರ್ವಿಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ಭಾರತೀಯ ಸೇನೆಯ 34 ರಾಷ್ಟ್ರೀಯ ರೈಫಲ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಖಿನ್ನತೆ ಸಮಸ್ಯೆ ಇದ್ದಾತನಿಗೆ ಬಂದೂಕು ಕೊಟ್ಟರೇಕೆ?

ಬೆಳಗಾವಿ: ‘ಸತ್ತೆಪ್ಪನ ಮಾನಸಿಕ ಸ್ಥಿತಿ ಸರಿ ಇರಲಿಲ್ಲ; ಚಿಕಿತ್ಸೆ ಕೊಡಿಸಲಾಗಿದೆ ಎನ್ನುವುದಕ್ಕೆ ದಾಖಲೆಗಳನ್ನೂ ಬಿಎಸ್‌ಎಫ್‌ನವರಿಗೆ ನೀಡಿದ್ದೆವು. ಖಿನ್ನತೆಗೆ ಒಳಗಾಗಿದ್ದ ಅವನಿಗೆ ಬಂದೂಕು ಕೊಟ್ಟರೇಕೆ ಎನ್ನುವುದೇ ಪ್ರಶ್ನೆಯಾಗಿದೆ’ ಎಂದು ಆರೋಪಿ ಯೋಧ ಸತ್ತೆಪ್ಪ ಸಿದ್ದಪ್ಪ ಕಿಲಾರಗಿ ಅವರ ಸೋದರ ಮಾವ ಬಾಳಪ್ಪ ಪಕಾಲಿ ತಿಳಿಸಿದರು.

ಸೋಮವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಅಲ್ಲಿ ನಿಜವಾಗಿಯೂ ನಡೆದಿರುವುದೇನು ಎನ್ನುವುದೂ ಸ್ಪಷ್ಟವಾಗಿ ಗೊತ್ತಿಲ್ಲ. ಸತ್ತೆಪ್ಪನ ಮಕ್ಕಳಿನ್ನೂ ಚಿಕ್ಕವು. ಆ ಕುಟುಂಬ ಅತಂತ್ರ ಸ್ಥಿತಿಗೆ ತಲುಪಿದೆ’ ಎಂದು ದುಃಖಿಸಿದರು.

‘ಆತ ಬಹಳ ಕಷ್ಟಪಟ್ಟು ಓದಿ ಉತ್ತಮ ಅಂಕಗಳನ್ನು ಗಳಿಸಿದ್ದ. ಬಿ.ಇಡಿ ಪದವಿ ಪಡೆದಿದ್ದರಿಂದ ಶಿಕ್ಷಕ ಆಗುತ್ತಾನೆ ಎಂದು ನಾವೆಲ್ಲರೂ ಭಾವಿಸಿದ್ದೆವು. ಆದರೆ, ಮನೆಯ ಪರಿಸ್ಥಿತಿ ಸರಿ ಇಲ್ಲವಾದ್ದರಿಂದ ಬಿಎಸ್‌ಎಫ್ ಕೆಲಸಕ್ಕೆ ಸೇರಿಕೊಂಡಿದ್ದ’ ಎಂದರು.

‘ಆತ ಒಂದೂವರೆ ವರ್ಷದ ಹಿಂದೆ ₹10 ಲಕ್ಷ ಸಾಲ ಮಾಡಿದ್ದ. 3 ತಿಂಗಳ ಹಿಂದೆ ರಜೆ ಮೇಲೆ ಊರಿಗೆ ಬಂದಿದ್ದ. ಅವರ ಮಾನಸಿಕ ಸ್ಥಿತಿ ಸ್ಥಿಮಿತದಲ್ಲಿರಲಿಲ್ಲ. ಹುಚ್ಚನಂತೆ ವರ್ತಿಸುತ್ತಿದ್ದ. ಖಿನ್ನತೆಗೆ ಒಳಗಾಗಿದ್ದ. ಆತನನ್ನು ಬೆಳಗಾವಿ, ಧಾರವಾಡದಲ್ಲಿ ನರ ಹಾಗೂ ಮನೋರೋಗ ತಜ್ಞರಿಗೆ ತೋರಿಸಿದ್ದೆವು. ಮಾನಸಿಕ ಆರೋಗ್ಯ ಸರಿ ಇಲ್ಲ ಎಂದು ವೈದ್ಯರು ತಿಳಿಸಿದ್ದರು. ಚಿಕಿತ್ಸೆಯನ್ನೂ ಕೊಡಿಸಿದ್ದೆವು’ ಎಂದು ವಿವರಿಸಿದರು.

‘ರಜೆ ಮುಗಿದಿದ್ದರಿಂದ, ಚಿಕಿತ್ಸೆ ಪಡೆಯುತ್ತಿರುವ ದಾಖಲೆಗಳನ್ನು ಕಳುಹಿಸಿ ಮತ್ತೆ 15 ದಿನ ರಜೆ ಪಡೆದಿದ್ದ. ಚೇತರಿಸಿಕೊಂಡಿದ್ದ ಆತ, ಪತ್ನಿ–ಮಕ್ಕಳನ್ನೂ ಜೊತೆಗೆ ಕರೆದೊಯ್ದಿದ್ದ. ಆದರೆ, ಅಲ್ಲಿ ಅವಕಾಶ ಸಿಗಲಿಲ್ಲವೆಂದು ವಾಪಸು ಊರಿಗೆ ಕರೆತಂದು ಬಿಟ್ಟು ತಿಂಗಳ ಹಿಂದೆ ಒಬ್ಬನೇ ಹೋಗಿದ್ದ. ಈ ನಡುವೆ ಬಿಎಸ್‌ಎಫ್ ಅಧಿಕಾರಿಗಳು ಅವರ ಅಣ್ಣನಿಗೆ ಭಾನುವಾರ ರಾತ್ರಿ ಕರೆ ಮಾಡಿ, ಸತ್ತೆಪ್ಪ ನಾಲ್ವರನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಮಾಹಿತಿ ನೀಡಿದ್ದಾರೆ. ಮೃತದೇಹ ಕಳುಹಿಸಿಕೊಡಲಾಗುವುದು ಎಂದಿದ್ದಾರೆ’ ಎಂದು ತಿಳಿಸಿದರು.

ಸತ್ತೆಪ್ಪ ಅವರಿಗೆ ತಂದೆ, ತಾಯಿ, ಅಣ್ಣ, ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಬಿ.ಇಡಿ. ಪದವೀಧರರಾಗಿದ್ದ ಅವರು, 13 ವರ್ಷಗಳ ಹಿಂದೆ ಬಿಎಸ್‌ಫ್‌ಗೆ ಕಾನ್‌ಸ್ಟೆಬಲ್ ಟ್ರೇಡ್ಸ್‌ಮನ್ ಆಗಿ ಸೇರ್ಪಡೆಯಾಗಿದ್ದರು.

ಒಬಿಸಿ: ಮಸೂದೆಗಳಿಗೆ ಅನುಮೋದನೆ

ಮುಂಬೈ (ಪಿಟಿಐ): ವಾರ್ಡ್‌ಗಳನ್ನು ಪುನರ್‌ವಿಂಗಡಿಸುವ ಮತ್ತು ವಾರ್ಡ್ ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸುವ ಅಧಿಕಾರವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ನೀಡುವ ಎರಡು ಮಸೂದೆಗಳಿಗೆ ಮಹಾರಾಷ್ಟ್ರ ವಿಧಾನಸಭೆಯ ಎರಡೂ ಸದನಗಳು ಸೋಮವಾರ ಅನುಮೋದನೆ ನೀಡಿವೆ.

ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿಯನ್ನು ಅಂತಿಮಗೊಳಿಸುವ ಮುನ್ನ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸುವುದನ್ನು ಈ ಮಸೂದೆ ಮೂಲಕ ಕಡ್ಡಾಯಗೊಳಿಸಲಾಗಿದೆ. ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ಮಹಾರಾಷ್ಟ್ರ ಮುನಿಸಿಪಲ್ ಕೌನ್ಸಿಲ್‌ಗಳು, ನಗರ ಪಂಚಾಯಿತಿ, ಇಂಡಸ್ಟ್ರಿಯಲ್ ಟೌನ್‌ಶಿಪ್ ಕಾಯ್ದೆ, ಗ್ರಾಮ ಪಂಚಾಯಿತಿ, ನಗರ ಪಂಚಾಯಿತಿ ಮತ್ತು ಪಂಚಾಯಿತಿ ಸಮಿತಿಗಳಿಗೆ ಇದು ಅನ್ವಯವಾಗಲಿದೆ.

ಸಂಕ್ಷಿಪ್ತ ಸುದ್ದಿ

ಬೀದಿ ನಾಯಿ ಕೊಂದ ಕಾನ್‌ಸ್ಟೆಬಲ್ ಬಂಧನ

ನೊಯ್ಡಾ: ತಾನು ಮತ್ತು ತಮ್ಮ ಕುಟುಂಬದವರು ಓಡಾಡುವ ವೇಳೆಯಲ್ಲೆ ಬೊಗಳುತ್ತದೆ ಎಂದು ಬೀದಿ ನಾಯಿಯನ್ನು ಬ್ಯಾಟ್‌ನಿಂದ ಹೊಡೆದು ಸಾಯಿಸಿದ ಆರೋಪದ ಮೇಲೆ ಉತ್ತರ ಪ್ರದೇಶ ಮೂಲದ ದೆಹಲಿ ಪೊಲೀಸ್ ಕಾನ್‌ಸ್ಟೇಬಲ್ ವಿನೋದ್ ಕುಮಾರ್ ಎಂಬುವವರನ್ನು ಸೋಮವಾರ ಬಂಧಿಸಲಾಗಿದೆ.

ನಾಯಿ ಕೊಂದ ಬಳಿಕ ಕಾನ್‌ಸ್ಟೇಬಲ್ ಮತ್ತು ಸ್ಥಳೀಯರ ನಡುವೆ ಗಲಾಟೆ ಆರಂಭವಾಗಿತ್ತು. ಇದರಿಂದ ಎಚ್ಚೆತ್ತ ಪೊಲೀಸರು, ಆರೋಪಿಯನ್ನು ಬಂಧಿಸಿ ಐಪಿಸಿ ಸೆಕ್ಷನ್ 429ರಡಿ ಎಫ್‌ಐಆರ್ ದಾಖಲಿಸಿದ್ದಾರೆ.

ರಾತ್ರಿ ವೇಳೆ ನನ್ನ ಮಗನಿಗೆ ನಾಯಿ ಹೆದರಿಸಿತ್ತು. ಅದಕ್ಕಾಗಿ ಹೊಡೆದು ಕೊಂದೆ ಎಂದು ವಿನೋದ್ ಕುಮಾರ್ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು

ನಾಲ್ವರು ಎಲ್‌ಇಟಿ ಸಹಚರರ ಬಂಧನ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಮಂದೂರ ಸೇನಾ ಶಿಬಿರದ ಬಳಿ ಮಾರ್ಚ್ 1ರಂದು ನಡೆದಿದ್ದ ಗ್ರೆನೆಡ್ ದಾಳಿ ಪ್ರಕರಣವನ್ನು ಸೋಮವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಭೇದಿಸಿದ್ದು, ಈ ಸಂಬಂಧ ಲಷ್ಕರ್–ಎ–ತಯಬಾ ಸಂಘಟನೆಯ ನಾಲ್ವರು ಸಹಚರರನ್ನು ಬಂಧಿಸಿದ್ದಾರೆ.

ಹಪ್ರೂ ತ್ರಾಲ್ ನಿವಾಸಿಗಳಾದ ಅಖಿಬ್ ಮನ್ಸೂರ್ ಭಟ್, ಮುದಾಸಿರ್ ಅಹ್ಮದ್ ಭಟ್, ಗುಲಾಂ ಮೊಹ್ಮದ್ ಅಹಂಗರ್, ತ್ರಾಲ್‌ನ ಶೇಖ್ ಮೊಹಲ್ಲಾದ ನಿವಾಸಿ ವಾರಿಸ್ ಬಷೀರ್ ನಜರ್ ಬಂಧಿತ ಆರೋಪಿಗಳು. ‘ಮಾರ್ಚ್ 1ರಂದು ಆವಂತಿಪೋರಾ ಸಮೀಪದ ಮಂದೂರ ಸೇನಾ ಶಿಬಿರದ ಬಳಿ ಆರೋಪಿ ವಾರಿಸ್ ಬಷೀರ್ ನಜರ್ ಗ್ರೆನೆಡ್ ಎಸೆದು ಪರಾರಿಯಾಗಿದ್ದ. ಈತನಿಂದ ಮೂರು ಹ್ಯಾಂಡ್ ಗ್ರೆನೆಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಾರ್ಚ್ 11ರಿಂದ ಆರ್‌ಎಸ್‌ಎಸ್ ಸಭೆ

ಅಹಮದಾಬಾದ್ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಆಯೋಜಿಸಿರುವ ಮೂರು ದಿನಗಳ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ಮಾರ್ಚ್ 11ರಿಂದ ಇಲ್ಲಿ ನಡೆಯಲಿದೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಇತರ ಹಿರಿಯ ಪದಾಧಿಕಾರಿಗಳು ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಆರ್‌ಎಸ್‌ಎಸ್ ತಿಳಿಸಿದೆ.

‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ಆರ್‌ಎಸ್‌ಎಸ್‌ನ ಉನ್ನತ ಮಟ್ಟದ ತೀರ್ಮಾನಗಳನ್ನು ತೆಗೆದುಕೊಳ್ಳುವ ಮಂಡಳಿಯಾಗಿದೆ. ‘ನಿರ್ಣಯಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಈ ಸಭೆಯು ಮಹತ್ವ ಪಡೆದಿದೆ.

ಬಹರೇನ್, ಬೆಲಾರೂಸ್ ಎದುರು ಸ್ನೇಹಪರ ಫುಟ್‌ಬಾಲ್

ಭಾರತ ತಂಡಕ್ಕೆ ಸುನಿಲ್ ಅಲಭ್ಯ

ಸುನಿಲ್ ಚೆಟ್ರಿ –ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಬಹರೇನ್ ಮತ್ತು ಬೆಲಾರೂಸ್ ವಿರುದ್ಧ ಇದೇ ತಿಂಗಳು ನಿಗದಿಯಾಗಿರುವ ಅಂತರರಾಷ್ಟ್ರೀಯ ಸ್ನೇಹಪರ ಫುಟ್‌ಬಾಲ್ ಪಂದ್ಯಗಳಿಗೆ ಭಾರತ ತಂಡಕ್ಕೆ ನಾಯಕ, ಗಾಯಾಳು ಸುನಿಲ್ ಚೆಟ್ರಿ ಲಭ್ಯರಿಲ್ಲ.

ಮಾರ್ಚ್ 23 ಮತ್ತು 26ರಂದು ಮನಾಮದಲ್ಲಿ ನಡೆಯಲಿರುವ ಪಂದ್ಯಗಳಿಗಾಗಿ ತಂಡದ ತರಬೇತುದಾರ ಇಗೊರ್ ಸ್ಟಿಮ್ಯಾಚ್ ಅವರು ಪ್ರಕಟಿಸಿರುವ 38 ಸಂಭವನೀಯ ಆಟಗಾರರಲ್ಲಿ 37 ವರ್ಷದ ಫಾರ್ವರ್ಡ್ ಆಟಗಾರ ಚೆಟ್ರಿ ಅವರೂ ಇದ್ದರು.

‘ಬಹರೇನ್ ಮತ್ತು ಬೆಲಾರೂಸ್ ಎದುರಿನ ಪಂದ್ಯಗಳನ್ನು ಎದುರು ನೋಡುತ್ತಿದ್ದೆ. ಆದರೆ ಕಣಕ್ಕಿಳಿಯಲು ಸಾಧ್ಯವಾಗದಿರುವುದಕ್ಕೆ ನಾಚಿಕೆ ಎನಿಸುತ್ತಿದೆ‘ ಎಂದು ಸುನಿಲ್ ಚೆಟ್ರಿ ಅವರು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ವೆಬ್‌ಸೈಟ್‌ಗೆ ತಿಳಿಸಿದ್ದಾರೆ.

‘ಇದು ಕಷ್ಟದ ಋತು. ಕೆಲವು ಸಣ್ಣ ಗಾಯಗಳಿಂದ ಬಳಲುತ್ತಿದ್ದು, ಚೇತರಿಸಿಕೊಳ್ಳಲು ಸ್ವಲ್ಪ ಸಮಯ ಬೇಕು. ಮೇ ವೇಳೆಗೆ ಸಂಪೂರ್ಣ ಫಿಟ್ ಆಗಲು ಅಗತ್ಯವಿರುವ ಎಲ್ಲವನ್ನೂ ಮಾಡುವೆ. ತಂಡಕ್ಕೆ ಶುಭವಾಗಲಿ‘ ಎಂದು ಸುನಿಲ್ ತಿಳಿಸಿದ್ದಾರೆ. ಆದರೆ ತಮಗಾದ ಗಾಯದ ಸ್ವರೂಪವನ್ನು ಅವರು ಬಹಿರಂಗಪಡಿಸಿಲ್ಲ.

ಗೋಲ್‌ಕೀಪರ್‌ಗಳಾದ ಪ್ರಭಶುಖನ್ ಗಿಲ್ ಮತ್ತು ಮೊಹಮ್ಮದ್ ನವಾಜ್, ಡಿಫೆಂಡರ್‌ಗಳಾದ ದೀಪಕ್ ತಂಗ್ರಿ ಮತ್ತು ರೋಷನ್ ಸಿಂಗ್, ಮಿಡ್‌ಫೀಲ್ಡರ್‌ಗಳಾದ ವಿಕ್ರಂ ಪ್ರತಾಪ್ ಸಿಂಗ್, ವಿಪಿ ಸುಹೈರ್, ಅನಿಕೇತ್ ಜಾಧವ್ ಮತ್ತು ಜೆರ್ರಿ ಮಾವ್ಮಿಂಗ್‌ಥಂಗಾ ಅವರು ಎರಡು ಪಂದ್ಯಗಳನ್ನು ಆಡಲು ಸ್ಥಾನ ಗಿಟ್ಟಿಸಿದ್ದಾರೆ. ಭಾರತ ತಂಡವು ಮಾರ್ಚ್ 23ರಂದು ಬಹರೇನ್ ಮತ್ತು 26ರಂದು ಬೆಲಾರೂಸ್ ಎದುರು ಆಡಲಿದೆ.

ಫಿಫಾ ಅಂತರರಾಷ್ಟ್ರೀಯ ಪಂದ್ಯಗಳಿಂದ ರಷ್ಯಾವನ್ನು ಅಮಾನತುಗೊಳಿಸಿದೆ. ಆದರೆ ಬೆಲಾರೂಸ್ ಮೇಲೆ ಯಾವುದೇ ಕ್ರಮವನ್ನು ಪ್ರಕಟಿಸಿಲ್ಲ.

ಫೈನಲ್‌ಗೆ ಮೌಂಟ್ಸ್, ಬೀಗಲ್ಸ್

ಬೆಂಗಳೂರು: ಉತ್ತಮ ಆಟವಾಡಿದ ಮೌಂಟ್ಸ್ ಕ್ಲಬ್ ಮತ್ತು ಬೀಗಲ್ಸ್ ಬಿ.ಸಿ. ತಂಡಗಳು ಎಸ್.ಎಮ್.ಎನ್. ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಮಾತೃಕಪ್ ಮಹಿಳಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿವೆ.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸೂಪರ್ ಲೀಗ್ ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ 55–39ರಿಂದ ಡಿವೈಇಎಸ್ ಕ್ರೀಡಾ ವಸತಿನಿಲಯ ಮೈಸೂರು ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಕೃತಿಕಾ 12, ಗೋಮೇಧಾ 11 ಮತ್ತು ರೋಶಿನಿ 10 ಸ್ಕೋರ್ ದಾಖಲಿಸಿದರು. ಮೈಸೂರು ತಂಡದ ಯಶಸ್ವಿನಿ ಮತ್ತು ಮೇಘನಾ ತಲಾ 14 ಸ್ಕೋರ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬೀಗಲ್ಸ್ ಬಿ.ಸಿ 57–32ರಿಂದ ರಾಜ್‌ಮಹಲ್ ತಂಡವವನ್ನು ಮಣಿಸಿದರು, ಬೀಗಲ್ಸ್ ತಂಡದ ಸಂಜನಾ ಎನ್. ಕುಮಾರ್ (24) ಮತ್ತು ಚಂದನಾ (15) ಮಿಂಚಿದರು. ರಾಜ್‌ಮಹಲ್ ತಂಡದ ಐಶ್ವರ್ಯ 15 ಸ್ಕೋರ್ ದಾಖಲಿಸಿದರು. ಮಂಗಳವಾರ ಫೈನಲ್‌ನಲ್ಲಿ ಬೀಗಲ್ಸ್ – ಮೌಂಟ್ಸ್ ಮುಖಾಮುಖಿ ಯಾಗಲಿವೆ. 3ನೇ ಸ್ಥಾನ ಕ್ಕಾಗಿ ಡಿವೈಇಎಸ್ ಮೈಸೂರು ಮತ್ತು ರಾಜ್‌ಮಹಲ್ ಆಡಲಿವೆ.

ಬಾಷ್ ಎಫ್‌ಸಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಘವೇಂದ್ರ, ಅರುಣ್ ಕುಮಾರ್ ಕೆ. ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಬಾಷ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ 7–1ರಿಂದ ರೇಂಜರ್ಸ್ ಎಫ್‌ಸಿ ಎದುರು ಜಯಿಸಿತು.

ವಿಜೇತ ತಂಡದ ರಾಘವೇಂದ್ರ 6, 32 ಮತ್ತು 40ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರೆ, ಅರುಣ್ ಕುಮಾರ್ 12, 30 + 1 ಮತ್ತು 54ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಇನ್ನೊಂದು ಗೋಲು ಅರುಣ್ ರಾಯ್ (34ನೇ ನಿ.) ಗಳಿಸಿದರು.

ರೇಂಜರ್ಸ್ ಪರ ಅನೀಶ್ ಎಸ್. (53ನೇ ನಿ.) ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ಇಂದಿರಾನಗರ ಎಫ್‌ಸಿ 3–0ಯಿಂದ ಯಂಗ್ ಬ್ಲೂಸ್ ಎದುರು ಗೆದ್ದಿತು. ರಬ್ಬಾನಿ ಎಫ್‌ಸಿಗೆ ಟೌನ್ ಎಫ್‌ಸಿ ಚನ್ನಪಟ್ಟಣ ಎದುರು ವಾಕ್‌ಓವರ್ ಸಿಕ್ಕಿತು.

ಮಹಿಳೆಯರ ವಿಶ್ವಕಪ್: ಮಳೆ ಕಾಡಿದ ಪಂದ್ಯದಲ್ಲಿ ಮಿಂಚಿದ ಆ್ಯಮಿ ಸಟರ್ಥ್‌ವೇಟ್, ಸೂಸಿ ಬೇಟ್ಸ್

ಬಾಂಗ್ಲಾ ವಿರುದ್ಧ ಕಿವೀಸ್ ಜಯಭೇರಿ

ಡ್ಯುನೆಡಿನ್ (ಪಿಟಿಐ): ಆತಿಥೇಯ ನ್ಯೂಜಿಲೆಂಡ್ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಜಯ ಗಳಿಸಿತು. ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ಗೆ ಮಣಿದಿದ್ದ ತಂಡ ಸೋಮವಾರ ನಡೆದ ಹಣಾಹಣಿಯಲ್ಲಿ ಬಾಂಗ್ಲಾದೇಶವನ್ನು ಒಂಬತ್ತು ವಿಕೆಟ್‌ಗಳಿಂದ ಸೋಲಿಸಿತು.

ಮಳೆ ಕಾಡಿದ್ದರಿಂದ ಪಂದ್ಯವನ್ನು ತಲಾ 27 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು. ಟಾಸ್ ಗೆದ್ದ ನ್ಯೂಜಿಲೆಂಡ್ ತಂಡ ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತ್ತು. ಆ್ಯಮಿ ಸಟರ್ಥ್‌ವೇಟ್ ಅವರ ದಾಳಿಗೆ ನಲುಗಿದ ಬಾಂಗ್ಲಾದೇಶಕ್ಕೆ ಎಂಟು ವಿಕೆಟ್‌ಗಳಿಗೆ 140 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಇನ್ನೂ 42 ಎಸೆತ ಬಾಕಿ ಇರುವಾಗ ಜಯದ ನಗೆ ಸೂಸಿತು. ಅಜೇಯ ಅರ್ಧಶತಕ ಸಿಡಿಸಿದ ಸೂಸಿ ಬೇಟ್ಸ್ ತಂಡದ ಸುಲಭ ಜಯಕ್ಕೆ ಕಾರಣರಾದರು. ಟೂರ್ನಿಯಲ್ಲಿ ಬಾಂಗ್ಲಾದೇಶಕ್ಕೆ ಇದು ಸತತ ಎರಡನೇ ಸೋಲು.

ನಾಯಕಿ ಸೋಫಿ ಡಿವೈನ್ ಅವರನ್ನು ಏಳನೇ ಓವರ್‌ನಲ್ಲಿ ವಾಪಸ್ ಕಳುಹಿಸಿದ ಸ್ಪಿನ್ನರ್ ಸಲ್ಮಾ ಖಾತುನ್ ಅವರು ಬಾಂಗ್ಲಾದೇಶ ಪಾಳಯದಲ್ಲಿ ನಿರೀಕ್ಷೆ ಮೂಡಿಸಿದ್ದರು. ಆದರೆ ಆರಂಭಿಕ ಬ್ಯಾಟರ್ ಬೇಟ್ಸ್ (79; 68 ಎಸೆತ, 8 ಬೌಂಡರಿ) ಮತ್ತು ಮೂರನೇ ಕ್ರಮಾಂಕದ ಅಮೆಲಿ ಕೆರ್ (47; 37 ಎ, 5 ಬೌಂ) ಶತಕದ (108 ರನ್) ಜೊತೆಯಾಟವಾಡಿದರು.

ಅಮೋಘ ಬ್ಯಾಟಿಂಗ್ ಮಾಡಿದ ಬೇಟ್ಸ್ ಏಕದಿನ ಕ್ರಿಕೆಟ್‌ನಲ್ಲಿ 28ನೇ ಅರ್ಧಶತಕ ಸಿಡಿಸಿದರು. ತಂಡ ಗೆಲುವಿನ ಸನಿಹ ಇದ್ದಾಗ ಬೌಂಡರಿ ಸಿಡಿಸುವ ಮೂಲಕ ಸಾವಿರ ರನ್ ಪೂರೈಸಿದರು. ಮಹಿಳೆಯರ ವಿಶ್ವಕಪ್‌ನಲ್ಲಿ ಈ ಸಾಧನೆ ಮಾಡಿದ ಆರನೇ ಆಟಗಾರ್ತಿ ಎನಿಸಿಕೊಂಡರು.

ನ್ಯೂಜಿಲೆಂಡ್‌ನ ಸೂಸಿ ಬೇಟ್ಸ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 8ಕ್ಕೆ 140 (27 ಓವರ್‌ಗಳಲ್ಲಿ)

ಶಮೀಮಾ ಸಿ ತಹುಹು ಬಿ ಮೆಕೆ 33 (36 ಎ, 4x4), ಫರ್ಗನ ರನೌಟ್ (ಮೆಕೆ) 52 (63 ಎ, 4x1), ನಿಗರ್ ಸಿ ಮಾರ್ಟಿನ್ ಬಿ ಸಟರ್ಥ್‌ವೇಟ್ 11 (13 ಎ, 4x1), ರುಮಾನ ಬಿ ಸಟರ್ಥ್‌ವೇಟ್ 1 (4 ಎ), ಸೊಭಾನ ಸಿ ಗ್ರೀನ್ ಬಿ ಜೆನ್ಸೆನ್ 13 (21 ಎ, 4x1), ರಿತು ಸಿ ಡಿವೈನ್ ಬಿ ಸಟರ್ಥ್‌ವೇಟ್ 4 (2 ಎ, 4x1), ಸಲ್ಮಾ ರನೌಟ್ (ಬೇಟ್ಸ್/ಮೆಕೆ) 9 (10 ಎ), ಲತಾ ಔಟಾಗದೆ 9 (10ಎ,), ಜಹನಾರ ರನೌಟ್ (ಕೆರ್/ಸಟರ್ಥ್‌ವೇಟ್ 2 (3 ಎ), ನಹಿದಾ ಔಟಾಗದೆ 0 (0 ಎ)

ಇತರೆ (ಬೈ 1, ಲೆಗ್‌ಬೈ 1, ವೈಡ್ 4) 6

ವಿಕೆಟ್ ಪತನ: 1-59 (ಶಮಿಮಾ ಸುಲ್ತಾನ, 9.2), 2-79 (ನಿಗರ್ ಸುಲ್ತಾನ, 14.1), 3-81 (ರುಮಾನ ಅಹಮ್ಮದ್, 14.6), 4-108 (ಸೊಭಾನ ಮೊಸ್ತರಿ, 21.5), 5-118 (ರಿತು ಮೋನಿ, 22.5), 6-119 (ಫರ್ಗಾನ ಹಕ್, 23.1), 7-130 (ಸಲ್ಮಾ ಖಾತೂನ್, 25.3), 8-139 (ಜಹನಾರ ಆಲಂ, 26.5)

ಬೌಲಿಂಗ್: ಲೀ ತಹುಹು 2–0–19–0, ಜೆಸ್ ಕೆರ್ 5–1–24–0, ಹೇಲಿ ಜೆನ್ಸೆನ್ 3–0–18–1, ಅಮೆಲಿಯಾ ಕೆರ್ 6–0–28–0, ಫ್ರಾನ್ಸಿಸ್ ಮೆಕೆ 6–0–24–1, ಆ್ಯಮಿ ಸಟರ್ಥ್‌ವೇಟ್ 5–0–25–3

ನ್ಯೂಜಿಲೆಂಡ್ 1ಕ್ಕೆ 144 (20 ಓವರ್)

ಸೋಫಿ ಡಿವೈನ್ ಬಿ ಸಲ್ಮಾ ಖಾತುನ್ 14 (16 ಎ, 4x1), ಸೂಸಿ ಬೇಟ್ಸ್ ಔಟಾಗದೆ 79 (68 ಎ, 4x8), ಅಮೆಲಿಯಾ ಕೆರ್ ಔಟಾಗದೆ 47 (37 ಎ, 4x5)

ಇತರೆ (ಬೈ 1, ನೋಬಾಲ್ 1, ವೈಡ್ 2) 4

ವಿಕೆಟ್ ಪತನ: 1-36 (ಸೋಫಿ ಡಿವೈನ್, 6.4)

ಬೌಲಿಂಗ್: ಜಹನಾರ ಆಲಂ 3–0–25–0, ಫರಿಹಾ ತ್ರಿಸ್ನ 3–0–17–0, ಸಲ್ಮಾ ಖಾತುನ್ 4–0–34–1, ನಹೀದ ಅಕ್ತರ್ 5–1–31–0, ರಿತು ಮೋನಿ 2–0–13–0, ರುಮಾನ ಅಹಮ್ಮದ್ 2–0–14–0, ಲತಾ ಮೊಂಡಲ್ 1–0–9–0

ಫಲಿತಾಂಶ: ನ್ಯೂಜಿಲೆಂಡ್ ಮಹಿಳೆಯರಿಗೆ 9 ವಿಕೆಟ್‌ಗಳ ಜಯ

ಬಾಂಗ್ಲಾದೇಶ ಇನಿಂಗ್ಸ್‌ನಲ್ಲಿ ಒಟ್ಟು ಎಂಟು ಬೌಂಡರಿಗಳು ಬಂದಿದ್ದರೆ, ಬೇಟ್ಸ್ ಒಬ್ಬರೆ ಎಂಟು ಬಾರಿ ಚೆಂಡನ್ನು ಬೌಂಡರಿ ಗೆರೆಯಾಚೆ ಅಟ್ಟಿದರು.

ಶಮಿಮ–ಫರ್ಗಾನ ಉತ್ತಮ ಜೊತೆಯಾಟ: ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾಕ್ಕೆ ಮಣಿದಿದ್ದ ಬಾಂಗ್ಲಾದೇಶಕ್ಕೆ ಫರ್ಗಾನ ಹಕ್ ಮತ್ತು ಶಮೀಮ ಸುಲ್ತಾನ ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 59 ರನ್ ಸೇರಿಸಿದರು. ಐದು ಓವರ್‌ಗಳ ಪವರ್ ಪ್ಲೇ ಮುಕ್ತಾಯಗೊಂಡಾಗ ತಂಡ ವಿಕೆಟ್ ನಷ್ಟವಿಲ್ಲದೆ 41 ರನ್ ಗಳಿಸಿತ್ತು. ಸ್ಪಿನ್ ಆಲ್‌ರೌಂಡರ್ ಫ್ರಾನ್ಸಿಸ್ ಮೆಕೆ ಅವರು ಈ ಜೊತೆಯಾಟವನ್ನು ಮುರಿದರು. ನಂತರ ತಂಡ ದಿಢೀರ್ ಪತನ ಕಂಡಿತು. ಐದು ಮಂದಿ ಎರಡಂಕಿ ಮೊತ್ತ ದಾಟದೆ ವಾಪಸಾದರು. ನಹಿದಾ ಅಕ್ತರ್ ಖಾತೆ ತೆರೆಯದೇ ಅಜೇಯವಾಗಿ ಉಳಿದರು.

ಬೆಂಗಳೂರು ಟೆಸ್ಟ್‌ಗೆ ಅಕ್ಷರ್

ಬೆಂಗಳೂರು (ಪಿಟಿಐ): ಗಾಯದಿಂದ ಚೇತರಿಸಿಕೊಂಡಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರಿಗೆ ಶ್ರೀಲಂಕಾ ಎದುರಿನ ಎರಡನೇ ಟೆಸ್ಟ್‌ನಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ನೀಡಲಾಗಿದೆ. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಬದಲಿಗೆ ಅಕ್ಷರ್ ಅವರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ತಿಳಿಸಿದೆ.

ಅಕ್ಷರ್ ಪಟೇಲ್

ಮೊಹಾಲಿಯಲ್ಲಿ ಭಾನುವಾರ ಕೊನೆಗೊಂಡ ಮೊದಲ ಪಂದ್ಯದಲ್ಲಿ ಭಾರತ ಇನಿಂಗ್ಸ್ ಮತ್ತು 222 ರನ್‌ಗಳಿಂದ ಜಯ ಗಳಿಸಿತ್ತು. ಎರಡನೇ ಪಂದ್ಯ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 12ರಿಂದ ನಡೆಯಲಿದೆ.

ಮೊಣಕಾಲಿಗೆ ಗಾಯಗೊಂಡಿದ್ದ ಅಕ್ಷರ್ ಪಟೇಲ್ ಅವರು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಆಯ್ಕೆಯಾಗಿರಲಿಲ್ಲ. ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯಲ್ಲೂ ಆಡಲು ಸಾಧ್ಯವಾಗಲಿಲ್ಲ. ಈಚೆಗೆ ಅವರು ಕೋವಿಡ್–19 ಸೋಂಕಿಗೂ ಒಳಗಾಗಿದ್ದರು.

'ತಂಡದ ಆಯ್ಕೆಯ ವೇಳೆ ಅಕ್ಷರ್ ಪಟೇಲ್ ಮೊದಲ ಆದ್ಯತೆಯಾಗಿದ್ದರು. ಆದರೆ ಅವರು ಗಾಯದಿಂದ ಚೇತರಿಸಿಕೊಳ್ಳಬೇಕಾಗಿತ್ತು. ಅವರ ಬದಲಿಗೆ ಕುಲದೀಪ್ ಅವರನ್ನು ಸೇರಿಸಿಕೊಳ್ಳಲಾಗಿತ್ತು. ಈಗ ಅಕ್ಷರ್ ಫಿಟ್ ಆಗಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಎರಡು ದಿನಗಳ ಟಿಕೆಟ್ ಬಿಕರಿ

ಎರಡನೇ ಟೆಸ್ಟ್ ಪಂದ್ಯದ ಮೊದಲ ಎರಡು ದಿನದಾಟಗಳ ಟಿಕೆಟ್‌ಗಳು ಸಂಪೂರ್ಣ ಮಾರಾಟವಾಗಿವೆ. ಹಗಲು ರಾತ್ರಿ ಹಣಾಹಣಿಯ ಎಲ್ಲ ಮುಖಬೆಲೆಯ ಟಿಕೆಟ್‌ಗಳು ಭಾನುವಾರವೇ ಖಾಲಿಯಾಗಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಖಜಾಂಚಿ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಕ್ರೀಡಾಂಗಣದ ಸಾಮರ್ಥ್ಯದ ಅರ್ಧದಷ್ಟು ಆಸನಗಳಲ್ಲಿ ಮಾತ್ರ ಪ್ರೇಕ್ಷಕರಿಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ. ಸಾರ್ವಜನಿಕರಿಗಾಗಿ 12 ಸಾವಿರ ಟಿಕೆಟ್‌ಗಳನ್ನು ಸಿದ್ಧಪಡಿಸಲಾಗಿತ್ತು. ಕೊನೆಯ ಮೂರು ದಿನಗಳ ಆಟದ ಟಿಕೆಟ್‌ಗಳು ಇನ್ನೂ ಮಾರಾಟಕ್ಕೆ ಉಳಿದಿವೆ ಎಂದು ವಿನಯ್ ವಿವರಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣ ಎರಡು ವರ್ಷಗಳ ನಂತರ ಅಂತರರಾಷ್ಟ್ರೀಯ ಪಂದ್ಯವೊಂದಕ್ಕೆ ಆತಿಥ್ಯ ವಹಿಸಲು ಸಿದ್ಧವಾಗಿದೆ. 2020ರ ಜನವರಿಯಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಡೆದ ಏಕದಿನ ಹಣಾಹಣಿ ಕೊನೆಯ ಪಂದ್ಯವಾಗಿತ್ತು. ಇಲ್ಲಿ ಟೆಸ್ಟ್ ಪಂದ್ಯ ನಡೆದು ನಾಲ್ಕು ವರ್ಷಗಳೇ ಕಳೆದಿವೆ. 2018ರ ಜನವರಿಯಲ್ಲಿ ಭಾರತ ಮತ್ತು ಅಫ್ಗಾನಿಸ್ಥಾನ ನಡುವೆ ಕೊನೆಯದಾಗಿ ಟೆಸ್ಟ್ ನಡೆದಿತ್ತು. 2019ರಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಟ್ವೆಂಟಿ20 ಪಂದ್ಯ ನಡೆದಿತ್ತು.

ಪ್ಯಾರಾ ಬ್ಯಾಡ್ಮಿಂಟನ್: ಪ್ರಮೋದ್‌ಗೆ 3 ಚಿನ್ನ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್ ಚಾಂಪಿಯನ್, ಭಾರತದ ಪ್ರಮೋದ್ ಭಗತ್ ಅವರು ಸ್ಪ್ಯಾನಿಷ್ ಅಂತರರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಭಾನುವಾರ ಮುಕ್ತಾಯಗೊಂಡ ಟೂರ್ನಿಯಲ್ಲಿ ಸುಕಾಂತ್ ಕದಮ್ ಕೂಡ ಒಂದು ತಲಾ ಒಂದು ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.

ಸ್ಪೇನ್‌ನ ವಿಟೋರಿಯಾದಲ್ಲಿ ನಡೆದ ಟೂರ್ನಿಯ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪ್ರಮೋದ್ 17-21, 21-17, 21-17ರಿಂದ ಭಾರತದವರೇ ಆದ ಕುಮಾರ್ ನಿತೇಶ್ ಅವರನ್ನು ಮಣಿಸಿದರು.

ಪುರುಷರ ಡಬಲ್ಸ್ ಅಂತಿಮ ಪಂದ್ಯದಲ್ಲಿ ಭಗತ್– ಮನೋಜ್ ಸರ್ಕಾರ್ 21-19, 11-21, 21-11ರಿಂದ ಭಾರತದ ಸುಕಾಂತ್ ಮತ್ತು ನಿತೇಶ್ ಅವರನ್ನು ಸೋಲಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಪಲಕ್ ಕೊಹ್ಲಿ ಜೊತೆಗೂಡಿದ ಪ್ರಮೋದ್ 14-21, 21-11, 21-14ರಿಂದ ಋತಿಕ್ ರಘುಪತಿ ಮತ್ತು ಮಾನಸಿ ಗಿರೀಶಚಂದ್ರ ಜೋಷಿ ಅವರನ್ನು ಮಣಿಸಿ ಚಿನ್ನದ ಪದಕ ಗೆದ್ದರು.

ಸೆಕ್ಸ್ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ಆಯುರ್ವೇದಿಕ್ ಪರಿಹಾರಕ್ಕಾಗಿ ಸತ್ಯ ಹಾಗೂ ಉಚಿತ ಸಲಹೆ ಪಡೆದುಕೊಳ್ಳಿ.
02262676816

ಪ್ರಶಸ್ತಿ ಮೇಲೆ ಸಿಂಧು, ಶ್ರೀಕಾಂತ್ ಕಣ್ಣು

ಜರ್ಮನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಕಣದಲ್ಲಿ ಲಕ್ಷ್ಯ, ಸೈನಾ

ಮುಲ್ಹೆಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು, ವಿಶ್ವ ಚಾಂಪಿಯನ್‌ಷಿಪ್ ಪದಕ ಗೆದ್ದಿರುವ ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾಗುವ ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಸೈಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಸಿಂಧು ಅವರು ಸುಲಭವಾಗಿ ಪ್ರಶಸ್ತಿ ಗೆದ್ದಿದ್ದರು. ಜನವರಿಯಲ್ಲಿ ನಡೆದ ಇಂಡಿಯಾ ಓಪನ್‌ನಲ್ಲಿ ಲಕ್ಷ್ಯ, ತಮ್ಮ ಚೊಚ್ಚಲ ಸೂಪರ್ 500 ಟ್ರೋಫಿಗೆ ಮುತ್ತಿಕ್ಕಿದ್ದರು. ಶ್ರೀಕಾಂತ್ ಅವರಿಗೆ ಕೋವಿಡ್–19 ಸೋಂಕು ತಗುಲಿದ ಹಿನ್ನೆಲೆಯಲ್ಲಿ ಇಂಡಿಯಾ ಓಪನ್ ಟೂರ್ನಿಯಲ್ಲಿ ಆಡಲು ಸಾಧ್ಯವಾಗಿರಲಿಲ್ಲ.

2019ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ನಂತರ ಪ್ರಶಸ್ತಿ ಬರ ಎದುರಿಸಿದ್ದ ಸಿಂಧು ಅವರಿಗೆ ಸೈಯದ್ ಮೋದಿ ಟೂರ್ನಿಯ ಟ್ರೋಫಿಯು ಒತ್ತಡವನ್ನು ಸ್ವಲ್ಪ ಕಡಿಮೆ ಮಾಡಿದೆ. ಆದರೆ ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ನಂತಹ ಮಹತ್ವದ ಟೂರ್ನಿಗಳು ಈ ವರ್ಷವೇ ನಡೆಯಲಿರುವುದರಿಂದ ಅವರು ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿದ್ದಾರೆ.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಏಳನೇ ಶ್ರೇಯಾಂಕದ ಸಿಂಧು ಈ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ, ಥಾಯ್ಲೆಂಡ್ ಆಟಗಾರ್ತಿ ಬುಸಾನನ್ ಒಂಗ್‌ಬಮ್ರುಂಗ್‌ಫಾನ್ ವಿರುದ್ಧ ಅಭಿಯಾನವನ್ನು ಆರಂಭಿಸಲಿದ್ದಾರೆ. ಈ ವಿಭಾಗದಲ್ಲಿ ಎರಡು ಬಾರಿಯ ಕಾಮನ್‌ವೆಲ್ತ್ ಗೇಮ್ಸ್ ಚಿನ್ನ ವಿಜೇತ ಸೈನಾ ನೆಹ್ವಾಲ್ ಕೂಡ ಇದ್ದು, ಮೊದಲ ಪಂದ್ಯದಲ್ಲಿ ಸಿಂಗಪುರದ ಯೊ ಜಿಯಾ ಮಿನ್ ಎದುರು ಆಡುವರು.

ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಕಾಂತಫೊನ್ ವಾಂಗ್‌ಚರೊಯಿನ್ ಎದುರು ಕಣಕ್ಕಿಳಿಯುವರು. ಶ್ರೀಕಾಂತ್ ಅವರಿಗೆ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಬ್ರೈಸ್ ಲೆವರ್ಡೆಜ್ ಸವಾಲು ಎದುರಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್, ಪರುಪಳ್ಳಿ ಕಶ್ಯಪ್ ಕೂಡ ಅದೃಷ್ಟಪರೀಕ್ಷಿಸಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಧ್ರುವ ಕಪಿಲ– ಎಂ.ಆರ್. ಅರ್ಜುನ್, ಮಹಿಳಾ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ– ಎನ್. ಸಿಕ್ಕಿರೆಡ್ಡಿ, ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್ ಆಡಲಿದ್ದಾರೆ. ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ, ಸಾಯಿ ಪ್ರತೀಕ್ ಕೆ.– ಎನ್. ಸಿಕ್ಕಿರೆಡ್ಡಿ ಅವರು ಕಣಕ್ಕಿಳಿಯುವರು.

'ಮ್ಯಾಂಚೆಸ್ಟರ್, ಬಾಯರ್ನ್ ಪ್ರಶಸ್ತಿ ಗೆಲ್ಲುವ ತಂಡಗಳು'

ಬೆಂಗಳೂರು: ಮ್ಯಾಂಚೆಸ್ಟರ್ ಸಿಟಿ ಮತ್ತು ಬಾಯರ್ನ್ ಮ್ಯೂನಿಕ್ ತಂಡಗಳು ಈ ಬಾರಿಯ ಚಾಂಪಿಯನ್ಸ್ ಲೀಗ್ ಟ್ರೋಫಿ ಗೆಲ್ಲುವ ನೆಚ್ಚಿನ ತಂಡಗಳಾಗಿವೆ ಎಂದು ಸ್ಪೇನ್ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಜೋಫ್ರೆ ಮಟೆವು ಅಭಿಪ್ರಾಯಪಟ್ಟಿದ್ದಾರೆ.

ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಕುರಿತು ಸೋಮವಾರ ಸೋನಿ ಸ್ಪೋರ್ಟ್ಸ್ ವರ್ಚುವಲ್ ಆಗಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಟೂರ್ನಿಯ 16ನೇ ಸುತ್ತಿನ 2ನೇ ಲೆಗ್ ಪಂದ್ಯದಲ್ಲಿ ಬುಧವಾರ ಬಾಯರ್ನ್– ಸಾಲ್ಜ್‌ಬರ್ಗ್ ಸೆಣಸಲಿವೆ. ರಾತ್ರಿ 1.30ರಿಂದ ಸೋನಿ ಟೆನ್‌ನಲ್ಲಿ ಪಂದ್ಯ ನೇರಪ್ರಸಾರವಾಗಲಿದೆ.

ಹಾಕಿ: ವಿನಯ್ ಹ್ಯಾಟ್ರಿಕ್ ವ್ಯರ್ಥ– ಕೆನರಾ ಬ್ಯಾಂಕ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನಯ್ ಗಳಿಸಿದ ಹ್ಯಾಟ್ರಿಕ್ ಗೋಲುಗಳು ವ್ಯರ್ಥವಾದವು. ಸಂಘಟಿತ ಆಟವಾಡಿದ ಕೆನರಾ ಬ್ಯಾಂಕ್ ತಂಡವು ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 4–3ರಿಂದ ಕಸ್ಟಮ್ಸ್ ಆ್ಯಂಡ್ ಜಿಎಸ್‌ಟಿ ತಂಡವನ್ನು ಸೋಲಿಸಿತು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅಂಗಣದಲ್ಲಿ ಸೋಮವಾರ ನಡೆದ ಟೂರ್ನಿಯ ಪಂದ್ಯದಲ್ಲಿ ಕೆನರಾ ಬ್ಯಾಂಕ್ ಪರ ಯತೀಶ್ ಕುಮಾರ್ (8ನೇ ನಿಮಿಷ), ನಿಕಿನ್ ತಿಮ್ಮಯ್ಯ (13ನೇ ನಿ.), ಲಿಖಿತ್ ಬಿ.ಎಂ. (44ನೇ ನಿ.) ಮತ್ತು ಸೋಮಯ್ಯ ಕೆ.ಪಿ (59ನೇ ನಿ.) ಗೋಲು ದಾಖಲಿಸಿದರು. ಕಸ್ಟಮ್ಸ್ ಆ್ಯಂಡ್ ಜಿಎಸ್‌ಟಿ ತಂಡದ ವಿನಯ್ 37, 39 ಮತ್ತು 53ನೇ ನಿಮಿಷಗಳಲ್ಲಿ ಕೈಚಳಕ ತೋರಿದ್ದರು.

ಡಿವೈಇಎಸ್ ಬಿ, ಎಂಇಜಿ ತಂಡಗಳ ಜಯಭೇರಿ: ಜೂನಿಯರ್ ಪುರುಷರ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಡಿವೈಇಎಸ್ ಬಿ ತಂಡವು 3–0ಯಿಂದ ಬೆಂಗಳೂರು ಹಾಕಿ ಅಕಾಡೆಮಿ ಎದುರು ಗೆದ್ದಿತು.

ಮತ್ತೊಂದು ಪಂದ್ಯದಲ್ಲಿ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ತಂಡವು 5–0ಯಿಂದ ಕ್ರೀಡಾ ಶಾಲೆ ಕೊಡಿಗೆ ಎದುರು, ಡಿವೈಇಎಸ್ ಎ 12–2ರಿಂದ ಹುಬ್ಬಳ್ಳಿ ಹಾಕಿ ಅಕಾಡೆಮಿ ಎದುರು ಜಯಿಸಿತು.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಪೊಲೀಸ್ ಇಲಾಖೆಯಲ್ಲಿರುವ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ಲಾಬುಶೇನ್– ಸ್ಮಿತ್ ಶತಕದ ಜೊತೆಯಾಟ

ರಾವಲ್ಪಿಂಡಿ (ಎಎಫ್‌ಪಿ): ರನ್ ಹೊಳೆ ಹರಿಯುತ್ತಿರುವ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ನಡುವಿನ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ದಿನ ಮಾರ್ನಸ್ ಲಾಬುಶೇನ್ ಮತ್ತು ಸ್ಟೀವನ್ ಸ್ಮಿತ್ ಮಿಂಚಿದರು. ಇವರಿಬ್ಬರ ಶತಕದ ಜೊತೆಯಾಟದ ನೆರವಿನಿಂದ ಆಸ್ಟ್ರೇಲಿಯಾ ತಂಡ ಉತ್ತಮ ಮೊತ್ತ ಕಲೆ ಹಾಕಿದ್ದು ಪಾಕಿಸ್ತಾನದ ಮೊದಲ ಇನಿಂಗ್ಸ್ ಮೊತ್ತದತ್ತ ದಾಪುಗಾಲು ಹಾಕಿದೆ.

ಪಿಂಡಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನ ನಾಲ್ಕನೇ ದಿನದಾಟದ ಮುಕ್ತಾಯಕ್ಕೆ ಪ್ರವಾಸಿ ತಂಡ 7 ವಿಕೆಟ್‌ಗಳಿಗೆ 449 ರನ್ ಕಲೆ ಹಾಕಿದ್ದು 27 ರನ್‌ಗಳ ಹಿನ್ನಡೆಯಲ್ಲಿದೆ.

ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಮೈದಾನ ಒದ್ದೆಯಾಗಿತ್ತು. ಹೀಗಾಗಿ ಮೊದಲ ಅವಧಿಯ ಆಟವನ್ನು ರದ್ದುಗೊಳಿಸಲಾಯಿತು. ಭಾನುವಾರ ಕ್ರೀಸ್‌ನಲ್ಲಿ ಉಳಿದಿದ್ದ ಮಾರ್ನಸ್ ಲಾಬುಶೇನ್ ಮತ್ತು ಸ್ಮಿತ್ ಸೋಮವಾರವೂ ಬ್ಯಾಟಿಂಗ್ ವೈಭವ ಮುಂದುವರಿಸಿದರು. 158 ಎಸೆತಗಳಲ್ಲಿ 90 ರನ್ ಗಳಿಸಿದ ಮಾರ್ನಸ್ ಶತಕದಿಂದ ವಂಚಿತರಾದರೂ ಸ್ಮಿತ್ ಜೊತೆ 108 ರನ್‌ಗಳನ್ನು ಸೇರಿಸಿದರು. ಅವರ ಇನಿಂಗ್ಸ್‌ನಲ್ಲಿ 12 ಬೌಂಡರಿಗಳು ಇದ್ದವು.

ಎಂಟು ಬೌಂಡರಿಗಳೊಂದಿಗೆ 196 ಎಸೆತಗಳಲ್ಲಿ 78 ರನ್ ಗಳಿಸಿದ ಸ್ಮಿತ್ ಅವರು ಕ್ಯಾಮರಾನ್ ಗ್ರೀನ್ ಜೊತೆ 5ನೇ ವಿಕೆಟ್‌ಗೆ 81 ರನ್‌ಗಳನ್ನು ಸೇರಿಸಿದರು. ಬೆಳಕಿನ ಅಭಾವದಿಂದ ದಿನದಾಟವನ್ನು ಮುಕ್ತಾಯಗೊಳಿಸಲು ನಿರ್ಧರಿಸಿದಾಗ ಮಿಚೆಲ್ ಸ್ಟಾರ್ಕ್ ಮತ್ತು ನಾಯಕ ಪ್ಯಾಟ್ ಕಮಿನ್ಸ್ ಕ್ರೀಸ್‌ನಲ್ಲಿದ್ದರು. ಇಬ್ಬರೂ ಕ್ರಮವಾಗಿ 12 ಹಾಗೂ 4 ರನ್ ಗಳಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ, ಮೊದಲ ಇನಿಂಗ್ಸ್: 162 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 476 ಡಿಕ್ಲೇರ್; ಆಸ್ಟ್ರೇಲಿಯಾ: ಮೊದಲ ಇನಿಂಗ್ಸ್ (ಭಾನುವಾರ 73 ಓವರ್‌ಗಳಲ್ಲಿ 2 ವಿಕೆಟ್‌ಗೆ 271): 137 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 449 (ಮಾರ್ನಸ್ ಲಾಬುಶೇನ್ 90, ಸ್ಟೀವನ್ ಸ್ಮಿತ್ 78, ಕ್ಯಾಮರಾನ್ ಗ್ರೀನ್ 48; ಸಾಜಿದ್ ಖಾನ್ 122ಕ್ಕೆ1, ನಸೀಮ್ ಶಾ 89ಕ್ಕೆ1, ಶಹೀನ್ ಶಾ ಅಫ್ರಿದಿ 80ಕ್ಕೆ1, ನೌಮಾನ್ ಅಲಿ 107ಕ್ಕೆ4).

ಮಾರ್ನಸ್ ಲಾಬುಶೇನ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಲೀಗ್ ವಿಜೇತ ಪಟ್ಟ ಅಲಂಕರಿಸಿದ ಜೆಮ್ಶೆಡ್‌ಪುರ ಎಫ್‌ಸಿ ತಂಡದ ಆಟಗಾರರು ಕೋಚ್ ಒವೆನ್ ಕೊಯ್ಲೆ ಜೊತೆ ಸಂಭ್ರಮಿಸಿದರು

ಐಎಸ್‌ಎಲ್: ಜೆಮ್ಶೆಡ್‌ಪುರ ಎಫ್‌ಸಿಗೆ ಲೀಗ್ ವಿಜೇತ ಪಟ್ಟ

ಫತೋರ್ಡ (ಪಿಟಿಐ): ಜಿದ್ದಾಜಿದ್ದಿಯ ಹೋರಾಟದಲ್ಲಿ ಬಲಿಷ್ಠ ಎಟಿಕೆ ಮೋಹನ್ ಬಾಗನ್ ತಂಡ ಸವಾಲು ಮೀರಿದ ಜೆಮ್ಶೆಡ್‌ಪುರ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಲೀಗ್ ಹಂತದ ವಿಜೇತ ಪಟ್ಟವನ್ನು ತನ್ನದಾಗಿಸಿಕೊಂಡಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮುಖಾಮುಖಿಯಲ್ಲಿ 1–0ಯಿಂದ ಜೆಮ್ಶೆಡ್‌ಪುರ ತಂಡ ಜಯ ಗಳಿಸಿತು. 57ನೇ ನಿಮಿಷದಲ್ಲಿ ಋತ್ವಿಕ್ ದಾಸ್ ಗಳಿಸಿದ ಗೋಲು, ತಂಡಕ್ಕೆ ಗೆಲುವು ತಂದುಕೊಟ್ಟಿತು.ಈ ಪಂದ್ಯದ ಆರಂಭಕ್ಕೂ ಮೊದಲು ಲೀಗ್ ವಿಜೇತರಾಗಲು ಎರಡೂ ತಂಡಗಳಿಗೆ ಅವಕಾಶವಿತ್ತು. ಗೆದ್ದ ತಂಡ ಪ್ರಶಸ್ತಿಗೆ ಅರ್ಹವಾಗುತ್ತಿತ್ತು. ಹೀಗಾಗಿ ಆರಂಭದಿಂದಲೇ ಪಂದ್ಯ ರೋಚಕವಾಗಿತ್ತು. ಮೊದಲಾರ್ಧದಲ್ಲಿ ಚೆಂಡನ್ನು ಗುರಿ ಮುಟ್ಟಿಸಲು ತಂಡಗಳು ನಡೆಸಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

57ನೇ ನಿಮಿಷದಲ್ಲಿ ಗ್ರೆಗ್ ಸ್ಟೀವರ್ಟ್ ಅವರ ಚಾಕಚಕ್ಯ ಆಟ ಜೆಮ್ಶೆಡ್‌ಪುರ ತಂಡದ ಕೈ ಹಿಡಿಯಿತು. ಎದುರಾಳಿ ತಂಡದ ಡಿಫೆಂಡರ್‌ಗಳನ್ನು ವಂಚಿಸಿ ಎಡಬದಿಗೆ ಚೆಂಡಿನೊಂದಿಗೆ ಮುನ್ನುಗ್ಗಿದ ಅವರು ನಂತರ ಬಲಬದಿಯತ್ತ ಪಾಸ್ ನೀಡಿದರು. ಚೆಂಡು ಋತ್ವಿಕ್ ದಾಸ್ ಅವರಿಗೆ ಲಭಿಸಿತು. ಗೋಲ್‌ಕೀಪರ್‌ಗೆ ಚಳ್ಳೆಹಣ್ಣು ತಿನ್ನಿಸಿದ ಋತ್ವಿಕ್ ಅವರು ಮೋಹಕವಾಗಿ ಗುರಿ ಸಾಧಿಸಿದರು.

ಸೆಮಿಫೈನಲ್ ವೇಳಾಪಟ್ಟಿ

ಸೆಮಿಫೈನಲ್1 (ಮೊದಲ ಲೆಗ್)	
ಜೆಮ್ಶೆಡ್‌ಪುರ ಎಫ್‌ಸಿ–ಕೇರಳ ಬ್ಲಾಸ್ಟರ್ಸ್	
ಮಾರ್ಚ್ 11	ಫತೋರ್ಡ
ಸೆಮಿಫೈನಲ್–2 (ಮೊದಲ ಲೆಗ್)	
ಹೈದರಾಬಾದ್ ಎಫ್‌ಸಿ–ಎಟಿಕೆ ಮೋಹನ್ ಬಾಗನ್	
ಮಾರ್ಚ್ 12	ಬ್ಯಾಂಬೊಲಿಮ್
ಸೆಮಿಫೈನಲ್–1 (ಎರಡನೇ ಲೆಗ್)	
ಕೇರಳ ಬ್ಲಾಸ್ಟರ್ಸ್–ಜೆಮ್ಶೆಡ್‌ಪುರ ಎಫ್‌ಸಿ	
ಮಾರ್ಚ್ 15	ವಾಸ್ಕೊ
ಸೆಮಿಫೈನಲ್–2 (ಎರಡನೇ ಲೆಗ್)	
ಎಟಿಕೆ ಮೋಹನ್ ಬಾಗನ್–ಹೈದರಾಬಾದ್ ಎಫ್‌ಸಿ	
ಮಾರ್ಚ್ 16	ಬ್ಯಾಂಬೊಲಿಮ್
ಪಂದ್ಯಗಳ ಆರಂಭ	ರಾತ್ರಿ 7.30

Divisa
www.divisastore.com
International Women's Day
8 March
सच्ची सहेली
ಒಂದು ಚಿಕ್ಕ ಪ್ರಯತ್ನ...
ಭಾರತೀಯ ಮಹಿಳೆಯರಿಗೆ ಒಂದು ವಿಶೇಷ ಉಡುಗೊರೆ
ಇಂದು ಅಂತರರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ, ದಿವಿಸಾ ಹರ್ಬಲ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಸಮಸ್ತ ಭಾರತೀಯ ಮಹಿಳೆಯರಿಗೆ "ಆರೋಗ್ಯ ಸೌಭಾಗ್ಯ" ನೀಡಲಾಗುತ್ತಿದೆ. ಈ ಮಹಿಳಾ ದಿನದಂದು ನಿಮ್ಮ ಮನೆಗೆ 'ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್' ಉತ್ಪನ್ನವನ್ನು ಉಡುಗೊರೆಯಾಗಿ ಕಳುಹಿಸುತ್ತೇವೆ.
ಸಂಪೂರ್ಣ FREE*
No Shipping Charges*
ಖಂಡಿತವಾಗ್ಯೂ, ನೀವು ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್ ಉತ್ಪನ್ನವನ್ನು ನಿಮ್ಮ ಮನೆ ಬಾಗಿಲಲ್ಲಿಯೇ ಪಡೆಯುವಿರಿ, ಅದು ಕೂಡ "ಸಂಪೂರ್ಣ ಉಚಿತವಾಗಿ". ಈ ಕೊಡುಗೆ ಇಂದು ಮಾತ್ರ ಲಭ್ಯ.

Term & Conditions
1. ಇಲ್ಲಿರುವ ಕ್ಯೂಆರ್ ಕೋಡ್ ಅನ್ನು ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿರಿ ಅಥವಾ ನಮ್ಮ ವೆಬ್‌ಸೈಟ್‌ಗೆ ಭೇಟಿ ಕೊಡಿ www.divisastore.com
2. ಈ ಕೊಡುಗೆ ಅಂಗಡಿ ಮಾರಾಟಗಾರರಿಗೆ ಅನ್ವಯಿಸುವುದಿಲ್ಲ, ಇದನ್ನು ಮರು ಮಾರಾಟ ಮಾಡುವಂತಿಲ್ಲ.
3. ಎಂ.ಆರ್.ಪಿ ರೂ.215.00 ಮೌಲ್ಯದ ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್ ಪ್ಯಾಕ್ ಉಚಿತ*
4. ನಿಮ್ಮ ಚೆಕ್‌ಔಟ್ ಸಮಯದಲ್ಲಿ Coupon Code MERAGIFT ಬಳಸಿರಿ.
5. ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.
Till stock lasts
24x7 Helpline: 77106 44444 | www.sachisaheli.in | Available at all medical & general stores